ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 13
ಸಂಚಿಕೆ 1
ಜನವರಿ-ಮಾರ್ಚ್-1984

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE: Kannada Quarterly of the Bangalore University, Bangalore
Vol. 13. No. 1, January-March 1984

Chief Editor: **Dr. G. S. Sivarudrappa**

ಪ್ರಧಾನ ಸಂಪಾದಕರು :
ಡಾ॥ ಜಿ. ಎಸ್. ಶಿವರುದ್ರಪ್ಪ

ಸಂಪಾದಕರು :
ಟಿ. ಬಿ. ಚಂದ್ರಶೇಖರಯ್ಯ
ಕಿ. ರಂ. ನಾಗರಾಜ
ಬರಗೂರು ರಾಮಚಂದ್ರಪ್ಪ

ವಾರ್ಷಿಕ ಚಂದಾ : ರೂ. 8-00
ರೂ. 5-00 (ವಿದ್ಯಾರ್ಥಿಗಳಿಗೆ)

ಆಜೀವ ಸದಸ್ಯತ್ವ : ರೂ. 100-00

ಪ್ರಕಾಶಕರು : ಕೆ. ಸಿ. ಶಿವಪ್ಪ
ನಿರ್ದೇಶಕ (ಕಾರ್ಯನಿರ್ವಾಹಕ), ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಮುದ್ರಣ : ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560 056

ಪ ರಿ ವಿ ಡಿ

ಲಂಚ (ಕವನ) 1
ಎಚ್. ಎಚ್. ಗಂಗಾಧರಾಚಾರ್

ಜಂಗಮ ಜಾತಿಯಲ್ಲಿ ಅನುಶ್ರೇಣಿ 3
ಎಂ. ಚಿದಾನಂದಮೂರ್ತಿ

ಅನ್ಯೋಕ್ತಿ ವಿಲಾಸ 60
ಬಿ. ಜಿ. ಶ್ರೀಲಕ್ಷ್ಮಿ

ಗುಲಾಬಿ (ಕವನ) 74
ರಘುನಾಥ್ ಕುಲಕರ್ಣಿ

ಒಕ್ಕಲಿಗ ಮತ್ತು ಹಕ್ಕಿ 76
ವೀರಣ್ಣ ಎಸ್. ದಂಡೆ

ಮೈಸೂರು ಮತ್ತು ಏಕೀಕೃತ ಕರ್ನಾಟಕದ ರಚನೆ : 1937-1956 89
ಎಸ್. ಚಂದ್ರಶೇಖರ್

ಚಾಲುಕ್ಯ ಅಕ್ಕಾದೇವಿ 104
ಚೆನ್ನಕ್ಕ ಎಲಿಗಾರ

ಆಧುನಿಕ ಪಾಶ್ಚಾತ್ಯ ತತ್ತ್ವಶಾಸ್ತ್ರದಲ್ಲಿ ವಾಕ್ಯಾರ್ಥ ವಿಶ್ಲೇಷಣೆ 114
ಶ್ರೀನಿವಾಸರಾವ್

ಸಮುದ್ರಯಾನ ಚತುರ-ಆಮೆ 118
ಎನ್. ಎಸ್. ಲೀಲಾ

ಜನಪ್ರಿಯ ವಿಜ್ಞಾನ ಲೇಖನಗಳ ಅನುವಾದ 129
ಸೂ. ಸುಬ್ರಹ್ಮಣ್ಯಂ

ಮಂಥನ

'ಲೀಲಾವತಿ'ಯ ಒಂದು ಪದ್ಯದ ಪಾಠ ವಿಚಾರ 140
ಸಿ. ಪಿ. ಕೆ.

ವಿಮಲಾನಂದನ ಕೀರ್ತನೆಗಳು 142
ಕೆ. ವೆಂಕಟರಾಯಾ ಚಾರ್ಯ

ಚೆನ್ನಯ್ಯರು ಇಬ್ಬರಲ್ಲ ಒಬ್ಬರೆ ? 143
ಹ. ನಂ. ವಿಜಯಕುಮಾರ

ಲಂಚ

ಎಚ್. ಎಚ್. ಗಂಗಾಧರಾಚಾರ್

ಹರಿಯುವ ನೀರು ಲಂಚ ಕೇಳುವುದಿಲ್ಲ
ಬೆಳಗುವ ಸೂರ್ಯ ಲಂಚ ಕೇಳುವುದಿಲ್ಲ
ಬೀಸುವ ಗಾಳಿ, ಸುಡುವ ಬೆಂಕಿ,
ಭೂಮಿ, ಆಕಾಶ ಒಂದೂ ಲಂಚ ಕೇಳುವುದಿಲ್ಲ.
ಆದರೆ ಕೆಲವರು ಮನುಷ್ಯರಿದ್ದಾರೆ ನೋಡಿ –
ಇವರು ಸದಾ ಕೈಯೊಡ್ಡುವ ಪ್ರಾಣಿಗಳು.

ಈ ಪ್ರಾಣಿಗಳು ಎಲ್ಲ ಕಡೆಯೂ ನುಸುಳಿ ಬಂದಿವೆ,
ತಾಲ್ಲೂಕು ಆಫೀಸಿನ ಕುರ್ಚಿಗಳ ಹಿಡಿದಿವೆ ;
ರಿಜಿಸ್ಟ್ರಾರ್ ಆಫೀಸಿನ ಕುರ್ಚಿಗಳ ಹಿಡಿದಿವೆ ;
ಆರ್.ಟಿ.ಓ. ಆಫೀಸಿನ ಕುರ್ಚಿಗಳ ಹಿಡಿದಿವೆ ;
ಪೋಲೀಸ್ ಠಾಣೆಗಳ ಹಿಡಿದಿವೆ ;
ರಿಕ್ರೂಟ್‌ಮೆಂಟ್ ಕಮಿಟಿಗಳ ಹಿಡಿದಿವೆ ;
ಆಸ್ಪತ್ರೆಗಳ ಹಿಡಿದಿವೆ ; ಲ್ಯಾಂಡ್ ಟ್ರಿಬ್ಯೂನಲ್‌ಗಳ ಹಿಡಿದಿವೆ ;
ಮಂತ್ರಿಯಿಂದ ಚಪರಾಸಿಯವರೆಗೆ ಎಲ್ಲ ವರ್ಗದಲ್ಲೂ
ಇವು ನುಸುಳಿ ಬಂದಿವೆ ; ಸಾಮ್ರಾಜ್ಯ ಸ್ಥಾಪಿಸಿವೆ.

ಇವಕ್ಕೆ ಕೈಯೊಡ್ಡುವುದೆ ಕೆಲಸ
ತಿಂದು ತಿಂದು ರುಚಿ ಹತ್ತಿದ ಬಾಯಿಗಳು
ನಾಚಿಕೆಯಿಲ್ಲದ ಮುಖಗಳು ; ಲಜ್ಜೆಗೆಟ್ಟ ವ್ಯಕ್ತಿಗಳು ;
ಹೊಟ್ಟೆಗಳೊ–ತಿಂದಷ್ಟೂ ಹಿಗ್ಗುತ್ತವೆ,
ಹಿಗ್ಗಿದಷ್ಟೂ ತಿನ್ನುತ್ತವೆ,
ತಿನ್ನುವುದೇ ಕಾಯಕ ಮಾಡಿಕೊಂಡು
ಕುರ್ಚಿಗಳಲ್ಲಿ ಭದ್ರವಾಗಿ ಬೇರೂರಿಬಿಟ್ಟಿವೆ.
ಬೇರಿಲ್ಲದವರ, ಬೆಂಬಲವಿಲ್ಲದವರ, ವಿದ್ಯೆಯಿಲ್ಲದವರ
ರಕ್ತ ಹೀರಿ ಹೀರಿ ಹೆಮ್ಮರವಾಗಿ ಬೆಳೆಯುತ್ತಿವೆ.

ಇದು ನಾವೇ ನೇಯ್ದುಕೊಂಡ ವ್ಯವಸ್ಥೆಯ ಜಾಲ
ತಿನ್ನುವವರಿಗೆ ಬಂಗಾರದ ಗಣಿ
ಉಳಿದವರಿಗೆ ಹೊರಲಾಗದ ಹೊರೆ
ಕಿತ್ತುಹಾಕುವ ಹಾಗಿಲ್ಲ ; ಅನುಭವಿಸುವ ಹಾಗಿಲ್ಲ
ಗಂಟಲಲ್ಲಿ ಸಿಕ್ಕಿಹಾಕಿಕೊಂಡ ಮುಳ್ಳಿಚೂರು
ಮುಂದಕ್ಕೂ ಹೋಗಲೊಲ್ಲದು, ಹಿಂದಕ್ಕೂ ಬರಲೊಲ್ಲದು.
ಆದರೂ ಇದಕ್ಕೆ ಅಂತ್ಯ ಕಾಣಿಸಲೇಬೇಕಾಗಿದೆ,
ಇಲ್ಲದಿದ್ದರೆ ಇದು ನಮ್ಮೆಲ್ಲರ ಅಂತ್ಯ ಮಾಡುತ್ತದೆ.

ಜಂಗಮ ಜಾತಿಯಲ್ಲಿ ಅನುಶ್ರೇಣಿ

ಎಂ. ಚಿದಾನಂದಮೂರ್ತಿ

ಪ್ರಸ್ತಾವನೆ

ಇಂದಿನ ಲಿಂಗವಂತ ಜನಾಂಗವನ್ನು ಒಂದು ಸ್ವಯಂಪೂರ್ಣ ಸಮಾಜವೆಂದು ಕರೆಯಬಹುದು, ಸಿಕ್ಖ ಜನಾಂಗದಂತೆ. ಅದರಲ್ಲಿ ಎಲ್ಲ ವೃತ್ತಿಯ ಜನರೂ ಇದ್ದಾರೆ; ರೈತರು, ನೇಕಾರರು, ಕುರುಬರು, ಚಮ್ಮಾರರು, ಕುಂಬಾರರು, ಕಮ್ಮಾರರು, ವರ್ತಕರು, ಮಡಿವಾಳರು, ಪುರೋಹಿತರು, ಇತ್ಯಾದಿ. ಇದಕ್ಕೆ ಐತಿಹಾಸಿಕ ಕಾರಣ ಗಳಿವೆಯೆಂಬುದು ಸ್ಪಷ್ಟ. ಲಿಂಗವಂತ ಅಥವಾ ವೀರಶೈವ ಧರ್ಮದಲ್ಲಿ ಮತಾಂತ ರಕ್ಕೆ ಅವಕಾಶವಿದ್ದುದರಿಂದ, ಒಂದು ಕಾಲಕ್ಕೆ ವೀರಶೈವ ಸ್ವಾಮಿಗಳು ಅತ್ಯುತ್ಸಾಹ ದಿಂದ ಮತಾಂತರ ಕಾರ್ಯದಲ್ಲಿ ನಿರತರಾಗಿದ್ದುದರಿಂದ ಬೇರೆ ಬೇರೆ ಜಾತಿಯ ಜನರು ಕೆಲವೆಡೆ ಸಾಮೂಹಿಕವಾಗಿ, ಕೆಲವೆಡೆ ಆಂಶಿಕವಾಗಿ ಅದಕ್ಕೆ ಸೇರಿಕೊಂಡರು. ಲಿಂಗ ವಂತ (ಲಿಂಗಾಯತ) ಜನರ ಮುಖ್ಯ ಭಾಗವಾದ ಜಂಗಮ ಜಾತಿಯ ರಚನೆಯನ್ನು ಕುರಿತು ನಾನು ಕಳೆದ ಕೆಲವು ವರ್ಷಗಳಿಂದ ನಡಸಿದ ಅಧ್ಯಯನ, ವ್ಯಾಪಕವಾದ ಕ್ಷೇತ್ರಕಾರ್ಯ ಈ ಪುಸ್ತಿಕೆಯಾಗಿ (Monograph) ಪರಿಣಮಿಸಿದೆ. ಸಮಾಜಶಾಸ್ತ್ರದ ವಿದ್ಯಾರ್ಥಿಯಲ್ಲದಿದ್ದರೂ, ಜಂಗಮ ಜಾತಿಯಲ್ಲಿ ಹುಟ್ಟಿಯೂ ಅದರ ಬಗ್ಗೆ ಹೆಚ್ಚಿನ ವಿಷಯ ತಿಳಿಯದವನಾಗಿದ್ದು ಎಂದೋ ಅದರ ರಚನೆ ಬಗ್ಗೆ ಕುತೂಹಲ ಹುಟ್ಟಿ, ಕುತೂಹಲವು ಗಂಭೀರ ಸಂಶೋಧನೆಯಾಗಿ ಪರಿಣಮಿಸಿ ಈ ಪುಸ್ತಿಕೆಯನ್ನು ಬರೆಯಿಸಿತು. ಹಲವಾರು ಜನರನ್ನೂ, ಸ್ವಾಮಿಗಳನ್ನೂ (ಗುರು,ವಿರಕ್ತರನ್ನು) ನಾನು ಭೇಟಿ ಮಾಡಿ, ಇಂದು ಮಿಶ್ರವಾಗುತ್ತಿರುವ ಜಂಗಮ ಜಾತಿಯ ರಚನೆಯ ಬಗ್ಗೆ ಸಂಗ್ರಹಿಸಿದ ಎಷ್ಟೋ ಹೊಸ ಸಂಗತಿಗಳನ್ನು ಈ ಪುಸ್ತಿಕೆಯು ಒಳಗೊಂಡಿದೆ. ಒಂದು ಬಗೆಯಲ್ಲಿ ಇದು ಆಕರ ಗ್ರಂಥವೂ ಹೌದು ; ಕೆಲವೆಡೆ ನನ್ನದೇ ವ್ಯಾಖ್ಯಾನಗಳನ್ನೂ ಗಮನಿಸಬಹುದು. ಇದು ಜಂಗಮ ಜಾತಿಯ ರಚನೆ, ಆ ರಚನೆಯಲ್ಲಿನ ಅನು ಶ್ರೇಣಿಯನ್ನು ಕುರಿತದ್ದಾದರೂ ಪ್ರಾಸಂಗಿಕವಾಗಿ ಲಿಂಗವಂತ ಸಮಾಜದ ರಚನೆಯೂ ಸ್ಥೂಲವಾಗಿ ಧ್ವನಿತವಾಗಿದೆ. ಇಲ್ಲಿ ಸಹಜವಾಗಿಯೇ ವಿವಾದಾಸ್ಪದ ಸಂಗತಿಗಳಿರ ಬಹುದು. ನಿಜವೆಂದು ಅನ್ನಿಸಿದರೂ ಹೇಳಲು ಕೆಲವರು ಹಿಂದೇಟುಹಾಕ ಬಹುದಾದ ಸಂಗತಿಗಳೂ ಇರಬಹುದು. ನಾನೇನೋ ಧೈರ್ಯಮಾಡಿ ಇದನ್ನು

ಹೊರಹಾಕುತ್ತಿದ್ದೇನೆ. ಮತ್ತು, ಮುಂದೆಯೂ ನಾನು ತೀರ ಮುಕ್ತ ಮನಸ್ಸಿನಿಂದ ಚರ್ಚೆಗಳನ್ನೂ ಟೀಕೆಗಳನ್ನೂ ಸ್ವಾಗತಿಸುತ್ತೇನೆ. ನಾನು ಸತ್ಯವನ್ನೇ ಹೇಳಿದ್ದೇನೆ ಎಂದು ಪ್ರತಿಜ್ಞೆ ಮಾಡಲಾರೆನಾದರೂ, ಸತ್ಯವನ್ನು ಹೇಳಬೇಕೆಂಬ ನನ್ನ ಸಂಕಲ್ಪವೇ ನನಗೆ ಧೈರ್ಯವನ್ನು ತಂದುಕೊಟ್ಟಿರುವುದು. ನನ್ನ ನಿರೂಪಣೆಯ ಕೆಲವು ಭಾಗಗಳನ್ನು ಯಾರಾದರೂ ಪ್ರಶ್ನಿಸಬಹುದು ; ಆದರೆ ನನ್ನ ಸಂಕಲ್ಪ ಉದ್ದೇಶಗಳನ್ನು ಪ್ರಶ್ನಿಸ ಬಾರದೆಂದು ವಿನಯದಿಂದ ಕೇಳಿಕೊಳ್ಳುತ್ತೇನೆ. ಕರ್ನಾಟಕದ ಪ್ರಮುಖ ಸಮಾಜ ಗಳಲ್ಲಿ ಒಂದಾಗಿರುವ ಲಿಂಗವಂತ ಸಮಾಜವನ್ನು ಅದರ ಎಲ್ಲ ಗುಣ ದೋಷಗಳೊಡನೆ, ವ್ಯಾಪ್ತಿ ಮಿತಿಗಳೊಡನೆ ಅರ್ಥಮಾಡಿಕೊಳ್ಳುವ ಒಂದು ಚಿಕ್ಕ ಪ್ರಯತ್ನ ಇದು.

ಕೆಲವು ವಿಷಯಗಳನ್ನು ದಾಖಲು ಮಾಡುವ ಉದ್ದೇಶದಿಂದ ಕೆಲವು ಅನುಬಂಧ ಗಳನ್ನು ಅಂತ್ಯದಲ್ಲಿ ಕೊಡಲಾಗಿದೆ.

I

ಲಿಂಗಾಯತರಲ್ಲಿ ಜಾತಿಗಳ ಒಂದು ಸ್ಥೂಲ ಅನುಶ್ರೇಣಿ (Hierarchy) ಇರುವುದು ಎಲ್ಲರಿಗೂ ತಿಳಿದ ವಿಷಯವೇ.* ಆ ಅನುಶ್ರೇಣಿಯ ತುತ್ತತುದಿಯಲ್ಲಿ ಜಂಗಮ ಇದ್ದಾನೆ; ಆದರೆ ತೀರ ಕೆಳಗೆ ಇರುವ ಜಾತಿ ಯಾವುದು ಎಂಬುದನ್ನು ಹೇಳುವುದು ಕಷ್ಟ. ಲಿಂಗವಂತ ಹರಿಜನರು ಎಂದು ಹೇಳಬಹುದಾದರೂ ಅವರನ್ನು ಲಿಂಗಾಯತರು ತಮ್ಮ ಮಂತದವರೆಂದು ಗುರುತಿಸಲು ಸಿದ್ಧರಾಗಿಲ್ಲ. ಲಿಂಗವಂತ ಕುರುಬರನ್ನೇ (ಇವರನ್ನು "ಒಡೆಯರು" ಎಂದೂ ಕರೆಯುತ್ತಾರೆ) ಲಿಂಗಾಯತರು ತಮ್ಮವರೆಂದು ಭಾವಿಸಲು ಸಿದ್ಧರಿಲ್ಲದಿರುವಾಗ, ಲಿಂಗವಂತ ಹರಿಜನರ ವಿಷಯ ದೂರವೇ ಉಳಿಯಿತು. ಜಂಗಮರಿಂದ ಆರಂಭವಾಗುವ ಅನುಶ್ರೇಣಿಯಲ್ಲಿ ಬೇರೆ ಬೇರೆ ಜಾತಿಗಳು ಸೇರ್ಪಡೆಯಾಗುತ್ತವೆ. ಪಂಚಮಸಾಲಿ, ಬಣಜಿಗ, ಸಾದ, ನೊಣಬ, ಗೌಡ, ಸೆಟ್ಟಿ, ಕುಡುವೊಕ್ಕಲಿಗ, (ಶಿವ) ಸಿಂಪಿಗ, ನೇಕಾರ, ಕಮ್ಮಾರ, ಕುಂಬಾರ, ಗಾಣಿಗ, ಮಡಿವಾಳ, ಬಡಗಿ, ರೆಡ್ಡಿ, ಕ್ಷೌರಿಕ, ಲಾಳಗೊಂಡ ಇವೇ ಮುಂತಾದ (ಲಿಂಗಾಯತ) ಜಾತಿಗಳು ಬರುತ್ತವೆ. ಜಂಗಮಜಾತಿಯಿಂದ ಕೆಳಗೆ ಬರುವ ಈ ಜಂಗಮೇತರ ಅಥವಾ ಭಕ್ತಜಾತಿಗಳಲ್ಲಿ ನಿರ್ದಿಷ್ಟ ಅನುಶ್ರೇಣಿಯನ್ನು ಗೊತ್ತುಮಾಡುವುದು ಕಷ್ಟವಾದರೂ ಮತ್ತು ಆಯಾ ಜಾತಿಯವರು ತಾವೇ ಶ್ರೇಷ್ಠ ರೆಂದು ಹೇಳಿಕೊಳ್ಳಲು ಬಯಸಿದರೂ ಒಂದು ಸ್ಥೂಲ ಅನುಶ್ರೇಣಿಯಂತೂ ಇದ್ದೇ ಇದೆ. ಉದಾಹರಣೆಗೆ, ಒಳ ವಿವಾಹ ಪದ್ಧತಿಯ ಜಂಗಮರು ಜಂಗಮೇತರ ಜಾತಿ ಯಿಂದ ಹೆಣ್ಣು ತರಲೇ ಬೇಕಾಗಿ ಬಂದಾಗ ಆಗ ಪಂಚಮಸಾಲಿ ಹೆಣ್ಣು ಆಗಬಹುದು (ಜಂಗಮರು ಪಂಚಮಸಾಲಿಗಳಿಗೆ ಎಂದೂ ಹೆಣ್ಣು ಕೊಡುವುದಿಲ್ಲವೆಂಬ ಮಾತು ಬೇರೆ). ಎಂದರೆ, ಜಂಗಮೇತರ ಜಾತಿಗಳಲ್ಲಿ ಪಂಚಮಸಾಲಿ ಶ್ರೇಷ್ಠನಾಗುತ್ತಾನೆ.

* ಇದರ ಸ್ಥೂಲಪರಿಚಯಕ್ಕೆ, ನೋಡಿ, H. M. Marulasiddaiah : Old People of Makunti, Dharwar, 1969, pp. 20–5.

ವರ್ತಕರೂ ಹಣವಂತರೂ ಆದ ಬಣಜಿಗರು ತಮ್ಮ ಶ್ರೇಷ್ಠತೆಯನ್ನು ಮುಂದೆ ಮಾಡುವುದೂ ಉಂಟು. ಆದರೆ, ಒಂದು ಊರಲ್ಲಿ ಸಾದರು ಪ್ರಬಲರೂ ಹಣವಂತರೂ ಅಧಿಕ ಸಂಖ್ಯಾಕರೂ ಆಗಿದ್ದರೆ ಆ ಊರಿನ ಅಲ್ಪಸಂಖ್ಯಾತ ಬಣಜಿಗರ ಸಾದರ ಮೇಲ್ಮೆಯನ್ನು ತೋರಿಕೆಗಾದರೂ ಒಪ್ಪಿಕೊಳ್ಳುತ್ತಾರೆ; ಅಥವಾ ಕೊನೆಯ ಪಕ್ಷ ತಮ್ಮ ಮೇಲ್ಮೆಯನ್ನು ಎತ್ತಿ ಹಿಡಿಯಲು ಹೋಗುವುದಿಲ್ಲ. 'ಸಾಮಾಜಿಕವಾಗಿ ಕೆಳ' ಎಂದು ಭಾವಿಸುವ ಕ್ಷೌರ, ಕುಂಬಾರಿಕೆ ಕೆಲಸಗಳನ್ನು ಮಾಡುವ ಲಿಂಗಾಯತರಿಗಿಂತ ಹೆಚ್ಚು ಮಾನ್ಯ ಉದ್ಯೋಗವಾದ ನೇಯ್ಗೆಯಲ್ಲಿ ನಿರತರಾಗಿರುವ ನೇಕಾರರು ಮೇಲಾಗುತ್ತಾರೆ. ಈ ಅನುಶ್ರೇಣಿಯು ವಿದ್ಯೆ, ಆಧುನಿಕ ನಾಗರಿಕತೆಗಳಿಂದ ಕೆಲವೆಡೆ ಮಾಯವಾಗಿದೆ ; ಕೆಲವೆಡೆ ಮಸುಕಾಗಿದೆ ; ಬಹುತೇಕ ಎಲ್ಲ ಕಡೆಗಳಲ್ಲಿ ಪ್ರಶ್ನಿತವಾಗಿದೆ, ಸವಾಲುಗೊಂಡಿದೆ. ಈ ಮಾತು ಉತ್ತರ ಕರ್ನಾಟಕಕ್ಕಿಂತ ಹಳೆಯ ಮೈಸೂರಿಗೆ ಹೆಚ್ಚು ನಿಜವಾಗಿದ್ದರೂ, ಹೆಚ್ಚು ಸಂಪ್ರದಾಯ ನಿಷ್ಠವಾಗಿರುವ ಉತ್ತರ ಕರ್ನಾಟಕದಲ್ಲೂ ಲಿಂಗಾಯತರ ಒಳಗೇ ನಡೆಯುವ ಅಂತರಜಾತೀಯ ವಿವಾಹಗಳಿಂದ, ಲಿಂಗಾಯತರು ಮತ್ತು ಲಿಂಗಾಯತೇತರರ ನಡುವೆ ಜರುಗುವ ಅಂತರ ಮತೀಯ ವಿವಾಹಗಳಿಂದ, ಮತ್ತು ಅಲ್ಲಿನ ವಿದ್ಯಾವಂತ ಅಥವಾ ಪ್ರಜ್ಞಾವಂತ ಜನತೆಯ ಪ್ರಚಾರದಿಂದ ಈ ಅನುಶ್ರೇಣಿ ಈಗ ಹೆಚ್ಚು ಹೆಚ್ಚು ಧಾಳಿಗೆ ಒಳಗಾಗುತ್ತಿದೆ. ಜಂಗಮರ ಶ್ರೇಷ್ಠತ್ವವನ್ನೇ ಪ್ರಶ್ನಿಸುವ ಪ್ರಯತ್ನಗಳೂ ಅಲ್ಲಿ ನಡೆದಿವೆ. ಹಳೆ ಮೈಸೂರಿನಲ್ಲಿ ಜಂಗಮ, ಜಂಗಮೇತರ ಜಾತಿಗಳ ಮಧ್ಯದ ಗೆರೆ ತೀರ ತೆಳುವಾಗುತ್ತಿದ್ದು ಪಟ್ಟಣಗಳಲ್ಲಂತೂ ಅಳಿಸಿ ಹೋಗಿದೆ ಅಥವಾ ಅಳಿಸಿ ಹೋಗುವುದರಲ್ಲಿದೆ. ವ್ಯತ್ಯಾಸ ಶೀಲವಾದ ಸಮಾಜದಲ್ಲಿ ಇದೆಲ್ಲವೂ ತೀರ ಸ್ವಾಭಾವಿಕ, ನಿರೀಕ್ಷಿತ ಮತ್ತು ಸ್ವಾಗತಾರ್ಹ.

2

ಜಂಗಮತ್ವ

ಜಂಗಮ ಜಾತಿಯ ಮೂಲ ಏನೇ ಇರಲಿ (ಈ ಬಗ್ಗೆ ನಾನು ನಡೆಸಿರುವ ಚಿಂತನೆ ಇನ್ನೂ ಖಚಿತ ಫಲವನ್ನು ಕೊಟ್ಟಿಲ್ಲ), ಈಗ ಇರುವ ಪರಿಸ್ಥಿತಿಯಲ್ಲಿ ಬ್ರಾಹ್ಮಣ್ಯದಂತೆ ಜಂಗಮತ್ವವೂ ಹುಟ್ಟಿನಿಂದ ಬರತಕ್ಕುದೇ ಹೊರತು ಯೋಗ್ಯತೆ ಅಥವಾ ಶಿಕ್ಷಣದಿಂದ ಅಲ್ಲ. ಈ ಸ್ಥಿತಿ ದಕ್ಷಿಣ ಕರ್ನಾಟಕದಲ್ಲಿ ಸ್ವಲ್ಪ ಬದಲಾಗಿದೆ. ಪೌರೋಹಿತ್ಯ ಕಾರ್ಯಗಳಿಗಾಗಿ ಸಾದ, ಸೊಣಬ, ಗೌಡ ಇತ್ಯಾದಿ ಲಿಂಗವಂತ ಜಾತಿಗಳವರು ತಮ್ಮಲ್ಲೇ ಜಂಗಮರನ್ನು ('ಅಯ್ಯನವರನ್ನು) ಮಾಡಿಕೊಂಡು ಹುಟ್ಟಿನಿಂದ ಜಂಗಮರಾಗಿರುವವರನ್ನು ದೂರ ಇಡುತ್ತಿರುವ ಉದಾಹರಣೆಗಳು ಇವೆ. ಕೆಲವೆಡೆ ಹುಟ್ಟು ಜಂಗಮರು ನವೀನ ಜಂಗಮರನ್ನು ಕೀಳಾಗಿ ನೋಡುತ್ತಿದ್ದರೂ, ನವೀನ ಜಂಗಮರ ಅನುಯಾಯಿಗಳೇ ಊರಲ್ಲಿ ಪ್ರಬಲರಾಗಿರುವುದರಿಂದಲೂ ಮತ್ತು ಆ ಅನುಯಾಯಿಗಳು ತಮ್ಮ ಜಂಗಮರ ಜೊತೆ ಹುಟ್ಟು ಜಂಗಮರನ್ನೂ ಮದುವೆ ಇತ್ಯಾದಿ ಕಾರ್ಯಗಳಿಗೆ ಕರೆದು ಕೊನೆಯ ಪಕ್ಷ ಎರಡನೆಯ ಸ್ಥಾನವನ್ನು

ಕೊಡುತ್ತಿರುವುದರಿಂದಲೂ, ತಮ್ಮ ಸಹಜ ಸ್ಥಾನದಿಂದ ಪಲ್ಲಟಗೊಂಡು ಸ್ಥಾನ ಮತ್ತು ದಕ್ಷಿಣೆ ರೂಪದ ಹಣಗಳ ನಷ್ಟದಿಂದ ಒಳಗೇ ನೋವು ಅನುಭವಿಸುತ್ತಿರುವ ಜಂಗಮರು ಬಹಿರಂಗವಾಗಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಲು ಅಸಮರ್ಥರಾಗಿ ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳುತ್ತಿದ್ದಾರೆ, ಹೊಂದಿಕೊಳ್ಳಲೇ ಬೇಕಾಗಿದೆ. ಉತ್ತರ ಕರ್ನಾಟಕದಲ್ಲಿ ಜಂಗಮನಲ್ಲದವನು ಯಾವುದೇ ಪೀಠಾಧ್ಯಕ್ಷನಾಗಲು ಅನರ್ಹನಾದರೆ[1], ದಕ್ಷಿಣ ಕರ್ನಾಟಕದಲ್ಲಿ ಹಲವೆಡೆ ಜಂಗಮನಲ್ಲದವನಿಗೆ ದೀಕ್ಷೆ ಮೂಲಕ ಜಂಗಮತ್ವವನ್ನು ಕೊಟ್ಟು (ಗುರು ಮಠ ಮತ್ತು ವಿರಕ್ತಮಠಗಳಲ್ಲಿ) ಪೀಠಾಧ್ಯಕ್ಷನಾಗಲು ಅರ್ಹತೆಯನ್ನು ಕಲ್ಪಿಸಲಾಗುತ್ತಿದೆ. ಇಲ್ಲಿ ಟೀಕಿಸುವಂತಹುದು ಏನೂ ಇಲ್ಲವೆಂದೂ ಸಾಮಾಜಿಕ ಬದಲಾವಣೆಗಳಲ್ಲಿ ಆಸಕ್ತರಾಗಿರುವವರು ಇಂತಹ ಚಲನಗಳನ್ನು ಗುರುತಿಸಿ ಅವುಗಳಿಗೆ ಕಾರಣವೇನು ಎಂಬುದರ ವಿಶ್ಲೇಷಣೆಯಲ್ಲಿ ತೊಡಗಬೇಕಾಗುತ್ತದೆಂದೂ ಇಲ್ಲಿ ಹೇಳಬೇಕಾಗಿದೆ.

ಇಷ್ಟು ಮಾತುಗಳು ನನ್ನ ಮುಂದಿನ ವಿಶ್ಲೇಷಣೆಗೆ ಅಗತ್ಯವಾದ ಪೂರ್ವ ಪೀಠಿಕೆ. ಪುರೋಹಿತನಾದ ಜಂಗಮ ವೀರಶೈವಧರ್ಮದ ಅಥವಾ ಲಿಂಗಾಯತ ಸಮಾಜದ ಅತಿ ಮುಖ್ಯ ಭಾಗವೂ ಧರ್ಮದ ಸಾಕಾರಮೂರ್ತಿಯೂ ಸಂರಕ್ಷಕನೂ ಆಗಿದ್ದಾನೆ. ಅವನು ಕುಡಿತ, ಮಾಂಸಾಹಾರ, ಅನೈತಿಕ ವ್ಯವಹಾರ, ಧೂಮ್ರಪಾನಗಳಿಂದ ದೂರವಿದ್ದು ನಿತ್ಯವೂ ಸ್ನಾನ, ಶಿವಪೂಜೆಗಳನ್ನು ಬಿಡದೆ ನಡಸುತ್ತ ಶುಚಿ ಜೀವನವನ್ನು ಬದುಕಬೇಕೆಂದು ಸಮಾಜವು ನಿರೀಕ್ಷಿಸುತ್ತದೆ. ಜನನ ಮರಣಗಳಲ್ಲಿ ವಿವಾಹ ಹಬ್ಬಗಳಲ್ಲಿ ಇತರ ಧಾರ್ಮಿಕ ವಿಧಿ ಸಂಸ್ಕಾರಗಳಲ್ಲಿ ಅವನದು ಪ್ರಮುಖ ಪಾತ್ರ. ಮಗುವಿಗೆ ಅವನು ಲಿಂಗಧಾರಣೆ ಮಾಡಿ ಹೆಸರಿಡದ ಹೊರತು ಆ ಮಗು 'ಭವಿ'ಯಾಗಿಯೇ ಉಳಿಯುತ್ತದೆ, ಲಿಂಗಾಯತ ಆಗುವುದಿಲ್ಲ. ಜನರಿಗೆ ಧರ್ಮವನ್ನು ಕೊಡುವವನು ಅವನು. ಅವನು ದೇವಾಲಯದ ಅರ್ಚಕನಲ್ಲ. ಅವನೇ ಓಡಾಡುವ ಮೂರ್ತ ದೇವರು ಎಂಬ ಕಲ್ಪನೆಯಿರುವಾಗ ಅವನು ಅರ್ಚಕನಾಗಲು ಸಾಧ್ಯವಿಲ್ಲ. (ಕೆಲವಡೆ ವಿರಳವಾಗಿ* 'ಮಠಪತ್ತಿ' ಎಂಬ ಜಂಗಮರ ಉಪಜಾತಿಯ ವ್ಯಕ್ತಿ ಅರ್ಚಕರಾಗಿರುವುದೂ ಉಂಟು). ಅವನ ಪಾದೋದಕವನ್ನು ಜನ ತಮ್ಮ ಇಷ್ಟ ಲಿಂಗಗಳ ಮೇಲೆ ಅಭಿಷೇಕ ಮಾಡುವುದಾಗಲಿ ಊರಿನ ಜನ ಗರ್ಭಗುಡಿಯ ಶಿವಲಿಂಗದ ಮೇಲೆ ಅವನ ಕಾಲು ಇಡಿಸಿ ಅಭಿಷೇಕ ಮಾಡುವುದಾಗಲಿ ಅವನ ಪಾದೋದಕವನ್ನು ಮನೆತುಂಬ ಸಿಂಪಡಿಸುವುದು ಮಾತ್ರವಲ್ಲ ಅದರ ಕೆಲವು ಹನಿಗಳನ್ನು ಬಾಯಲ್ಲಿ

---

1 ಧಾರವಾಡದ ನವಕಲ್ಯಾಣ ಮಠದ ಶ್ರೀ ಕುಮಾರಸ್ವಾಮಿಗಳು ಹುಟ್ಟು ಜಂಗಮರಲ್ಲವೆಂದು ಕೆಲವರು ಅಸಹನೆಯ ಪ್ರತಿಕ್ರಿಯೆ ತೋರಿರುವುದುಂಟು. ಸಿದ್ಧಗಂಗೆಯ ಸ್ವಾಮಿಗಳು (ಇವರು ವಿರಕ್ತರು) ಹುಟ್ಟು ಜಂಗಮರಲ್ಲವೆಂದು ಆ ಮಠಕ್ಕೆ ಹೋಗದೆ ಇರುವ ಆರಾಧ್ಯರು ಅಥವಾ ಜಂಗಮರು ತುಮಕೂರಿನಲ್ಲಿದ್ದಾರೆ. ಅವರು ಆ ಸ್ವಾಮಿಗಳಿಗೆ ಬಾಗಿ ನಮಸ್ಕರಿಸುವುದು ದೂರವೇ ಉಳಿಯಿತು.

* ಈ ಅಂಶವನ್ನು ತಿಳಿಸಿದವರು ಡಾ॥ ಎಚ್. ಎಂ. ಮರುಳಸಿದ್ಧಯ್ಯನವರು.

ಹಾಕಿಕೊಳ್ಳುವುದಾಗಲಿ ದೇವರಿಗಿಂತ ಅವನು ಒಂದು ಕೈ ಮೇಲು ಎಂಬ ವೀರಶೈವರ ನಂಬಿಕೆಯ ಕುರುಹು. ಜಂಗಮನಿಗೆ ಅಧಿಕಾರವನ್ನು ಕೊಡುವವರು ಅವನಿಗೆ ದೀಕ್ಷೆ ಕೊಡುವ ಪಟ್ಟದ್ದೇವರು (ಪಟ್ಟಾಧ್ಯಕ್ಷರು ಅಥವಾ ಪಟ್ಟಮೂರ್ತಿಗಳು). ಪಟ್ಟದ್ದೇವರು ಪಂಚ ಪೀಠಾಧ್ಯಕ್ಷರ ಪ್ರತಿನಿಧಿಗಳು ; ಪಂಚಪೀಠಾಧ್ಯಕ್ಷರು ವೀರಶೈವ ಧಾರ್ಮಿಕ ಜಗತ್ತಿನ ಉನ್ನತಪ್ರಭುಗಳು ; ವೀರಶೈವ ಧಾರ್ಮಿಕ ಸಾಮ್ರಾಜ್ಯದ ಸಿಂಹಾಸನಾಧೀಶ್ವರರು. ಈಗ ಇರುವಂತೆ ಹುಟ್ಟಿನಿಂದ ಜಂಗಮರಾಗಿರುವ ವಿರಕ್ತರೂ ತಮ್ಮ ಪೂರ್ವಾಶ್ರಮದಲ್ಲಿ ಯಾವುದಾದರೂ ಪಂಚಪೀಠಕ್ಕೆ ಸೇರಿದವರೇ ಆಗಿದ್ದು ಪಂಚಪೀಠಗಳಿಗೆ ಸೇರಿದ ಪಟ್ಟದ್ದೇವರಿಂದಲೇ ದೀಕ್ಷೆ ಪಡೆದು ನಿರ್ದಿಷ್ಟ ಗೋತ್ರ ಸೂತ್ರ ಪ್ರವರಗಳನ್ನು ಹೊಂದಿದ್ದರೂ, ವಿರಕ್ತಾಶ್ರಮವನ್ನು ಅಂಗೀಕರಿಸಿದೊಡನೆ ಆ ಎಲ್ಲವನ್ನೂ ಕಳೆದುಕೊಂಡು 'ನಿರಂಜನ' 'ನಿರಾಭಾರಿ'ಗಳೂ ಆಗುತ್ತಾರೆ. ಅನುಶ್ರೇಣಿಯಲ್ಲಿ* ವಿರಕ್ತನದು ಪಂಚಪೀಠಾಧ್ಯಕ್ಷರಿಗಿಂತ ಮೇಲಿನ ಸ್ಥಾನವಾದರೂ (ವಿವರಗಳಿಗೆ ಮುಂದೆ ನೋಡಿ), ಮೊದಲು ಪಂಚಾಚಾರ್ಯರ ಬಗ್ಗೆ ವಿವರಗಳನ್ನು ನೋಡಿ, ಸೂಕ್ತ ಸ್ಥಳದಲ್ಲಿ ವಿರಕ್ತರನ್ನು ಉಲ್ಲೇಖಿಸಲಾಗುತ್ತದೆ.

ಪಂಚ ಪೀಠಾಧ್ಯಕ್ಷರು (ಮಹಾಚಾರ್ಯರು)

ಪಂಚ ಪೀಠ ಮತ್ತು ವಿರಕ್ತ ಪರಂಪರೆಗಳು ಈಗ ವಿರೋಧಿಗಳೆಂಬುವಂತೆ ವ್ಯವಹಾರದಲ್ಲಿದ್ದರೂ ಅದು ಈ ಶತಮಾನದ ಬೆಳವಣಿಗೆ ಎಂಬಂತೆ ತೋರುತ್ತದೆ. ಷಡಕ್ಷರಿಯಂತಹ ಗುರು ಪೀಠಾಧ್ಯಕ್ಷ ಕವಿ, ಬಸವ ರೇಣುಕರ ಮೇಲೆ ಕಾವ್ಯಗಳನ್ನು ಬರೆದಿದ್ದಾನೆ. ಅದರ ಇತಿಹಾಸಕ್ಕೆ ಹೋಗನೆ,–ಇತಿಹಾಸ ನನ್ನ ಉದ್ದೇಶವಾಗಿಲ್ಲ–ಸಮಕಾಲೀನ ಸ್ಥಿತಿಯನ್ನು ಮಾತ್ರ ವಿವರಿಸುತ್ತೇನೆ. (ಇತಿಹಾಸ ಬಂದರೂ ಅದು ಹಿನ್ನೆಲೆಯಾಗಿ ಮಾತ್ರ ಕಾಣಿಸಿಕೊಳ್ಳುತ್ತದೆ.)

ಶಿವನ ಪಂಚಮುಖಗಳಿಂದ ಹುಟ್ಟಿದರೆಂದು ನಂಬಲಾದ ಐವರು ಪಂಚಾಚಾರ್ಯರು ಕಲಿಯುಗದಲ್ಲಿ ಐದು ಪೀಠಗಳನ್ನು ಸ್ಥಾಪಿಸಿದರು. ಅವರ ಅವತಾರದ ಉದ್ದೇಶ ವೀರಶೈವ ಮತದ ಉದ್ಧಾರ ("ವೀರಶೈವಮತೋದ್ಧಾರ ಹೇತವೇ").[2] ಅವರ ಪಟ್ಟಿ ಹೀಗಿದೆ :

---

* ಇದು ಜಾತಿಯ ಅನುಶ್ರೇಣಿಯಲ್ಲ, ಸ್ಥಾನೀಯ ಅನುಶ್ರೇಣಿ ಎಂಬುದು ಸ್ಪಷ್ಟವಾಗಿಯೇ ಇದೆ.

2. ಈ ಸಂಪ್ರಬಂಧದಲ್ಲಿ ಪಗಡದಿನ್ನಿ ಪಂಡಿತ ಬಸವರಾಜಶಾಸ್ತ್ರಿಗಳು ಸಂಪಾದಿಸಿರುವ "ವೀರಶೈವ ಸದಾಚಾರ ಸಂಗ್ರಹ" ದಿಂದ (ಹುಬ್ಬಳ್ಳಿ, 1964) ಹಲವು ಸಂಗತಿಗಳನ್ನು ಗ್ರಹಿಸಿದ್ದೇನೆ. ಶ್ರೀ ಚೆನ್ನಯ್ಯ ಹಿರೇಮಠ ಸಂಪಾದಿಸಿರುವ "ಸಿಂದಗಿ ಪಟ್ಟಾಧ್ಯಕ್ಷರು" (ಹಾವೇರಿ 1981) ಎಂಬ ಕೃತಿಯಿಂದ ಉಪಯುಕ್ತ ಮಾಹಿತಿ ಪಡೆದಿದ್ದೇನೆ. ಬಹುಪಾಲು ವಿಷಯ ನನ್ನ ಕ್ಷೇತ್ರ ಕಾರ್ಯಗಳ ಸಂದರ್ಭದಲ್ಲಿ ಮಾಡಿಕೊಂಡ ಟಿಪ್ಪಣಿಗಳದ್ದು.

ಶಿವನ ಮುಖ	ಪಂಚಾಚಾರ್ಯ	ಪೀಠಸ್ಥಾಪನೆ
ಸದ್ಯೋಜಾತ	ರೇವಣಾರಾಧ್ಯ	ಬಾಳೆಹಳ್ಳಿ (= ರಂಭಾಪುರಿ)
ವಾಮದೇವ	ಮರುಳಾರಾಧ್ಯ	ಉಜ್ಜಯಿನಿ (ಬಳ್ಳಾರಿ ಜಿಲ್ಲೆ)
ಅಘೋರ	ಏಕೋರಾಮಾರಾಧ್ಯ	ಕೇದಾರ
ತತ್ಪುರುಷ	ಪಂಡಿತರಾಧ್ಯ	ಶ್ರೀಶೈಲ
ಈಶಾನ	ವಿಶ್ವಾರಾಧ್ಯ	ವಾರಣಾಸಿ

ಒಬೊಬ್ಬ ಪಂಚಾಚಾರ್ಯರಿಗೂ ಪ್ರತ್ಯೇಕ ಗೋತ್ರ, ಸೂತ್ರ, ವರ್ಣ, ಮಂತ್ರ ಇತ್ಯಾದಿಗಳುಂಟು. ಅವುಗಳ ಪಟ್ಟಿ, "ವೀರಶೈವ ಸದಾಚಾರ ಸಂಗ್ರಹ"ದ ಪ್ರಕಾರ ಹೀಗಿದೆ :

ಪಂಚಾಚಾರ್ಯ	ಗೋತ್ರ	ಸೂತ್ರ	ದಂಡ	ಕಮಂಡಲು	ಮಂತ್ರಬೀಜ	ಪ್ರವರ	ಶಾಖೆ	ಕಂಥಾ	ವರ್ಣ
ರೇವಣಾರಾಧ್ಯ	ವೀರ	ಪಡಿವಿಡಿ	ಅರಳಿ	ಹಸರುಬಣ್ಣ	ನಕಾರ	ಏಕಾಕ್ಷರ	ರೇಣುಕ	ಹಸರುಬಣ್ಣ	ಅತಿವರ್ಣ
ಮರುಳಾರಾಧ್ಯ	ನಂದಿ	ಮಳೆ (ವೃಷ್ಟಿ)	ಮುತ್ತುಗ	ತಾಮ್ರ	ಮಕಾರ	ದ್ವ್ಯಕ್ಷರ	ದಾರುಕ	ತಾಮ್ರವರ್ಣ	”
ಏಕೋರಾಮಾರಾಧ್ಯ	ಭೃಂಗಿ	ಲಂಬನ	ಆಲ	ಲೋಹ (ಕಬ್ಬಿಣ?)	ಶಿಕಾರ	ತ್ರ್ಯಕ್ಷರ	ಶಂಖುಕರ್ಣ	ಬೂದ	”
ಪಂಡಿತಾರಾಧ್ಯ	ವೃಷಭ	ಮುಕ್ತಾ-ಗುಚ್ಛ	ಬಿದಿರು	ಕಂಚು	ವಕಾರ	ಚತುರಕ್ಷರ	ಧೇನುಕರ್ಣ	ಬಿಳಿ	”
ವಿಶ್ವಾರಾಧ್ಯ	ಸ್ಕಂದ	ಪಂಚ-ವರ್ಣ	ಬಿಲ್ವ	ಬಂಗಾರ	ಯಕಾರ	ಪಂಚಾಕ್ಷರ	ವಿಶ್ವಕರ್ಣ	ಬಂಗಾರ	”

• ಪಂಚಸೂತ್ರಗಳಲ್ಲಿ ಒಂದೊಂದಕ್ಕೂ ಹನ್ನೆರಡು ಉಪಸೂತ್ರಗಳಿವೆ (ಮುಂದೆ ನೋಡಿ).

ಈ ಪಂಚಾಚಾರ್ಯರ ಪೀಠಗಳ ಪೀಠಾಧ್ಯಕ್ಷರು ಸಮಸ್ತ ವೀರಶೈವರ ಧಾರ್ಮಿಕ ಆಗು ಹೋಗುಗಳನ್ನು ನಿರ್ಣಯಿಸುತ್ತಾರೆ. ಇವರನ್ನು ಮಹಾಚಾರ್ಯರೆಂದು ಕರೆಯು ತ್ತಾರೆ. ವಿರಕ್ತಮಠಗಳನ್ನುಳಿದು ಬಹುತೇಕ ಎಲ್ಲ ವೀರಶೈವಮಠಗಳೂ ಮೇಲಿನ ಐದು ಪೀಠಗಳಲ್ಲಿ ಒಂದಲ್ಲ ಒಂದಕ್ಕೆ ಸಂಬಂಧಿಸಿರುತ್ತವೆ; ಅಥವಾ ಅವುಗಳ ಅಧೀನ ದಲ್ಲಿರುತ್ತವೆ.

ಈ ಐವರೂ ಸಮಾನರು, ಸಂಪೂರ್ಣ ಸ್ವತಂತ್ರರು, ತತ್ವಶಃ ಇವರಿಗೆ ಲಿಂಗಾ ಯತ ಜನಸಮೂಹದ ಮೇಲೆ ಸಂಪೂರ್ಣ ಹತೋಟಿ ಉಂಟು. ಲಿಂಗಾಯತ ಜನರ ಶಿಕ್ಷೆ ರಕ್ಷೆಗಳಿಗೆ ಇವರು ಬಾಧ್ಯರು ಮತ್ತು ಧರ್ಮ ರಕ್ಷಕರು. ಲಿಂಗಾಯತರು ಬಹು ಮಟ್ಟಿಗೆ ಕರ್ನಾಟಕಕ್ಕೆ ಸೀಮಿತವಾಗಿದ್ದರೂ ಲಿಂಗಾಯತರ ಪಂಚ ಪೀಠಗಳಲ್ಲಿ ಎರಡು ಮಾತ್ರ ಕರ್ನಾಟಕದಲ್ಲಿದ್ದು (ಬಾಳೆ ಹಳ್ಳಿ, ಉಜ್ಜಯಿನಿ) ಉಳಿದ ಮೂರು ಹೊರ ಗಿವೆ. (ಆಂಧ್ರಪ್ರದೇಶದಲ್ಲಿ ಶ್ರೀಶೈಲ, ಉತ್ತರಪ್ರದೇಶದಲ್ಲಿ ಕಾಶಿ ಮತ್ತು ಹಿಮವತ್ ಕೇದಾರ).

ಉಪಾಚಾರ್ಯರು

ಪಂಚಪೀಠಾಧ್ಯಕ್ಷರು ಐವರು ಮಾತ್ರ; ಅವರು ಎಲ್ಲೆಡೆಗೂ ಹೋಗಲು ಸಾಧ್ಯ ವಿಲ್ಲವಾದ್ದರಿಂದ ದೇಶಾದ್ಯಂತ ಅವರ ಪ್ರತಿನಿಧಿಗಳಾಗಿ "ಉಪಾಚಾರ್ಯರು" ಇದ್ದಾರೆ. ಇವರು ಪಂಚಾಚಾರ್ಯರ ಅಧೀನರಾಗಿದ್ದು ಪಂಚಾಚಾರ್ಯರಿಂದ ಹೊರಟ ಒಂದಲ್ಲ ಒಂದು ಉಪಸೂತ್ರಕ್ಕೆ ಸೇರಿದವರಾಗಿರುತ್ತಾರೆ. ಆಯಾ ಪಂಚಾಚಾರ್ಯರಿಗೆ ಸೇರಿದ ಉಪಸೂತ್ರಗಳು ಹೀಗಿವೆ:

ರೇವಣಾರಾಧ್ಯರ ಪಡುವಿಡಿ (ಪಡಿವಿಡಿ) ಮಹಾಸೂತ್ರದಿಂದ ಹೊರಟ ಉಪಸೂತ್ರಗಳು ಹನ್ನೆರಡು: ಪುರಾಣ, ಪಚ್ಚಕಂಥಾ, ಪಡಂಗೀ, ಸುರಗೀ, ಮಂಹಿಪೀ, ದಿಗಂಬರ, ವೇಣಿ, ಭಿತ್ತಿ, ಮಾರಟ, ನಾಟಿ, ಶೌರಿ, ಸುತ್ತೂರ.

ಮರುಳಾರಾಧ್ಯರ ಮಳೆ (ವೃಷ್ಟಿ) ಮಹಾಸೂತ್ರದಿಂದ ಹೊರಟ ಹನ್ನೆರಡು ಉಪಸೂತ್ರಗಳು: ಕಾರ್ಬೊನ್ನ, ಸ್ವರ್ಣಕಂಥಾ, ಸಿಂಗಿ, ಮಸಣೆ, ಕುಠಾರ, ಭೈತ್ರಿ, ಕಠಾರ, ಚಾಮರಿ, ಕವಾಟ, ಕುಕ್ಷಕಂಥಾ, ಜ್ವಲತ್‌ಕಂಥಾ, ಶೃಂಗಿ.

ಏಕೋರಾಮಾರಾಧ್ಯರ ಲಂಬನ ಮಹಾ ಸೂತ್ರದಿಂದ ಹೊರಟ ಉಪ ಸೂತ್ರ ಗಳು ಹನ್ನೆರಡು: ತ್ರಿಪುಟಿ, ರಜ್ಜುಕಂಥಾ, ಭಸ್ಮೀ, ಕಾರ್ಪಾಸ, ರೌಪ್ಯ, ಕೌಪೀ, ಚಂದ್ರಗುಂಡ, ಮೃತ್‌ಕಂಥಾ, ಅಲಕ, ವಸನ, ಮುಂಡಿ, ಖಡ್ಗಿ (ಇವುಗಳಲ್ಲಿ ಕಾರ್ಪಾಸ, ಕೌಪೀ, ಅಲಕ, ವಸನಗಳಿಗೆ ಪರ್ಯಾಯವಾಗಿ ಕೆಲವೆಡೆ ಶಿಖರಿ, ಕಾಷ್ಟಕ, ರಾಮಗಿರಿ, ಪವನ ಎಂಬ ಹೆಸರುಗಳು ದೊರಕುತ್ತವೆ.)

ಪಂಡಿತಾರಾಧ್ಯರ ಮುಕ್ತಾಗುಚ್ಛ (ಮುತ್ತಿನ ಕಂತಿ) ಮಹಾ ಸೂತ್ರದಿಂದ ಹೊರಟ ಹನ್ನೆರಡು ಉಪಸೂತ್ರಗಳು : ಗೋಣಿಕಂಥಾ, ದಂತೀ, ಜತರ, ತ್ರಿಗುಣ, ಕೇಶಕಂಥಾ, ಲಲಾಟ, ವ್ಯಾಘ್ರಕಂಥಾ, ಲೋಚನ, ಭಗಿನೀ, ಜಾಲಕಂಥಾ, ನಟನ, ಬೋದಡಿ.

ವಿಶ್ವಾರಾಧ್ಯರ ಪಂಚವರ್ಣ ಮಹಾಸೂತ್ರದಿಂದ ಹೊರಟ ಹನ್ನೆರಡು ಉಪ ಸೂತ್ರಗಳು : ಕಂಬಾಳಿ, ವೃಷಭ, ಗೋಚರ, ರಜ್ಜುಕಂಥಾ, ಪಂಚಮುಖ, ವೀಟಿ, ದಶಮುಖ, ಗಗನ, ಮುಸಡೀ, ಲಗುಡೀ, ಶಿಥಿಲೀ, ಪಶುಪತಿ (ಇವುಗಳಲ್ಲಿ ರಜ್ಜು ಕಂಥಾ, ವೀಟಗಳಿಗೆ ಪರ್ಯಾಯವಾಗಿ ಜರತ್ಕಂಥಾ, ಗುಹಾಗ್ರ ಎಂಬ ಹೆಸರುಗಳು ದೊರಕುತ್ತವೆ).

ಈ ಉಪಸೂತ್ರಗಳ ಆಚಾರ್ಯರು ಅಥವಾ ಉಪಾಚಾರ್ಯರು ಮಹಾಚಾರ್ಯರ ಪ್ರತಿನಿಧಿಗಳೂ ಅಸ್ವತಂತ್ರರೂ ಆಗಿರುವುದಲ್ಲದೆ ಪಂಚ ಪೀಠದವರಿಗೂ ಲಿಂಗಾಯತ ಭಕ್ತವರ್ಗಕ್ಕೂ ಮಧ್ಯೆ ಕೊಂಡಿಯಂತಿದ್ದು ಪಂಚಾಚಾರ್ಯರ ಪರವಾಗಿ ಲಿಂಗಾಯತರಿಗೆ ಲಿಂಗಧಾರಣ, ದೀಕ್ಷೆ, ವಿವಾಹ ಕಾಲದಲ್ಲಿ ಪೌರೋಹಿತ್ಯ, ಮರಣ ಸಂಸ್ಕಾರಾದಿ ಕಾರ್ಯಗಳನ್ನು ಮಾಡುತ್ತ "ಗುರು"ಗಳೆನ್ನಿಸಿಕೊಂಡಿದ್ದಾರೆ. ಆಯಾ ಪಂಚಪೀಠದ ಹನ್ನೆರಡು ಉಪಸೂತ್ರಗಳಿಗೆ (ಒಟ್ಟು ಅರವತ್ತು) ಸೇರಿದ ಉಪಾಚಾರ್ಯರು ತಾವು ಸಂಬಂಧಿಸಿದ ಪೀಠದ ಗೋತ್ರ, ಸೂತ್ರ, ಪ್ರವರ, ಕಲಶ, ದಂಡ, ಇತ್ಯಾದಿಗಳನ್ನು ಪಡೆಯುತ್ತಾರೆ. ನಿಜವಾದ ಮೂಲ ಗುರುಗಳು ಪಂಚಾಚಾರ್ಯರೇ ಆದರೂ ಅವರಿಂದ ಅಧಿಕಾರ ಸ್ವೀಕರಿಸಿದ ಉಪಾಚಾರ್ಯರು ತಾವೇ ಉಪದೇಶ, ಪೌರೋಹಿತ್ಯಗಳನ್ನು ಮಾಡಲು ಅರ್ಹರಾಗಿರುವುದು ಮಾತ್ರವಲ್ಲದೆ ತಪ್ಪಿತಸ್ಥರನ್ನು ಶಿಕ್ಷಿಸುವ ಅಧಿಕಾರ ವನ್ನೂ ಪಡೆದಿದ್ದಾರೆ. (ವಿವಾಹಕಾಲದಲ್ಲಿ ವಿವಾಹಮಂಟಪದಲ್ಲಿ ಪಂಚಾಚಾರ್ಯರಿಗೆ ಸಂಕೇತವಾಗಿ ಪಂಚಕಲಶಗಳನ್ನು ಹೂಡುವುದರಿಂದ ಅಲ್ಲಿ ಅಗೋಚರವಾಗಿ ಪಂಚಾ ಚಾರ್ಯರು ಇರುವರೆಂದೇ ಗ್ರಹಿಸಲಾಗುತ್ತದೆ ; ಅಲ್ಲಿ ಮದುವೆ ಮಾಡಿಸುವ ಉಪಾ ಚಾರ್ಯರು ಅವರ ಪ್ರತ್ಯಕ್ಷ ಪ್ರತಿನಿಧಿಗಳು ಮಾತ್ರ).

ಉಪಾಚಾರ್ಯರು, ಗ್ರಂಥೋಕ್ತವಾಗಿರುವಂತೆ, ಐದು ವರ್ಗಗಳಾಗಿ ವಿಂಗಡಣೆ ಹೊಂದುತ್ತಾರೆ.

ಮಠಾರ್ಯ (ಮಠಸ್ಥ ಅಥವಾ ಪಟ್ಟದ್ದೇವರು)
ಗಣಾರ್ಯ (ಗಣಾಚಾರಿ)
ಮೂಲಾರ್ಯ (ಮಠಪತಿ)
ಸ್ಥಾವರಾರ್ಯ
ಕೌಮಾರ್ಯ (ಗಣಕುಮಾರ)

ಇವರಲ್ಲಿ ಮಠಾರ್ಯನು (ಮಠಸ್ಥ ಅಥವಾ ಪಟ್ಟದ್ದೇವರು) ಶಿವನ ಹೃದಯದಿಂದಲೂ ಗಣಾಚಾರಿಯು ಬಲಗಡೆಯ ಹೆಗಲಿನಿಂದಲೂ ಮಠಪತ್ರಿಯು ಎಡದ ಹೆಗಲಿನಿಂದಲೂ ಸ್ಥಾವರಾರ್ಯನು ಬಲಪಾದದಿಂದಲೂ ಕೌಮಾರ್ಯನು ಎಡಪಾದದಿಂದಲೂ ಮೂಡಿ ಬಂದಿರುವರೆಂಬ ಕಲ್ಪನೆಯಿದೆ. ಇವರೆಲ್ಲ ಶಿವನೇ ಆಗಿರುವ ಪಂಚಾಚಾರ್ಯರಿಗೆ ಸೇವಕಸ್ವರೂಪರು. ಈ ಐವರು ಉಪಾಚಾರ್ಯರಲ್ಲಿ ಮತ್ತೆ ಮಠಾರ್ಯ (ಪಟ್ಟದ್ದೇವರು) ಮಾತ್ರ ಪೂಜ್ಯನೆಂದೂ ಉಳಿದವರೆಲ್ಲ ಅಪೂಜ್ಯರೂ ಅಸ್ವತಂತ್ರರೂ ಆಗಿದ್ದು ಮಠಾರ್ಯನಿಗೆ ಬೇರೆ ಬೇರೆ ಸಂದರ್ಭಗಳಲ್ಲಿ ಸಹಾಯಕರಾಗಿ ಮಾತ್ರ ಇರತಕ್ಕದ್ದೆಂದೂ ವ್ಯವಸ್ಥೆಯಿದೆ.

ಮೇಲಿನ ಐದು ವರ್ಗಗಳಲ್ಲಿ ವಾಸ್ತವವಾಗಿ ಮೂರು ವರ್ಗದವರು ಮಾತ್ರ ದೊರಕುತ್ತಾರೆ. ಮಠಾರ್ಯ ಅಥವಾ ಪಟ್ಟದ್ದೇವರು, ಗಣಾರ್ಯ ಅಥವಾ ಗಣಾಚಾರ್ಯ (ಗಣಾಚಾರಿ), ಮಾಲಾರ್ಯ ಅಥವಾ ಮಠಪತ್ರಿಗಳು ಇದ್ದಾರೆ; ಸ್ಥಾವರಾರ್ಯ, ಕೌಮಾರ್ಯ ಅಥವಾ ಗಣ ಕುಮಾರರ ವರ್ಗ ಕೇವಲ ಗ್ರಂಥಕಲ್ಪಿತವೋ ಅಥವಾ ನಷ್ಟವಾಗಿರುವ ವರ್ಗಗಳೋ ತಿಳಿಯದು. ''ಸ್ಥಾವರದ ಮಠ'' ಎಂಬ ಹೆಸರಿನ ಜಂಗಮ ವಂಶವೊಂದಿದ್ದು ಅದು ಈಗ ''ವಸ್ತ್ರದ ಮಠ" ಎಂಬ ಹೆಸರನ್ನು ಪಡೆದಿದೆ. ಆ ವಂಶಕ್ಕೆ ಸೇರಿದ ಧಾರವಾಡದ ಸಂಶೋಧನ ವಿದ್ಯಾರ್ಥಿಯೊಬ್ಬ ''ಸ್ಥಾವರದ'' ಎಂಬುದಕ್ಕೆ ವಿವರಣೆ ಕೊಡಲಾರದೇ ಹೋದ. ಹುನಗುಂದದ ಶ್ರೀ ಮಹೇಶ ತಿಪ್ಪಶೆಟ್ಟಿ ತಿಳಿಸಿರುವಂತೆ ಸ್ಥಾವರ ಮಠದವರು ಪೂಜಾ ಕ್ರಿಯಾ ವಿಧಿಗಳು ಜರುಗ ಬೇಕಾದ ಜಾಗದ ಸಾರಣೆ ಮಾಡಿ ಗೋಮೂತ್ರದಿಂದ ಪವಿತ್ರಗೊಳಿಸಿ ರಂಗೋಲೆ ಇಡುವ ಕಾರ್ಯ ಮಾಡುತ್ತಾರೆ. ಮತ್ತು ದೊರಕುವ ಜಂಗಮ ವರ್ಗಗಳಲ್ಲೂ ಪಟ್ಟದ್ದೇವರುಗಳು ಮತ್ತು ಮಠಸ್ಥರು ಇರುವಷ್ಟು ಸಂಖ್ಯೆಯಲ್ಲಿ ಗಣಾಚಾರಿಗಳೂ ಮಠಪತ್ರಿಗಳೂ ಇಲ್ಲ.

ಪಟ್ಟದ್ದೇವರು : ಪಟ್ಟದೇವರನ್ನು ಹಿರೇಮಠದ ಗುರುಗಳು, ಹಿರೇಮಠದವರು, ಹಿರೇಮಠರು ಎಂದು ಕರೆಯಲು ಕಾರಣ, ಅವರೇ ಉಳಿದೆಲ್ಲರಿಗಿಂತ ಶ್ರೇಷ್ಠರಾಗಿರುವುದು. ಇಲ್ಲಿ ಅನುಕೂಲಕ್ಕಾಗಿ, ಬ್ರಹ್ಮಚಾರಿಯಾಗಿದ್ದು ಕಾವಿ ಧರಿಸಿ ಸ್ವಾಮಿಗಳಾಗಿರುವವರನ್ನು ಪಟ್ಟದ್ದೇವರೆಂದೂ (ಪಟ್ಟಾಚಾರ್ಯ, ಪಟ್ಟಮೂರ್ತಿ), ಸಂಸಾರಿಗಳಾಗಿದ್ದುಕೊಂಡು ಎಲ್ಲರಂತೆ ವಸ್ತ್ರಗಳನ್ನು ಧರಿಸುತ್ತ ಲಿಂಗಾಯತರ ಮನೆಗಳಲ್ಲಿ ಪೌರೋಹಿತ್ಯ ಮಾಡುವವರನ್ನು ಹಿರೇಮಠರೆಂದೂ ಹೆಸರಿಸುತ್ತೇನೆ. ''ಹಿರೇಮಠ" ರೂ ಮಠಸ್ಥರೇ. ವಾಸ್ತವವಾಗಿ ''–ಮಠ" ಎಂದು ಕೊನೆಯಾಗುವ ಹೆಸರಿನವರೆಲ್ಲರೂ (ಉದಾ.ಗೆ ಭೂಸನೂರಮಠ, ಸವದತ್ತಿಮಠ, ಕೆಳದಿಮಠ, ಕಲ್ಲೋಳಿಮಠ, ಚರಂತಿಮಠ) ಹಿರೇಮಠರೇ. ಪಟ್ಟದ್ದೇವರು ಮತ್ತು ಹಿರೇಮಠರು ಇಬ್ಬರೂ ಮಠಾರ್ಯ ಅಥವಾ ಮಠಸ್ಥರೇ ಆದರೂ, ಒಬ್ಬರು ಸ್ವಾಮಿಗಳಾಗಿದ್ದರೆ (''ವಿರಕ್ತ'' ಅಲ್ಲ) ಇನ್ನೊಬ್ಬರು ಗೃಹಸ್ಥರಾಗಿರುತ್ತಾರೆ. ಹಾಗೆ ನೋಡಿದರೆ, ಪಟ್ಟದ್ದೇವರ ಮಠವೇ ''ಹಿರೇ ಮಠ''.

ಮಠಸ್ಥ

ಪಟ್ಟದ್ದೇವರು (ಬ್ರಹ್ಮಚಾರಿ) — ಹಿರೇಮಠ (ಗೃಹಸ್ಥ)

ಇಲ್ಲಿ ಒಂದೇ ಸಂಗತಿಯನ್ನು ಒತ್ತಿ ಹೇಳಲು ಕಾರಣ, ಅದು ಸ್ಪಷ್ಟವಾಗಲಿ ಎಂಬ ಉದ್ದೇಶದಿಂದ ಮಾತ್ರ.

ಪಟ್ಟದ್ದೇವರು ಜಂಗಮಶ್ರೇಣಿಯಲ್ಲಿ ಪಂಚಪೀಠಾಧ್ಯಕ್ಷರ ಅನಂತರದವರು (ಪಂಚಪೀಠಾಧ್ಯಕ್ಷರು ಹುಟ್ಟಿನಿಂದ ಜಂಗಮರೇ ಆಗಿರಬೇಕು). ಪಟ್ಟದ್ದೇವರ ಮಠವನ್ನು ಸಾಮಾನ್ಯವಾಗಿ ಹಿರಿಯ ಮಠ, ಹಿರೇಮಠವೆಂದು ಕರೆಯುತ್ತಾರೆ. ಅವರು ಕಡ್ಡಾಯವಾಗಿ ಬ್ರಹ್ಮಚಾರಿಗಳೇ ಆಗಿರಬೇಕೆಂದು ಜನ ಭಾವಿಸಿದ್ದರೂ ಅವಕ್ಕೆ ಅಪವಾದಗಳಿವೆ. (ಮದುವೆ ಮಾಡಿಕೊಂಡು ಪಟ್ಟದ್ದೇವರಾಗಿ ಉಳಿದಿರುವುದಕ್ಕೆ, ಅದನ್ನು ಜನ ಒಪ್ಪಿಕೊಂಡಿರುವುದಕ್ಕೆ ಮೂರು ನಾಲ್ಕು ಉದಾಹರಣೆಗಳಿವೆ). ಊರಿನ ಮಧ್ಯದಲ್ಲಿಯೋ ಅದರ ಅಂಚಿನಲ್ಲಿಯೋ ಮಠವನ್ನು ಮಾಡಿಕೊಂಡು ಬ್ರಹ್ಮಚಾರಿಗಳಾಗಿ ಅವರು ತಮ್ಮ ಸಂಸಾರಿ ಅಣ್ಣ ತಮ್ಮಂದಿರೊಡನೆ ವಾಸಿಸುತ್ತಿರುತ್ತಾರೆ. ಊರಿನಲ್ಲಿ ಅವರಿಗೆ ಹಿಂದಿನಿಂದ ಮಠಕ್ಕೆ ಬಿಟ್ಟ ಆಸ್ತಿಯಿರುವುದಲ್ಲದೆ ಊರಿನ ಜನ ಸುಗ್ಗಿಯಲ್ಲಿ ಆಯವನ್ನೂ ಕೊಡುತ್ತಾರೆ. ಹೊಸದಾಗಿ ಏನು ಬೆಳೆದರೂ-ಅದು ತರಕಾರಿ ಆದರೂ ಸರಿಯೇ, ಅಥವಾ ಕರು ಹಾಕಿದ ಹಸುವಿನ ಮೊದಲ ದಿನದ ಬೆಣ್ಣೆಯಾದರೂ ಸರಿಯೇ–ಜನ ಅದನ್ನು ಹಿರೇಮಠಕ್ಕೆ ಒಪ್ಪಿಸುತ್ತಾರೆ. ಪಟ್ಟದ್ದೇವರಿಗೆ ಮಾತ್ರ ಕಾಲಿಗೆ ಜಂಗು ಕಟ್ಟಿ ಭಿಕ್ಷೆ ಎತ್ತುವ ಹಕ್ಕುಂಟು. (ಪಟ್ಟದ್ದೇವರದು 'ಹೆಣ್ಣು ಜೋಳಿಗೆ'ಯಾದ್ದರಿಂದ ಅವರಿಗೆ ಮಾತ್ರ ಭಿಕ್ಷೆ ಎತ್ತುವ ಹಕ್ಕು ಇದೆ ಆದರೆ ಜಂಗಮರಾಗಿದ್ದರೂ ಗಣಾಚಾರಿ, ಮಠಪತಿಗಳದು 'ಗಂಡು-ಜೋಳಿಗೆ' ಯಾದ್ದರಿಂದ ಅವರಿಗೆ ಜಂಗು ಕಟ್ಟುವ ಮತ್ತು ಭಿಕ್ಷೆ ಎತ್ತುವ ಹಕ್ಕು ಇಲ್ಲ). ಹಕ್ಕು ಇದ್ದರೂ ಯಾವ ಪಟ್ಟದ್ದೇವರೂ ಜಂಗುಕಟ್ಟಿಕೊಂಡು ಭಿಕ್ಷೆ ಎತ್ತುವುದಿಲ್ಲ. ಅದನ್ನು ಸಂಸಾರಿಕರಾದ ಹಿರೇಮಠರು ಮಾಡುತ್ತಾರೆ. ಒಂದೊಂದು ಪಟ್ಟದ ಮಠಕ್ಕೂ ಇಷ್ಟು ಹಳ್ಳಿಗಳೆಂದು ಸ್ಥೂಲವಾಗಿ ನಿಗದಿಯಾಗಿರುತ್ತದೆ; ಅಷ್ಟು ಹಳ್ಳಿಗಳ ಧಾರ್ಮಿಕ ಕಾರ್ಯಗಳಿಗೆ ಅವರು ಬಾಧ್ಯರು. ಅಮಾವಾಸ್ಯೆ ಹಬ್ಬಗಳಂದು ಪಟ್ಟದ್ದೇವರು ಭಕ್ತರ ಮನೆಗಳಿಗೆ ಹೋಗಿ ಪಾದತೀರ್ಥ ಅನುಗ್ರಹಿಸಿ ಬರುತ್ತಾರೆ. ಭಕ್ತರ ವಿವಾಹದ ಮಾತುಕತೆಗಳು, ಲಗ್ನ ಪತ್ರ ಬರೆಯುವುದು, 'ಲಗ್ನ ಕಟ್ಟುವುದು' ಅವರ ಸನ್ನಿಧಿಯಲ್ಲಿ ನಡೆಯುತ್ತವೆ. ವಿವಾಹವನ್ನು ಮಾಡಿಸುವವರೂ ಅವರೇ. ಶವದ ಮೇಲೆ ಪಾದ ಇಟ್ಟು ಅದನ್ನು ಪವಿತ್ರಗೊಳಿಸಿದ ಮೇಲೆ ಶವಕ್ಕೆ

ವುಣ್ಣು ಕೊಡುತ್ತಾರೆ. ಗೃಹಪ್ರವೇಶದಲ್ಲಿ ರುದ್ರಾಭಿಷೇಕ, ನವಗ್ರಹ ಶಾಂತಿ ಇತ್ಯಾದಿಗಳು ಅವರಿಂದ ನೆರವೇರುತ್ತವೆ. ಭಕ್ತರು ಹೊಡೆದಾಡಿದರೆ, ಅವರಲ್ಲಿ ವ್ಯಭಿಚಾರದ ಆರೋಪಗಳು ಬಂದರೆ ವಿಚಾರಣೆ ನಡೆಯಿಸಿ ದಂಡ ತೆಗೆದುಕೊಳ್ಳುವ ಹಕ್ಕು ಪಟ್ಟದ್ದೇವರಿಗೆ ಉಂಟು. ಮೂರ್ತಿ ಪ್ರತಿಷ್ಠಾಪನೆಯಲ್ಲಿ ಹಿರೇಮಠರು ಪೂರ್ವಭಾವಿ 'ವೈದಿಕ ಕಾರ್ಯ'ವನ್ನು ಮಾಡಿದರೆ ಅಂತಿಮ "ಪ್ರಾಣಪ್ರತಿಷ್ಠಾಪನೆ" ಪಟ್ಟದ್ದೇವರಿಂದಲೇ ಆಗಬೇಕು. ಎಲ್ಲ ಜಂಗಮರಿಗೂ ಜಂಗಮದೀಕ್ಷೆ ಕೊಡುವವರು ಪಟ್ಟದ್ದೇವರೆ. (ಪಟ್ಟದ್ದೇವರಿಗೆ ದೀಕ್ಷೆ ಕೊಡುವವರು ಪಂಚಪೀಠಾಧ್ಯಕ್ಷರಾದರೂ, ಅವರು ದೊರಕದಿದ್ದಾಗ ಇನ್ನೊಬ್ಬ ಪಟ್ಟದ್ದೇವರಿಂದ ದೀಕ್ಷೆ ಆಗಬಹುದು).

ಪಟ್ಟದ್ದೇವರು ಕಾವಿ ಧರಿಸುತ್ತಾರೆ. ಮೂವತ್ತು ನಲವತ್ತು ಹಳ್ಳಿಗಳಿಗೆ ಒಂದೊಂದರಂತೆ ಪಟ್ಟದ್ದೇವರ ಮಠವಿದ್ದರೆ ಬಹುತೇಕ ಲಿಂಗಾಯತರಿರುವ ಎಲ್ಲ ಊರುಗಳಲ್ಲಿ ಹಿರೇಮಠರು ಇರುತ್ತಾರೆ. ಪಟ್ಟದ್ದೇವರ ಮಠದಲ್ಲಿ ಎರಡು ಬಗೆ: ಪುತ್ರವರ್ಗದ ಮಠ, ಶಿಷ್ಯವರ್ಗದ ಮಠ. ಪುತ್ರವರ್ಗದ ಮಠದಲ್ಲಿ ಬ್ರಹ್ಮಚಾರಿಯಾದ ಪಟ್ಟದ್ದೇವರು ತಮ್ಮ ಅಣ್ಣ ತಮ್ಮಂದಿರ ಮಕ್ಕಳಲ್ಲಿ ಯಾರನ್ನಾದರೂ ಆರಿಸಿಕೊಂಡು ತಮ್ಮ ಉತ್ತರಾಧಿಕಾರಿಯಾಗಿ ಮಾಡಿಕೊಳ್ಳುತ್ತಾರೆ. ಅಣ್ಣ ತಮ್ಮಂದಿರಿಗೆ ಮಕ್ಕಳಿಲ್ಲದಿದ್ದರೆ ಬೇರೆ ಸಮೀಪ ಬಂಧುಗಳಲ್ಲಿ ಒಬ್ಬನನ್ನು ಆರಿಸಿಕೊಳ್ಳುತ್ತಾರೆ. ಶಿಷ್ಯವರ್ಗದ ಮಠದಲ್ಲಿ ಪಟ್ಟದ್ದೇವರು ತಮ್ಮ ಶಿಷ್ಯರಲ್ಲಿ ಒಬ್ಬ ಜಂಗಮ ಹುಡುಗನನ್ನು-ಅವನು ಅವರಿಗೆ ಬಂಧುವಾಗಿರಬೇಕಾಗಿಲ್ಲ–ಆರಿಸಿಕೊಂಡು ಉತ್ತರಾಧಿಕಾರಿಯಾಗಿ ನೇಮಿಸುತ್ತಾರೆ.

ಪುತ್ರವರ್ಗದ ಮಠವಾದರೆ ಆ ಮಠದಲ್ಲಿ ಪಟ್ಟದ್ದೇವರಲ್ಲದೆ ಅವರ ತಂದೆ ತಾಯಿ ಅಣ್ಣ ತಮ್ಮಂದಿರು ಅವರ ಹೆಂಡಿರು ಮಕ್ಕಳೊಂದಿಗೆ ಇರುತ್ತಾರೆ. ಆ ಮಠ ಒಂದು ದೊಡ್ಡ ಸಂಸಾರದಂತಿರುತ್ತದೆ. ಶಿಷ್ಯವರ್ಗದ ಮಠವಾದರೆ ಅಲ್ಲಿ ಪಟ್ಟದ್ದೇವರು ಅವರ ಶಿಷ್ಯ ಪರಿವಾರ ಮಾತ್ರವಿರುತ್ತದೆ.

ಪಟ್ಟದ ಮಠದ ಪ್ರಾದೇಶಿಕ ವ್ಯಾಪ್ತಿ ದೊಡ್ಡದಾಗಿದ್ದರೆ, ಅಲ್ಲಿ "ಪಟ್ಟ" ಮತ್ತು "ಚರ" ಎಂಬ ಇಬ್ಬರು ಸ್ವಾಮಿಗಳ ವ್ಯವಸ್ಥೆ ಕೆಲವೆಡೆ ಇದೆ. ಇಬ್ಬರೂ ಬ್ರಹ್ಮಚಾರಿಗಳಾದರೂ, "ಪಟ್ಟ"ದ ಸ್ವಾಮಿಗಳು ಮಠದಲ್ಲೇ ಇದ್ದುಕೊಂಡು ಎಲ್ಲ ಆಗುಹೋಗುಗಳನ್ನು ನೋಡಿಕೊಂಡರೆ "ಚರ"ದ ಸ್ವಾಮಿಗಳು ಹಳ್ಳಿಗಳಲ್ಲಿ ಸಂಚರಿಸಿ, ಉಪದೇಶ ಕಾಣಿಕೆ ಸಂಗ್ರಹಗಳನ್ನು ಮಾಡುತ್ತಾರೆ. "ಪಟ್ಟ"ದವರು ತೀರಿದರೆ "ಚರ"ದವರು ಆ ಜಾಗಕ್ಕೆ ಬಂದಿರುವ ಉದಾಹರಣೆ ಇದೆ. "ಚರ" ಗುರುಗಳು ಮಠಕ್ಕೆ ಓಡಾಡಿ ಹಣ ಸಂಪಾದಿಸುವವರಾದ್ದರಿಂದ ಅವರಿಗೂ "ಪಟ್ಟ" ಗುರುಗಳಿಗೂ ತಿಕ್ಕಾಟ ಉದ್ಭವಿಸಿರುವ ಉದಾಹರಣೆ ಇದೆ. "ಚರ"ದ ಸ್ಥಾನಕ್ಕೆ ಮಾತ್ರ ಸಂಸಾ

ರಸ್ಥನನ್ನು ನೇಮಿಸಲು ಅವಕಾಶವಿದೆ. ಚರಜಂಗಮರು ಗಂಟೆಕಾಯಕ, ಗದ್ದುಗೆ ಕಾಯಕ, ಮುಳ್ಳಾವಿಗೆ ಕಾಯಕವೇ ಮೊದಲಾದ ಕಾಯಕಗಳ ಮೂಲಕ ಹಳ್ಳಿಹಳ್ಳಿಗಳಲ್ಲಿ ಧರ್ಮಜಾಗೃತಿ ಮಾಡುತ್ತಾರೆ.*

ಪಂಚ ಪೀಠಗಳಿಗೆ ಪಟ್ಟದ್ದೇವರ ಮಠಗಳ ಮೇಲೆ ನೈತಿಕ ಅಧಿಕಾರವನ್ನು ಬಿಟ್ಟರೆ ಇನ್ನಾವುದೇ ಕಾನೂನು ಹತೋಟಿಯೂ ಇರುವಂತಿಲ್ಲ. ಅವ್ಯವಹಾರದ ಗುರುಗಳನ್ನು ತೆಗೆದು ಹಾಕುವ ಅಧಿಕಾರವು ಪಂಚಪೀಠಗಳಿಗೆ ಉಂಟು. ಪಟ್ಟದ ಮಠದ ಆಸ್ತಿಯ ಮೇಲೆ ಯಾವುದೇ ಹಕ್ಕು ಪಂಚಪೀಠಗಳಿಗೆ ಇಲ್ಲವಾದರೂ ಪಂಚ ಪೀಠಗಳ ಯಾಜಮಾನ್ಯವನ್ನು ಒಪ್ಪಿ ಎಲ್ಲ ಪಟ್ಟಮಠಗಳೂ ನಡೆದುಕೊಂಡು ಹೋಗುತ್ತಿವೆ. (ಅವ್ಯವಹಾರದ ಗುರುಗಳನ್ನು ಸಮಾಜವೇ ತಿರಸ್ಕರಿಸಲು ಅವಕಾಶವಿದೆ)

ಹಿರೇಮಠರು

ಪಟ್ಟದ್ದೇವರು ಮತ್ತು ಹಿರೇಮಠರು ಒಂದೇ ಜಾತಿಯವರು. ತಮ್ಮ ವಂಶದ ಅಥವಾ ಜಾತಿಯ ಜಂಗಮನು ಪಟ್ಟದ್ದೇವರಾದ ಮೇಲೆ ಪಟ್ಟದ್ದೇವರ ತಂದೆ ತಾಯಿ ಅಣ್ಣ ಇತ್ಯಾದಿ ಹಿರಿಯರೂ ಪಟ್ಟದ್ದೇವರಿಗೆ ನಮಸ್ಕರಿಸಿ ಆಶೀರ್ವಾದವನ್ನು ಪಡೆಯುತ್ತಾರೆ. ಪಟ್ಟದ್ದೇವರ ವ್ಯಾಪ್ತಿಯಲ್ಲಿ ಬರುವ ಊರುಗಳ ಹಿರೇಮಠರ ಮೇಲೆ ಪಟ್ಟದ್ದೇವರಿಗೆ ನೈತಿಕ ಅಧಿಕಾರವನ್ನು ಬಿಟ್ಟರೆ ಇನ್ನಾವುದೇ ಹತೋಟಿಯೂ ಇಲ್ಲ. ಪಟ್ಟದ್ದೇವರ ಮೇಲ್ಮೆಯನ್ನು ಒಪ್ಪಿಕೊಂಡ ಹಿರೇಮಠರು (ಗೃಹಸ್ಥ ಜಂಗಮರು) ಬಹುತೇಕ ಎಲ್ಲ ಊರುಗಳಲ್ಲಿ ಸಿಗುತ್ತಾರೆ. ಅವರು ಭಕ್ತರ ವಿವಾಹ, ನಾಮಕರಣ, ಗೃಹಪ್ರವೇಶ, ಹಬ್ಬ, ಮರಣ ಸಂದರ್ಭಗಳಲ್ಲಿ ಪೌರೋಹಿತ್ಯ ನಡೆಸುತ್ತಾರೆ. ಪಂಚಪೀಠಗುರುಗಳಾಗಲಿ ಪಟ್ಟಮಠದ ಗುರುಗಳಾಗಲಿ ಮೂಲತಃ ಹಿರೇಮಠರೇ. ನೇರವಾಗಿ ಒಬ್ಬ ಹಿರೇಮಠದ ಜಂಗಮ ಬಾಲಕನಿಗೆ ವಿದ್ಯೆ ಕಲಿಸಿ ಪಂಚಪೀಠಗಳಿಗೆ ಉತ್ತರಾಧಿಕಾರಿಯಾಗಿ ಅವನನ್ನು ಮಾಡಬಹುದು ; ಅಥವಾ ಪಟ್ಟದ್ದೇವರಲ್ಲಿ ಯೋಗ್ಯರನ್ನು ಆಯ್ಕೆಮಾಡಿ ಪಂಚಪೀಠಾಧಿಕಾರಿಯಾಗಿ ಮಾಡಬಹುದು. (ವಿರಕ್ತರೂ ಈಗಿರುವಂತೆ ಬಹುಪಾಲು ಮೂಲತಃ ಹಿರೇಮಠರೇ.)

ಆಯಾ ಊರಿನ ಪೌರೋಹಿತ್ಯಕಾರ್ಯ ಹಿರೇಮಠನ ಹಕ್ಕು. ಪಟ್ಟದ್ದೇವರು ಒಂದು ನಿರ್ದಿಷ್ಟ ಸಂಖ್ಯೆಯ ಊರುಗಳ ಸಮೂಹಕ್ಕೆ ಧಾರ್ಮಿಕ ಪ್ರಭುವಾದರೆ ಹಿರೇಮಠ ಆಯಾ ಊರಿನ ಧಾರ್ಮಿಕ ನಾಯಕ. ಹಿರೇಮಠರಿಗೆ ಆಶೀರ್ವಾದದ

---

* ಹಿರೇಮಲ್ಲೂರ ಈಶ್ವರನ್ : ಲಿಂಗಾಯತ ಧರ್ಮ, ಸಮಾಜ, ಸಂಸ್ಕೃತಿ, ಮೈಸೂರು. 1982. ಪು. 169–170.

ಹಕ್ಕು ಇದೆ. ಅವರು ಮದುವೆ, ಮರಣ ಕಾರ್ಯಗಳಲ್ಲಿ ಗದ್ದುಗೆಯ ಮೇಲೆ ಕುಳಿತಿದ್ದರೆ ಅವರ ಅನುಚರರಾಗಿ ಅಥವಾ ಸೇವಕರಾಗಿ ಗಣಾಚಾರಿ (ಅಥವಾ ಗಣಮುಖಿ) ಮತ್ತು ಮಠಪತ್ತಿಗಳು ಕೆಲಸಮಾಡಬೇಕು. ಕೂಸಿನ ಲಿಂಗಧಾರಣದ ಸಮಯ ದಲ್ಲಿ ಮಾತ್ರ ಮಠಪತ್ತಿ ಬರುವುದಿಲ್ಲ (ಅವನ ಮುಖ್ಯ ಕಾರ್ಯ ಶವಸಂಸ್ಕಾರ ಸಂದರ್ಭ ದಲ್ಲಿ ಹಿರೇಮಠನಿಗೆ ಸಹಾಯಮಾಡುವುದಾದ್ದರಿಂದ ಕೂಸಿನ ನಾಮಕರಣಕ್ಕೆ ಅವನು ನಿಷಿದ್ಧನಾಗುತ್ತಾನೆ). ಹಿರೇಮಠರ ಹೆಂಗಸರಿಗೆ ಯಾವುದೇ ಪೌರೋಹಿತ್ಯದ ಹಕ್ಕೂ ಇಲ್ಲ. ಹಿರೇಮಠನಿಗೆ ಹಳ್ಳಿಯಲ್ಲಿ ಆಯ ಉಂಟು.

ಗಣಾಚಾರಿ

ಹಿರೇಮಠರ ಬಳಿಕ ಗಣಾಚಾರಿ ಪ್ರಾಮುಖ್ಯವನ್ನು ಪಡೆಯುತ್ತಾನೆ. ಇವನೂ ಜಂಗಮನೇ ಆದರೂ ಹಿರೇಮಠನಿಗಿಂತ ಕೆಳಗಿನವನಾದ್ದರಿಂದ ಗಣಾಚಾರಿಗಳಿಗೂ ಹಿರೇಮಠರಿಗೂ ರಕ್ತಸಂಬಂಧ ಸಾಧ್ಯವೇ ಇಲ್ಲ. ಪಟ್ಟದ್ದೇವರು ಇಲ್ಲದ ಕಡೆ ಹಿರೇಮಠನ ಆಜ್ಞೆಯಂತೆ ಊರಿನ ಎಲ್ಲ ಜಂಗಮರಿಗೆ ಊರಿನ ಭಕ್ತರ ಮನೆಗಳಲ್ಲಿ ನಡೆಯುವ ಶುಭಕಾರ್ಯಗಳಿಗೆ "ಬಿನ್ನ" ಹೇಳುವುದು ಅವನ ಮುಖ್ಯ ಕೆಲಸ. ಊರಲ್ಲಿ ನಡೆಯುವ ಮದುವೆ ವಿಷಯವನ್ನು ಹಿರೇಮಠರಿಗೂ ಮಠ ಪತ್ತಿಗಳಿಗೂ ಇತರ ಭಕ್ತರಿಗೂ ಇವನೇ ತಿಳಿಸಬೇಕು. ಇವನು ಹಿರೇಮಠನ ವಾರ್ತಾ ವಾಹಕ ಮಾತ್ರವೇ ಅಲ್ಲ, ಹಿರೇಮಠನಿಗೂ ಊರಿನ ಜನಕ್ಕೂ ಪರಸ್ಪರ ಸಂಪರ್ಕ ಕಲ್ಪಿಸುವಾತ. ಭಕ್ತರ ಮದುವೆಗಳಲ್ಲಿ ಇವನು ಪುರೋಹಿತನಾಗುವ, ಕಾಲಿಗೆ ಜಂಗು ಕಟ್ಟಿ ಭಿಕ್ಷೆಯೆತ್ತುವ, ಆಶೀರ್ವದಿಸುವ ಹಕ್ಕುಗಳು ಇವನಿಗಿಲ್ಲ. ಊರಲ್ಲಿ ಆಗುವ ಹುಟ್ಟು ಸಾವುಗಳನ್ನು ಇವನೇ ಹಿರೇಮಠನಿಗೆ ತಿಳಿಸಬೇಕು. ಉತ್ಸವಗಳಲ್ಲಿ ಗುಗ್ಗುಳ ವನ್ನು ಸಿದ್ಧಪಡಿಸಿ ಪುರವಂತರ ಕೈಲಿ ಕೊಡುವುದು ಇವನ ಕರ್ತವ್ಯ. ಲಿಂಗಾಯ ತೇತರ ಜನಗಳ ಮದುವೆ ಮಾಡಿಸಿ ಅವರ ಮನೆಗಳಿಂದ ಅಕ್ಕಿ ಬೇಳೆ ಬೆಲ್ಲ ಸೌದೆ ಇತ್ಯಾದಿ ವಸ್ತುಗಳನ್ನು ("ಉಲುಪಿ") ತರುತ್ತಾನೆ.

ದಕ್ಷಿಣ ಕರ್ನಾಟಕದ ಹತ್ತಾರು ಶಾಸನಗಳಲ್ಲಿ "ಗಣಾಚಾರಿ", "ಗಣಾಚಾರಿ ತೆರಿಗೆ" ಎನ್ನುವ ಮಾತುಗಳು ಬರುತ್ತವೆ. ಉದಾ "ಹೊಂನಪ ಗಣಾಚಾರಿ" (ಎಪಿಗ್ರಾಫಿಯ ಕರ್ನಾಟಿಕ, III, ಮೈಸೂರು ಆವೃತ್ತಿ, ಗುಂಡ್ಲುಪೇಟೆ 216); "ಗಣಾಚಾರಿ ಹರಿಯಂಣ" (ಅದೇ, ನಂಜನಗೂಡು, 91); "ಗಣಾಚಾರದೆರೆ" (ಅದೇ, ಗುಂಡ್ಲುಪೇಟೆ, 26); "ಗಣಾಚಾರ ತೆರಿಗೆ" (ಅದೇ, ಗುಂಡ್ಲುಪೇಟೆ, 134; 136; 156; 176). ಗಣಾಚಾರಿ ಜಂಗಮರ ಮೇಲೆ ಹಾಕಿದ ತೆರಿಗೆ ಗಳನ್ನು ಇವು ಹೇಳುವಂತೆ ತೋರಿದರೂ, ದಕ್ಷಿಣ ಕರ್ನಾಟಕದ ಲಿಂಗಾಯತರಲ್ಲಿ "ಗಣಾಚಾರಿ" ಎಂಬ ಜಾತಿ ಇಲ್ಲ ಮತ್ತು ಅವರ ಮೇಲೆ ತೆರಿಗೆ ಹಾಕಬೇಕಾದ

ಪ್ರಮೇಯವೇನಿತ್ತು, ಅವರ ಆದಾಯದ ಮೂಲ ಸ್ವರೂಪಗಳೇನು ತಿಳಿಯವು. ಮೇಲಿನ ಶಾಸನಗಳಲ್ಲಿ ಬರುವ "ಗಣಾಚಾರಿ" ಪದಕ್ಕೆ ದೇವಾಲಯದ ಮೇಲ್ವಿಚಾರಕ ಅಥವಾ ಅರ್ಚಕ ಎಂಬುದೇ ಅರ್ಥ; ಏಕೆಂದರೆ ಈಗಲೂ ದಕ್ಷಿಣ ಕರ್ನಾಟಕದಲ್ಲಿ ಆ ಅರ್ಥ ಪ್ರಚಲಿತವಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ (II, ಪು. 2404) ಶಾಸನಗಳಲ್ಲಿ ಬರುವ ಗಣಾಚಾರಿ ಪದಕ್ಕೆ ಜಂಗಮರಲ್ಲಿ ಒಂದು ಜಾತಿ ಎಂದು ಕೊಟ್ಟಿರುವುದು ಸರಿಯಾಗಿಲ್ಲ.

ಗಣಾಚಾರಿಗಳಲ್ಲದೆ ಉತ್ತರ ಕರ್ನಾಟಕದಲ್ಲಿ "ಗಣಮುಖಿ" ಎಂಬ ಜಂಗಮರಿರುವರೆಂದೂ ಇವನು ಜನರನ್ನು ಕರೆದು ಸಭೆ ಸೇರಿಸುವ ಕೆಲಸದವನೆಂದೂ, "ಗಣಾಚಾರಿ"ಯು ಹೆಣ ಹೂಳುವ ಮುನ್ನ ಹೆಣದ ಮುಖಕ್ಕೆ ಕಟ್ಟಿದ ಬಟ್ಟೆ ಹರಿದು ಹಾಕುವವನೆಂದೂ ಹೇಳುವವರಿದ್ದಾರೆ. "ಸರಗಣಾಚಾರಿ" ಎಂಬ ಇನ್ನೊಂದು ಗುಂಪು ಇದೆಯೆಂದೂ, ಅವರ ಜೊತೆ ಹಿರೇಮಠದವರು ಸಂಬಂಧ ಬೆಳೆಸಬಹುದೆಂದೂ ಹೇಳುವವರಿದ್ದಾರೆ (ಅವರು ಹೆಣ್ಣು ತರಬಹುದೇ ಹೊರತು ಕೊಡುವುದಿಲ್ಲ). ಆದರೆ, "ಸರಗಣಾಚಾರಿ"ಗಳು ಗಣಾಚಾರಿಗಳಿಗಿಂತ ಮೇಲಿನವರೆಂದೂ ಪೂಜಾ ಕ್ರಿಯಾವಿಧಿ ನಡೆಯುವ ಜಾಗದಲ್ಲಿ ವಸ್ತುಗಳನ್ನು ಜೋಡಿಸುವ ಕಾರ್ಯ ಇವರದೆಂದೂ, ವೀರಶೈವರ ನೀತಿ ಅನೀತಿ, ಕಲಹಗಳನ್ನು ಹಿರೇಮಠದವರ ಗಮನಕ್ಕೆ ತರುವ ಕಾರ್ಯವೂ ಇವರದೆಂದೇ ಹುನಗುಂದದ ಶ್ರೀ ಮಹೇಶ ತಿಪ್ಪಶೆಟ್ಟಿ ತಿಳಿಸುತ್ತಾರೆ.

ಮಠಪತ್ತಿ

ಈತನನ್ನು ಈಗ ಎಲ್ಲ ಕಡೆ "ಮಠಪತಿ" ಎಂದು ತಪ್ಪಾಗಿ ಕರೆದರೂ ಅವನ ನಿಜವಾದ ಹೆಸರು "ಮಠಪತ್ತಿ". ಪತ್ತಿ ಎಂದರೆ ಕಾಲಾಳು, ಸೇವಕ ಎಂದರ್ಥ. ಮಠಪತ್ತಿಗಳು (ಹಿರೇ) ಮಠದವರ ಸೇವಕರು, ಹಿರೇಮಠರು ಹೇಳಿದ ಕೆಲಸಗಳನ್ನು ಮಾಡುವವರು. ಇವರದು ಸಾಮಾಜಿಕವಾಗಿ ಗಣಾಚಾರಿಗಿಂತ ಕೆಳಗಿನ ಸ್ಥಾನ, ಮತ್ತು ಜಂಗಮರಾಗಿದ್ದರೂ ಇವರ ಜೊತೆ ಹಿರೇಮಠರಾಗಲಿ ಗಣಾಚಾರಿಗಳಾಗಲಿ ಲಗ್ನ ಸಂಬಂಧಗಳನ್ನು ಮಾಡುವುದಿಲ್ಲ. ಮಠಪತ್ತಿಯ ಮುಖ್ಯವಾದ ಕೆಲಸ ವಿವಾಹ ಮತ್ತು ಶವಸಂಸ್ಕಾರ ವಿಧಿಗಳಲ್ಲಿ ಹಿರೇಮಠನಿಗೆ ಸಹಾಯ ಮಾಡುವುದು. ವಿವಾಹದಲ್ಲಿ ಹಿರೇಮಠನು ಗದ್ದುಗೆ ಮೇಲೆ ಇಡೀ ಕ್ರಿಯೆಗೆ ಮುಖ್ಯಸ್ಥನಾಗಿ ಕುಳಿತು ಕೊಂಡರೆ, ಹೂವು ಪತ್ರೆ ತರುವುದು (ಕೆಲವೆಡೆ ಹೂಪತ್ರೆ ತರಲು 'ಹೂಗಾರ' ಎಂಬ ಜಂಗಮರಿರುತ್ತಾರೆ), ರಂಗೋಲೆ ಹಾಕುವುದು, ಪಂಚ ಕಳಶ ಹೂಡುವುದು, ಮಂತ್ರ ಹೇಳುವುದೇ ಮೊದಲಾದ ಆಚರಣೆಗಳನ್ನೆಲ್ಲ ನೆರವೇರಿಸುವವನು ಮಠಪತ್ತಿ. ಎಂದರೆ, ಹಿರೇಮಠನು ಒಂದೆಡೆ ಕುಳಿತು ಇಡೀ ಕ್ರಿಯೆಯ ಅಧ್ಯಕ್ಷತೆ ವಹಿಸಿದರೆ ಮಠಪತ್ತಿಯು ಅವನ ನಿರ್ದೇಶನದಂತೆ ಎಲ್ಲ ದೈಹಿಕ ಶ್ರಮದ ಕೆಲಸಗಳನ್ನು ಮಾಡು

ತ್ತಾನೆ. ಶವಸಂಸ್ಕಾರದಲ್ಲಿ ಹೆಣದ ತಲೆಯ ಮೇಲೆ ಹಿರೇಮಠನು ತನ್ನ ಪಾದವನ್ನು ಇಟ್ಟು ಹರಸುವ ಕಾರ್ಯವನ್ನು ಮಾಡಿದರೆ, ಉಳಿದಂತೆ ಸಮಾಧಿ ಪೂಜೆ, ಶವಕ್ಕೆ ಸಂಸ್ಕಾರ, ಮಂತ್ರ ಪಠನ,[3] ಶವದ ಕೈಲಿ ಲಿಂಗ ಕೊಟ್ಟು ಸಮಾಧಿಯಲ್ಲಿ ಕೂರಿಸಿ ಪೂಜೆ ಮಾಡುವುದು ಇವೇ ಮೊದಲಾದ ಕಾರ್ಯಗಳೆಲ್ಲವನ್ನೂ ಮಠಪತ್ತಿ ಮಾಡ ಬೇಕು. ಸತ್ತ ವ್ಯಕ್ತಿಗಳ ಬಟ್ಟೆ ಜಮಖಾನಗಳು ಮಠಪತ್ತಿಗೂ ಕೊರಳ ಬೆಳ್ಳಿಯ ಕರಡಿಗೆ ಹಿರೇಮಠನಿಗೂ ಸಲ್ಲುತ್ತವೆ. (ಸತ್ತ ವ್ಯಕ್ತಿಯ ಕರಡಿಗೆಯನ್ನು ಅವನ ಬಂಧುಗಳೇ ತೆಗೆದಿರಿಸಿಕೊಳ್ಳುವುದೂ ಉಂಟು). ಮದುವೆಯಲ್ಲಿ ಪಂಚಕಳಶದ ಮೇಲಿನ ತೆಂಗಿನಕಾಯಿ, ಕುಬಸ, ಮತ್ತು ಇಟ್ಟ ಅಕ್ಕಿ ಹಿರೇಮಠನಿಗೂ, ಕೆಳಗೆ ಹರಡಿರುವ ಜೋಳ ಮಠಪತ್ತಿಗೂ ಸಲ್ಲುತ್ತವೆ. ಗಣಾಚಾರಿಗಾಗಲಿ ಮಠಪತ್ತಿ ಗಾಗಲಿ ಗದ್ದುಗೆ ಮೇಲೆ ಕೂರುವ, ಆಶೀರ್ವಾದ ಮಾಡುವ ಹಕ್ಕುಗಳಿಲ್ಲ. ಕೆಲವೆಡೆ ಮಠಪತ್ತಿಗಳನ್ನು "ಉಡುಕೀ ಲಗ್ನ"ಕ್ಕೆ ("ಸೀರುಡಿಕೆ ಲಗ್ನ", ವಿಧವೆಯ ವಿವಾಹ) ಬರಮಾಡಿಕೊಂಡು ತಾಳಿ ಕಟ್ಟಿಸುತ್ತಾರೆ. ಅಲ್ಲಿ ಪಂಚ ಕಲಶಗಳನ್ನು ಹೂಡದೆ, ಕೇವಲ ಶಿವನ ಮೂರ್ತಿಯನ್ನಿಟ್ಟು ಅದರ ಪೂಜೆ ಮಾಡಿ ತಾಳಿ ಕಟ್ಟಿಸುತ್ತಾರೆ. ಕೆಲವು ಮಠಪತ್ತಿಗಳು ಊರಿನ ಎಲ್ಲ ಲಿಂಗಾಯತ ಮನೆಗಳಿಗೆ ಪತ್ರಿ ಹಂಚುವ ಕಾಯಕವನ್ನೂ ಇಟ್ಟುಕೊಂಡಿರುತ್ತಾರೆ. ('ಪತ್ರಿಯವರು' ಎನ್ನುವ ಜಂಗಮರು ಕೆಲ ವೆಡೆ ಈ ಕೆಲಸಮಾಡುತ್ತಾರೆ.) ಹಿರೇಮಠರಂತೆ ಗಣಾಚಾರಿ, ಮಠಪತ್ತಿಗಳಿಗೂಸುಗ್ಗಿ ಯಲ್ಲಿ ರೈತರಿಂದ 'ಆಯ' ಉಂಟು;ಆಯ ಕೊಡಿಸುವವರು ಮಾತ್ರ ಹಿರೇಮಠರೇ.

ಗಣಾಚಾರಿ, ಮಠಪತ್ತಿಗಳಿಗೆ ಜಂಗಮ ದೀಕ್ಷೆಯನ್ನು ಪಟ್ಟದ್ದೇವರು ಅಥವಾ ಹಿರೇಮಠರೇ ಮಾಡುವುದಲ್ಲದೆ, ವಿವಾಹಗಳನ್ನು ಅವರೇ ಪುರೋಹಿತರಾಗಿ ನಡಸಿ ಕೊಡಬೇಕು.

ಬಹುಶಃ ಹಿರೇಮಠ, ಗಣಾಚಾರಿಗಳಿಗಿಂತ ಹೆಚ್ಚಿನ ದೈಹಿಕ ಶ್ರಮದ ಕಾರ್ಯ ಮಠಪತ್ತಿಯದಾದ್ದರಿಂದ ಮತ್ತು ಆ ಕಾರಣದಿಂದ ಉಳಿದ ಉದ್ಯೋಗವನ್ನು ಹೆಚ್ಚು ಶ್ರದ್ಧೆಯಿಂದ ಕಷ್ಟಪಟ್ಟು ಮಾಡುವವರಾದ್ದರಿಂದಲೋ ಏನೋ, ಮಠ ಪತ್ತಿಗಳು ಅವರಿಬ್ಬರಿಗಿಂತ ಆರ್ಥಿಕವಾಗಿ ಹೆಚ್ಚು ಅನುಕೂಲಸ್ಥರು. ಈ ದಿನ ಗಳಲ್ಲಿ ಗಣಾಚಾರಿ, ಮಠಪತ್ತಿಗಳ ಕರ್ತವ್ಯಗಳು ಶುದ್ಧರೂಪದಲ್ಲಿ ಉಳಿದು ಬಂದಿಲ್ಲ. ಅವೆರಡೂ ಮಿಶ್ರವಾಗಿರುವುದು ಮಾತ್ರವಲ್ಲದೆ ಅವರಿಬ್ಬರೂ ಇಲ್ಲದಾಗ ಅವರ ಕೆಲಸಗಳನ್ನು ಹಿರೇಮಠನೇ ಮಾಡುವುದರಿಂದಲೂ, ಗಣಾಚಾರಿ ಮಠಪತ್ತಿಗಳು ಸಾಮಾಜಿಕವಾಗಿ ಹಿರೇಮಠನ ಸ್ಥಾನವನ್ನು ಪಡೆಯಲಿಕ್ಕಾಗಿ ತಮ್ಮನ್ನೂ ಮಠದ ವರೆಂದೇ ಕರೆದುಕೊಳ್ಳಲಾರಂಭಿಸಿರುವುದರಿಂದಲೂ, ಗಣಾಚಾರಿ ಮಠಪತ್ತಿ ಉಪ

3 ಅನುಬಂಧ 5 ನೋಡಿ.

4. ಹಾಗೆ ಕರೆದುಕೊಂಡು ಹಿರೇಮಠರ ಜೊತೆ ಸಂಬಂಧ ಬೆಳಸಿದ ಕೆಲವು ಲಿಂಗಾಯತ ವಿದ್ವಾಂಸರ ಹೆಸರುಗಳನ್ನು ಉತ್ತರ ಕರ್ನಾಟಕದಲ್ಲಿ ಹೇಳುತ್ತಾರೆ.

ಜಾತಿಗಳು ಈಗ ನಾಶಸ್ಥಿತಿಯಲ್ಲಿವೆ. ಬಹುತೇಕ ಊರುಗಳಲ್ಲಿ ಹಿರೇಮಠ ಇರುತ್ತಾನೆ; ಗಣಾಚಾರಿ ಮಠಪತ್ತಿಗಳಿರುವುದಿಲ್ಲ; ಇದ್ದರೂ ಆಧುನಿಕ ಕಾಲದಲ್ಲಿ ತಾವು ಹಾಗೆಂದು ಗುರುತಿಸಿಕೊಳ್ಳಲು ಸಿದ್ಧರಿರುವುದಿಲ್ಲ.

ಇತರ ಉಪಜಾತಿಗಳು

ಮಠಪತಿಗಳಿಗಿಂತ ಇನ್ನೂ ಕೆಳಗಿನ ಜಂಗಮ ಉಪಜಾತಿಗಳಿವೆ. ಅವರೆಲ್ಲ ಶ್ರಮದ, ಕೈಕೊಳಕಾಗುವ, ಆದರೆ ಮಠಕ್ಕೆ ಅಗತ್ಯವಾದ ಉದ್ಯೋಗಗಳನ್ನು ಕೈಗೊಂಡವರು. ವಿಭೂತಿ ತಯಾರಿಸುವ ಭಸ್ಮದಯ್ಯ (ಇವರನ್ನು 'ಬೂದಿ ಐಗಳು' ಎಂದು ಮಠಸ್ಥರು ಕೀಳಾಗಿ ನೋಡುತ್ತಾರೆ); ಪುಟ್ಟ ಶಿವಲಿಂಗ ತಯಾರಿಸುವ ಮತ್ತು ಅವಕ್ಕೆ ಕಂತೆ ಬಿಗಿಯುವ ಕಂತೆ ಐಗಳು, ಶಿವದಾರ ಮತ್ತು ಪೂಜಾವಸ್ತ್ರ ತಯಾರಿಸುವ ವಸ್ತ್ರದವರು ಅಥವಾ ವಸ್ತ್ರದೈಗಳು ಇವರೆಲ್ಲ ಒಳ ವಿವಾಹ ವ್ಯವಸ್ಥೆಯ ಚಿಕ್ಕ ಚಿಕ್ಕ ಉಪಜಾತಿಗಳು. ಹಿರೇಮಠರನ್ನು ಬಿಟ್ಟರೆ ಇವರಾರೂ ಮಠಸ್ಥರಲ್ಲ, ಮಠ ಎಂದು ಕೊನೆಯಾಗುವ ವಂಶನಾಮವನ್ನು ಬಳಸಲು ಅರ್ಹರಲ್ಲ. ಮೇಲೆ ತಿಳಿಸಿದಂತೆ ಇವರೂ ಗಣಾಚಾರಿ ಮಠಪತ್ತಿಗಳಂತೆ ಹೆಸರಿನ ಬದಲಾವಣೆ ಮೂಲಕ ಸಮಾಜೋ–ಧಾರ್ಮಿಕವಾಗಿ ಆದಷ್ಟು ಮೇಲೇರುವ ಹವಣಿಕೆಯಲ್ಲಿದ್ದಾರೆ. ಬಹುತೇಕ ಜನ ತಮ್ಮ ಜಾತಿ ನಿರ್ದಿಷ್ಟಗೊಳಿಸಿರುವ ವೃತ್ತಿಗಳನ್ನು ಕೈಬಿಡುತ್ತಿದ್ದಾರೆ. ಇಂದಿನ ತೀವ್ರ ಸಾಮಾಜಿಕ ಬದಲಾವಣೆ ಆ ಉಪಜಾತಿಗಳ ಅನುಶ್ರೇಣಿಯ ನಿರ್ದಿಷ್ಟತೆಯನ್ನು ಕಲಕುತ್ತಿದೆ. ಇಷ್ಟಾದರೂ ಜಂಗಮ ಅನುಶ್ರೇಣಿಯ ಬಗ್ಗೆ ವಿಚಾರಿಸಿದಾಗ, ಹಿರೇಮಠ-ಗಣಾಚಾರಿ–ಮಠಪತ್ತಿಗಳ ಬಗ್ಗೆ ತಕ್ಕಮಟ್ಟಿನ ಮಾಹಿತಿ ದೊರೆಯುತ್ತದೆ. ಅವರು ಮೂವರನ್ನೂ ಒಂದು ಜಾನಪದ ಗೀತೆ ಹೀಗೆ ಹೆಸರಿಸಿದೆ–" ಆಯುಳ್ಳ ಮಟಪತಿ, ಜಾಯುಳ್ಳ ಗಣಾಚಾರಿ, ಮೇಲಾದ ನನ್ನೂರ ಮಟದಯ್ಯ..." (ಬಿ. ಎಸ್. ಗದ್ದಗೀಮಠ : ಲೋಕಗೀತೆಗಳು, 61–18) ಎಲ್ಲರಿಗಿಂತ ಶ್ರೇಷ್ಠ ಮಠದಯ್ಯ (ಪಟ್ಟದೇವರು/ಹಿರೇಮಠ), ಬಳಿಕ ಗಣಾಚಾರಿ, ಬಳಿಕ ಮಠಪತ್ತಿ ಎಂಬ ಅನುಕ್ರಮ ಆ ಗೀತೆಯಲ್ಲಿ ಸ್ಪಷ್ಟವಾಗಿ ಸೂಚಿತವಾಗಿದೆ ("ಜಾಯುಳ್ಳ''ಎಂಬ ಮಾತಿನ ಅರ್ಥ ತಿಳಿಯದು). ಗುಲ್ಬರ್ಗ ಜಿಲ್ಲೆ ಮಳಖೇಡದ ಹದಿನಾರನೇ ಶತಮಾನದ ಶಾಸನವೊಂದರಲ್ಲಿ ರುದ್ರ, ಜಂಗಮ, ಮಠಪತಿ ಎಂಬುವರ ಉಲ್ಲೇಖವಿದೆ–"ರುದ್ರ * ಜಂಗಮ* ಮಠಪತಿ* ದೇವರು ಹಿರ ಮಳಿದವರು ಗಗಬ'' (Karnatak Inscriptions, Vol. V. [illegible] B. R. Gopal. pp. 328-9)

ವಿರಕ್ತರು

ಕೆಲವು ವಿರಕ್ತಮಠಗಳಿಗೂ ಪಂಚಪೀಠ ಅಥವಾ ಪಂಚಾಚಾರ್ಯ ಶಾಖಾಮಠಗಳಾದ ಗುರುಮಠ (ಪಟ್ಟದ್ದೇವರ ಮಠ)ಗಳಿಗೂ ಈರ್ಷ್ಯೆ ಸ್ಪರ್ಧೆ ತಿಕ್ಕಾಟಗಳು

ಲಿಂಗಾಯತ ಸಮಾಜವನ್ನು ಬಹುವಾಗಿ ದುರ್ಬಲಗೊಳಿಸಿವೆ. ಈ ಈರ್ಷ್ಯೆ ಪಕೆ, ಯಾವಾಗ ಆರಂಭವಾಯಿತೆಂಬುದು ತಿಳಿಯದಿದ್ದರೂ ಸು. ಕ್ರಿ. ಶ. 1600ರಲ್ಲಿದ್ದ ವಿರಕ್ತ ತೋಂಟದಾರ್ಯನ ಸಿದ್ಧೇಶ್ವರ ಪುರಾಣದಿಂದ (11.42) ಈ ತಿಕ್ಕಾಟ ಕೊನೆಯಪಕ್ಷ ಸು. 1560 ರಲ್ಲಿದ್ದ ತೋಂಟದ ಸಿದ್ಧಲಿಂಗಯತಿಯ ಕಾಲದಷ್ಟು ಹಳೆಯದೆಂದು ತೋರುತ್ತದೆ. ಹೇರೂರಿನ ಕೆರೆಯ ಪರಿಯ ಕೆಳಗಣ ಮಠದ ಅಯ್ಯ ತೋಂಟದ ಸಿದ್ಧಲಿಂಗಯತಿಗೆ ಬಗೆ ಬಗೆಯ ಹಿಂಸೆ ಅಪಮಾನಗಳನ್ನೂ ಅಪಾಯಗಳನ್ನೂ ತಂದೊಡ್ಡಿದರೂ ಅವೆಲ್ಲವನ್ನೂ ಗೆದ್ದ ಸಿದ್ಧಲಿಂಗಯತಿ ವಿರಕ್ತರಾದವರು ಭಕ್ತರ ಮನೆಗಳಿಗೆ ಮಾತ್ರ ಭಿಕ್ಷಕ್ಕೆ ಹೋಗಬೇಕೇ ಹೊರತು "ಮಠಪತಿಗಳ" (ಗುರು ವರ್ಗದ ಅಯ್ಯನವರ) ಮನೆಗಳಿಗೆ ಹೋಗಬಾರದೆಂದು ನಿಯಮಮಾಡುತ್ತಾನೆ. ಇದು ವೈಯಕ್ತಿಕ ಮಟ್ಟದ ತಿಕ್ಕಾಟವೇ, ಅಥವಾ ಸಮಾಜದಲ್ಲಿ ನಡೆಯುತ್ತಿದ್ದ ಗುರು, ವಿರಕ್ತರ ತಿಕ್ಕಾಟವೇ ತಿಳಿಯದು. ಹೆಚ್ಚೆಂದರೆ ಅದು ಗುರು ವಿರಕ್ತರ ಮಧ್ಯೆ ಎಲ್ಲೋ ಪ್ರಾಸಂಗಿಕವಾಗಿ ಅಥವಾ ತೀರ ವಿರಳವಾಗಿ ನಡೆಯುತ್ತಿದ್ದ ತಿಕ್ಕಾಟವೇ ಆಗಿದೆ. ತೋಂಟದ ಸಿದ್ಧಲಿಂಗಯತಿಗಳೇ ರೇವಣಸಿದ್ಧರನ್ನು ಸ್ಮರಿಸಿರುವುದರಿಂದಲೂ ಹರಿಹರ ಷಡಕ್ಷರಿಯಂತಹ ಕವಿಗಳು ಬಸವ, ರೇವಣರ ಬಗ್ಗೆ ಸಮಾನ ಗೌರವದಿಂದ ಕಾವ್ಯಗಳನ್ನು ಬರೆದಿರುವುದರಿಂದಲೂ ಕಳೆದ ಆರೇಳು ದಶಕಗಳಿಂದ ಲಿಂಗಾಯತ ಸಮಾಜವನ್ನು ದುರ್ಬಲಗೊಳಿಸಿ ಇದೇ ತಾನೇ ಸ್ವಲ್ಪ ಶಾಂತವಾಗುತ್ತಿರುವ ಗುರು, ವಿರಕ್ತರ ತಿಕ್ಕಾಟವು ಈ ಶತಮಾನದ ಆದಿಯಲ್ಲಿ ಕೆಲವು ವ್ಯಕ್ತಿಗಳು ಕಾರಣವಾಗಿ ಹುಟ್ಟಿಕೊಂಡಿದೆಯೆಂಬಲ್ಲಿ ಅನುಮಾನಕ್ಕೆ ಆಸ್ಪದವೇ ಇಲ್ಲ.

ಜಂಗಮ ಅನುಶ್ರೇಣಿಯಲ್ಲಿ ಪಂಚಪೀಠಾಧ್ಯಕ್ಷರ (ಅವರ ಪ್ರತಿನಿಧಿಗಳಾದ ಪಟ್ಟದ್ದೇವರ) ಮತ್ತು ವಿರಕ್ತರ ಅನುಶ್ರೇಣಿಯನ್ನು ನಿರ್ಣಯಿಸುವುದು ಸುಲಭವಲ್ಲವಾದರೂ ಅಸಾಧ್ಯವೇನೂ ಅಲ್ಲ. ಆದರೆ ಇಲ್ಲಿ ಅನಿವಾರ್ಯವಾಗಿ ಕೆಲವು ಐತಿಹಾಸಿಕ ಸಂಗತಿಗಳನ್ನೂ ಕೆಲವು ಪಾರಿಭಾಷಿಕ ಪದಗಳ ಅರ್ಥವ್ಯಾಪ್ತಿಯನ್ನೂ ನೋಡುವುದು ಆಗತ್ಯವಾಗಿದೆ. 'ಜಂಗಮ' ಶಬ್ದವು ಈಗ ಲಿಂಗಾಯತ ಸಮಾಜದಲ್ಲಿ ಪೌರೋಹಿತ್ಯವನ್ನು ಮಾಡುವ ಒಂದು ಉಪಜಾತಿವಾಚಕವಾಗಿ ಬಳಕೆಯಾಗುತ್ತಿದೆ, ಮತ್ತು ಈ ರೂಢ್ಯರ್ಥವನ್ನೇ ಈ ಸಂಪ್ರಬಂಧದಲ್ಲಿ ಇಟ್ಟುಕೊಂಡು ಬಳಸಲಾಗಿದೆ. 'ಜಂಗಮ' ಪದದ ಪಾರಿಭಾಷಿಕ ಅರ್ಥದಲ್ಲಿ ಈಗಲೂ ಅದು ವಿರಕ್ತರಿಗೆ ಮಾತ್ರ ಅನ್ವಯವಾಗುತ್ತದೆ. ವಚನಕಾರರಲ್ಲಿ ಗುರು, ಲಿಂಗ, ಜಂಗಮ ಎಂಬ ಪರಿಕಲ್ಪನೆಗಳ ಜೊತೆಗೆ 'ವಿರಕ್ತ'ಎಂಬ ಪರಿಕಲ್ಪನೆಯೂ ಉಂಟು. ಶಿಷ್ಯನಿಗೆ ಉಪದೇಶಸಮೇತವಾಗಿ ಇಷ್ಟಲಿಂಗವನ್ನು ದಯಪಾಲಿಸುವವನೇ ಗುರು. ಅವನಿಗಿಂತ ಜಂಗಮನೇ ಶ್ರೇಷ್ಠನೆಂದು ಎಲ್ಲ ವಚನಕಾರರ ಭಾವನೆ. "ಗುರುವಿನ ಗುರು ಜಂಗಮ" ಎನ್ನುತ್ತಾನೆ ಬಸವಣ್ಣ. (ವಚನ 424)[5] ಗುರೂಪದೇಶವು ಮಂತ್ರವೈದ್ಯವೆಂದೂ ಜಂಗಮೋ

5 ಬಸವಣ್ಣನವರ ವಚನಗಳ ಸಂಖ್ಯೆ ಕರ್ನಾಟಕ ವಿಶ್ವವಿದ್ಯಾಲಯದ ''ಬಸವಣ್ಣನವರ ವಚನಗಳು'' ಆವೃತ್ತಿಯಲ್ಲಿದ್ದಂತೆ

ಪದೇಶವು ಶಸ್ತ್ರವೈದ್ಯವೆಂದೂ ಇನ್ನೊಂದೆಡೆ ಹೇಳುತ್ತಾನೆ. (ವಚನ 653). ಅವನಲ್ಲಿ 'ಗುರು'ಮಾತು ಐವತ್ತು ಕಡೆಗಳಲ್ಲಿಯೂ 'ಜಂಗಮ' ಮಾತು ನೂರಮೂವತ್ತೈದು ಕಡೆಗಳಲ್ಲಿಯೂ ಬಂದಿದೆ (ಗುಂಜಾಳರ "ಬಸವಣ್ಣನವರ ವಚನ ಪದಪ್ರಯೋಗ ಕೋಶ" ದಿಂದ). ಹಾಗಾದರೆ, 'ಜಂಗಮ' ಎಂದರೇನು ? ಅಥವಾ 'ಜಂಗಮರು' ಯಾರು ? ಸದಾ ಸಂಚರಿಸುತ್ತ ಜನತೆಗೆ ಉಪದೇಶ ಮಾಡುತ್ತಿದ್ದ ಶಿವಭಕ್ತ ಸಮೂಹವೇ ಜಂಗಮರೆಂದು ತೋರುತ್ತದೆ. ಅವರು ಯಾವುದೇ (ಲಿಂಗವಂತ) ಜಾತಿಗೂ ಸೇರಿದವರಿರಬಹುದಿತ್ತು. "ಜಂಗಮದಲ್ಲಿ ಕುಲವುಂಟೆ ?" (ವಚನ 285), "ಕುಲಮದಕ್ಕೆ ಹೋರಿ ಜಂಗಮ ಭೇದವ ಮಾಡುವೆ, ಫಲವೇನು ?" (ವಚನ 284), "ಕುಲವುಂಟೆ ಜಂಗಮನಿದ್ದೆಡೆಯಲ್ಲಿ" (ವಚನ 269) – ಈ ಬಸವನ ವಚನಗಳಾಗಲಿ, ಹರಿಹರನು ಶರಣರ ಬಾಯಿಂದ "ಜಂಗಮದಲ್ಲಿ ಜಾತಿಯ ನರಸೆ" ಎಂದು ಬಸವಣ್ಣನನ್ನು ಹೊಗಳಿಸುವುದಾಗಲಿ (ಬಸವರಾಜದೇವರ ರಗಳೆ, ಸ್ಥಲ 8) ಹನ್ನೆರಡನೆಯ ಶತಮಾನದ ಜಂಗಮರು ಯಾವುದೇ ಲಿಂಗವಂತ ಜಾತಿಗೆ ಸೇರಿದವರಾಗಿರಬಹುದಿತ್ತೆಂದೂ, ಅಥವಾ ಅವರು ಹುಟ್ಟಿನಿಂದ ಯಾವುದೇ ಜಾತಿಗೆ ಸೇರಿದವರಾಗಿದ್ದರೂ ಒಮ್ಮೆ ಸದಾ ಸಂಚರಿಸುವ ಜಂಗಮರಾದೊಡನೆ ಅವರು ತಮ್ಮ ಜಾತಿಯನ್ನು ಕಳೆದುಕೊಳ್ಳುತ್ತಿದ್ದರೆಂದೂ ಕಾಣುತ್ತದೆ. (ಅವರು ನಿಶ್ಚಿತವಾಗಿಯೂ ಇಂದಿನ ಜಂಗಮರಂತೆ ಮೇಲ್ಜಾತಿಯ ಪುರೋಹಿತ ವರ್ಗದವರಲ್ಲ). ಊರಿಂದ ಊರಿಗೆ ಸಂಚರಿಸುತ್ತಿದ್ದ ಆ ಜಂಗಮರನ್ನು ಭಕ್ತರು ಮನೆಗೆ ಕರೆದು ಸತ್ಕರಿಸಿ ಊಟ, ವಸ್ತ್ರಗಳನ್ನು ಕೊಟ್ಟು ಉಪಚರಿಸುತ್ತಿದ್ದರು. "ಜಂಗಮ" ಶಬ್ದವು ಲಿಂಗ ಶಬ್ದದಂತೆ ಬಸವಣ್ಣನಲ್ಲಿ ಉದ್ದಕ್ಕೂ ನಪುಂಸಕಲಿಂಗದಲ್ಲಿರುವುದು ಗಮನಾರ್ಹ. ಶಿವನು ಎರಡು ರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ – ಜಡರೂಪದ ಲಿಂಗದಲ್ಲಿ ಮತ್ತು ಚೈತನ್ಯರೂಪದ ಜಂಗಮನಲ್ಲಿ. ಲಿಂಗವು ನಪುಂಸಕದಲ್ಲಿದ್ದಂತೆ ಜಂಗಮವೂ ನಪುಂಸಕದಲ್ಲಿರುವುದು ವಚನ ಕಾರರಿಗೆ ಸ್ವಾಭಾವಿಕವಾಗಿ ತೋರಿತು. ಜಂಗಮರು ಶಿವಲಿಂಗದಷ್ಟೇ ಪೂಜ್ಯರು : ಅವರು ಓಡಾಡುವ, ಕಾಣಿಸುವ ಲಿಂಗ. ಅವರು ಮನೆಗೆ ಬಂದಾಗ ಮನೆಯ ಗೃಹಿಣಿಯನ್ನು ಅವರಿಗೆ ಒಪ್ಪಿಸುವುದೂ ತಪ್ಪೆನಿಸಿರಲಿಲ್ಲ. ಎಂದರೆ ಎಲ್ಲ ಜಂಗಮರು ನೈಷ್ಠಿಕ ಬ್ರಹ್ಮಚಾರಿಗಳೇನೂ ಆಗಿರಲಿಲ್ಲವೆಂದು ತೋರುತ್ತದೆ. (ಬುಡಕಟ್ಟಿನ ಜನರಲ್ಲಿ ಮದುವೆ ಆಗುವ ಹುಡುಗಿ ಪುರೋಹಿತನಿಗೆ ಮೊದಲ ದಿನ ತನ್ನ ಮೈ ಒಪ್ಪಿಸಬೇಕು ಎಂಬ ಪದ್ಧತಿಯ ಅವಶೇಷರೂಪ ಇದು). ಪುರೋಹಿತವರ್ಗದ ಗುರುಗಳಿಗಿಂತ ಬಗೆಬಗೆಯ ಜಾತಿಗಳಿಗೆ ಸೇರಿದ್ದ ಜಂಗಮರು ಹೆಚ್ಚು ಅಭಿವಂದ್ಯರಾಗಿದ್ದರು.

ಇವರು ಹನ್ನೆರಡನೆಯ ಶತಮಾನದಲ್ಲಿ 'ವಿರಕ್ತ'ರಿಗಿಂತ ಬೇರೆಯಾಗಿದ್ದರೋ ಇಬ್ಬರೂ ಒಂದೆಯೋ ಎಂಬ ಬಗ್ಗೆ ಹೆಚ್ಚಿನ ವಿಚಾರ ನಡೆಯಬೇಕಾಗಿದೆ. ಅಮುಗೆ

ರಾಯಮ್ಮ ಎಂಬಾಕೆ (ಶಿವಶರಣೆಯರ ವಚನಗಳು, ಧಾರವಾಡ, ಪು. 411-55) ತನ್ನ ಹಲವು ವಚನಗಳಲ್ಲಿ ತನ್ನಕಾಲದ ವಿರಕ್ತರನ್ನು ಕುರಿತಂತೆ ಹಲವು ವಿವರಗಳನ್ನು ಕೊಟ್ಟಿದ್ದಾಳೆ. ಜಂಗಮರಿಗೆ ಜಡೆ, ಮುಡಿಗಳು ಇದ್ದುವು (ವಚನ. 10). ವಿರಕ್ತರು ತಲೆಯ ಕೂದಲನ್ನು ತೆಗೆಸಿ ಕಾವಿಯನ್ನು ಹೊದೆಯುತ್ತಿದ್ದರು (ವಚನ 25, 31). ಅವರು ಸದಾ ಸಂಚಾರಮಾಡುತ್ತ 'ಆದ್ಯರ' ವಚನಗಳನ್ನು ಜನರ ಮುಂದೆ ಓದಿ ಹೇಳುತ್ತಿದ್ದರು (ವಚನ 49). ವಿರಕ್ತ ನಿಜವನ್ನು ಅರಿತವನು (68). ಹೊನ್ನು ಹೆಣ್ಣು ಮಣ್ಣುಗಳೆಂಬ 'ತ್ರಿವಿಧ' ವನ್ನು ಮೀರಿದ ವಿರಕ್ತನು ಅವುಗಳಿಗೆ ಒಳಗಾದ ಗುರುವನ್ನು ಕಂಡು ಕಾಲಿಗೆ ಎರಗುವುದು ಸರಿಯಲ್ಲ (ವಚನ 92). ಗುರುವಿಗಿಂತ ವಿರಕ್ತನು ಶ್ರೇಷ್ಠನೆಂಬುದು ಇದರ ಸಾರಾಂಶ. ವಿರಕ್ತನು ಇಂದ್ರಿಯಗಳನ್ನು ಗೆದ್ದು ಇಷ್ಟಲಿಂಗವನ್ನು ಮೈಮೇಲೆ ಧರಿಸಿ ಒಬ್ಬಂಟಿಗನಾಗಿ ಇರುತ್ತ ಸಂತೋಷಿಯಾಗಿರ ಬೇಕು (ವಚನ 99). ಗಡ್ಡ, ತಲೆ ಕೂದಲನ್ನು ವಿರಕ್ತ ತೆಗೆಸಿಕೊಂಡಿರಬೇಕೆಂದೂ ಅಕ್ಕಮ್ಮ ಹೇಳುತ್ತಾಳೆ, (ಅದೇ ಕೃತಿ, ಪು. 509). ಅವರು "ಉಪಾಧಿ ರಹಿತರು" (ಅದೇ).

ಚನ್ನಬಸವಣ್ಣನಲ್ಲಿ (ಚನ್ನಬಸವಣ್ಣನವರ ವಚನಗಳು, ಧಾರವಾಡ ಆವೃತ್ತಿ, ವಚನ 453). ಭವಿಯೊಬ್ಬ (ಲಿಂಗಾಯತನಲ್ಲದವನು) ಗುರುವಿನಿಂದ ದೀಕ್ಷೆಯಾಗಿ 'ಭಕ್ತ'ನಾದ ಬಳಿಕ, ದೇಶಸಂಚಾರಮಾಡಿ ಜಂಗಮನಾದ ಮೇಲೆ, ಅವನು ತನಗೆ ದೀಕ್ಷೆ ಕೊಟ್ಟ ಗುರುವಿನ ಮಠಕ್ಕೆ ಬಂದಾಗ, ಗುರುವು ಜಂಗಮನನ್ನು ತನ್ನ ಶಿಷ್ಯ ನೆಂದು ಭಾವಿಸಬಾರದು ; ಜಂಗಮನು ಆ ಗುರುವಿನ ಬಗ್ಗೆ ಭಯ ಭೀತಿ ತೋರ ಬಾರದು, ಎಂದು ಹೇಳುತ್ತಾನೆ. ಏಕೆಂದರೆ, ಗುರುವಿಗಿಂತ ಜಂಗಮ ಶ್ರೇಷ್ಠ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಲಿಂಗಾಯತರಲ್ಲದ ಭವಿಗಳೂ ಕೂಡ ಜಂಗಮತ್ವ ಪಡೆಯಲು ಸಾಧ್ಯವೆಂಬುದು. ("ಶ್ರೀಗುರು ಶಿಷ್ಯನ ಭವಿಪೂರ್ವಾಶ್ರಯವ ಕಳೆದು ಭಕ್ತನ ಮಾಡಿದ ಬಳಿಕ ಆ ಭಕ್ತ ಹೋಗಿ ಜಂಗಮನಾಗಿ ಗುರುವಿನ ಮಠಕ್ಕೆ ಬಂದಡೆ, ಆ ಜಂಗಮವೆನ್ನ ಶಿಷ್ಯನೆಂದು ಗುರುವಿನ ಮನದಲ್ಲಿ ಹೊಳೆದಡೆ ಪಂಚ ಮಹಾಪಾತಕ. ಈ ಜಂಗಮಕ್ಕೆ ಎನ್ನ ಗುರುವೆಂದು ಮನದಲ್ಲಿ ಭಯಭೀತಿ ಹೊಳೆ ದಡೆ ರೌರವನರಕ. ಇಂತೀ ಭೇದವ ಕೂಡಲಚನ್ನಸಂಗಯ್ಯನಲ್ಲಿ ನಿಮ್ಮ ಶರಣರೇ ಬಲ್ಲರು"). ಜಂಗಮನು 'ವೇದ ವೇದಾಂತ'ವನ್ನು ಅಭ್ಯಸಿಸುತ್ತಿದ್ದ (ವಚನ 455) ವಿಷಯವೂ ಅಲ್ಲಿದೆ; ತಲೆ ಬೋಳಿನ ಜಂಗಮರಿದ್ದಂತೆ ಜಡೆ, ತುರುಬಿನ ಜಂಗಮರೂ ಇದ್ದರು (ವಚನ 991). ಸಂಸಾರವನ್ನು ತ್ಯಜಿಸಿರುವುದು ಜಂಗಮನ ಲಕ್ಷಣ ಗಳಲ್ಲೊಂದು (ವಚನ 994). ಇತರ ವಚನಕಾರರಲ್ಲಿಯೂ[6] 'ಜಂಗಮ'ರ ಬಗ್ಗೆ

6 ವಿವರಗಳಿಗೆ ನೋಡಿ–ಪಿ. ವಿ. ನಾರಾಯಣ : ವಚನ ಸಾಹಿತ್ಯ, ಒಂದು ಸಾಂಸ್ಕೃತಿಕ ಅಧ್ಯಯನ, ಗದಗ, 1983. ಪು.413-20.

ನೂರಾರು ಉಲ್ಲೇಖಗಳು ದೊರೆಯುತ್ತವೆ. ಭಕ್ತನಾದವನು ತನ್ನ ಭೋಗಗಳನ್ನೆಲ್ಲ ಜಂಗಮಕ್ಕೆ ಮೊದಲು ಸಮರ್ಪಿಸಿ ನಂತರ ತಾನು ಅನುಭವಿಸಬೇಕೆಂದು ಹೇಳುವ ವಚನಗಳೂ ದೊರಕುತ್ತವೆ. (ತನ್ನ ಹೆಣ್ಣನ್ನು ಮೊದಲು ಜಂಗಮನಿಗೆ ಅರ್ಪಿಸಬೇಕೆಂದು ಹೇಳುವ ವಚನಗಳೂ ಇವೆ). ಚನ್ನಬಸವ ಮೊದಲಾದ ವಚನಕಾರರು ಸುರೆ, ಮಾಂಸ, ಮದ್ಯಗಳನ್ನು ಸೇವಿಸುತ್ತಿದ್ದ, ವೇಶ್ಯೆಯರ ಸಂಗವನ್ನು ಮಾಡುತ್ತಿದ್ದವರನ್ನು ಜಂಗಮರೆಂದು ಗೌರವಿಸಬಾರದು ಎಂದು ಹೇಳುವಲ್ಲಿ ಕೆಲವು ಜಂಗಮರಲ್ಲಿ ಅಂತಹ ಅಭ್ಯಾಸಗಳು ರೂಢವಾಗಿತ್ತೆಂಬುದು ಸೂಚಿತವಾಗುತ್ತದೆ.[7] ವೇಶ್ಯೆಯರ ಮನೆಗಳಿಗೆ ಹೋಗುತ್ತಿದ್ದ "ಸುಖಿ (ಮಿಂಡ) ಜಂಗಮ"ರ ಕತೆಗಳನ್ನು ಹರಿಹರ, ಭೀಮಕವಿಯರು ಗೌರವದಿಂದಲೇ ಉಲ್ಲೇಖಮಾಡಿರುವುದಲ್ಲದೆ, ಒಬ್ಬ ಜಂಗಮನಿಗೆ (ಶಿವ ಆ ವೇಷದಲ್ಲಿ ಬಂದಿದ್ದನಂತೆ !) ತನ್ನ ಹೆಂಡತಿಯನ್ನೇ ಒಪ್ಪಿಸಿಕೊಟ್ಟ ಬಸವಣ್ಣನ ಕತೆಯನ್ನು ಹರಿಹರ ಚಿತ್ರಿಸಿದ್ದಾನೆ (ಈ ಬಗ್ಗೆ ಬಸವನ ಸ್ವಂತ ವಚನವೇ ಒಂದು ಇದೆ). ಬಸವನಿಗಿಂತ ಹಿಂದೆ ಇದ್ದ ಕೊಂಡಗುಳಿ ಕೇಶಿರಾಜನು (ಕ್ರಿ.ಶ. 1100) ಯಾರೇ ಆಗಲಿ ಜಂಗಮರಲ್ಲಿ ಅವಗುಣವನ್ನು ಹುಡುಕಬಾರದು ಎನ್ನುತ್ತಾನೆ. ಈ ಮೊದಲಾದ ಎಲ್ಲ ಸಂಗತಿಗಳನ್ನು ಸರಿಯಾದ ರೀತಿಯಲ್ಲಿ ವ್ಯಾಖ್ಯಾನಿಸಲು ಯಾರೂ ಇನ್ನೂ ಪ್ರಯತ್ನಿಸಿಯೇ ಇಲ್ಲ.

ವಚನಗಳಲ್ಲಿ ಬರುವ "ಜಂಗಮ" ಯಾರು ? ಅವನು ಗುರುವಿನಿಂದ ಹೇಗೆ ಭಿನ್ನ ? ವಿರಕ್ತನಿಗೂ ಅವನಿಗೂ ಏನು ಹೋಲಿಕೆ, ವ್ಯತ್ಯಾಸ ? ಈ ಮೂಲಭೂತ ಪ್ರಶ್ನೆಗಳನ್ನು ಹಾಕುವಷ್ಟು ಉತ್ತರಿಸುವುದು ಸುಲಭವಲ್ಲ. ಇಂದಿನ ಜಂಗಮರಿಗೆ ವೀರಶೈವ ಪೂರ್ವದ ಲಾಕುಳಶೈವ ಯತಿಗಳೇ ಮೂಲ ಎಂಬ ಕಪಟರಾಳ ಕೃಷ್ಣರಾಯರ ವಾದವನ್ನು ಡಾ. ಪಿ. ವಿ. ನಾರಾಯಣ ಅವರು ತಳ್ಳಿಹಾಕಿರುವುದು ಸರಿಯಾಗಿದ್ದರೂ[8], ಜಂಗಮ ಸಂಸ್ಥೆ ವಚನಕಾರರ ಕಾಲದಲ್ಲಿ ಉಗಮಗೊಂಡಿತೆಂಬ ಡಾ. ನಾರಾಯಣರ ವಾದವನ್ನು[9] ಒಪ್ಪಿಕೊಳ್ಳುವುದೂ ಕಷ್ಟ. ಏಕೆಂದರೆ, ಖಚಿತವಾಗಿ ಬಸವನಿಗಿಂತ ಹಿಂದಿನವನಾಗಿರುವ ಕೊಂಡಗುಳಿ ಕೇಶಿರಾಜನ ಕೃತಿಗಳಲ್ಲಿ ಜಂಗಮರ ಉಲ್ಲೇಖಗಳು ಸಾಕಷ್ಟು ದೊರಕುತ್ತವೆ. ವಚನಕಾರರ ಕಾಲದ ಜಂಗಮರನ್ನೂ ಇಂದಿನ ಕಾಲದ ಜಂಗಮರನ್ನೂ ಒಂದೇ ಎಂದು ಭಾವಿಸಿ ನೋಡುತ್ತಿರುವುದೇ ಎಲ್ಲ ಬಗೆಯ ಜಟಿಲತೆಗೆ ಕಾರಣವಾಗಿದೆ. ಇಂದಿನ ಕಾಲದಲ್ಲಿ ಜಂಗಮತ್ವ ಎಂಬುದು ಬ್ರಾಹ್ಮಣ್ಯದಂತೆ ಹುಟ್ಟಿನಿಂದ ಬರತಕ್ಕದ್ದು ; ಮತ್ತು ಗುರು, ಜಂಗಮ ಎಂಬ ಪದಗಳು ಈಗ ಸಮಾನಾರ್ಥಕಗಳು. ಆದರೆ, ಹನ್ನೆರಡನೆಯ

---

7 ಈ ಕೆಲವು ಉಲ್ಲೇಖಗಳ ಕಡೆ ಡಾ॥ ಎಸ್. ವಿದ್ಯಾಶಂಕರ್ ನನ್ನ ಗಮನವನ್ನು ಸೆಳೆದಿದ್ದಾರೆ.

8 ಪೂರ್ವೋಕ್ತ ಗ್ರಂಥ

9 ಅದೇ

ಶತಮಾನದಲ್ಲಿ ಗುರು, ಲಿಂಗ, ಜಂಗಮ ಎಂಬ ಮೂರು ಪರಿಕಲ್ಪನೆಗಳು ಪ್ರತ್ಯೇಕವಾಗಿ ಬಳಕೆಯಾಗಿರುವುದರಿಂದ ಅವು ಮೂರೂ ಬೇರೆ ಬೇರೆ ಎಂಬುದು ಸ್ಪಷ್ಟವಾಗಿದೆ. ಲಿಂಗದೀಕ್ಷೆಯನ್ನು ಮಾಡುವ ಗುರುವರ್ಗ ಈ ದಿನದ ಜಂಗಮ ವರ್ಗಕ್ಕೆ ಸಮಾನ. ಹಾಗಾದರೆ ಅಂದಿನ ಜಂಗಮರು ಇಂದಿನ ಜಂಗಮರಿಂದ ಬೇರೆಯೆಂಬುದೂ ಸ್ಪಷ್ಟವಾಗಿದೆ. ಹಿಂದೆ ನಾವು ನೋಡಿದ ಚನ್ನಬಸವಣ್ಣನ ವಚನವು ಈ ಬಗ್ಗೆ ಮಹತ್ವದ್ದು (ವಚನ 453). ಭವಿಯಾದವನು ಭಕ್ತನಾಗಿ, ದೇಶ ಸಂಚಾರ ಮಾಡುತ್ತ ಜಂಗಮನಾಗುತ್ತಿದ್ದ. ದೇಶದಲ್ಲಿ ಸಂಚರಿಸಿ ಜ್ಞಾನಿಗಳನ್ನು ಭೇಟಿ ಮಾಡಿ ತನ್ನ ಭಕ್ತಿ ಸಾಧನೆಯನ್ನು ಮುಂದುವರಿಸಿ ಜ್ಞಾನಿಯಾಗಿ ಜನತೆಗೆ ಉಪದೇಶಿಸುವ ಯೋಗ್ಯತೆಯನ್ನು ಸಂಪಾದಿಸಿದವನು ಜಂಗಮ.[10] ಜಂಗಮನ ಮುಖ್ಯ ಲಕ್ಷಣ ದೇಶಸಂಚಾರ ('ಜಂಗಮ' ಮಾತಿನಲ್ಲೇ ನಿರಂತರ ಚಲನೆಯ ಅರ್ಥ ಹುದುಗಿದೆ), ಮತ್ತು ಅದರ ಪರಿಣಾಮವಾದ ಮನಸ್ಸಿನ ಪಕ್ವತೆ. ಗುರುವಾದವನು ಇಂತಹುದೇ ಜಾತಿಯಲ್ಲಿ (ಇಂದಿನ ಅಯ್ಯನವರಂತೆ) ಹುಟ್ಟಿರಬೇಕೆಂಬ ಕಡ್ಡಾಯ ವಿದ್ದಿರಬೇಕು ; ಆದರೆ ಅಂದಿನ ಜಂಗಮ ಯಾವುದೇ ಜಾತಿಯಲ್ಲಿ ಹುಟ್ಟಿದ್ದರೂ ಅದು ಮುಖ್ಯವಾಗುತ್ತಿರಲಿಲ್ಲ. ಬೇರೆ ಬೇರೆ ಜಾತಿಯ ಜನರು ಲಿಂಗವಂತರಾಗಿ ಜಂಗಮ ಸ್ಥಿತಿಯನ್ನು ಪಡೆಯುತ್ತಿದ್ದು, ಅವರಲ್ಲಿ ಜಾತಿ ಅಥವಾ ಕುಲವನ್ನು ಅರಸಕೂಡದೆಂದು ಬಸವ ಚನ್ನಬಸವ ಮೊದಲಾದವರು ಎಚ್ಚರಿಸಿದ್ದಾರೆ. ಒಂದು ಕಡೆ ಇದ್ದು ಜನರ ಕ್ರಿಯಾವಿಧಿಗಳನ್ನು ನೆರವೇರಿಸುತ್ತಿದ್ದ ಗುರುವಿಗಿಂತ ಜ್ಞಾನದಲ್ಲಿ ಪಕ್ವತೆ ಹೊಂದಿದ ಜಂಗಮ ದೊಡ್ಡವನು ಎಂದು ಹೇಳುವುದರ ಮೂಲಕ ವಚನಕಾರರು ಗುರುವಿಗಿಂತ ದೊಡ್ಡವನಿಲ್ಲ ("ನ ಗುರೋರಧಿಕಂ") ಎಂಬ ಹಿಂದೂ ಸಂಪ್ರದಾಯದ ಪ್ರಬಲ ನಂಬಿಕೆಯನ್ನು ಅಲ್ಲಗಳೆದುದಲ್ಲದೆ, ಯತ್ನಿಸಿದರೆ ಯಾವ ಜಾತಿಯ ವ್ಯಕ್ತಿಯೂ ಮೇಲೇರಲು ಅವಕಾಶವಿದೆಯೆಂಬುದನ್ನು ಪ್ರತಿಪಾದಿಸಿದರು. ಅಂತಹ ಜಂಗಮರಿಗೆ ಎರಡು ಒಳ್ಳೆಯ ಉದಾಹರಣೆಗಳೆಂದರೆ ಅಲ್ಲಮ ಮತ್ತು ಸಿದ್ಧರಾಮ. ಇಬ್ಬರೂ ಹುಟ್ಟಿನಿಂದ ಶೂದ್ರರು ; ದೇಶ ಸಂಚಾರ ಮಾಡಿ, ಜ್ಞಾನಪಕ್ವತೆಯನ್ನು ಪಡೆದರು, ಮತ್ತು ಇಬ್ಬರೂ "ಶೂನ್ಯಸಿಂಹಾಸನ"ವನ್ನು ಏರಿದರು. ಇಂತಹ

---

10 ಎಂ. ಎಂ. ಕಲ್ಬುರ್ಗಿಯವರು "ಜಂಗಮ" ಮಾತಿಗೆ ಒಟ್ಟು ಲಿಂಗವಂತ ಸಮಾಜ ಎಂಬರ್ಥ ಬರುವಂತೆ ವ್ಯಾಖ್ಯಾನಿಸಿರುವುದು ಅಷ್ಟು ಸಮರ್ಥನೀಯವಾಗಿ ತೋರುವುದಿಲ್ಲ. (ನೋಡಿ 'ಜಂಗಮ.' ಬಸವಪಥ. I–i). "ವೀರಶೈವ ಭಾಷೆಯಲ್ಲಿ 'ಭಕ್ತ' ಪದಕ್ಕೆ ವ್ಯಕ್ತಿ (Individual) 'ಜಂಗಮ' ಪದಕ್ಕೆ ಭಕ್ತರ ಸಮೂಹವಾದ 'ಸಮಾಜ' (Society) ವೆಂಬ ಅರ್ಥವಿದೆ" ಇದು ಅವರ ವಾದದ ಸಾರಾಂಶ. 'ಜಂಗಮ'ಕ್ಕೆ ಈ ದಿನಕ್ಕಿಂತ ಬೇರೆಯಾದ ಅರ್ಥವಿತ್ತೆಂದೂ, ಜಂಗಮತ್ವವು ಹುಟ್ಟಿನಿಂದ ನಿರ್ಣೀತವಾಗದೆಂದೂ ಅವರು ಸೂಚಿಸುವುದರಲ್ಲಿ ಔಚಿತ್ಯವಿದೆ. ಆದರೆ "ಜಂಗಮ" ಶಬ್ದವು ಭಕ್ತರ ಸಮೂಹವಾದ ಸಮಾಜ ಎಂಬರ್ಥವನ್ನು ಕೊಡಲು ಸಾಧ್ಯವಾಗದು.

ಜಂಗಮರೇ ತೀವ್ರ ವೈರಾಗ್ಯಪರರಾದಾಗ ವಿರಕ್ತರೆಂದು ಕರೆಯಿಸಿಕೊಳ್ಳುತ್ತಿದ್ದರು. ಜಂಗಮರು ತಲೆಯ ಕೂದಲನ್ನು ತೆಗೆಯಿಸಿಕೊಳ್ಳುವುದು ಕಡ್ಡಾಯವಾಗಿರದಿದ್ದರೂ ವಿರಕ್ತರು ಕಡ್ಡಾಯವಾಗಿ ತಲೆಗೂದಲನ್ನು ತೆಗೆಯಿಸಿಕೊಳ್ಳುತ್ತಿದ್ದರು. (ಅಕ್ಕಮ್ಮನ ವಚನಗಳನ್ನು ನೋಡಿ). ಮಧ್ಯಕಾಲೀನ ಯುಗದಲ್ಲಿ ಜಂಗಮ ಶಬ್ದವು ವಿರಕ್ತರನ್ನೂ ಒಳಗೊಂಡ ಅರ್ಥವೈಶಾಲ್ಯವನ್ನು ಪಡೆಯಿತು. ಇದಕ್ಕೆ ವಿರಕ್ತ ತೋಂಟದಾರ್ಯನ ಶ್ರೀ ಸಿದ್ಧೇಶ್ವರ ಪುರಾಣವನ್ನು ನೋಡಬಹುದು. ಕವಿ ವಿರಕ್ತನಾದ ತೋಂಟದ ಸಿದ್ಧಲಿಂಗಯತಿಯನ್ನು 'ಜಂಗಮ'ನೆಂದೇ ಉದ್ದಕ್ಕೂ ವ್ಯವಹರಿಸಿದ್ದಾನೆ. ವಿರಕ್ತರೇ ನಿಜವಾಗಿಯೂ 'ಜಂಗಮ' ಪದಕ್ಕೆ ಅರ್ಹರೆಂಬ ನಂಬಿಕೆ ಇಂದಿಗೂ ಉತ್ತರ ಕರ್ನಾಟಕದಲ್ಲಿ ಉಳಿದು ಬಂದಿದೆ. ಆಧುನಿಕ ಕಾಲದಲ್ಲಿ ಜಂಗಮ ಶಬ್ದದ ಅರ್ಥವು ಇನ್ನೂ ವೈಶಾಲ್ಯವನ್ನು ಹೊಂದಿ ವಿರಕ್ತರಲ್ಲದೆ, ಅಯ್ಯನವರನ್ನೂ ಒಳಗೊಂಡಿತು ಮಾತ್ರವಲ್ಲದೆ, ಜಂಗಮರೆಂದರೇ ಅಯ್ಯನವರು ಎಂಬಷ್ಟು ಪ್ರಾಬಲ್ಯವನ್ನು ಪಡೆಯಿತು. ಗುರುವರ್ಗ, ಜಂಗಮವರ್ಗ ಎರಡೂ ಬೇರೆ ಬೇರೆಯಾಗಿದ್ದ ಕಾಲ ಹೋಗಿ, ಆಧುನಿಕ ಯುಗದಲ್ಲಿ ಎರಡೂ ಒಂದೇ ಆಗಿ ಹೋದದ್ದು ಒಂದು ಐತಿಹಾಸಿಕ ದುರಂತವೆಂದೇ ಹೇಳಬೇಕು. ಹುಟ್ಟಿನಿಂದ ಅಯ್ಯನವರಲ್ಲದವರು ಅರ್ಥಾತ್ ಗುರುವರ್ಗದವರಲ್ಲದವರು ''ಜಂಗಮ''ರಾಗಲು ಸಾಧ್ಯವಾಗದಂತಹ ಒಂದು ಪರಿಸ್ಥಿತಿ ಏರ್ಪಟ್ಟಿತು. ಉದ್ದಕ್ಕೂ ಅಕ್ಷರಸ್ಥರಾಗಿದ್ದ ಗುರುವರ್ಗದ ಅಯ್ಯನವರು ತಮ್ಮನ್ನು ಜಂಗಮರೆಂದು ಕರೆದುಕೊಂಡು ಜಂಗಮ ವರ್ಗಕ್ಕಿದ್ದ ಪ್ರಾಶಸ್ತ್ಯವನ್ನು ತಮಗೆ ಮಾತ್ರ ಮೀಸಲು ಮಾಡಿಕೊಂಡರೆಂದು ಹೇಳಲೇ ಬೇಕಾಗಿದೆ.

ಗುರುವರ್ಗದ ಅಯ್ಯನವರು ಮಾತ್ರ ಬಹುಶಃ ಗುರುಪೀಠಗಳಿಗೆ ಸ್ವಾಮಿಗಳಾಗಲು ಅರ್ಹರು. ಆದರೆ ವಿರಕ್ತ ಪೀಠಗಳಿಗೂ ಅವರೇ ಸ್ವಾಮಿಗಳಾಗಬೇಕೇ ? ಇಲ್ಲೂ ಅಕ್ಷರಸ್ಥರಾಗಿದ್ದ ಅಯ್ಯನವರು ವಿರಕ್ತ ಪೀಠಗಳಿಗೂ ತಾವೇ ಸ್ವಾಮಿಗಳಾಗಬೇಕೆಂಬ ನಿಯಮವನ್ನು ಕಲ್ಪಿಸಿ ಬಹುಕಡೆ ಯಶಸ್ವಿಗಳೂ ಆಗಿದ್ದಾರೆ. ಆದರೆ, ವಿಚಾರಮಾಡಿದ್ದರಲ್ಲಿ ಅಯ್ಯನವರಲ್ಲದ ಭಕ್ತರೂ ವಿರಕ್ತ ಮಠಗಳಿಗೆ ಸ್ವಾಮಿಗಳಾಗಿದ್ದರೆಂದೂ, ಮತ್ತು ಲಿಂಗವಂತ ಸಂಪ್ರದಾಯವೂ ಅದನ್ನೇ ಪೋಷಿಸುತ್ತದೆಯೆಂದೂ ತಿಳಿದುಬರುತ್ತದೆ. ಬೆಂಗಳೂರಿನ ಸರ್ಪಭೂಷಣ ವಿರಕ್ತಮಠದ ಮೂಲ ವ್ಯಕ್ತಿ ಬಣಜಿಗರು. ಸಿದ್ಧಗಂಗೆಯಂತಹ ಕಡೆ ವಿರಕ್ತ ಪೀಠಗಳಿಗೆ ಹುಟ್ಟು ಅಯ್ಯನವರು ಅಧಿಕಾರಿಗಳಾಗುತ್ತಿಲ್ಲ, ಮತ್ತು ಈ ಹಿಂದೆ ನೋಡಿದಂತೆ, ಹನ್ನೆರಡನೆಯ ಶತಮಾನದಲ್ಲಿ ಯಾವ ಲಿಂಗವಂತನಾದರೂ ಜಂಗಮನೂ ವಿರಕ್ತನೂ ಆಗಲು ಅವಕಾಶವಿದ್ದಿತೆಂದೂ, ಅಲ್ಲಮನಂತಹ ಜಂಗಮ ವಿರಕ್ತನೂ ಮತ್ತು ಎಷ್ಟೋ ವಿರಕ್ತ ಮಠಗಳ ಮೂಲಪುರುಷರೂ ಹುಟ್ಟಿನಿಂದ ಶೂದ್ರರಾಗಿದ್ದರೆಂದೂ ಇತಿಹಾಸ ಹೇಳುತ್ತದೆ. ಗುರುವರ್ಗದ ಪೀಠಾಧ್ಯಕ್ಷರು ಲಿಂಗವಂತ ಅನುಶ್ರೇಣಿಯಲ್ಲಿ ಭಕ್ತರಿಗಿಂತ ಮೇಲಿನವರಾದರೂ, ಭಕ್ತರು ವಿರಕ್ತರಾಗಿ ಗುರುವರ್ಗದ ಅಯ್ಯನವರಿಗಿಂತ ಅಥವಾ

ಪೀಠಾಧ್ಯಕ್ಷರಿಗಿಂತ ಮೇಲಿನ ಹಂತವನ್ನು ಮುಟ್ಟಲು ಅವಕಾಶಕೊಟ್ಟಿರುವುದು ಲಿಂಗವಂತ ಸಮಾಜದ ರಚನೆಯ ಪ್ರಗತಿಪರ ಲಕ್ಷಣಗಳಲ್ಲೊಂದು. ಆದರೂ ಕೆಲವು ಪೀಠಾಧ್ಯಕ್ಷರು ಈಗಿರುವಂತೆ ವಿರಕ್ತ ಸ್ವಾಮಿಗಳು ಮೂಲತಃ ಯಾವುದಾದರೂ ಪೀಠಕ್ಕೆ ಸೇರಿದ ಅಯ್ಯನವರೇ ಆಗಿದ್ದು ಪಟ್ಟದ್ದೇವರಿಂದ ದೀಕ್ಷೆ ತೆಗೆದುಕೊಂಡು ತಮ್ಮ ಶಿಷ್ಯರೇ ಆಗಿರುವುದರಿಂದ ಅವರು ತಮಗಿಂತ ಕೆಳಗಿನವರು, ಎಂದು ಭಾವಿಸು ತ್ತಾರೆ. ಗುರುವರ್ಗದವರು ಸಾಭಾರಿಗಳು, ಭಕ್ತರ ಮಧ್ಯೆಯೇ ಇದ್ದು ಅವರ ಕಷ್ಟ ಸುಖಗಳಲ್ಲಿ ಭಾಗಿಗಳಾಗುತ್ತ ಅವರಿಗೆ ಲಿಂಗವಂತ ದೀಕ್ಷೆ ಕೊಡುವುದರ ಮೂಲಕ ಮತ್ತು ಇತರ ಪೌರೋಹಿತ್ಯ ಕಾರ್ಯಗಳ ಮೂಲಕ ಬದುಕಿನಲ್ಲಿ ಸನ್ಮಾರ್ಗ ವನ್ನೂ ಅಂತ್ಯದಲ್ಲಿ ಮೋಕ್ಷವನ್ನೂ ದಯಪಾಲಿಸುವವರು. ಒಬ್ಬ ಜಂಗಮನಾಗಲಿ ಭಕ್ತನಾಗಲಿ 'ವಿರಕ್ತ' ದೀಕ್ಷೆಯನ್ನು ಪಡೆದ ಮೇಲೆ ಅವನು 'ನಿರಾಭಾರಿ'ಯೂ 'ನಿರಂಜನ'ನೂ ಆಗುತ್ತಾನೆ. ಅವನ ಪೂರ್ವಾಶ್ರಮದ ತಂದೆ ತಾಯಿ ಇತ್ಯಾದಿ ಸಂಬಂಧಗಳೆಲ್ಲ ಕಡಿದು ಹೋಗುವುದಲ್ಲದೆ ಅವನು ಜಂಗಮನಾಗಿದ್ದರೆ ಎಲ್ಲ ಗೋತ್ರ, ಸೂತ್ರ, ಪ್ರವರಗಳನ್ನು ಕಳೆದುಕೊಳ್ಳುತ್ತಾನೆ. ಪಂಚಪೀಠಾಧ್ಯಕ್ಷರಿಗೆ 'ಸಿಂಹಾಸನ' ಗೌರವವಿದ್ದರೆ, ವಿರಕ್ತನಿಗೆ 'ಶೂನ್ಯ ಸಿಂಹಾಸನ' ಇದೆ (ಹೆಸರು ಗಮನಿಸಿ! ಅವನ ಸಿಂಹಾಸನ ಭೌತಿಕವಾದುದಲ್ಲ, ಆಧ್ಯಾತ್ಮಿಕವಾದುದು). 'ವಿರಕ್ತ'ಎಂಬ ಹೆಸರೇ ಹೇಳು ವಂತೆ, ಪ್ರಾಪಂಚಿಕ ವ್ಯವಹಾರಗಳಿಂದ ದೂರವಿದ್ದು, ಮಠ ಕಟ್ಟಿಕೊಂಡು ಒಂದೆಡೆ ಶಾಶ್ವತವಾಗಿ ನಿಲ್ಲದೆ, ಆಸ್ತಿ ಮಾಡಿಕೊಳ್ಳದೆ ಮುಖ್ಯವಾಗಿ ವೈಯಕ್ತಿಕ ಸಾಧನೆಯಲ್ಲಿ ಮಗ್ನನಾಗಿ ಸಂಚಾರ ಸಮಯದಲ್ಲಿ ಜನರಿಗೆ ಧರ್ಮ ಮತ್ತು ಆಧ್ಯಾತ್ಮಗಳ ಬೋಧನೆ ಮಾಡುತ್ತ ಇರಬೇಕಾದ ವ್ಯಕ್ತಿ. ಆತನಿಗೆ ಮಠವಿದ್ದರೂ, ವೈಭವ ಆಡಂಬರಗಳಿಂದ ಅದು ಮುಕ್ತವಾಗಿರಬೇಕು. ಜನರಿಗೆ ಧಾರ್ಮಿಕ ದೀಕ್ಷೆ ಕೊಡುವ, ಪೌರೋಹಿತ್ಯ ವಹಿಸುವ ಪ್ರಾಪಂಚಿಕ ಹಕ್ಕುಗಳು ಅವನಿಗಿಲ್ಲ. ಆ ಹಕ್ಕುಗಳು ಗುರು ಪೀಠಕ್ಕೆ ಸೇರಿವೆ.

ವೀರಶೈವ ಧರ್ಮವನ್ನು ಒಂದು ದೇಶ ಎಂದು ಭಾವಿಸಿದರೆ, ಪಂಚಪೀಠಾಧ್ಯ ಕ್ಷರು ಅದನ್ನು ಆಳುವ ರಾಜರುಗಳಿದ್ದಂತೆ; ಅವರಿಗೆ ಸಂಸ್ಥಾನ, ಸಿಂಹಾಸನ, ಪಟ್ಟ, ಸದರು, ಪಟ್ಟದ ಆನೆ ಕುದುರೆ ಕಿರೀಟ ಎಲ್ಲ ಉಂಟು ; ಜನರ ನೀತಿ ಅನೀತಿಗಳ ವಿಮರ್ಶೆ ಮಾಡಿ ರಕ್ಷಿಸುವ ಶಿಕ್ಷಿಸುವ ಹಕ್ಕುಗಳು ಅವರಿಗಿವೆ. ವಿರಕ್ತ ಎಲ್ಲವನ್ನೂ ತ್ಯಜಿಸಿದ ಸನ್ಯಾಸಿಯಿದ್ದಂತೆ. ಹಿಂದೂ ಸಮಾಜದಲ್ಲಿ ಎಲ್ಲವೂ ಇರುವ ರಾಜನಿಗೇ ಪ್ರಥಮ ಸ್ಥಾನವಿದ್ದರೂ, ಅಂತಹ ರಾಜನೂ ಏನೂ ಇಲ್ಲದ ಸನ್ಯಾಸಿಯ ಮುಂದೆ ಬಾಗಲೇಬೇಕು; ಸನ್ಯಾಸಿಯ ಹಿರಿಮೆಯನ್ನು ಒಪ್ಪಿಕೊಳ್ಳಲೇಬೇಕು. ಈ ದೃಷ್ಟಿ ಯಿಂದ ನೋಡಿದರೆ, ತಾತ್ವಿಕವಾಗಿ ಅನುಶ್ರೇಣಿಯಲ್ಲಿ ವಿರಕ್ತರು ಪೀಠಾಧ್ಯಕ್ಷರಿಗಿಂತ ಮೇಲೆ ಇರಬೇಕಾಗುತ್ತದೆ.

ವಿರಕ್ತನಿಗೆ ಪೂರ್ವಾಶ್ರಮದ ಬಾಲ್ಯದಲ್ಲಿ (ಅವನು ಜಂಗಮನಾಗಿದ್ದರೆ)ಪಟ್ಟದ್ದೇವ ರಿಂದ ದೀಕ್ಷೆ ಆಗಿದ್ದರೂ, ಮುಂದೆ ವಿರಕ್ತ ದೀಕ್ಷೆಯನ್ನು ('ಲಯದೀಕ್ಷೆ') ಕೊಡುವಾತ

ಇನ್ನೊಬ್ಬ ವಿರಕ್ತನೇ ಹೊರತು ಪಟ್ಟದ್ದೇವರಲ್ಲ. ಒಂದು ಊರಿಗೆ ವಿರಕ್ತ ಬಂದರೆ ಆತನನ್ನು ಪಟ್ಟಾಧ್ಯಕ್ಷನಾಗಲಿ ಇತರ ಜಂಗಮನಾಗಲಿ ಹೋಗಿ ಇದಿರುಗೊಂಡು ಬರ ಬೇಕೆಂದು ಹಿರೇಮಠರೇ ಒಪ್ಪಿಕೊಳ್ಳುತ್ತಾರೆ. ಊರಿಗೆ ಪಟ್ಟದ್ದೇವರು ಅಥವಾ ಪಂಚ ಪೀಠಾಧ್ಯಕ್ಷರು ಬಂದರೆ ವಿರಕ್ತ ಹೋಗಿ ಸ್ವಾಗತಿಸಿ ಕರೆತಂದರೆ ಅದು ಸೌಜನ್ಯವೇ ಹೊರತು ಕರ್ತವ್ಯ ಅಲ್ಲ. ಹಿಂದಿನ ಪಂಚಪೀಠಾಧ್ಯಕ್ಷರೊಬ್ಬರು ಕೊಟ್ಟೂ ರಿನ ವಿರಕ್ತರ ಪಾದಪೂಜೆ ಮಾಡಿ ಅವರ 'ಕರುಣ ಪ್ರಸಾದ'ವನ್ನು ತೆಗೆದುಕೊಳ್ಳು ತ್ತಿದ್ದರೆಂದೂ ತಿಳಿದುಬಂದಿದೆ. ಗುರುವು ಶಿಷ್ಯನಿಗೆ ಇಷ್ಟಲಿಂಗವನ್ನು ಕೊಡುವಾಗ ಅದರ ಮೇಲೆ 'ಜಂಗಮ' (ವಿರಕ್ತ)ನ ಪಾದೋದಕವನ್ನು ಹಾಕಬೇಕೆಂದು ಹಿಂದಿನ ಕೃತಿಗಳಲ್ಲಿ ಹೇಳಿದೆ. ಸಿಂದಗಿಯ ಪಟ್ಟಾಧ್ಯಕ್ಷರು ತಮ್ಮ 'ಮಗ' (ಎಂದರೆ ತಮ್ಮನ ಮಗ) ವಿರಕ್ತ ಪೀಠಕ್ಕೆ ಮುಖ್ಯಸ್ಥರಾದಾಗ, ಅವರ ಪಾದಗಳಿಗೆ ತಾವೇ ನಮಸ್ಕರಿ ಸುತ್ತಿದ್ದರೆಂದು ಬರಹಗಳಿಂದು[11] ತಿಳಿದುಬರುತ್ತದೆ.

ವಿರಕ್ತರಿಗೆ ಹಿಂದಿನಿಂದ ರಾಜಮಹಾರಾಜರು ಭವ್ಯಮಠ ಮಂದಿರಗಳನ್ನು ಕಟ್ಟಿಸಿಕೊಟ್ಟು ಆಸ್ತಿಪಾಸ್ತಿ ದಾನಮಾಡಿದ್ದಾರೆ. ಭಕ್ತಸಮೂಹವೂ ಆ ಆಸ್ತಿಯನ್ನು ಬೆಳಸಿದೆ. ಹಿಂದಿನ ಆದರ್ಶದಂತೆ ಇಂದಿನ ವಿರಕ್ತರು ಸದಾ ಸಂಚಾರಿಗಳಾಗಿ ಇಲ್ಲ; ಅದರ ಬದಲು ಮಠಗಳಲ್ಲಿ ನೆಲೆಯಾಗಿ ನಿಂತಿದ್ದಾರೆ. ಸ್ವಾರಸ್ಯವೆಂದರೆ, ಸಾಮಾಜಿಕ ವಾಗಿ ಶೈಕ್ಷಣಿಕವಾಗಿ ಹೆಚ್ಚಿನ ಕಾರ್ಯಗಳನ್ನು ಮಾಡಬೇಕಾಗಿದ್ದ ಗುರುಪೀಠಗಳು ಹಿಂದೆ ಬಿದ್ದು, ವೈರಾಗ್ಯವೇ ಪ್ರಧಾನ ಗುಣವಾಗಬೇಕಾದ ವಿರಕ್ತಮಠಗಳು ಹೆಚ್ಚಿನ ಚಟು ವಟಿಕೆಗಳನ್ನು ಕೈಗೊಂಡವು. ಲಿಂಗಾಯತ ಸಮಾಜದ ಜೊತೆ ಹೆಚ್ಚಿನ ಧಾರ್ಮಿಕ ಸಾಮಾಜಿಕ ಸಂಪರ್ಕಗಳನ್ನು ಹೊಂದಿರಬೇಕಾದ ಪಂಚಪೀಠಗಳಿಗಿಂತ, ಅವುಗಳ ಪ್ರತಿ ನಿಧಿಗಳಾದ ಪಟ್ಟದ ಮಠಗಳಿಗಿಂತ ವಿರಕ್ತಮಠಗಳು ಹೆಚ್ಚು ಕ್ರಿಯಾಶೀಲವಾಗಲು ಕಾರಣಗಳೇನು ತಿಳಿಯದು. ವಿರಕ್ತ ಮಠಗಳು ಹೀಗೆ ಕ್ರಿಯಾಶೀಲವಾದದ್ದು ತಪ್ಪು ಎಂದೂ ನಾನು ಹೇಳುತ್ತಿಲ್ಲ. ಈಗೀಗ ಪಟ್ಟದ ಮಠಗಳು ಹೆಚ್ಚು ಹೆಚ್ಚು ಕ್ರಿಯಾ ಶೀಲವಾಗುತ್ತಿರುವುದನ್ನು ಗುರುತಿಸದೆಯೂ ಇಲ್ಲ. ಮುಂದೆ ನಾವು ನೋಡುವಂತೆ, ಹಿಂದೂ ಸಮಾಜದಲ್ಲಿ ಜಾತಿ ಜಾತಿಗಳ ನಿರ್ದಿಷ್ಟ ಕರ್ತವ್ಯಗಳಲ್ಲಿ ಮಿಶ್ರಣ ನಡೆದು ಜಾತಿಯ ಅನುಶ್ರೇಣಿ ತನ್ನ ಖಚಿತತೆಯನ್ನು ಕಳೆದುಕೊಂಡಂತೆ ಇಲ್ಲೂ ಜಂಗಮರಲ್ಲೂ ಕರ್ತವ್ಯಗಳ ಮಿಶ್ರಣ ನಡೆದಿದೆಯೆಂದು ಮಾತ್ರ ನಾನು ಗುರುತಿಸಲು ಬಯಸುತ್ತೇವೆ.

ಇಲ್ಲಿ ನಾನು ಒಂದು ಮಾತನ್ನು-ಮುಂದೆ ಪುನರುಕ್ತವಾಗುವುದಿದ್ದರೂ-ನಾನು ಸ್ಪಷ್ಟ ಪಡಿಸಲೇಬೇಕು. ಗುರುಪೀಠಗಳೂ ವಿರಕ್ತಪೀಠಗಳೂ ಯಾವಾಗ ಹೇಗೆ ಆರಂಭವಾದುವು ಎಂಬ ಐತಿಹಾಸಿಕ ವಿಷಯಕ್ಕೆ ನಾನು ಹೋಗದೆ, ಈಗ ಇರುವಂತೆ

---

11. ಚೆನ್ನಯ್ಯ ಹಿರೇಮಠರು ಸಂಪಾದಿಸಿರುವ "ಸಿಂದಗಿ ಪಟ್ಟಾಧ್ಯಕ್ಷರು" (ಹಾವೇರಿ. 1981) ಕೃತಿಯಿಂದ ಹಲವು ವಿವರಗಳನ್ನು ಪಡೆದಿದ್ದೇನೆ.

ನೋಡಿದರೆ ಅವುಗಳಿಗೆ ಲಿಂಗವಂತ ಸಂಪ್ರದಾಯವು ಬೇರೆ ಬೇರೆ ಕರ್ತವ್ಯಗಳನ್ನು ನಿಯೋಜಿಸಿರುವುದರಿಂದ ಯಾವುದೇ ತಿಕ್ಕಾಟಕ್ಕೂ ಅವಕಾಶವಿಲ್ಲ. ಅವುಗಳಲ್ಲಿ ಒಂದು ಅನುಶ್ರೇಣಿಯನ್ನು ನಾವು ಗುರುತಿಸಲು ಭಾರತೀಯ ಸಂಸ್ಕೃತಿಯ ಪರಿಕಲ್ಪನೆಗಳೇ ಕಾರಣ. ರಾಜ, ಸನ್ಯಾಸಿ ಇಬ್ಬರೂ ದೊಡ್ಡವರು, ಉಪಯುಕ್ತರು, ತತ್ವಶಃ ಸಮಾನರು. ಆದರೆ ಅನುಶ್ರೇಣಿಯನ್ನು ಗುರುತಿಸಲೇಬೇಕಾಗಿ ಬಂದಾಗ ಭಾರತೀಯ ಸಂಸ್ಕೃತಿಯು ಸನ್ಯಾಸಿಯನ್ನು ಮೇಲೆತ್ತಿ ಹಿಡಿಯುತ್ತದೆ. ವಿರಕ್ತ ಮಠಗಳೂ ಪಂಚಪೀಠಗಳೂ ಸಮಾನ, ತಾತ್ವಿಕವಾಗಿ. ಅನುಶ್ರೇಣಿಯ ಪ್ರಶ್ನೆ ಬಂದಾಗ ವಿರಕ್ತ ಪೀಠಗಳಿಗೆ ಮೊದಲ ಸ್ಥಾನ. ಆದರೆ ಈಗ ಅವೆರಡೂ ತಮ್ಮ ತಮ್ಮ ನಿರ್ದಿಷ್ಟ ಕರ್ತವ್ಯಗಳನ್ನು ದಾಟಿ ಆಚೆಗೆ ವಿಸ್ತಾರಗೊಂಡಿವೆ. ವಿರಕ್ತ ಪೀಠಗಳ ಭವ್ಯ ಕಟ್ಟಡ, ವೈಭವದ ದಸರಾ ಉತ್ಸವ ಇವು ಅವುಗಳಿಗೆ ಹೊಂದುವುದಿಲ್ಲ ; ಹೆಚ್ಚಿನ ಆಸ್ತಿ ಹೊಂದಿರುವುದೂ ಒಂದು ರೀತಿಯಲ್ಲಿ ಅನುಚಿತವೇ. ಪಂಚಪೀಠಾಧಿಪತಿಗಳು ಸಾಮಾಜಿಕ ಸಂಪರ್ಕಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಇರಿಸಿಕೊಂಡಂತಿಲ್ಲ. ಗುರುಮಠಗಳು ಪೌರೋಹಿತ್ಯ ಕಾರ್ಯಗಳನ್ನು ಕೈಗೊಳ್ಳುವುದರಿಂದ ಗುರುಗಳು ಬ್ರಾಹ್ಮಣ ಪುರೋಹಿತರಂತೆ ಸಂಸ್ಕೃತ ವಿದ್ವಾಂಸರಾಗಿ ಮಂತ್ರಗಳನ್ನು ಕಲಿಯುವ ಅಗತ್ಯ ಬಿದ್ದುದರಿಂದ ಅವು ಸಂಸ್ಕೃತ ಭಾಷೆ, ಸಂಸ್ಕೃತ ಕೃತಿಗಳ ಕಡೆ ಹೆಚ್ಚು ಒಲವನ್ನು ತೋರಿದುವು. ಸಾಧಕರಾಗಿದ್ದ ವಚನಕಾರರ ಅನುಭಾವಿಕ ಕೃತಿಗಳಾದ ವಚನಗಳತ್ತ, ಅರ್ಥಾತ್ ಕನ್ನಡ ಭಾಷೆ ಮತ್ತು ಕನ್ನಡ ಕೃತಿಗಳತ್ತ ವಿರಕ್ತರು ಹೆಚ್ಚು ಒಲವನ್ನು ತೋರಿದರು. ಆದರೆ, ವಿರಕ್ತರು ಸಂಸ್ಕೃತವನ್ನು ಅಭ್ಯಸಿಸಿದ್ದಾರೆ ; ಪಂಚಪೀಠಾಧ್ಯಕ್ಷರು ಕನ್ನಡವನ್ನು ದೂರೀಕರಿಸಿಲ್ಲ. ಈಗ ಇರುವಂತೆ, ಎರಡೂ ಬಗೆಯ ಮಠಗಳ ಕಾರ್ಯಕ್ಷೇತ್ರಗಳು ಎಷ್ಟೋ ಸಮಾನವಾಗಿವೆ. ಪರಸ್ಪರ ಗೌರವವನ್ನು ಬೆಳಸಿಕೊಂಡು ಪರಸ್ಪರರನ್ನು ಸಮಾನವಾಗಿ ಕಾಣುವ ಧೋರಣೆಯನ್ನು ಅವು ಬೆಳಸಿಕೊಳ್ಳುವುದು ಅವುಗಳ ಅಸ್ತಿತ್ವದ ದೃಷ್ಟಿಯಿಂದಲೂ ಇಂದಿನ ಅಗತ್ಯವಾಗಿದೆ.

3

ಸಮಾರೋಪ

ಜಂಗಮರಲ್ಲಿ ಕಂಡುಬರುವ ಅನುಶ್ರೇಣಿಯ ಘಟಕಗಳಲ್ಲಿ ಕೆಲವು ಸ್ಪಷ್ಟವಾಗಿ ವರ್ಗಗಳು (ಉದಾ: ವಿರಕ್ತರು, ಪಂಚಪೀಠಾಧ್ಯಕ್ಷರು ಮತ್ತು ಪಟ್ಟದ್ದೇವರು); ಇನ್ನು ಕೆಲವು ಸ್ಪಷ್ಟವಾಗಿ ಉಪಜಾತಿಗಳು (ಮಠಸ್ಥರು ಅಥವಾ ಹಿರೇಮಠರು, ಗಣಾಚಾರಿಗಳು, ಮಠಪತ್ತಿಗಳು, ಭಸ್ಮದೈಗಳು ಇತ್ಯಾದಿ.) ಮೂಲತಃ ಯಾವುದೇ ಲಿಂಗವಂತ ಜಾತಿಯವರೂ ಜಂಗಮರಾಗಲು ಒಂದು ಕಾಲಕ್ಕೆ ಅವಕಾಶವಿದ್ದಿತೆಂದು ಹೇಳಲು ಅವಕಾಶವಿರುವುದಾದರೂ, ಈಗ ಮಾತ್ರ ಜಂಗಮ ಎಂಬುದು ಧಾರ್ಮಿಕ ಕ್ರಿಯೆಗಳನ್ನು ನಡೆಸುವ ಎಲ್ಲ ಪುರೋಹಿತ ವರ್ಗದ ವೀರಶೈವರನ್ನೂ ಒಳಗೊಳ್ಳುವಂತೆ ಬಳಕೆಯಾಗುತ್ತಿದೆ.

ಜಂಗಮರಲ್ಲಿನ ಅಥವಾ ಭಕ್ತರಲ್ಲಿನ (ಜಂಗಮೇತರರಲ್ಲಿನ) ಅನುಶ್ರೇಣಿ ಈಗ ಅದೇ ಸ್ಥಿತಿಯಲ್ಲಿಲ್ಲ. ಗಣಾಚಾರಿ, ಮಠಪತಿಗಳು ಸಾಮಾಜಿಕ ಮೇಲ್ಮೆಗಾಗಿ ತಮ್ಮನ್ನು ತಾವು ಮಠಸ್ಥರೆಂದು ಕರೆದುಕೊಂಡು''—ಮಠ'' ಎಂದು ಕೊನೆಯಾಗುವ ವಂಶನಾಮಗಳನ್ನು (surnames) ಇಟ್ಟುಕೊಳ್ಳಲು ಯತ್ನಿಸುತ್ತಿರುವುದು ವರದಿಯಾಗಿದೆ. ಪಂಚಮಸಾಲಿಗಳ ಮೇಲ್ಮೆಯನ್ನು ಬಣಜಿಗರೂ ಸಾದರೂ ಪ್ರಶ್ನಿಸಿದ್ದಾರೆ. ಆರ್ಥಿಕವಾಗಿ ಪಂಚಮಸಾಲಿಗಳಿಗಿಂತ ಪ್ರಬಲರಾಗಿರುವ ಬಣಜಿಗರಿಂದ ಜಂಗಮರು ಹೆಣ್ಣನ್ನು ತಂದುಕೊಳ್ಳಲು ಕೆಲವೆಡೆ ಒಪ್ಪಿ ಬಣಜಿಗರಿಗೆ ಮೇಲ್ಮೆಯನ್ನು ತಂದುಕೊಟ್ಟಿರುವ ನಿದರ್ಶನಗಳು ವರದಿಯಾಗಿವೆ. ಲಿಂಗಾಯತರನ್ನು ಗುರುವರ್ಗ ದೊಡ್ಡದೇ ವಿರಕ್ತವರ್ಗ ದೊಡ್ಡದೇ ಎಂದು ಕೇಳಿದರೆ ಎರಡೂ ಕಡೆಗೆ ವಾದಿಸುವ ಜನ ಸಿಗುತ್ತಾರೆ. ಪ್ರಜ್ಞಾವಂತ ಲಿಂಗಾಯತರು ಅಂತಹ ಪ್ರಶ್ನೆ ಕೇಳಿದರೆ ನಕ್ಕುಬಿಟ್ಟು ಅವರಲ್ಲಿ ನಾವು ಯಾವ ವ್ಯಕ್ತಿ ಶುದ್ಧ ಚಾರಿತ್ರ್ಯವುಳ್ಳವನಾಗಿ ಸಾಮಾಜಿಕ ಹಿತವನ್ನು ಬಯಸುವನೋ ಅವನೇ ದೊಡ್ಡವನೆಂದು ಹೇಳುವ ಧ್ವನಿಯಲ್ಲಿಯೋ ಒಬ್ಬ ಅಸ್ಪೃಶ್ಯ ಜಾತಿಯವನೇ ಆಗಿರಲಿ ಅವನು ಲಿಂಗಾಯತನಲ್ಲದಿದ್ದರೂ ಅವನಲ್ಲಿ ಶ್ರೇಷ್ಠ ಗುಣಗಳಿದ್ದರೆ ಗುರು, ವಿರಕ್ತರಿಗಿಂತ ಅವನನ್ನು ದೊಡ್ಡವನೆಂದು ಕರೆಯಲು ಸಿದ್ಧವೆಂದು ಹೇಳುವ ಜನರಿಗೂ ಕೊರತೆಯಿಲ್ಲ. ಮೇಲಿನ ಅನುಶ್ರೇಣಿಯ ಚರ್ಚೆಯಲ್ಲಿ ನಾನು ಸಾಮಾಜಿಕ ಅನುಶ್ರೇಣಿಯನ್ನು ಅಥವಾ ಸಂಪ್ರದಾಯ ಒಪ್ಪಿಕೊಂಡು ಬಂದಿರುವ ಅನುಶ್ರೇಣಿಯನ್ನು ಲಕ್ಷಿಸಿದ್ದೇನೆಯೇ ಹೊರತು ಆ ಅನುಶ್ರೇಣಿಯ ಸಮರ್ಥನೆಯಾಗಲಿ ಅದು ಉಳಿದು ಬರಲೆನ್ನುವ ಆಶಯವಾಗಲಿ ನನ್ನದು ಅಲ್ಲ ಎಂಬುದನ್ನು ಇಲ್ಲಿ ಹೇಳಲೇಬೇಕಾಗಿದೆ.

ಮಠಗಳ ವ್ಯವಸ್ಥೆಗಳಲ್ಲೂ ಸಾಕಷ್ಟು ಮಿಶ್ರಣಗಳಾಗಿವೆ. ಪಂಚಮಸಾಲಿಗಳೂ ನೊಣಬರೂ ಸಾದರೂ ತಾವೇ ಜಂಗಮರನ್ನು ಮಾಡಿಕೊಂಡು ಮಠಾಧ್ಯಕ್ಷರನ್ನಾಗಿ ಮಾಡಿರುವ ಉದಾಹರಣೆಗಳಿವೆ. ಹೆಚ್ಚಾಗಿ ದಕ್ಷಿಣ ಕರ್ನಾಟಕದಲ್ಲಿ, ಸ್ವಲ್ಪಮಟ್ಟಿಗೆ ಉತ್ತರ ಕರ್ನಾಟಕದಲ್ಲಿ ಮಠಗಳ ಪ್ರಾಬಲ್ಯ, ಹಿಡಿತ ಕಡಿಮೆಯಾಗುತ್ತಿದೆಯೆಂಬುದರ ಹಿನ್ನೆಲೆಯಲ್ಲಿ, ಜಂಗಮ ಜಂಗಮೇತರರ ಮಧ್ಯೆ ಭಕ್ತರ ಉಪಜಾತಿಗಳ ಮಧ್ಯೆ ಅಂತರಮತೀಯ ವಿವಾಹಗಳು ನಡೆಯುತ್ತಿರುವುದರ ಹಿನ್ನೆಲೆಯಲ್ಲಿ ಅನುಶ್ರೇಣಿಗೆ ಧಕ್ಕೆ ಒದಗಿರುವುದನ್ನು ನಾವು ಅರ್ಥ ಮಾಡಿಕೊಳ್ಳಬಹುದು. ಇದೆಲ್ಲವೂ ಸಮಾಜ ಸುಧಾರಣೆಯಲ್ಲಿ ಆಸಕ್ತರಾಗಿರುವವರು ಸ್ವಾಗತಿಸಬೇಕಾದುದು ಎಂಬಲ್ಲಿ ಅನುಮಾನ ವಿಲ್ಲ. ಈ ಎಚ್ಚರದ ಮಾತುಗಳೊಡನೆ ಈಗಲೂ ಉತ್ತರ ಕರ್ನಾಟಕದಲ್ಲಿ ತಕ್ಕ ಮಟ್ಟಿಗೆ ಉಳಿದುಕೊಂಡು ಬಂದಿರುವ ಜಂಗಮರ ಅನುಶ್ರೇಣಿಯನ್ನು ಕುರಿತು ವ್ಯಾಖ್ಯಾನಿಸುವುದು ಅಗತ್ಯವಾಗಿದೆ.

ಲಿಂಗವಂತ ಸಮಾಜವು ಸಿಖ್ ಜನಾಂಗದಂತೆ ಒಂದು ಸ್ವಯಂಪೂರ್ಣ ವಿಶಿಷ್ಟ ಸಮಾಜ: ಪುರೋಹಿತಜಂಗಮ, ನೇಕಾರ, ಬಡಗಿ, ಕುಂಬಾರ, ವರ್ತಕ, ರೈತ, ಚಮ್ಮಾರ ಇವೇ ಮೊದಲಾದ ವೃತ್ತಿಕಾರ ಜನ ಇರುವ ಈ ಲಿಂಗಾಯತ ಸಮಾಜ ಒಂದು ಯಂತ್ರವಿದ್ದಂತೆ. ಯಂತ್ರದ ಒಂದೊಂದು ಬಿಡಿಭಾಗಕ್ಕೂ ತನ್ನದೇ ಕೆಲಸವಿರುವಂತೆ ಲಿಂಗಾಯತಸಮಾಜದ ಬೇರೆ ಬೇರೆ ವರ್ಗ ಅಥವಾ ಉಪಜಾತಿಗಳಿಗೆ ಭಿನ್ನ ಭಿನ್ನ ಕರ್ತವ್ಯಗಳಿವೆ. ಇಡೀ ಲಿಂಗಾಯತ ಸಮಾಜವನ್ನು ಜಂಗಮ, ಭಕ್ತ ಎಂದು ವಿಂಗಡಿಸಿದರೆ, ಭಕ್ತರು ವ್ಯವಸಾಯ, ನೇಕಾರಿಕೆ, ಕುಂಬಾರಿಕೆ, ಕ್ಷೌರ, ವ್ಯಾಪಾರ ಮೊದಲಾದ ದುಡಿಮೆಯ ಕೆಲಸಗಳನ್ನು ಮಾಡುತ್ತ ಸಮಾಜದ ಜೀವನದ ಅಡಿಗಲ್ಲಾಗಿದ್ದರೆ, ಅವರಿಗೆ ಧರ್ಮ ವನ್ನು ಕೊಟ್ಟು ಇಲ್ಲಿಯ ಮತ್ತು ಪರಲೋಕದ ಬದುಕನ್ನು ಅರ್ಥಪೂರ್ಣವನ್ನಾಗಿ ಮಾಡುವ ಕಾರ್ಯವನ್ನು ಕೈಗೊಳ್ಳುವವರು ಜಂಗಮರು. ಭಕ್ತರಲ್ಲಿ ಪಂಚಮಸಾಲಿ ಗಳನ್ನು ಒಂದು ಶ್ರೇಷ್ಠ ಜಾತಿಯೆಂದು ಕಲ್ಪಿಸುವ ಅಗತ್ಯವಿದ್ದಿತು. ಒಳವಿವಾಹ ಪದ್ಧತಿಯ ಜಂಗಮನಿಗೆ ಸೂಕ್ತ ಹೆಣ್ಣು ದೊರಕದಿದ್ದಾಗ ಹೊರಗಡೆಯಿಂದ ಹೆಣ್ಣು ತರಬಹುದಾದ ಒಂದು ಜಾತಿಯ ಅಗತ್ಯವಿದ್ದೇ ಇರುತ್ತದೆ. ಜಂಗಮ ಹೆಣ್ಣಿಗೆ ಸೂಕ್ತ ಗಂಡು ದೊರಕದಿದ್ದರೆ ಏನು ಮಾಡಬೇಕು ಎಂಬ ಪ್ರಶ್ನೆ ಅಪ್ರಸ್ತುತ: ಹೆಣ್ಣಾದ್ದರಿಂದ ಯಾವುದಾದರೂ ಜಂಗಮ ಗಂಡಿಗೆ ಕೊಟ್ಟರಾಯ್ತು! ಪುರುಷ ಪ್ರಾಬಲ್ಯದ, ಅನುಲೋಮ ವಿವಾಹ ಪದ್ಧತಿಯನ್ನು ಮನ್ನಿಸಿರುವ ಸಮಾಜದಲ್ಲಿ ಇದು ಅನಿರೀಕ್ಷಿತವಲ್ಲ.

ಜಂಗಮರ ಅನುಶ್ರೇಣಿಯು ಹಿಂದೂ ಸಮಾಜದ ಒಂದು ಛಾಯೆ. ಇಲ್ಲಿ ವಿರಕ್ತನಿಗೆ ಅಗ್ರಸ್ಥಾನ. ಅವನಿಗೆ ನಿರ್ದಿಷ್ಟ ಸಾಮಾಜಿಕ ಹೊಣೆ ಇಲ್ಲದಿದ್ದರೂ ದೇಶ ಸಂಚಾರ ಮಾಡುತ್ತ, ಅಥವಾ ಒಂದೆಡೆ ನಿಂತರೂ ನೈಷ್ಠಿಕ ಬ್ರಹ್ಮಚಾರಿಯಾಗಿ ಉಳಿದು ಧರ್ಮ ಬೋಧನೆ ನೀತಿ ಬೋಧನೆ ಮಾಡುವ ಕರ್ತವ್ಯ ಅವನದು. ಅವನಿಗೆ ಲಿಂಗದೀಕ್ಷೆ, ನಾಮಕರಣ, ವಿವಾಹದಲ್ಲಿ ಪೌರೋಹಿತ್ಯ ಮೊದಲಾದ ಹೊರೆಗಳು ನಿಷಿದ್ಧ: ಅವುಗಳಿಗೆ ಅವನು ಕೈಹಾಕಬಾರದು, ಕೈಹಾಕಲು ಹಕ್ಕಿಲ್ಲ. ಅವನಿಗೆ ಮಠಮಾನ್ಯಗಳ ಅಗತ್ಯವಿಲ್ಲ: ಇದ್ದರೂ ಅವು ಕನಿಷ್ಠ ಪ್ರಮಾಣದಲ್ಲಿ. ಒಂದು ರೀತಿಯಲ್ಲಿ ಅವನೇ ನಿಜವಾದ "ಜಂಗಮ". ವಿರಕ್ತರಲ್ಲೂ ಮೂರು ಬಗೆ: ಒಂದೆಡೆ ಚಿಕ್ಕ ಮಠ ಮಾಡಿಕೊಂಡು, ತನ್ನಷ್ಟಕ್ಕೆ ತಾನು ಶಿವಾನುಸಂಧಾನವನ್ನು ಮಾಡುತ್ತ, ತನ್ನಲ್ಲಿಗೆ ಬಂದ ಜನರಿಗೆ ಧರ್ಮೋಪದೇಶ ಮಾಡುವ 'ಸ್ವಯಂ ಜಂಗಮ'; ಹಲವಾರು ಶಿಷ್ಯರೊಡನೆ ದೇಶ ಸಂಚಾರ ಮಾಡುತ್ತ ಅವರಿಗೆ ವಿದ್ಯೆಯನ್ನೂ ಧರ್ಮಮಾರ್ಗವನ್ನೂ ಬೋಧಿಸುತ್ತಲೇ ಜನರಿಗೂ ಧರ್ಮ ಬೋಧನೆ ಮಾಡುವ 'ಚರ ಜಂಗಮ'; ತಾನೊಬ್ಬನೇ ಸದಾ ಸಂಚರಿಸುತ್ತ ಆತ್ಮಾನುಸಂಧಾನ

ದಲ್ಲಿ ಕಾಲವನ್ನು ಕಳೆಯುತ್ತ ತನ್ನನ್ನು ಕಂಡ ಜನರನ್ನೂ ತಾನು ಕಾಲಿಟ್ಟ ಪ್ರದೇಶವನ್ನೂ ಪವಿತ್ರಗೊಳಿಸುವ 'ಪರ ಜಂಗಮ'. ಈಗ ಇರುವ ವಿರಕ್ತರೆಲ್ಲ 'ಸ್ವಯ ಜಂಗಮರು'– ಅವರ ಕೆಲವು ಮಠಗಳು ಮಾತ್ರ ಚಿಕ್ಕವೇನೂ ಅಲ್ಲ. ಗುರು ಪೀಠಗಳಲ್ಲಿನಂತೆ ವಿರಕ್ತ ಮಠಗಳೂ ಚೀಲಾಳ ಸಮಯ, ಕೆಂಪಿನ ಸಮಯ, ಕುಮಾರ ಸಮಯ, ಮುರುಘಾ ಸಮಯ, ಸಂಪಾದನೆ ಸಯಾಮ ಎಂಬ ತಾತ್ವಿಕ ಅಥವಾ ರಾಚನಿಕ ವ್ಯತ್ಯಾಸಗಳೇನೂ ಇಲ್ಲದ ಐದು ಶಾಖೆಗಳನ್ನು ಹೊಂದಿವೆ.

ಮತ (religion) ಎಂದರೆ ಮುಖ್ಯವಾಗಿ ಸಂಸ್ಕಾರಗಳು, ಕರ್ಮಾಚರಣೆಗಳು. ಸಂಸ್ಕಾರಗಳು ಸಾಮಾನ್ಯನಂತೆ ಹುಟ್ಟಿರುವ ಮನುಷ್ಯನನ್ನು ಒಂದು ಪರಂಪರೆಗೆ ಬಂಧಿಸುತ್ತವೆ, ಸಂಸ್ಕರಿಸುತ್ತವೆ; ಆ ಸಮಾಜದ ಅರ್ಥಪೂರ್ಣಭಾಗವಾಗಿ ಅವನನ್ನು ಪರಿವರ್ತಿಸುತ್ತವೆ. ಈ ಅಗತ್ಯ ಸಂಸ್ಕಾರಗಳನ್ನು ಲಿಂಗಾಯತರಿಗೆ ಕೊಡುವ ಹೊಣೆ ಪಂಚಪೀಠಗಳದ್ದು. ಅವರಿಗೆ ಮಠ, ಮಾನ್ಯ, ವೈಭವ ಅಗತ್ಯ. ಅವರಿಗೆ ಹಲವು ಹಕ್ಕುಗಳಿವೆ. ಅವರು ಧರ್ಮ ಸಾಮ್ರಾಜ್ಯದ ಉನ್ನತ ಪ್ರಭುಗಳು. ಅವರ ಪ್ರತಿನಿಧಿಗಳಾಗಿರುವವರು ದೇಶದ ಬೇರೆಬೇರೆ ಭಾಗಗಳಲ್ಲಿನ ಪಟ್ಟಾಧ್ಯಕ್ಷರು. ಪಟ್ಟಾಧ್ಯಕ್ಷರು ಒಂದು ವೇಳೆ ಅನೀತಿವಂತರಾದರೆ ಅವರನ್ನು ತೆಗೆದು ಹಾಕುವ ಅಧಿಕಾರ ಆಯಾ ಪಂಚಪೀಠದ ಅಧ್ಯಕ್ಷರಿಗೆ ಉಂಟು (ಅವರಿಗಿಂತ ಮೊದಲೇ ಭಕ್ತ ಜನ ಅವರನ್ನು ತೆಗೆದುಹಾಕಿ ಬಿಡುತ್ತಾರೆ, ಎಂದೂ ಹೇಳಲಾಗಿದೆ). ಪಟ್ಟಾಧ್ಯಕ್ಷರು ಎಲ್ಲ ಊರುಗಳಲ್ಲಿಯೂ ಇರುವುದಿಲ್ಲವಾದ್ದರಿಂದ, ಇವರೂ ಇವರ ಕೆಳಗೆ ಎಲ್ಲ ಊರುಗಳಲ್ಲಿಯೂ ಇರುವ ಮಠಸ್ಥರೂ–ಹಿರೇಮಠರು–ಜನರ ಎಲ್ಲ ಬಗೆಯ ಧಾರ್ಮಿಕ ಸಂಸ್ಕಾರಗಳನ್ನು ನೆರವೇರಿಸುತ್ತಾರೆ. ಪೀಠಾಧ್ಯಕ್ಷರೂ ಪಟ್ಟಾಧ್ಯಕ್ಷರೂ ಹಿರೇಮಠರೂ ಕೆಲವರು ಜ್ಯೋತಿಷ್ಯ, ಮಂತ್ರ ತಂತ್ರ, ಔಷಧಿಗಳಲ್ಲಿ ನಿಷ್ಣಾತರಾಗಿ ಜನರಿಗೆ ನೇರ ಸೇವೆಯನ್ನು ಒದಗಿಸುತ್ತಾರೆ. ಅವರ ಮಠಗಳು ಧಾರ್ಮಿಕ ಪ್ರವಚನ, ಪುರಾಣ ಗೋಷ್ಠಿಗಳ ಮೂಲಕ ಜನರ ಧಾರ್ಮಿಕ ಪ್ರಜ್ಞೆಯು ನಂದದಂತೆ ನೋಡಿಕೊಳ್ಳುತ್ತವೆ. ಪಟ್ಟದ್ದೇವರ ಅಥವಾ ಪಟ್ಟಾಧ್ಯಕ್ಷರ ಮತ್ತು ಹಿರೇಮಠರ ಕೈಕೆಳಗೆ ಗಣಾಚಾರಿ, ಮಠಪತ್ತಿಗಳಿದ್ದು ಅವರಿಗೆ ಸಹಾಯಕರಾಗಿ ಕೆಲಸ ಮಾಡುತ್ತಾರೆ. ಮುಖ್ಯವಾಗಿ ಗಣಾಚಾರಿ ಊರಿನ ಜನಕ್ಕೂ ಮಠಕ್ಕೂ ಸಂಪರ್ಕವನ್ನು ಕಲ್ಪಿಸುವ ಸಂದೇಶವಾಹಕ. ಮಠಸ್ಥನು ಮಂಗಳ ಸಮಾರಂಭದಲ್ಲಿ ಉಪಸ್ಥಿತನಿರುವಾಗ ದೈಹಿಕ ಶ್ರಮದ ಕೆಲಸಗಳನ್ನು ಮಠಪತ್ತಿ ಮಾಡುತ್ತಾನೆ. ಶವಸಂಸ್ಕಾರದಲ್ಲಿ ಅವನದು ಪ್ರಮುಖ ಪಾತ್ರ. (ಬ್ರಾಹ್ಮಣರಲ್ಲಿ ಶ್ರಾದ್ಧದ ಪುರೋಹಿತರು ಉಳಿದ ಪುರೋಹಿತರಿಗಿಂತ ಕೀಳು ಎಂಬುದು ಇಲ್ಲಿ ಸ್ಮರಿಸಬೇಕಾದ್ದು). ಇವರಲ್ಲದೆ ಭಸ್ಮವನ್ನು ತಯಾರಿಸುವ ವಿಭೂತಿ ಐಗಳು, ಲಿಂಗಕ್ಕೆ ಕಂತೆ ಬಿಗಿಯುವ ಕಂತೆ ಐಗಳು, ಲಿಂಗ

ವಸ್ತ್ರವನ್ನು ಒದಗಿಸುವ ವಸ್ತ್ರದವರು ಇವರೆಲ್ಲ ಒಪ್ಪಿತ ಅನುಶ್ರೇಣಿಯಲ್ಲಿ ಹೊಂದಿಕೊಂಡು ಕೆಲಸ ಮಾಡುತ್ತಾರೆ. ಈ ಒಟ್ಟು ಕರ್ತವ್ಯ ವಿಭಜನೆ ಜಂಗಮರು ಒಂದು ವ್ಯವಸ್ಥೆಯಾಗಿ ತಮ್ಮ ಪಾತ್ರವನ್ನು ವಹಿಸಲು ಸಹಾಯಕವಾಗಿದೆ.

ಒಂದು ಚಿಂತನೆ

ಈ ಭಾಗ ಈ ಬರಹಕ್ಕೆ ಸ್ವಲ್ಪ ಹೊರತಾದುದು. ಮೇಲೆ ಎಲ್ಲೂ ನಾನು ಮೌಲ್ಯ ನಿರ್ಣಯ ಕೊಡಲು ಹೋಗಿಲ್ಲ. ಈಗಲೂ ಅದನ್ನು ಆದಷ್ಟು ಹತೋಟಿಯಲ್ಲಿಟ್ಟುಕೊಂಡು ಈ ಮಾತುಗಳನ್ನು ಹೇಳುತ್ತಿದ್ದೇನೆ. ಲಿಂಗಾಯತ ಸಮಾಜ ಅಥವಾ ವೀರಶೈವ ಧರ್ಮ ಎಂಬುದೊಂದು ಇರಬೇಕಾದರೆ ಮಠಗಳೂ ಜಂಗಮರೂ ಅಗತ್ಯ. (ಲಿಂಗಾಯತ ಸಮಾಜ ಪ್ರತ್ಯೇಕವಾಗಿ ಇರಬೇಕಿಲ್ಲವೆಂದಾದರೆ ಆಗ ಉತ್ತರ ಸ್ಪಷ್ಟವಾಗಿದೆ). ಯಾವುದೇ ಮತದ ಪ್ರವರ್ತಕರಾಗಿ ಸಂರಕ್ಷಕರಾಗಿ ಸಂಕೇತವಾಗಿ ಮಠಗಳಂತಹ ಸಂಸ್ಥೆಗಳೂ ಜಂಗಮರಂತಹ ಪುರೋಹಿತ ವರ್ಗವೂ ಅಗತ್ಯ. ಈಗ ಇರುವಂತೆ ಹುಟ್ಟಿನಿಂದ ಜಂಗಮ ಪುರೋಹಿತ ಎಂಬುದು ಹೋಗಿ, ಕ್ರಿಶ್ಚಿಯನ್ನರಲ್ಲಿರುವಂತೆ– ಲಿಂಗಾಯತರಲ್ಲೇ ಸಾದರಲ್ಲಿ ನೊಣಬರಲ್ಲಿ ಇರುವಂತೆ ಶಿಕ್ಷಣದಿಂದ ಪುರೋಹಿತ ಎಂಬುದಾದರೆ ಎಷ್ಟೋ ಸಮಸ್ಯೆಗಳು ಪರಿಹಾರವಾಗುತ್ತವೆ. ಆಗ ಜಂಗಮತ್ವ ಎಂಬುದು ಒಂದು ಕರ್ತವ್ಯವಾಗುತ್ತದೆ. ಅಂತಹ ಜಂಗಮ ಯಾವುದೇ ಲಿಂಗಾಯತ ಜಾತಿಯಲ್ಲಿ ಮದುವೆ ಆಗಬಹುದು.ಅವನ ಮಕ್ಕಳು ಜಂಗಮರಾಗಿರುವುದಿಲ್ಲ; ಲಿಂಗಾಯತರಾಗಿರುತ್ತಾರೆ. ವಿರಕ್ತ ಅಥವಾ ಪಂಚಪೀಠ ಅಥವಾ ಪಟ್ಟದ್ದೇವರ ಮಠಗಳಿಗೆ ಹರಿಜನಲಿಂಗಾಯತರೂ ಸೇರಿದಂತೆ ಯಾವುದೇ ಲಿಂಗಾಯತರೂ ಶಿಕ್ಷಣದಿಂದ ಸ್ವಾಮಿ ಆಗುವಂತಹ ವ್ಯವಸ್ಥೆ ಅತ್ಯಂತ ಆರೋಗ್ಯಕರ. ವಿರಕ್ತಮಠ, ಪಂಚಪೀಠ ಮಠ ಎಂಬ ಭೇದ ಹೋಗಬೇಕಾಗಿಲ್ಲ.ಹಿಂದೆ ಒಂದು ಕಾಲಕ್ಕೆ ಇದ್ದ ಕರ್ತವ್ಯ ಭೇದದ ವ್ಯವಸ್ಥೆ ಚನ್ನಾಗಿದ್ದಿತಾದರೂ, ಈಗಿನ ಸ್ಥಿತಿಯಲ್ಲಿ ಮತ್ತೆ ಆ ಹಿಂದಿನ ವ್ಯವಸ್ಥೆಗೆ ಹೋಗಲು ಸಾಧ್ಯವಿಲ್ಲವಾದರೂ, ದೀಕ್ಷೆ ಕೊಡುವುದು ನಾಮಕರಣ, ವಿವಾಹ, ಮರಣಗಳಲ್ಲಿ ಪೌರೋಹಿತ್ಯ, ಅಪರ ಕರ್ಮಗಳನ್ನು ಕೈಗೊಳ್ಳುವುದು ಇಂತಹ ಕರ್ತವ್ಯಗಳನ್ನು ಪಂಚಪೀಠ ಶಾಖಾಮಠಗಳು ವಹಿಸಿಕೊಂಡು, ವಿರಕ್ತಮಠಗಳು ಜ್ಞಾನಾರ್ಜನೆಯ ಕಡೆ ಹೆಚ್ಚು ಗಮನಕೊಟ್ಟು, ಎರಡೂ ಮಠಗಳು ಸಮಾನವಾಗಿಯೇ ಶಾಲಾಕಾಲೇಜುಗಳನ್ನು ನಡಸುವುದು, ಆಸ್ಪತ್ರೆಗಳನ್ನು ತೆರೆಯುವುದು, ಪುಸ್ತಕ ಪ್ರಕಟಣೆ ಇವೇ ಮೊದಲಾದ ಕಾರ್ಯಗಳನ್ನು ಕೈಗೊಳ್ಳಬಹುದು. ರೇವಣಸಿದ್ಧ ಮತ್ತು ಅಲ್ಲಮರು ಸಮಕಾಲೀನರೇ ಆಗಿರುವುದರಿಂದ, ಪಂಚಪೀಠ ಮತ್ತು ವಿರಕ್ತ ಮಠಗಳೆರಡಕ್ಕೂ ಸಮಾನ ಪ್ರಾಚೀನತೆಯ ಬೆಂಬಲವಿದೆ. ಎರಡೂ ಪಂಗಡದ ಮಠಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ತಾವು ಅಗ್ರಗಣ್ಯವೆಂಬುದನ್ನು ನೆನಪಿನಲ್ಲಿಟ್ಟುಕೊಂಡು ಸೌಹಾರ್ದವನ್ನು ಇನ್ನೂ ಹೆಚ್ಚು ಸಾಧಿಸುವುದಾದರೆ ಆಗ ಲಿಂಗಾಯತ ಸಮಾಜ ಇನ್ನೂ ಮುಂದೆ ಬಂದೀತು. ನಾನೇನೋ,

ತತ್ವಶಃ ವಿರಕ್ತರು ಗುರುವರ್ಗದವರಿಗಿಂತ ಮೇಲಿನವರೆಂದು ಸೂಚಿಸಿದ್ದರೂ ನನ್ನ ಬರಹ ಹೆಚ್ಚಿನ ಅಸಮಾಧಾನಕ್ಕೂ ವಿರಸಕ್ಕೂ ಕಾರಣವಾಗಬಹುದೆಂದು ಕೆಲವರು ಎಚ್ಚರಿಸಿದ್ದಾರೆ. ವಾಸ್ತವ ಸಂಗತಿಗಳನ್ನು ಮುಚ್ಚಿಡುವುದು ಸಮಸ್ಯೆಗೆ ಪರಿಹಾರವಲ್ಲವೆಂದೂ, ನನ್ನ ಬರಹದಲ್ಲಿ ಅಪ್ರಿಯವಾದುದನ್ನು ಉದ್ದೀಪನಗೊಳಿಸುವ ಉದ್ದೇಶವಿಲ್ಲವೆಂದೂ ಇಲ್ಲಿ ಹೇಳಿಕೊಳ್ಳಬೇಕಾಗಿದೆ. ಸಮಾಧಾನದ ಸಂಗತಿಯೆಂದರೆ ಎಷ್ಟೋ ಮಠಗಳು ಪಂಚಾಚಾರ್ಯರ ಬಗ್ಗೆಯೂ ಬಸವ ಅಲ್ಲಮ ತೋಂಟದ ಸಿದ್ಧಲಿಂಗಯತಿಗಳ ಬಗ್ಗೆಯೂ ಸಮಾನ ಆದರ ಭಾವವನ್ನು ವ್ಯಕ್ತಪಡಿಸಿ ಮಾರ್ಗವನ್ನು ಹಾಕಿಕೊಟ್ಟಿವೆ. ಈ 'ಉಪದೇಶ'ದ ಮಾತುಗಳು ಬಹುಮುಖ್ಯವಾದರೂ ಪ್ರಾಸಂಗಿಕವೆಂದೂ, ಈಗ ಅಳಿಯುತ್ತಿರುವ ಅಥವಾ ಮಸುಕಾಗುತ್ತಿರುವ ಜಂಗಮ ಅನುಶ್ರೇಣಿಯನ್ನು ದಾಖಲುಗೊಳಿಸುವುದು ನನ್ನ ಉದ್ದೇಶವೆಂದೂ ಇಲ್ಲಿ ಮತ್ತೊಮ್ಮೆ ಒತ್ತಿ ಹೇಳಲು ಬಯಸುತ್ತೇನೆ. ಈ ಬರಹದ ಮುಖ್ಯ ಉದ್ದೇಶ ವಸ್ತುಸ್ಥಿತಿಯ ವಿಶ್ಲೇಷಣೆ ಮತ್ತು ವಾಸ್ತವ ತಿಳಿವಳಿಕೆಯೇ ಆಗಿದ್ದರೂ, ಸಮಾಜವಿಶ್ಲೇಷಕನ ಮಾತಿನಲ್ಲಿ ಸಮಾಜಸುಧಾರಣೆಯ ಸೂಚನೆಗಳಿಗೆ ಸ್ಥಾನ ಇರಬಾರದೆಂದೇನೂ ಇಲ್ಲ.

ಅನುಬಂಧ-1

ಅಮ್ಮಿನಬಾವಿಯ ಪಂಚಗೃಹ ಹಿರೇಮಠದ ಬಗ್ಗೆ ನಿರ್ದಿಷ್ಟಾಧ್ಯಯನ

ಧಾರವಾಡಕ್ಕೆ ಎಂಟು ಮೈಲಿ ದೂರದಲ್ಲಿರುವ ಅಮ್ಮಿನ ಬಾವಿಯ (ಹಿಂದಿನ ಹೆಸರು 'ಅಮ್ಮಯ್ಯನ ಬಾವಿ') ಪಂಚಗೃಹ ಹಿರೇಮಠ ಎಂಬ ಮಠವನ್ನು ಕುರಿತಂತೆ 1979 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ದ್ವಿತೀಯ ಎಂ.ಎ. ವಿದ್ಯಾರ್ಥಿಗಳ ಸಹಾಯದಿಂದ ನಡೆಸಿದ ನಿರ್ದಿಷ್ಟಾಧ್ಯಯನದ (case study) ಸಂಕ್ಷಿಪ್ತ ವರದಿಯನ್ನು ಇಲ್ಲಿ ಕೊಡುತ್ತಿದ್ದೇನೆ. "ಪಟ್ಟದ್ದೇವರು" ಸಮಾಜದಲ್ಲಿ ವಹಿಸುವ ಸಮಾಜೋಧಾರ್ಮಿಕ ಪಾತ್ರವನ್ನು ಇಲ್ಲಿ ವಾಸ್ತವವಾಗಿ ಕಾಣಬಹುದು.

ಚರಿತ್ರೆ

ಪಂಚಗೃಹ ಹಿರೇಮಠಕ್ಕೆ ಒಟ್ಟು ಐದು ಊರುಗಳ ಹಿರೇಮಠಗಳ ಮೇಲೆ ಅಧಿಕಾರವಿದೆಯಾದ್ದರಿಂದ "ಪಂಚಗೃಹ ಹಿರೇಮಠ" ಎಂಬ ಹೆಸರು ಆ ಮಠಕ್ಕಿದೆ. ಕರಡೀಗುಡ್ಡ, ತಿಮ್ಮಾಪುರ, ಮರೇವಾಡ, ಕೌಲಗೇರಿ, ಚಂದನಮಟ್ಟಿ ಎಂಬ ಆ ಐದು ಊರುಗಳಲ್ಲಿ ಮೊದಲ ಎರಡು ಊರುಗಳಲ್ಲಿ ಈಗಲೂ ಮಠಗಳಿವೆ; ಉಳಿದ ಮೂರು ಊರುಗಳಲ್ಲಿ ಇದ್ದ ಮಠಗಳು ಹಾಳಾಗಿದ್ದರೂ ಈಗಲೂ ಅವುಗಳ ಜಾಗ ಇವೆ. ಪಂಚಗೃಹ ಹಿರೇಮಠದ 'ಚರಿತ್ರೆ'ಯನ್ನು ಈಚಿನವರು ಬರೆದಿಟ್ಟಿರುವ ಪ್ರಕಾರ ಹೀಗಿದೆ :

300-400 ವರ್ಷಗಳ ಹಿಂದೆ ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕು ಬ್ಯಾಲಹುಣಸಿ ಗ್ರಾಮದ ಪುತ್ರ ವರ್ಗದ ಹಿರೇಮಠದ ಶ್ರೀ ಶಾಂತವೀರ ಸ್ವಾಮಿಗಳೆಂಬುವರು ಕೇವಲ ಹಣಕ್ಕಾಗಿ ಬದುಕುತ್ತಿದ್ದ ಅಣ್ಣತಮ್ಮಂದಿರ ಮಧ್ಯೆ ಬದುಕಲು ಮನಸ್ಸಾಗದೆ ದೋಣಿಯಲ್ಲಿ ಪಕ್ಕದ ತುಂಗಭದ್ರಾ ನದಿಯನ್ನು ದಾಟಿ ಸಂಚಾರ ಮಾಡುತ್ತ ಅಮ್ಮಿನ ಬಾವಿಗೆ ಬಂದು ಅಲ್ಲಿ ಅಂತ್ಯಜರು ತೋಡಿದ್ದೆಂದು ನಂಬಲಾದ ದೊಡ್ಡ ಬಾವಿಯಲ್ಲಿ ಸ್ನಾನಮಾಡಿ ಪೂಜೆ ಮುಗಿಸಿದರು. ಜಾತಿಗಿಂತ ಅವರಿಗೆ ನೀತಿ ಮುಖ್ಯವಾಯ್ತು. (ಹಣಮ ಎಂಬ ಅಂತ್ಯಜ ತಾನು ಕಟ್ಟಿಸಿ ಊರಿಗೆ ಬಿಟ್ಟುಕೊಟ್ಟದ್ದರಿಂದ ಹಣಮನಬಾವಿ ಅಥವಾ ಅಮ್ಮಿನ ಬಾವಿ ಎಂಬ ಹೆಸರು ಬಂದಿತೆಂಬ ಕತೆ ಸಂಪೂರ್ಣ ಕಾಲ್ಪನಿಕ). ಮುಂದೆ ಆ ಊರಿನ ಗ್ರಾಮ ದೇವತೆಯ ಆದೇಶದಂತೆ ಅಲ್ಲೇ ನೆಲಸಿದರು. ಆಗ, ಸರ್ಪ ಮುಂಗಸಿಗಳ ಜಗಳ ದಲ್ಲಿ ಸರ್ಪ ಗೆದ್ದುದನ್ನು ಕಂಡ ಜನ ಶಾಂತವೀರಸ್ವಾಮಿಗಳು ಮಹಿಮರೆಂದು ತಿಳಿದು ಸ್ವಾಮಿಗಳಿಗೂ ದೇವಿಗೂ ಮಠ ಕಟ್ಟಿದರು. ಮುಂದೆ, ಕಳ್ಳರು ಬಂದಾಗ ಅದೇ ಸರ್ಪ ಅವರನ್ನು ಓಡಿಸಿತು. ಮುಸಲ್ಮಾನರ ದಂಡು ಊರಿಗೆ ನುಗ್ಗಿದಾಗ ಸ್ವಾಮಿ ಗಳ ಮಹಿಮೆಯಿಂದ ಅವರ ಕಣ್ಣು ಮಂಕಾದುವು. ಸ್ವಾಮಿಗಳು ಜನರಿಗೆ ತೊಂದರೆ ಕೊಡಬಾರದೆಂದು ಸರ್ಪಕ್ಕೆ ಆದೇಶ ನೀಡಿ ನಿಶ್ಚಿತದಿನ ಶಿವೈಕ್ಯರಾದರು. ಅವರೇ ಮಠದ ಮೂಲ ಪುರುಷರೆಂದು ಕತೆ ಹೇಳುತ್ತದೆ. ಈಗಿನ ಮಠದ ಭವ್ಯ ಕಟ್ಟಡವನ್ನು ಕ್ರಿ.ಶ. 1894 ರಂದು ಕಟ್ಟಲಾಗಿದೆಯಾದ್ದರಿಂದ ಮಠದ ಪರಂಪರೆ ಕೊನೆಯ ಪಕ್ಷ ನೂರು ನೂರೈವತ್ತು ವರ್ಷಗಳಷ್ಟು ಹಳೆಯದೆಂಬುದು ಸ್ಪಷ್ಟ ವಾಗಿದೆ.

ಮಠದ ಕಟ್ಟಡ

ಮಠದ ಕಟ್ಟಡ ಅತ್ಯಂತ ಭವ್ಯವಾಗಿದ್ದು ಅದರ ಮೇಲ್ಭಾಗದಲ್ಲಿ "ಶ್ರೀ ಶಾಂತೇಶ್ವರ ಪ್ರಸನ್ನ ಶ್ರೀ ಶಕೆ 1816 ಜಯ ಸಂವತ್ಸರ ವೈಶಾಖ ಶುದ್ಧ 12 ಬುಂ ಮಹಾದ್ವಾರ ಕಟ್ಟಿಸಿದ್ದು ಸನ್ 1894ನೇ ಇಸವಿ" ಎಂದಿದೆ. ದ್ವಾರ ಬಾಗಿಲು ಸುಮಾರು 50 ಅಡಿಗಳಷ್ಟು ಎತ್ತರವಿದ್ದು ಬಾಗಿಲಿನ ಎರಡೂ ಮಗ್ಗಲಿಗೆ ಹೂವಿನಾಕಾರದ ಕುಸುರಿ ಕೆತ್ತನೆ ಇದೆ. ಬಾಗಿಲ ಹೊಸ್ತಲಿನಲ್ಲಿ ಆಮೆಯ ಚಿತ್ರ ವನ್ನು ಕಲ್ಲಲ್ಲಿ ಕೆತ್ತಲಾಗಿದೆ. (ಆಮೆ ಒಂದು ಕಟ್ಟಡ ಬಹುಕಾಲ ಉಳಿಯುವುದೆಂಬ ಆಶಯದ ಸಂಕೇತ) ಮಹಾದ್ವಾರದ ಬಾಗಿಲು 9-10 ಅಡಿ ಎತ್ತರವಾಗಿದ್ದು ಮೇಲ್ಭಾಗದಲ್ಲಿ ಸಿಂಹ ಮುಖವೂ ಅದರ ಸ್ವಲ್ಪ ಕೆಳಗೆ ಸರ್ಪದ ಕಾವಲಿರುವ ಶಿವಲಿಂಗಮೂರ್ತಿಯ ಚಿತ್ರವೂ ಇದೆ. ಬಾಗಿಲಿನ ತೀರ ಮೇಲ್ಭಾಗದಲ್ಲಿ ಕೋಣೆ ಗಳಂತಹ ಮೂರು ಭಾಗಗಳಿದ್ದು ಅದಕ್ಕೆ ಅಂಬಾರಗಾನಿ ಎಂದು ಕರೆಯಲಾಗು

ತ್ತಿದೆ. ಅಲ್ಲಿ 40–50 ವರ್ಷಗಳ ಹಿಂದೆ ಬೆಳಿಗ್ಗೆ ಸಂಜೆ ನಗಾರಿಯನ್ನು ಬಾರಿಸಲಾಗುತ್ತಿತ್ತು.

ಮಹಾದ್ವಾರದ ಎಡ ಮಗ್ಗುಲಿಗೆ ಒಳಭಾಗದಲ್ಲಿ ವೀರಶೈವ ಮತ ಸ್ಥಾಪನಾಚಾರ್ಯರೆಂದು ನಂಬಲಾದ ರೇಣುಕಾಚಾರ್ಯರ ಕುರುಹಾದ ಬಿಳಿಯ ಧ್ವಜವಿದ್ದು ಪ್ರತಿವರ್ಷ ರೇಣುಕ ಜಯಂತಿಯಂದು ಸ್ವಾಮಿಗಳು ಅದಕ್ಕೆ ಪೂಜೆ ಸಲ್ಲಿಸುತ್ತಾರೆ. ಮಹಾದ್ವಾರಕ್ಕೆ ಒಳಭಾಗದಲ್ಲಿ ಬಲಗಡೆ ಅದಕ್ಕೆ ಹೊಂದಿಕೊಂಡಂತೆ ಹಿಂದಿನ ಅಡಿಗೆ ಮನೆ ಇದೆ. ಮಹಾದ್ವಾರ ಪ್ರವೇಶಿಸಿದರೆ ಮಠದ ಅಂಗಳ ; ಎಡಗಡೆಯಂದೇ 'ಸದರ' (ಮಠದ ಕಟ್ಟಡದ ಮುಂಭಾಗ). ಈ ಸದರ ಅಥವಾ ಸದಣದಲ್ಲಿ ಸಭೆಗಳು ('ದರ್ಬಾರು') ನಡೆಯುತ್ತಿದ್ದುವು. ಮುಂಭಾಗದಲ್ಲಿ ದೊಡ್ಡ ಮರದ ಕಂಬಗಳು ಅಟ್ಟವನ್ನು ಹೊತ್ತಿವೆ. ಮೇಲ್ಭಾಗದಲ್ಲಿ ಸೂಕ್ಷ್ಮ ಕೆತ್ತನೆಯ ಕೆಲಸಗಳಿವೆ. ಸಿಂಹ, ಗಿಳಿ, ಬಳ್ಳಿಗಳ ಕೆತ್ತನೆಯ ಜೊತೆ ಅಲ್ಲಲ್ಲೇ ಭಗವದ್ಗೀತೆಯನ್ನು ನೆನಪಿಗೆ ತರುವ ಮತ್ತು ಕಾಮದಹನ, ತ್ರಿಪುರಸಂಹಾರ, ಕರ್ಣಾರ್ಜುನ ಕಾಳಗ ಮೊದಲಾದ ಸುಂದರ ವರ್ಣ ಚಿತ್ರಗಳಿವೆ. ಕಾಮದಹನದಲ್ಲಿ ಹೇಮಂಕೂಟವೂ ಶಿವನ ತಪಸ್ಸೂ ಪಾರ್ವತಿಯ ನರ್ತನವೂ ಇವೆ. ಕೆಲವು ಚಿತ್ರಗಳ ಮೇಲೆ ಜೇನು ಕಟ್ಟಿ ಈಗ ಬಹಳ ಮಸಕಾಗಿವೆ. ಸದರದ ತುದಿ ಕಟ್ಟೆಗೆ ಹಿಂದೆ ಕುದುರೆಗಳನ್ನು ಕಟ್ಟುತ್ತಿದ್ದುದರ ಕುರುಹಾಗಿ ಈಗಲೂ ಕಬ್ಬಿಣದ ಬಳೆಗಳು ಮಾತ್ರ ಉಳಿದಿವೆ.

ಸದರದಿಂದ 'ಭವಂತಿ'ಗೆ ಎಂದರೆ ಮಠದ ಒಳ ಚೌಕಾಕಾರದ ಅಂಗಳಕ್ಕೆ ಪ್ರವೇಶಿಸಿದರೆ ಕಾಣುವ ದೃಶ್ಯ ಚೇತೋಹಾರಿ. ಭವಂತಿಯ ಮಧ್ಯೆ ಒಂದು ಚೌಕ ಹೊಂಡವಿದ್ದು–ಇದನ್ನು 'ಪಾತಾಳ ಅಂಕಣ'ವೆನ್ನುತ್ತಾರೆ–ಕಟ್ಟಡದ ಮೇಲೆ ಬಿದ್ದ ಮಳೆನೀರು ಇಲ್ಲಿಗೆ ಸುರಿದು ಹೊರಗೆ ಹೋಗುತ್ತದೆ. ಹದಿನಾರು ಅಂಕಣದ ಭವಂತಿಯ ಬಲಕ್ಕೆ ಸ್ವಾಮಿಗಳ ಸಿಂಹಾಸನ ; ಎಡಭಾಗದಲ್ಲಿ ಉತ್ಸವಕ್ಕೆ ಉಪಯುಕ್ತವಾದ ವಸ್ತುಗಳೂ ಕಾಮನ ಹಬ್ಬದಲ್ಲಿ ಊರಿನ ಜನ ಮೆರಸುವ ಕಾಮ ರತಿ ವಿಗ್ರಹಗಳೂ ಪಲ್ಲಕ್ಕಿ ಮೇನೆಗಳೂ ಇವೆ. (ಈ ಮೇನೆಯನ್ನು ಮೈಸೂರು ನಾಲ್ಮಡಿ ಕೃಷ್ಣರಾಜ ಒಡೆಯರು ಎಂಟನೇ ಶಾಂತೇಶ್ವರ ಸ್ವಾಮಿಗಳಿಗೆ ಕೊಟ್ಟರು), ಭವಂತಿಯ ಅಟ್ಟದ ಕೆಳಭಾಗದಲ್ಲಿ ಕೆಲವು ಅತ್ಯಂತ ಸುಂದರವಾದ ಹತ್ತೊಂಬತ್ತನೇ ಶತಮಾನದ ಭಿತ್ತಿ ಚಿತ್ರಗಳಿವೆ. ಅವುಗಳಲ್ಲಿ ಕೆಲವಕ್ಕೆ ಐತಿಹಾಸಿಕ ಮಹತ್ವವಿದೆ:

ಚಿತ್ರ (1) ಕ್ರಿ.ಶ. 1829 ರಲ್ಲಿ ಗಲ್ಲಿಗೇರಿಸಲ್ಪಟ್ಟ ಸಂಗೊಳ್ಳಿ ರಾಯಣ್ಣನಿಗೆ ಸಂಬಂಧಿಸಿದ್ದು. ಕಿತ್ತೂರ ರಾಣಿ ಚನ್ನಮ್ಮನ ಬಲಗೈ ಭಂಟನಾದ ರಾಯಣ್ಣ ಬ್ರಿಟಿಷರ ವಿರುದ್ಧ ದಂಗೆಯೆದ್ದಿದ್ದ. ಅವನು ತಲೆ ತಪ್ಪಿಸಿಕೊಂಡಿದ್ದ ಸಮಯದಲ್ಲಿ ಊರಿನ ಕುಲಕರ್ಣಿ ತನ್ನ ತುದೆ ತಾಯಿಗಳನ್ನು ಶಿಕ್ಷಿಸಿದ ವಿಷಯ ಕೇಳಿ ಕ್ರೋಧದಿಂದ ಊರಿನ ಚಾವಡಿಗೆ ಬಂದ ರಾಯಣ್ಣನನ್ನು ಬಂಧಿಸಿ ಬ್ರಿಟಿಷರು ಮಾಮಲೇದಾರನ

ಹತ್ತಿರ ಕರೆದೊಯ್ದು ಆಮೇಲೆ ಗಲ್ಲಿಗೇರಿಸುತ್ತಾರೆ. ಬಲಗಡೆ ಚಿತ್ರದಲ್ಲಿ ಬ್ರಿಟಿಷ್ ಮಾಮಲೆದಾರನ ಬಳಿ ಕುಲಕರ್ಣಿ ರಾಯಣ್ಣನ ಚಲನವಲನಗಳನ್ನು ವಿವರಿಸುತ್ತಿದ್ದಾನೆ. ಎಡಗಡೆ ಇಬ್ಬರು ಬ್ರಿಟಿಷ್ ಸೈನಿಕರು ರಾಯಣ್ಣನನ್ನು ಹಗ್ಗದಲ್ಲಿ ಕಟ್ಟಿದ್ದಾರೆ. ಹಿಂದೆ ಅವನ ಮುದಿ ತಾಯಿ ತಂದೆಗಳು ನಿಂತಿದ್ದಾರೆ. ಕುರುಬ ರಾಯಣ್ಣನ ತಂದೆ ಹೆಗಲ ಮೇಲೆ ಕಂಬಳಿ ಹಾಕಿಕೊಂಡಿರುವುದನ್ನು ಗಮನಿಸಿ.

ಚಿತ್ರ (2) ಇದು ನರಗುಂದ ಬಾಬಾ ಸಾಹೇಬನ (ಕ್ರಿ.ಶ. 1850) ಚಿತ್ರ. ಅವನ ಪಕ್ಕದ ಕಮಾನುಗಳಲ್ಲಿ ನಿಂತಿರುವವರು ಸಂಸ್ಥಾನದ ಕಾರಭಾರಿಗಳು. ಹೊರಗಡೆ ನಿಂತಿರುವವರು ಸಿಪಾಯಿಗಳು.

ಚಿತ್ರ (3) ಎಡಗಡೆ ಮಧ್ಯೆ ಕುಳಿತಿರುವವರು ಪಂಚಗೃಹ ಹಿರೇಮಠದಲ್ಲಿ ಕ್ರಿ. ಶ. 1850–60ರಲ್ಲಿದ್ದ ಸ್ವಾಮಿಗಳು. ಅವರ ಎರಡು ಪಕ್ಕಕ್ಕೂ ನಿಂತಿರುವವರು ಚೋಪದಾರರು ಅಥವಾ ಸಿಪಾಯಿಗಳು. (ಚಿತ್ರದ ಮೇಲೆ ಅವರ ಹೆಸರುಗಳನ್ನು ಈ ರೀತಿ ಬರೆಯಲಾಗಿದೆ. ಚೋಪದಾರರು ; ಪಟ್ಟದಸ್ವಾಮಿ ; ಸಂಗನಬಸಪ್ಪ ; ಚೋಪದಾರರು) ಕೈ ಜೋಡಿಸಿ ಬಾಗಿ ನಿಂತಿರುವವನು ಶ್ರೀಗಳ ಶಿವಪೂಜಾ ಸೇವಕ ಸಂಗನ ಬಸಪ್ಪ. ಬಲಗಡೆ ಮಂಚದ ಮೇಲೆ ಕುಳಿತಿರುವ ಮೂವರಲ್ಲಿ ಮಧ್ಯದವನು ಮಠದ ಕಾರಭಾರಿ ಬಸವಲಿಂಗಪ್ಪ. ಎಡಕ್ಕೆ ಕೂತವನು ಶ್ರೀ ಸ್ವಾಮಿಗಳಿಗೆ ಸಂಸ್ಕೃತ ಹೇಳಿಕೊಟ್ಟ ಉಪಾಧ್ಯಾಯರಾದ ಕೃಷ್ಣಾಚಾರಿ. ಬಲಗಡೆ ಇರುವಾತ ಮಠದ ಹಿತೈಷಿಯೂ ಊರಿನ ದೇಸಾಯಿಯೂ ಆಗಿದ್ದ ಡಾಕಪ್ಪ ದೇಸಾಯಿ.

ಚಿತ್ರ (4) ಇಲ್ಲಿ ರಾಜನೊಬ್ಬ ವಿಚಿತ್ರ ಹಕ್ಕಿಯ ಮುಂದೆ ಬಾಗಿ ನಮಸ್ಕರಿಸುತ್ತಿದ್ದಾನೆ. ಹಕ್ಕಿಗೆ ಪ್ರಾಣಿಗಳಿಗಿರುವಂತೆ ಬಾಲ ಇದೆ: ಆ ಬಾಲ ಐದು ಹೆಡೆಯ ಸರ್ಪದ್ದು. ನಾಲ್ಕು ಕಾಲುಗಳಲ್ಲಿ ಒಂದು ಮನುಷ್ಯರ ಕೈ. ಉಳಿದ ಮೂರು ಕಾಲುಗಳಲ್ಲಿ ಒಂದು ಆನೆಯದು, ಇನ್ನೊಂದು ಹಸುವಿನದು, ಇನ್ನೊಂದು ಹುಲಿಯದು. ಗರುಡನ ಕೊಕ್ಕು, ತಲೆಯ ಮೇಲೆ ಹುಂಜದ ರೀತಿಯ ಶಿರೋಗುಚ್ಛ. ಈ ವಿಚಿತ್ರ ಅರೆ ಹಕ್ಕಿ, ಅರೆ ಪ್ರಾಣಿಯನ್ನು ಏನೆಂದು ವಿವರಿಸಲು ಸಾಧ್ಯವಾಗಿಲ್ಲ.

ಭವಂತಿಯಲ್ಲಿರುವ ಇತರ ಚಿತ್ರಗಳು : ಸಂತೋಷಮಾತೆ, ಸರಸ್ವತಿ-ಗಣಪತಿ, ನರಸಿಂಹಾವತಾರ, ಮೈಸೂರ ಮಹಾರಾಣಿ ಜಂಬೂಸವಾರಿಯಲ್ಲಿ ಹೋಗುತ್ತಿರುವುದು, ಕೃಷ್ಣ ರುಕ್ಮಿಣಿ ಸಲ್ಲಾಪ, ರಾಮ ಸೀತೆ ಹನುಮಂತರು, ವಿಷ್ಣು ನಾಭಿಯಲ್ಲಿ ಬ್ರಹ್ಮನ ಜನನ, ಪಂಚಮುಖ ಪರಮೇಶ್ವರನ ಓಲಗ, ಜಮದಗ್ನಿಯ ಕಾಮಧೇನುವನ್ನು ಕಾರ್ತವೀರ್ಯಾರ್ಜುನ ಕೇಳುತ್ತಿರುವುದು, ಗೋಪಾಲಕೃಷ್ಣ, ಇತ್ಯಾದಿ. ಈ ಎಲ್ಲ ಚಿತ್ರಗಳನ್ನೂ ಪ್ರತಿ ಮಾಡಿಸಿ ಇಡುವುದು ಅಗತ್ಯವಾಗಿದೆ.



ಚಿತ್ರ 1 : ಸಂಗೊಳ್ಳಿ ರಾಯಣ್ಣನಿಗೆ ಶಿಕ್ಷೆ



ಚಿತ್ರ 2 : ನರಗುಂದ ಬಾಬಾಸಾಹೇಬ



ಚಿತ್ರ 3 : ಹಿರೇಮಠದ ಪಟ್ಟದ ಸ್ವಾಮಿಗಳು ಮತ್ತು ಭಕ್ತರು



ಚಿತ್ರ 4 : ವಿಚಿತ್ರ ಪ್ರಾಣಿ (ಪಕ್ಷಿ ಅಥವಾ ಮನುಷ್ಯ)

ಭವಂತಿಯ ಹಿಂದೆ ಊಟದ ಮನೆ, ಅಡುಗೆ ಮನೆ ಇವೆ. ನೆಲಮಾಳಿಗೆಯಲ್ಲಿ ವಿಶೇಷವಾಗಿ ಕಟ್ಟಿದ ಪೂಜಾಗೃಹವಿದೆ. ಅಡುಗೆ ಮನೆಯ ಹಿಂದೆ ದನದ ಮನೆ ಬಳಿ ಗೌಳೇರ ಗುಡಿಯೂ ಗುರುಗಳ ಸಮಾಧಿಯೂ ಇವೆ.[12]

ಮಠದ ಕಟ್ಟಡವನ್ನು ಒಂದು ಚಿಕ್ಕ ಅರಮನೆಯೆಂದೇ ಕರೆಯಬಹುದು. ಮಠಗಳನ್ನು "ಧರ್ಮಸಂಸ್ಥಾನ"ಗಳೆಂದು ಕರೆಯುತ್ತಿದ್ದುದು ನಿಷ್ಕಾರಣವಾಗಿ ಯೇನೂ ಅಲ್ಲ.

ಪಟ್ಟದ್ದೇವರು

ಇದೊಂದು ಬಾಳೇಹಳ್ಳಿ (ರಂಭಾಪುರಿ) ಶಾಖಾಮಠ. ಮಠದ ಗುರುಗಳಿಗೆ ಬಂದ ಪತ್ರಗಳಲ್ಲಿ ಈ ವಿಶೇಷಣಗಳಿರುತ್ತವೆ–

"ಶ್ರೀಮದ್ ಬ್ರಹ್ಮಾಂಡಮಂಡಲ ಗರ್ಭ ಗರ್ಭೀಕೃತ ರೇಣುಕಾರ್ಯ ವಂಶೋದ್ಭೂತ ಕಂಥಾ ದಂಡ ಕಮಂಡಲ ಕಪ್ಪರ ಭಸಿತ ಘುಟಿಕಾಯೋಗ ಪ್ರವೇಶ ಪಂಚ ಮುದ್ರಾ ಶಿಕ್ಷಾಮೋಕ್ಷಕ್ಕಧಿಕಾರಿಗಳಾದ ಕಸಬಾ ಅಮ್ಮೀನಬಾವಿ ಪಂಚಗೃಹ ಹಿರೇ ಮಠದ ಪಟ್ಟಾಧಿಕಾರಿಗಳು".

ಪಟ್ಟದ್ದೇವರ ಚಿಹ್ನೆಗಳು ಐದು : ಕಂತೆ, ದಂಡ, ಕಮಂಡಲು, ಕಪ್ಪರ (ಭಿಕ್ಷಾ ಪಾತ್ರೆ), ಭಸ್ಮಘುಟಿಕೆ. ಇವರಿಗೆ ಶಿಕ್ಷೆ ರಕ್ಷೆಗಳ ಹಕ್ಕು ಇದೆ. ಮಠದ ಆಧೀನ ದಲ್ಲಿರುವ ಐದು ಮಠಗಳು ಮತ್ತು ಸುತ್ತಮುತ್ತಣ ಪ್ರದೇಶದಲ್ಲೆಲ್ಲ ಇವರ ಪ್ರಭಾವವಿದೆ. ಈಗಿನ 'ಪಟ್ಟಮೂರ್ತಿ'ಗಳು ಬ್ರಹ್ಮಚಾರಿಗಳಾಗಿದ್ದು ಒಂದೇ ಕಡೆ ಇರುತ್ತ ಅಯ್ಯಾಚಾರವನ್ನು ಮಾಡಿಕೊಂಡಿದ್ದಾರೆ. ಇದು 'ಪುತ್ರವರ್ಗ'ದ ಮಠ ವಾದ್ದರಿಂದ ಮನೆಯಲ್ಲಿ ಪಟ್ಟದ್ದೇವರ ಅಣ್ಣ ತಮ್ಮಂದಿರ ಸಂಸಾರಗಳಿವೆ. (ಈಗ ಒಬ್ಬ ತಮ್ಮನ ಮಗನನ್ನು ಮುಂದಿನ ಅಧಿಕಾರಿಯಾಗಿ ಆರಿಸಲಾಗಿದೆ). ಈ ಮಠಕ್ಕೆ ಒಬ್ಬ ಚರಮೂರ್ತಿಯೂ ಇದ್ದಾರೆ. ಇವರು ದೇಶಸಂಚಾರ ಮಾಡುತ್ತ ಅಯ್ಯಾಚಾರದ ಅಧಿಕಾರವನ್ನು ಪಡೆದು ಧರ್ಮ ಜಾಗೃತಿ ಉಂಟುಮಾಡುವ ಕಾರ್ಯವನ್ನು ಕೈಗೊಂಡಿದ್ದಾರೆ. ಚರಮೂರ್ತಿಗೆ ಪಟ್ಟದ್ದೇವರೇ ಉಪದೇಶ ಮಾಡಿದ್ದಾರೆ. ಈಗಿನ ಚರಮೂರ್ತಿಗಳು ಸಂಸಾರಿಗಳು.

---

12 ಈ ಪ್ರದೇಶದಲ್ಲಿ ಹಿಂದೆ ಮಡಿವಾಳ ಮಾಚಿದೇವನ ವಿಗ್ರಹ ದೊರಕಿದ್ದು ತಲೆಯಿಲ್ಲದ ಆ ವಿಗ್ರಹವನ್ನು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಇಡಲಾಗಿತ್ತು. ನಾನು ಪಂಚಗೃಹ ಹಿರೇಮಠದ ಪರಿಸರವನ್ನು ಶೋಧಿಸುತ್ತಿದ್ದಾಗ ಸಿಕ್ಕಿದ ಆ ವಿಗ್ರಹದ ತಲೆಯ ಭಾಗವನ್ನು ಕನ್ನಡ ಅಧ್ಯಯನ ಪೀಠಕ್ಕೆ ಒಪ್ಪಿಸಿದೆ. ಈಗ ಮಡಿವಾಳ ಮಾಚಿದೇವನ ವಿಗ್ರಹವು ಸರ್ವಾಂಗ ಪರಿಪೂರ್ಣವಾಗಿದೆ.

ಪ್ರಸ್ತುತ ಪಟ್ಟದ್ದೇವರು ಆಗಿರುವ ಶ್ರೀ ಶಾಂತಸ್ವಾಮಿಗಳು ಬಿನ್ನ, ಲಿಂಗ ಧಾರಣ, ಲಗ್ನ, ಸಾವುಗಳಿಗೆ ವಾದ್ಯಸಮೇತ ಭಕ್ತರು ಹೊರುವ ಪಲ್ಲಕ್ಕಿಯಲ್ಲಿ ಹೋಗುತ್ತಾರೆ. ಮಳೆಗಾಲದಲ್ಲಿ ಮೇಸಾದಲ್ಲಿ ಹೋಗುತ್ತಾರೆ. ಪಾದಚಾರಿಗಳಾಗಿ ಭಕ್ತರ ಮನೆಗಳಿಗೆ ಎಂದೂ ಹೋಗಬಾರದು. ಪಾದಪೂಜೆಗೆ ಆಹ್ವಾನಿಸಿದಾಗ ನೂರು ರೂಪಾಯಿ ಕೊಟ್ಟವರ ಮನೆಗೆ ಪಲ್ಲಕ್ಕಿ (ಪಾಲ್ಕಿ) ಯಲ್ಲಿ ಐವತ್ತು ರೂಪಾಯಿ ಕೊಟ್ಟವರ ಮನೆಗೆ ಮೇನಾದಲ್ಲಿ ಹೋಗುತ್ತಿದ್ದರು. (ಈಗ ಬಡವರಿಂದ ಹಣ ತೆಗೆದುಕೊಳ್ಳುವುದನ್ನು ನಿಲ್ಲಿಸಿದ್ದಾರೆ). ಈಗಿನ ಸ್ವಾಮಿಗಳ ತಂದೆಯವರು ಸ್ವತಃ ಪಟ್ಟದ್ದೇವರಾಗಿದ್ದರೂ ಅವರ ತಮ್ಮನಿಗೆ (ಎಂದರೆ ಈಗಿನ ಸ್ವಾಮಿಗಳ ಚಿಕ್ಕಪ್ಪ ನಿಗೆ) ಮೂರ್ಛೆ ರೋಗವಿದ್ದುದರಿಂದ, ಸಂತತಿಗಾಗಿ ಅನಿವಾರ್ಯವಾಗಿ ಮದುವೆ ಆಗ ಬೇಕಾಯಿತು).

ಮಠಕ್ಕೆ ಆದಾಯ

ಪಂಚಗೃಹ ಹಿರೇಮಠದ ಭಿಕ್ಷೆ ವಾರಕ್ಕೊಮ್ಮೆ, ಸೋಮವಾರ ನಡೆಯುತ್ತದೆ. ಕಾಲಲ್ಲಿ ಶಿವನ ಕುರುಹಾದ ಜಂಗನ್ನು ಕಟ್ಟಿಕೊಂಡು ಕೋರುಭಿಕ್ಷವನ್ನೂ (ಜೋಳಿಗೆ ಯಲ್ಲಿ ಜೋಳ, ಅಕ್ಕಿ ಇತ್ಯಾದಿಗಳನ್ನು ಹಾಕಿಸಿಕೊಳ್ಳುವುದು), 'ರೊಟ್ಟಿ ಕಜ್ಜಾಯ ಭಿಕ್ಷ'ವನ್ನೂ ಮಾಡುತ್ತಿದ್ದರು.[13] ಈಗ ಆ ಭಿಕ್ಷೆಯ ಹಕ್ಕನ್ನು ಮಠ ನಡೆಯಿಸು ತ್ತಿರುವ ವಿದ್ಯಾರ್ಥಿ ನಿಲಯಕ್ಕೆ ಬಿಟ್ಟುಕೊಡಲಾಗಿದೆ. ಸುಗ್ಗಿಯಲ್ಲಿ ಹಿರೇಮಠದ ಪ್ರತಿನಿಧಿಯಾಗಿ ಗಣಾಚಾರಿ, ಮಠಪತ್ತಿಗಳು ರೈತರಿಂದ ಧಾನ್ಯ ಸಂಗ್ರಹ ಮಾಡಿ ಕೊಡುತ್ತಾರೆ. ಹೊಲದಲ್ಲಿ ಹೊಸ ಬೆಳೆ, ಹೊಸ ತರಕಾರಿ, ತೋಟದಲ್ಲಿ ಹೊಸ ಹಣ್ಣು ಬಂದಾಗ ಭಕ್ತರು ಮೊದಲದನ್ನು ಹಿರೇಮಠಕ್ಕೆ ಒಪ್ಪಿಸುತ್ತಾರೆ. ಸುಮಾರು ನೂರಿಪ್ಪತ್ತು ಎಕರೆ ಜಮೀನು ಮಠದ ಹಕ್ಕಿನದು : ವಾರ್ಷಿಕ ಆದಾಯ ಹದಿನೈದು ಸಾವಿರ ರೂಪಾಯಿ. ಹಿರೇಮಠಗಳಿಗೆ ಇರುವಂತೆ ಮಠಪತಿ, ಗಣಾಚಾರಿಗಳಿಗೆ ವಂಶಪಾರಂಪರ್ಯ ಹಕ್ಕಿನ ಜಮೀನು ಇಲ್ಲ. ಹಿರೇಮಠದವರೇ ಹೇಳಿ ಜನರಿಂದ ಅವರಿಗೆ ಆಯ ಕೊಡಿಸುತ್ತಾರೆ.

ಶಾಲೆ ಮತ್ತು ವಿದ್ಯಾರ್ಥಿನಿಲಯ

ಹಿರೇಮಠವು 1965 ರಲ್ಲಿ ಮಠದ ಕಟ್ಟಡದಲ್ಲೇ ಸ್ಥಾಪಿಸಿದ ಮತ್ತು ಈಗ ಪ್ರತ್ಯೇಕ ಕಟ್ಟಡ ಹೊಂದಿರುವ ಪ್ರೌಢಶಾಲೆಯಲ್ಲಿ 400 ವಿದ್ಯಾರ್ಥಿಗಳೂ 12

---

13 'ಕೋರಾನ್ನ ಭಿಕ್ಷ'ದಲ್ಲಿ ಭಕ್ತರು ಜಂಗಮರಿಗೆ ಧಾನ್ಯ ನೀಡಿದರೆ, 'ಕಂತೆ ಭಿಕ್ಷ'ದಲ್ಲಿ ಅವರ ಬುಟ್ಟಿಗೆ ಮನೆಯಲ್ಲಿ ಮಾಡಿದ ಅಡಿಗೆಯನ್ನು ಬಡಿಸುತ್ತಾರೆ. (ಬುಟ್ಟಿಯಲ್ಲಿ ಮುದ್ದೆ, ರೊಟ್ಟಿ, ಅನ್ನವನ್ನೂ ಅದರಲ್ಲಿನ ಕುಡಿಕೆಗೆ ಸಾರನ್ನೂ ಹಾಕಿಸಿಕೊಳ್ಳುತ್ತಾರೆ). 'ಕಜ್ಜಾಯ' ಎಂದರೆ ತಿನ್ನುವ ಪದಾರ್ಥ ಎಂದರ್ಥ. ಸಂಸ್ಕೃತ ಖಾದ್ಯ = ಪ್ರಾಕೃತ ಖಜ್ಜಯ. ಈ ಖಜ್ಜಯವೇ ಕನ್ನಡದಲ್ಲಿ ಕಜ್ಜಾಯ ಎಂದಾಗಿ. ಕೆಲವು ಭಾಗಗಳಲ್ಲಿ ಅದಕ್ಕೆ ಸಿಹಿ ರೊಟ್ಟಿ, ಸಿಹಿ ತಿಂಡಿ ಎಂಬರ್ಥ ಬಂದಿದೆ.

ಉಪಾಧ್ಯಾಯರೂ ಇರುವರಲ್ಲದೆ, ಶಾಲೆಯ ಪಕ್ಕದಲ್ಲೇ ಇರುವ ಕಟ್ಟಡದಲ್ಲಿ ಎಂಬತ್ತು ವಿದ್ಯಾರ್ಥಿಗಳಿರುವ "ಬಸವೇಶ್ವರ ಉಚಿತ ಪ್ರಸಾದ ನಿಲಯ" ಎಂಬ ಫ್ರೀ ಬೋರ್ಡಿಂಗ್ ಹಾಸ್ಟಲ್ ಕೂಡ ನಡೆಯುತ್ತಿದೆ. ರೇಣುಕಾಚಾರ್ಯರ ಪರಂಪರೆಯ ಬಾಳೆಹಳ್ಳಿಯ ಶಾಖಾಮಠವಾಗಿದ್ದರೂ ಬಸವಣ್ಣನ ಹೆಸರಲ್ಲಿ ವಿದ್ಯಾರ್ಥಿ ನಿಲಯ ವನ್ನು ನಡಸಲು ಮಠಕ್ಕೆ ಕಷ್ಟವಾಗಿಲ್ಲ. ವಿದ್ಯಾರ್ಥಿ ನಿಲಯಕ್ಕೆ ವರ್ಷಕ್ಕೊಮ್ಮೆ ಊರಲ್ಲಿಯೂ ಹೊರಗಡೆಯೂ 'ಭಿಕ್ಷಾಟನೆ' ಮಾಡಿ ಧಾನ್ಯ ಸಂಗ್ರಹಿಸುತ್ತಾರೆ. ಆಗಾಗ್ಗೆ ಜನ ತಂದುಕೊಡುವ ರೊಟ್ಟಿಗಳೂ ಹುಡುಗರಿಗೆ ಆಹಾರವಾಗುತ್ತವೆ.

ಇತರ ಸಮಾಜೋಧಾರ್ಮಿಕ ಚಟುವಟಿಕೆಗಳು

ಪ್ರತಿ ವರ್ಷವೂ ಬಡವರಿಗೆ ಧರ್ಮಾರ್ಥ ವಿವಾಹವನ್ನೂ ಜಂಗಮ ಹುಡುಗ ರಿಗೆ ದೀಕ್ಷೆಯನ್ನೂ ಮಾಡಿಸುತ್ತಾರೆ. ಇಪ್ಪತ್ತು ವರ್ಷಕ್ಕೊಮ್ಮೆ ನಡೆಯುವ ದ್ಯಾಮವ್ವ ಅಥವಾ ದುರ್ಗಮ್ಮನ ತೇರನ್ನು, ಪ್ರತಿವರ್ಷ ನಡೆಯುವ ಬಸವೇಶ್ವರ ಈಶ್ವರ ಜಾತ್ರೆಗಳ ತೇರನ್ನು ಹತ್ತುವ ಹಕ್ಕು ಓರೇಮಠದ್ದು. ಪ್ರತಿವರ್ಷ ಬಸವೇಶ್ವರ ದೇವಾಲಯದಲ್ಲಿ ನಡೆಯುವ 'ಪರ್ವ'ದಲ್ಲೂ ಮಠದ್ದೇ ಪ್ರಮುಖ ಪಾತ್ರ. ಜೋಳದ ಬಿತ್ತನೆ ಮಾಡಲು ಮುನ್ನ ನಡೆಯುವ 'ಪರ್ವ'ದಲ್ಲಿ ಗ್ರಾಮ ದೇವತೆಗೆ 'ಉಡಿ ತುಂಬುವ ಕಾರ್ಯ'ವೂ 'ಪ್ರಸ್ತ'ವೂ ನಡೆಯುತ್ತದೆ ('ಪ್ರಸ್ತ' ಎಂದರೆ ಜೋಳದ ಕಿಚಿಡಿಗೆ ಸಾರು ಮಾಡಿಸಿ ಬಡ ಜನರಿಗೂ ಜಂಗಮರಿಗೂ ಗುಡಿಯಲ್ಲಿ ಊಟ ಹಾಕುವುದು). ಆ ದಿನ ಸ್ವಾಮಿಗಳ ಅಡ್ಡಪಲ್ಲಕ್ಕಿ ಉತ್ಸವವಿರುತ್ತದೆ. ಮಾರ್ನವಮಿಯಲ್ಲಿ ಬನ್ನಿ ಮುಡಿಯುವ ದಿನ ಎಲ್ಲರೂ ಮೊದಲು ಮಠಕ್ಕೆ ಬಂದು ಅಲ್ಲಿ ಬನ್ನಿ ಮುಡಿದ ಮೇಲೆ ಬಳಿಕ ದೇವಿಗೆ (ಗ್ರಾಮದೇವತೆಗೆ) ಬನ್ನಿ ಆಗುತ್ತದೆ. ಸ್ವಾಮಿಗಳಿಗೆ 'ಪಟ್ಟ' ಆದಾಗ ಮೊದಲ 'ಆಯಾರ್' ಪಂಚಮಸಾಲಿ ಜಾತಿಯ ಶ್ರೀ ಕಟ್ಟೀಮನಿ ವಿರೂಪಾಕ್ಷಪ್ಪ ಅಮರಶೆಟ್ಟಿ ಅವರದ್ದು. ಅವರು ಮೊದಲು ಬಂದು ಸ್ವಾಮಿಗಳಿಗೆ ಒಪ್ಪಿಸುವ ನಜರೇ 'ಆಯಾರ್'. ಪಟ್ಟ ಆದ ದಿನ ಆನೆಯ ಮೇಲೆ ಮೆರವಣಿಗೆ ಆಗಲೇಬೇಕು. 'ಪಟ್ಟದ ಕುದುರೆ'ಯನ್ನು ಕುಡುವೊಕ್ಕಲಿಗರಾದ ನಾಗಣ್ಣನವರ ಮನೆತನದವರೇ ಕೊಡಿಸಬೇಕು. ಸ್ವಾಮಿಗಳು ಪಲ್ಲಕ್ಕಿಯಲ್ಲಿ ಹೋಗಿ ಮೊದಲ ಬಿನ್ನ ಸ್ವೀಕರಿಸುವ ಹಕ್ಕು ಹೊಸೂರ್ ಮನೆತನದ್ದು. ಪ್ರತಿ ವರ್ಷ ಆಷಾಢ ಶುದ್ಧ ಬಿದಿಗಿ ದಿನ ಮಠ ಸ್ಥಾಪಕರ ಹೆಸರಲ್ಲಿ ವಾರ್ಷಿಕ ಪುಣ್ಯತಿಥಿ ನಡೆಯು ತ್ತದೆ. ಪ್ರತಿ ಶ್ರಾವಣದಲ್ಲೂ ಒಂದು ತಿಂಗಳು ನಡೆಯುವ ಪುರಾಣ ಪ್ರವಚನದಲ್ಲಿ ರೇಣುಕ ವಿಜಯದ ಜೊತೆ ಬಸವ, ಅಕ್ಕಮಹಾದೇವಿ, ಹೇಮರೆಡ್ಡಿ ಮಲ್ಲಮ್ಮ ಮತ್ತು ಇತರ ಪುರಾಣಗಳೂ ನಡೆಯುತ್ತವೆ.

ನ್ಯಾಯ ಪರಿಹಾರ

ಮಠ ಧಾರ್ಮಿಕ ಕೇಂದ್ರವಾಗಿರುವಂತೆ ನ್ಯಾಯಾಲಯವೂ ಆಗಿತ್ತು. ಮಠದ ದಾಖಲೆಗಳನ್ನು ಪರಿಶೀಲಿಸಿದಾಗ ದೊರಕಿದ ಎರಡು ಬರಹಗಳು ಇಲ್ಲಿ ಉಲ್ಲೇಖಾರ್ಹ ವಾಗಿವೆ. ಒಬ್ಬ ಹೆಂಗಸು ಚಪ್ಪಲಿ ಕದ್ದು, ತಾನು ಕದ್ದಿಲ್ಲವೆಂದು ವಾದಿಸಿದಾಗ ಅವಳ ಮೇಲೆ ಸುಳ್ಳು ಹೇಳಿದ ತಪ್ಪು ಹೊರಿಸಿ ಮಠಕ್ಕೆ ಅಹವಾಲು ಮಾಡಿಕೊಂಡ ಒಂದು ಪತ್ರ ಹೀಗಿದೆ :

ಶ್ರೀ ಗುರು ಪ್ರಸನ್

ಅವಿರಳ ಪರಂಜ್ಯೋತಿ ಸ್ವರೂಪಿಗಳಾದ ರಾ॥ ರಾ॥ ಕಸಬಾ ಅಮ್ಮಿನಭಾವಿ ಪಂಚಗೃಹದ ಹಿರೇ ಮಠದ ಗುರು ಶಾಂತಸ್ವಾಮಿಗಳವರ ಪಾದಸನ್ನಿಧಿಗೆ ಫಿರ್ಯಾದಿದಾರ ಶಿದ್ದಪ್ಪ ರೇವಪ್ಪ ಕಂಬಾರ ಸಾಕೀನ ದಾಸ್ತಿ ಕೊಟ್ಟಿ ನಾನು ಮಾಡುವ ಫಿರ್ಯಾದಿ ಯೇನಂಧ್ರೆ-

ನಾನು ಗುರುವಾರ ದಿವಸ 10-11 ಘಂಟೆ ಸಮಯಕ್ಕೆ ಸದರ ಊರಲ್ಲಿರುವ ಗುರು ಪಾದಯ್ಯನ ಮನೆಗೆ ಹೋಗಿ ಮಲಗಿದ್ದೆ. ಅಲ್ಲಿಯೇ ನನಗೆ ನಿದ್ದೆ ಹತ್ತಿತ್ತು. ಆ ಮೇಲೆ ಸದರ ಗುರುಪಾದಯ್ಯ ವ ಅವನ ಹೆಂಡತಿ ಕಲಘಟಗಿಗೆ ಹೋದರು. ಸದರ ಗುರುಪಾದಯ್ಯನ ಅಕ್ಕ ಚನ್ನಬಸವ್ವನು ತನ್ನ ಆಚೆಕಡಿ ಮನಿಗೆ ಉದ್ಯೋಗ ಅಂದರೆ ಭತ್ತಾ ಹಸನ ಮಾಡಲಿಕ್ಕ ಹೋಗಿದ್ದಳು. ಆಮೇಲೆ ನನಗೆ ಎಚ್ಚರಾದ ಕೂಡಲೆ ಕಾಲು ಜೋಡು ನೋಡಿದೆನು. ನಾನು ಬಿಟ್ಟ ಜಾಗಾದಲ್ಲಿ ಇದ್ದಿಲ್ಲ. ಆಮೇಲೆ ನಾನು ಹುಡುಕಾಡಲಿಕ್ಕೆಹತ್ತಿದೆನು. ಅಷ್ಟರಲ್ಲಿ ಸದರ ಚನ್ನಬಸವ್ವನು ಮನಿಗೆ ಬಂದಳು. ಬಂದಕೂಡಲೆ ಚೆನ್ನಬಸವ್ವನನ್ನು ಜೋಡು ಯಾರು ಓದರು ಅಂತಾ ಕೇಳಿದೆನು. ಸದರ ಚೆನ್ನಬಸವ್ವನು ಗಾಬರಿಯಾಗಿ ಇಲ್ಲೇ ಇದ್ದವು ಅಂತಾ ಹುಡುಕಾಡಹತ್ತಿ ದಳು. ನಾನು ವ ಸದರ ಚೆನ್ನಬಸವ್ವನು ಇಬ್ಬರೂ ಕೂಡಿ ಹೊರಗೆ ಬಂದು ಹುಡುಕಿ ನೋಡು ವಷ್ಟರಲ್ಲಿ ಯುದುರಿನ ಮನಿಯ ಹೊರಗಿನ ಕಟ್ಟೆಯ ಮೇಲೆ ನಿಂಗಪ್ಪಾ ಹುಗ್ಗಿ ಈತನು ಕೂತಿದ್ದನು. ಸದರ ಚೆನ್ನಬಸವ್ವನು ನಿಂಗಪ್ಪ ಹುಗ್ಗಿ ಈತನನ್ನು ನಾನು ಆಚೆಕಡಿ ಮನಿಗಿ ಭತ್ತಾ ಹಸನ ಮಾಡಲಿಕ್ಕ ಹೋದಾಗ್ಗೆ ಮನಿಗೆ ಯಾರಾದರೂ ಬಂದಿದ್ದರೇನು ಅಂತಾ ಕೇಳಿದಳು. ಕೇಳಿದ ಕೂಡಲೆ ನಿಂಗಪ್ಪನು ಗೌರನ್ನ ಗೌರವ್ವ ಗಂಡ ಈರಯ್ಯ ಪೂಜಾರ ಈತನ ಹೆ ಇವಳು ಬಂದಿದ್ದಳು ಅಂತಾ ಹೇಳಿದನು. ಸದರ ಸಿದ್ದಪ್ಪನು ನನ್ನ ಜೋಡು ಯಾರು ಓದರು ಅಂತಾ ನಿಂಗಪ್ಪನನ್ನು ಕೇಳಿ ದನು. ನಿಂಗಪ್ಪನು ಗುಡಿಪೂಜಾರ ಫಕೀರಯ್ಯನ ಮಗಳು ಗೌರವ್ವನು ಓದಳೆಂತ ಹೇಳಿದನು. ನಾನು ಅದೇ ದಿವಸ ಸಾಯಂಕಾಲಕ್ಕೆ ಹೋಗಿ ನನ್ನ ಜೋಡು ಕೊಡು ಅಂತಾ ಕೇಳಿದೆನು. ನಾನು ತಗೊಂಡಿಲ್ಲ ಯಾರು ಹೇಳತಾರು ಅಂತ ಜಬರ ಮಾಡಿದಳು. ಕೂಡಲೆ ನಿಂಗಪ್ಪ ಹುಗ್ಗಿ ಈತನು ಗುರುಪಾದಯ್ಯನ ಮನಿಂದ ಓದಿ ಅಂತ ಹೇಳತಾನು ಕೊಡು ಅಂತಾ ಕೇಳಿದೆನು. ಆ ಕಾಲಕ್ಕೆ ಅವಳು ನಾನು ತೆಗೆದುಕೊಂಡಿಲ್ಲ ಅಂದಳು. ಅಷ್ಟಕ್ಕೆ ನಾನು ಸುಮ್ಮನೆ ಮನಿಗೆ ಹೋದೆನು. ತಪಾಸುಮಾಡಿಕೊಂಡ ಇರುತ್ತಿರಲಿಕ್ಕೆ ಆದಿತ್ಯವಾರ ದಿವಸ ಸಂಜೆ 4-5 ಘಂಟೆಯ ಸುಮಾರಕ್ಕೆ ಲೈನದ ಕಡಿಗೆ ಅಡ್ಡಾಡಿಕೋತ ಹೋದೆನು. ಲೈನ ದಾರಿಯಲ್ಲಿ ಹೋಗತಿರ ಲಿಕ್ಕೆ ಮೇಲೆ ನಮೋದು ಮಾಡಿದ ಗೌರವ್ವನು ಬುಟ್ಟಿ ಹೊತುಗೊಂಡ ಬಂದಳು. ಬಂದ ಕೂಡಲೆ ಜೋಡು ಕೊಡು ಅಂತಾ ಜಬರಿಸಿ ಕೇಳಿದೆನು. ಮತ್ತು ನಾನು ತಗೊಂಡಿಲ್ಲ ಅಂತಾ ಬುಟ್ಟ

ತಗೊಂಡು ಜ್ಯಾಗೊಣ್ಣಯವರ ಹೊಲದಲ್ಲಿ ಹಾಸಿ ಹೋದಳು. ನಾನು ಈರಪ್ಪ ಸಂಗೇದೇವರ ಕೊಪ್ಪ ಈತನ ಅಂಗಡಿಯಲ್ಲಿ ಕೂತುಗೊಂಡೆನು. ಆಮೇಲೆ ಜ್ಯಾಗೊಣ್ಣೆಯವರ ಬಣವಿ ಹತ್ತಿರ ಬುಟ್ಟಿ ಇಟ್ಟು ಬಣವೆಯ ವಳಗೆ ಇಟ್ಟ ಜೋಡು ತಂದು ನಾನು ಕೂತಲ್ಲೇ ತಂದುಕೊಟ್ಟಳು. ಸ್ವಾಮಿಗಳು ಇದನ್ನು ವಿಚಾರಿಸೋಣವಾಗಬೇಕು.

ಶಿದ್ದಪ್ಪಾ ರ್ಕ್ಯೆವಪ್ಪಾ ಕಂಬಾರ

ಸಾಕ್ಷಿ
ಗುರುಪಾದಯ್ಯ ಚನ್ನಫಕೀರಯ್ಯಾ ಪೂಜ್ಯಾರ
ಏಸಪ್ಪಾ ಶಿವಪ್ಪಾ ದಾವೂಪುರ
ನಿಂಗಪ್ಪಾ ಮಲ್ಲಪ್ಪಾ ಹುಗ್ಗಿ

ಹೆಂಗಸು ಚಪ್ಪಲಿ ಕದ್ದದ್ದಲ್ಲದೆ ಸುಳ್ಳು ಹೇಳಿದ್ದರಿಂದ ಸ್ವಾಮಿಗಳು ತಪ್ಪಿ ತಸ್ಥಳಿಗೆ ಶಿಕ್ಷೆ ಕೊಟ್ಟಿರಬಹುದು. ಈ ದಾಖಲೆಯ ಕಾಲ ತಿಳಿಯದು: ಈ ಶತಮಾನದ್ದು ಎಂಬಲ್ಲಿ ಅನುಮಾನವಿಲ್ಲ.

ಆದರೆ 28-3-1926ರ ಮುಂದಿನ ದಾಖಲೆ ಬಹು ಮಹತ್ವದ್ದು. ಈ ಅರ್ಜಿಯಲ್ಲಿ ವಿಧವೆಯೊಬ್ಬಳು ತನ್ನ ಗಂಡ ಸತ್ತ ಮೇಲೆ ಮೂವರು ಹುಡುಗರ ತಾಯಿ ಆಗುತ್ತಾಳೆ. ಲಿಂಗಾಯತರು ಅವಳನ್ನು ಜಾತಿಯಿಂದ ಬಹಿಷ್ಕಾರ ಹಾಕಿದ್ದಲ್ಲದೆ ಮಠವೂ ಆಕೆಯ ಮನೆಯ 'ಹವ್ಯ-ಕವ್ಯ'ಗಳಿಗೆ ಹೋಗಲು ನಿರಾಕರಿಸಿತು. ಅವಳಿಗೆ ತಾನು ಮಾಡಿದ ತಪ್ಪಿನ ಅರಿವಾಗಿ ಮಠಕ್ಕೆ ತಪ್ಪೊಪ್ಪಿಗೆ ಪತ್ರ ಬರೆದು ಕ್ಷಮೆ ಕೇಳಿದ್ದು ಹೀಗಿದೆ:

ಶ್ರೀ ಶಾಂತೇಶ್ವರ ಪ್ರಸನ್ನ

ಶ್ರೀ ಮದ್ಬ್ರಹ್ಮಾಂಡ ಮಂಡಲ ಗರ್ಭಾಗರ್ಭೀಕೃತ ರೇಣುಕಾರ್ಯ ವಂಶೋದ್ಭೂತ ಕಂಥಾ ದಂಡ ಕಮಂಡಲ ಕರ್ಪೂರ [ಖರ್ಪರ] ಭಸಿತಘುಟಿಕಾ ಪ್ರಯೋಗ ಪ್ರವೇಶ ಪಂಚಮುದ್ರಾ ಶಿಕ್ಷಾ ಮೋಕ್ಷಕ್ಕಧಿಕಾರಿಗಳಾದ ಕಸಬಾ ಅಮ್ಮಿನಭಾವಿ ಪಂಚಗೃಹ ಹಿರೇಮಠದ ಪಟ್ಟಾಧಿಕಾರಿಗಳಾದ ಶಾಂತದೇವರು ಗುರು ಶಾಂತಸ್ವಾಮಿಗಳವರ ಸನ್ನಿಧಾನಕ್ಕೆ

ಅರ್ಜಿದಾರಳು ತಿಪ್ಪವ್ವ ಕೋಂ ಬಸಪ್ಪ ದುಂದೂರು ಸಾ। ಮನಸೂರ ತಾಲ್ಲೂಕ ಧಾರವಾಡ ನಾನು ಬರಕೊಂಡ ಅರ್ಜಿಯೇನೆಂದರೆ—ನನ್ನ ಗಂಡ ಸತ್ತು ಅಜಮಾಸು 10-12 ವರ್ಷವಾಯಿತು. ಆ ನಂತರ ನಾನು ವ್ಯಭಿಚಾರ ಕೃತ್ಯದಿಂದ ಮೂವರು ಹುಡುಗರನ್ನು ಪಡೆದಿದ್ದೇನೆ. ಸದರ ಹುಡುಗರು ಹಾಲಿ ಇರುತ್ತಾರೆ. ಅದರ ದೆಶೆಯಿಂದ ನನ್ನ ಕುಲದ ಜನರು ಈ ಹುಡುಗರು ಹುಟ್ಟಿದ ಲಾಗಾಯಿತು ಬಳಕೆ ಮಾಡದೆ ನನ್ನನ್ನು ಕುಲದಿಂದ ದೂರಮಾಡಿರುತ್ತಾರೆ. ಅದರ ದೆಶೆಯಿಂದ ನನಗೆ ದೋಷ ಬಂದಿದ್ದು ಖರೆ ಇದೆ. ಇನ್ನು ಮುಂದೆ ನನ್ನ ಕುಲದ ಪದ್ಧತಿಯಂತೆ ಚಲೋ ರೀತಿಯಿಂದ ನಡೆದುಕೊಳ್ಳುತ್ತೇನೆ. ತಾವು ತಮ್ಮ ಸನ್ನಿಧಾನದಿಂದ ಶುದ್ಧಮಾಡಿ ನಮ್ಮ ಕುಲದವರ

ಸಂಗಡ ಬಳಿಕ ಭೋಜನ ಕೆಲಸಗಳು ನಡೆಯುವಂತೆಯೂ ಮಠದ ಅಯ್ಯನವರು ನನ್ನ ಹವ್ಯ-ಕವ್ಯ ಕೆಲಸಗಳಿಗೆ ಬರುವಂತೆಯೂ ವ್ಯವಸ್ಥೆ ಮಾಡಿ ಶುದ್ಧ ಪತ್ರಿಕೆ ಕೊಡುವಿರೆಂದು ಬೇಡಿಕೊಳ್ಳುತ್ತೇನೆ. ಈ ಪ್ರಕಾರ ನನ್ನ ಆತ್ಮಸಂತೋಷದಿಂದ ಸಂಸ್ಥಾನಕ್ಕೆ ಬರಕೊಂಡ ಅರ್ಜಿ ಸಹಿತಾ ತಾರೀಖು 28-3-26ಇ.

ಈ ಎಡಗೈ ಹೆಬ್ಬೆರಳ ಗುರ್ತು ತಿಪ್ಪವ್ವ ಕೋಂ ಬಸಪ್ಪ ದುಂದೂರು ಉರ್ಫ ಶಿವನಗೌಡರ ಸಾ। ಮನಸೂರ ಈಕೀ ಮಾಡಿದ್ದದೆ.

ಸಾಕ್ಷಿ, ಈ ಎ.ಹೆ.ಗು. ಬಸಯ್ಯ
ಬಕ್ಕಯ್ಯ, ಬಕ್ಕಯ್ಯನವರ ಈತ ಮಾಡಿದ್ದಕ್ಕೆ ದ. ಸದರ
ಬಸಪ್ಪ ಗೌಡಾ ಪಾಟೀಲ ದ॥ ಕೋಂ ಸಾ॥ ಮನಸೂರ

ಮಠವು ವಿಚಾರಿಸಿ ಆಕೆಗೆ ಕ್ಷಮೆಯನ್ನು ನೀಡಿ ಶುದ್ಧಿ ಪತ್ರ ಕೊಡುವುದರ ಮೂಲಕ ಆ ಹತಭಾಗ್ಯ ಸಂಸಾರವನ್ನು ಉದ್ಧರಿಸಿತೆಂದು ನಂಬಲು ಅವಕಾಶವಿದೆ. ಹಿಂದೆ ಅವಾಚ್ಯ ಶಬ್ದ ಪ್ರಯೋಗಿಸಿದರೆ, ಚಪ್ಪಲಿಯಲ್ಲಿ ಹೊಡೆದಾಡಿದರೆ ಅವರಿಗೆ ಬಹಿಷ್ಕಾರ ಹಾಕಬಹುದಿತ್ತೆಂದೂ, ಮೂರು ದಿನ ಶಿಕ್ಷೆ ಕೊಡಲು ಬ್ರಿಟಿಷರೇ ಅವಕಾಶ ಕೊಟ್ಟಿದ್ದರೆಂದೂ ಈಗಿನ ಶ್ರೀ ಶಾಂತಸ್ವಾಮಿಗಳ ತಿಳಿವಳಿಕೆ. ಆಸ್ತಿ ಜಗಳ, ಗಂಡ ಹೆಂಡಿರ ಜಗಳಗಳಲ್ಲಿ ಮಠ ಕರೆಯಿಸಿ ವಿಚಾರಿಸುವ ಹಕ್ಕನ್ನು ಉಳಿಸಿಕೊಂಡಿದೆ.

ಅನುಬಂಧ-2

ಆರಾಧ್ಯ ಬ್ರಾಹ್ಮಣರು (ಆಂಧ್ರ)

ವಿಶೇಷವಾಗಿ ದಕ್ಷಿಣ ಕರ್ನಾಟಕದಲ್ಲಿ, ವಿರಳವಾಗಿ ಮಧ್ಯ ಕರ್ನಾಟಕದಲ್ಲಿ ಇರುವ ಆರಾಧ್ಯ ಜಾತಿಯ ಬಗ್ಗೆ ಕೆಲವು ಸಂಗತಿಗಳನ್ನು ಇಲ್ಲಿ ಪ್ರಸ್ತಾಪಿಸುವುದು ಅಗತ್ಯ. (ಉತ್ತರ ಕರ್ನಾಟಕದಲ್ಲಿ ಆರಾಧ್ಯರು ಇಲ್ಲವೇ ಇಲ್ಲ.) ದಕ್ಷಿಣ ಕರ್ನಾಟಕ ದಲ್ಲಿ ಆರಾಧ್ಯರಿಗೂ ಜಂಗಮರಿಗೂ ವಿವಾಹಗಳು ನಡೆಯುತ್ತಿವೆ. ಇಬ್ಬರದೂ ಒಂದೇ ಜಾತಿ ಎಂಬ ನಂಬಿಕೆಯಿದ್ದರೂ, ಕೆಲವೊಮ್ಮೆ ಕೆಲವು ಸಂದೇಹಗಳೊಡನೆ ವಿವಾಹಗಳು ಏರ್ಪಾಡಾಗುತ್ತಿವೆ ಎಂಬುದನ್ನು ಗುರುತಿಸಬಹುದು. ಆರಾಧ್ಯರಿಗೆ ಜಂಗಮರು ತಮಗಿಂತ ಕಡಮೆ ಎಂಬ ಭಾವನೆ ಮನಸ್ಸಿನ ಒಂದು ಮೂಲೆಯಲ್ಲಿ ದ್ದರೂ, ಜಂಗಮರಿಗೆ ತಮಗಿಂತ ಕೆಲವು ವಿಚಾರಗಳಲ್ಲಿ ಭಿನ್ನಾಚಾರಗಳನ್ನು ಹೊಂದಿ ರುವ ಆರಾಧ್ಯರು ಜಂಗಮರು ಹೌದೋ ಅಲ್ಲವೋ ಎಂಬ ಸಂದೇಹವಿದ್ದರೂ, ಇಬ್ಬರೂ ಲಿಂಗವಂತ ಸಮಾಜದಲ್ಲಿ ಪುರೋಹಿತವರ್ಗದವರಾಗಿರುವುದರಿಂದ ಇಬ್ಬ

ರಿಗೂ ಮದುವೆಗಳು ನಡೆಯುತ್ತಿವೆ. ಇಬ್ಬರೂ ಅಲ್ಪ ಸಂಖ್ಯಾತರಾಗಿರುವುದರಿಂದ ಪರಸ್ಪರರನ್ನು ಒಪ್ಪಿಕೊಳ್ಳುವುದರ ಮೂಲಕ ಗಂಡು ಹೆಣ್ಣುಗಳ ಆಯ್ಕೆಗೆ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಿಕೊಳ್ಳಲು ಸಾಧ್ಯವಾಗಿದೆ.

ದಕ್ಷಿಣ ಕರ್ನಾಟಕದ ಆರಾಧ್ಯರು ಮೈಮೇಲೆ ಇಷ್ಟಲಿಂಗವನ್ನು ಧರಿಸುತ್ತಾರೆ. ಒಂದು ಕಾಲಕ್ಕೆ ಅವರು ಇಷ್ಟಲಿಂಗದ ಜೊತೆ ಜನಿವಾರವನ್ನೂ ಹಾಕುತ್ತಿದ್ದರೆಂದೂ ಇತರ ಲಿಂಗವಂತರ ಕುಚೋದ್ಯಕ್ಕೆ ಗುರಿಯಾಗಬಹುದೆಂಬ ಭೀತಿಯಿಂದ ಕೆಲವರು ಅದನ್ನು ತೆಗೆದುಹಾಕಿದರೆಂದೂ ಹೇಳುತ್ತಾರೆ (ಅಖಿಲ ಭಾರತ ವೀರಶೈವ ಮಹಾ ಸಭೆಯ ಅಧ್ಯಕ್ಷರಾಗಿದ್ದ ದಿ. ಜೆ.ಬಿ. ಮಲ್ಲಾರಾಧ್ಯರು ಮೈಮೇಲೆ ಜನಿವಾರವನ್ನು ಉಳಿಸಿಕೊಂಡಿದ್ದರೆಂಬ ಸಂದೇಹವನ್ನು ಮತ್ತು ಅಸಮಾಧಾನವನ್ನು ಅವರು ಬದುಕಿದ್ದಾಗಲೇ ಹಲವರು ವ್ಯಕ್ತಪಡಿಸಿದ್ದುಂಟು—ಮುಂದೆ ನೋಡಿ) ಆರಾಧ್ಯ ಪುರೋಹಿತರು ತಲೆಯಲ್ಲಿ ಶಿಖೆಯನ್ನು ಬಿಟ್ಟಿರುವುದು, ವಿವಾಹ ಗೃಹ ಪ್ರವೇಶ ಗಳಲ್ಲಿ ಅಗ್ನಿ ಪ್ರತಿಷ್ಠಾಪನೆ ಮಾಡಿ ಹೋಮವನ್ನು ನೆರವೇರಿಸುವುದು ಹಲವರಿಗೆ ಅ-ವೀರಶೈವ ಆಚರಣೆಯೆಂದು ಅನ್ನಿಸಿದೆ : ಉತ್ತರ ಕರ್ನಾಟಕದವರ ದೃಷ್ಟಿಯಲ್ಲಿ ಅದೊಂದು ವೈದಿಕಾಚರಣೆ. ಆದರೂ ಆರಾಧ್ಯ ಪುರೋಹಿತರ ಹೋಮಗಳನ್ನು ದಕ್ಷಿಣ ಕರ್ನಾಟಕದ ಲಿಂಗಾಯುತ ಜನ ಒಪ್ಪಿಕೊಂಡಿದ್ದಾರೆ. ಕೆಲವು ಲಿಂಗವಂತರು ಅವರನ್ನು ವಿವಾಹ, ಗೃಹ ಪ್ರವೇಶಗಳಿಗೆ ಕರೆಯದೆ ಉತ್ತರ ಕರ್ನಾಟಕದ ಜಂಗಮ ರನ್ನೇ ಬೆಂಗಳೂರಲ್ಲಿ ಹುಡುಕಿಕೊಂಡು ಹೋಗಿ ಆಹ್ವಾನಿಸುವುದೂ ಉಂಟು.

ಈ ಆರಾಧ್ಯರು ಯಾರೂ ಈಗ ತೆಲುಗು ಮಾತನಾಡದಿದ್ದರೂ, ಹಿಂದೊಮ್ಮೆ ಅವರು ಆಂಧ್ರದಿಂದ ಇಲ್ಲಿಗೆ ಬಂದು ಕ್ರಮೇಣ ತಮ್ಮ ಭಾಷೆಯನ್ನು ಮರೆತಿರ ಬಹುದು. ಅಥವಾ ಆದೇ ಆರಾಧ್ಯ ಪಂಗಡಕ್ಕೆ ಸೇರಿದ್ದು ಮೊದಲಿನಿಂದಲೂ ಕನ್ನಡವನ್ನೇ ಮಾತನಾಡುವ ಜನರಾಗಿದ್ದಿರಬಹುದು. ಅವರ ಪಂಗಡದ ನಿಜವಾದ ಸ್ವರೂಪ ಕರ್ನಾಟಕಕ್ಕಿಂತ ಆಂಧ್ರದಲ್ಲಿ ಹೆಚ್ಚು ಶುದ್ಧರೂಪದಲ್ಲಿ ಉಳಿದು ಬಂದಿರು ವಂತಿದೆ.

ಈಗ ತೆಲುಗು ಮಾತೃಭಾಷೆಯ ಆಂಧ್ರದ ಆರಾಧ್ಯರ ಬಗ್ಗೆ ಕೆಲವು ವಿವರ ಗಳನ್ನು ಕೊಡಬಹುದು. ಈ ಮುಂದಿನ ಸಂಗತಿಗಳನ್ನು ದೆಹಲಿ ವಿಶ್ವವಿದ್ಯಾಲಯದ ತೆಲುಗು ಪ್ರಾಧ್ಯಾಪಕ ಶ್ರೀ ಪೀರೇಶಲಿಂಗಂ ಅವರಿಂದ ಪಡೆದಿದ್ದೇನೆ. 8–11–1983 ರಂದು ಅವರ ಮನೆಯಲ್ಲಿ ಅವರನ್ನು ಭೇಟಿ ಮಾಡಿದ್ದೆ : ಅವರು ಹುಟ್ಟಿನಿಂದ ಆರಾಧ್ಯ ಬ್ರಾಹ್ಮಣರು ; ಹನ್ನೆರಡನೇ ಶತಮಾನದ ಬಸವಣ್ಣನ ಸಮಕಾಲೀನ ರಾಗಿದ್ದ ಮಲ್ಲಿಕಾರ್ಜುನ ಪಂಡಿತಾರಾಧ್ಯರ (1100–1185) ವಂಶಸ್ಥರು.

ಆಂಧ್ರದಲ್ಲಿ ಆರಾಧ್ಯರು ತಮ್ಮನ್ನು ಆರಾಧ್ಯ ಬ್ರಾಹ್ಮಣರೆಂದು ಕರೆದು ಕೊಳ್ಳುತ್ತಾರೆ : ತಾವು ಪೂರ್ತಿ ಬ್ರಾಹ್ಮಣರೆಂಬಲ್ಲಿ ಅವರಿಗೆ ಅನುಮಾನಗಳೇ ಬರುವುದಿಲ್ಲ. ("ಬಸವ ಪಂಥ"ದವರನ್ನು ಒಟ್ಟಾರೆ ಆಂಧ್ರದವರು ಜಂಗಮರು ಎಂದು ಕರೆಯುತ್ತಾರೆ. "ಜಂಗಮುಲು" ಎಂಬ ಹೆಸರಿನ ಭಿಕ್ಷುಕ ಜನರೂ ಇದ್ದಾರೆ. ಇವರು ಜಾನಪದ ಕಲಾವಿದರಾಗಿದ್ದು ಕೋಲೆ ಬಸವನನ್ನು ಹಿಡಿದುಕೊಂಡು ಬಂದು ಆಡಿಸುತ್ತಾರೆ). ಆರಾಧ್ಯ ಬ್ರಾಹ್ಮಣರು ಇತರ ಬ್ರಾಹ್ಮಣರಂತೆ ಎಲ್ಲ ಶ್ರೌತ, ಸ್ಮಾರ್ತ ಕರ್ಮಗಳನ್ನೂ ಇಟ್ಟುಕೊಂಡಿದ್ದಾರೆ. ಬ್ರಾಹ್ಮಣರಂತೆ ಅವರಿಗೆ ಚಿಕ್ಕವಯಸ್ಸಿನಲ್ಲಿ ಉಪನಯನವಾಗಿ ಮೈಮೇಲೆ ಯಜ್ಞೋಪವೀತ ಧಾರಣೆಯಾಗಿರುತ್ತದೆ. ಮುಂದೆ ಲಿಂಗದೀಕ್ಷೆ ನಡೆದು, ಜನಿವಾರದ ಜೊತೆಗೆ ಇಷ್ಟ ಲಿಂಗವನ್ನೂ ಧರಿಸುತ್ತಾರೆ. ಜನಿವಾರವು ದೇಹ ಸಂಬಂಧಿಯಾಗಿದ್ದು ಕರ್ಮದ್ಯೋತಕವೆಂದೂ ಇಷ್ಟ ಲಿಂಗವು ಪ್ರಾಣ ಅಥವಾ ಆತ್ಮ ಸಂಬಂಧಿಯಾಗಿದ್ದು ಜ್ಞಾನದ್ಯೋತಕವೆಂದೂ ನಂಬುತ್ತಾರೆ. ಪ್ರಾತಃಕಾಲ ಇಷ್ಟಲಿಂಗ ಪೂಜೆಯ ಜೊತೆ ತಾವು ಭಸ್ಮಸ್ನಾನವನ್ನು ಮಾಡಿ (ತಲೆಯ ಮುಂಭಾಗದ ಮೇಲಿನಿಂದ ಭಸ್ಮವನ್ನು ಸುರಿದುಕೊಳ್ಳುವುದು), ಬಳಿಕ ಸಂಧ್ಯಾವಂದನೆಯನ್ನೂ ಸಾವಿತ್ರೀಮಂತ್ರ ಜಪವನ್ನೂ ಮಾಡುತ್ತಾರೆ. ಆಂಧ್ರದ ಸುಪ್ರಸಿದ್ಧ ಸಾಹಿತಿಯೂ ಸಮಾಜ ಸುಧಾರಕರೂ ವಿಧವಾವಿವಾಹ ಪ್ರತಿಪಾದಕರೂ ಆಗಿದ್ದ (ದಿ) ವೀರೇಶಲಿಂಗಂ ಪಂತುಲು ಅವರು ಜಾತಿ ವಿರೋಧಿಗಳಾಗಿದ್ದು ಜಾತಿ ನಿವಾರಣೆಗಾಗಿ ಜನ್ನಿವಾರವನ್ನು ತೆಗೆದುಹಾಕಿ ಇಷ್ಟಲಿಂಗವನ್ನು ಉಳಿಸಿಕೊಂಡರೆಂದೂ, ಯಾರೋ ಅದನ್ನೂ ತೆಗೆದುಹಾಕಬೇಕೆಂದು ಒತ್ತಾಯಿಸಿದಾಗ, ಕಣ್ಣಲ್ಲಿ ನೀರು ಹಾಕುತ್ತ ಅದನ್ನು ಮನಸ್ಸಿಲ್ಲದ ಮನಸ್ಸಿನಿಂದ ತೆಗೆದುಹಾಕಿದರೆಂದೂ ಒಂದು ಕತೆ ಇದೆ. ಆ ಕತೆಯ ಸತ್ಯಾಸತ್ಯತೆ ಏನೇ ಇರಲಿ, ಇಷ್ಟಲಿಂಗವು ಆತ್ಮಸಂಬಂಧಿಯಾದುದೆಂಬ ವೀರಶೈವರ ನಂಬಿಕೆಯನ್ನು ಆ ಕತೆಯು ಸುಂದರವಾಗಿ ಧ್ವನಿಸುತ್ತದೆ. (ಇನ್ನೊಬ್ಬ ಉಜ್ವಲ ದೇಶಾಭಿಮಾನಿಗಳೂ ಆಧುನಿಕ ತೆಲುಗು ಸಾಹಿತ್ಯ ಪ್ರವರ್ತಕರೂ ಆದ ದೇಶಬಂಧು ನಾಗೇಶ್ವರರಾವ್ ಅವರೂ ಆರಾಧ್ಯ ಬ್ರಾಹ್ಮಣರೇ), ಆಹಾರವನ್ನು ಎದೆಯ ಮೇಲಿನ ಇಷ್ಟಲಿಂಗಕ್ಕೆ ಅರ್ಪಿಸಿಯೇ ಊಟಮಾಡುವುದು (ನನ್ನ ಪ್ರತಿ ವಕ್ತರಾದ ಶ್ರೀ ವೀರೇಶಲಿಂಗಂ ಅವರು ಬಿಸಿ ಕಾಫಿಲೋಟವನ್ನು ಲಿಂಗಕ್ಕೆ ಒತ್ತಿ ಹಿಡಿದು ಅರ್ಪಿಸಿ ಬಳಿಕ ಕಾಫಿ ಕುಡಿದರು).

ಆರಾಧ್ಯ ಬ್ರಾಹ್ಮಣರು ನಿಯೋಗಿ ಸ್ಮಾರ್ತ ಬ್ರಾಹ್ಮಣರಿಗೆ ಹೆಣ್ಣು ಕೊಡುವುದಿಲ್ಲ, ಅವರಿಂದ ಹೆಣ್ಣು ತರುತ್ತಾರೆ. ಸ್ಮಾರ್ತ ಬ್ರಾಹ್ಮಣರಂತೆಯೇ ಇವರಿಗೂ ಗೋತ್ರ ಪ್ರವರ ಉಂಟು. (ನನ್ನ ಪ್ರತಿವಕ್ತರಾದ ಶ್ರೀ ವೀರೇಶಲಿಂಗಂ ಅವರದು ಗೌತಮ ಗೋತ್ರ). ವೇದ ಪ್ರಾಮಾಣ್ಯವನ್ನು ನಂಬುವುದಲ್ಲದೆ ಅವರಲ್ಲಿ ಋಗ್ವೇದಿಗಳೂ ಯಜುರ್ವೇದಿಗಳೂ ಇದ್ದಾರೆ. ಆದರೆ ತಾವೇ ಶ್ರೇಷ್ಠರೆಂದು ಭಾವಿಸುವ ಅವರು ಇತರ ಬ್ರಾಹ್ಮಣರ ಮನೆಗಳಲ್ಲಿ ಊಟ ಮಾಡುವುದಿಲ್ಲ. ಅವರು ಕಟ್ಟಾ

ಸಸ್ಯಾಹಾರಿಗಳೂ ಹೌದು. ತ್ರಿಕಾಲಸಂಧ್ಯಾವಂದನ, ವಿವಾಹಕಾಲದಲ್ಲಿ ಅಗ್ನಿ ಪ್ರತಿಷ್ಠಾಪನೆ, ಹೋಮ, ಅಂತ್ಯೇಷ್ಟಿಗಳು ಅವರಲ್ಲಿ ಉಂಟು. ಆದರೆ ಬ್ರಾಹ್ಮಣರಂತೆ ಶವವನ್ನು ಸುಡುವುದಿಲ್ಲ, ಹೂಳುತ್ತಾರೆ. ವಿಧವೆಯರಿಗೆ ಕೇಶಮುಂಡನ ಮಾಡಿಸುವ ಪದ್ಧತಿ ಹಿಂದೆಯೂ ಇರಲಿಲ್ಲ. ಆರಾಧ್ಯೇತರರೆಲ್ಲರೂ ಅವರ ಪ್ರಕಾರ "ಭವಿಗಳು". ದೀಕ್ಷೆ ಕೊಡುವ ಗುರುಗಳು ಅವರಾದ್ದರಿಂದ, ಭವಿಗಳಲ್ಲಿ ಕೆಲವರಿಗೆ ಕೇವಲ ಭಸ್ಮ ರುದ್ರಾಕ್ಷಿಗಳನ್ನೂ, ಕೆಲವರಿಗೆ ಲಿಂಗದೀಕ್ಷೆಯನ್ನೂ ಅವರು ಕೊಡುತ್ತಾರೆ. ಅವರಿಂದ ಲಿಂಗದೀಕ್ಷೆ ಪಡೆದವರು ತಮ್ಮ ಜಾತಿಯಲ್ಲಿಯೇ ಮುಂದುವರಿಯುತ್ತ ಇಷ್ಟಲಿಂಗ ಪೂಜೆ ಮಾಡಿಕೊಳ್ಳುತ್ತಾರೆ. ಆಂಧ್ರದಲ್ಲಿ ಲಿಂಗಧಾರಿ ವೈಶ್ಯರಿದ್ದಾರೆ. ಒಬ್ಬ ಆರಾಧ್ಯ ಬ್ರಾಹ್ಮಣನಿಗೆ ಇನ್ನೊಬ್ಬ ಆರಾಧ್ಯ ಬ್ರಾಹ್ಮಣ ದೀಕ್ಷೆ ಕೊಡುತ್ತಾನೆ. ಸಗೋತ್ರ ವಿವಾಹ ಅವರಲ್ಲಿ ನಿಷಿದ್ಧ. ಪಾಲ್ಕುರಿಕೆ ಸೋಮನು ತನ್ನ "ಪಂಡಿತಾರಾಧ್ಯ ಚರಿತ್ರೆ"ಯಲ್ಲಿ ಪಂಡಿತಾರಾಧ್ಯರಿಗೆ ಸಂಧ್ಯಾವಂದನೆಯನ್ನು ಹೇಳದೇ ಇರಲು ಕಾರಣ ಕವಿಯು ಪಂಚಪೀಠ ಪರಂಪರೆಗೆ ಸೇರಿದ ಲಿಂಗಾಯತನಾಗಿರುವುದರಿಂದ ಎಂದು ಕೆಲವರ ವ್ಯಾಖ್ಯಾನ. ಆಂಧ್ರದ ಕೆಲವು ಆರಾಧ್ಯ ಬ್ರಾಹ್ಮಣರು ಪಂಚಪೀಠಗಳಲ್ಲಿ ಮರುಳಾರಾಧ್ಯರನ್ನು ಬಿಟ್ಟು ಉಳಿದ ನಾಲ್ಕೂ ಪೀಠಗಳ ಅನುಯಾಯಿಗಳಾಗಿದ್ದಾರೆ. ಇನ್ನು ಕೆಲವರು ಯಾವುದೇ ಪೀಠಕ್ಕೂ ಅನುಯಾಯಿಗಳು ಅಲ್ಲ. ಕೆಲವರು ತಾವು ಶಿವಲೆಂಕ ಮಂಚನ ಪಂಡಿತನ ಅನುಯಾಯಿಗಳೆಂದು ಹೇಳಿಕೊಳ್ಳುತ್ತಾರೆ. ಶ್ರೀಶೈಲ ಪೀಠವು ಮಲ್ಲಿಕಾರ್ಜುನ ಪಂಡಿತಾರಾಧ್ಯರದ್ದು ಎಂದು ನಂಬಿಕೆ ಇದ್ದರೂ, ಅದು ಈಗ ಪಂಚಪೀಠದ ಜಂಗಮರ ಕೈಯಲ್ಲಿರುವುದರಿಂದ ಆ ಪೀಠದ ಮೂಲಕರ್ತೃ ಪಂಡಿತಾರಾಧ್ಯರೇ ಬೇರೆ, ಮಲ್ಲಿಕಾರ್ಜುನ ಪಂಡಿತಾರಾಧ್ಯರೇ ಬೇರೆ ಎಂದು ಶ್ರೀ ವೀರೇಶಲಿಂಗಂ ಅವರ ಊಹೆ (ಶ್ರೀ ವೀರೇಶಲಿಂಗಂ ಅವರು ಮಲ್ಲಿಕಾರ್ಜುನ ವಂಶಸ್ಥರು ತಾವು ಎಂದು ಹೇಳಿಕೊಳ್ಳುತ್ತಾರೆ ಎಂಬುದನ್ನು ಆಗಲೇ ಗುರುತಿಸಿದೆ).

ಕರ್ನಾಟಕದಲ್ಲಿ ಜಂಗಮರ ಪಾದೋದಕವನ್ನು ಲಿಂಗಕ್ಕೆ ಅಭಿಷೇಕ ಮಾಡುವ ಪದ್ಧತಿ ಇರುವಂತೆ ಆಂಧ್ರದಲ್ಲಿ ಆರಾಧ್ಯ ಬ್ರಾಹ್ಮಣರ ಪಾದೋದಕವನ್ನು ಲಿಂಗಕ್ಕೆ ಎರೆಯುವಂತಿಲ್ಲ. ಅವರ ಪಾದೋದಕವನ್ನು ಭಕ್ತರು ತಲೆಯಮೇಲೆ ಸೇಚನ ಮಾಡಿಕೊಳ್ಳುತ್ತಾರೆ: ಒಂದೆರಡು ಹನಿಗಳನ್ನು ಬಾಯಲ್ಲಿ ಹಾಕಿಕೊಳ್ಳುತ್ತಾರೆ. ಆಂಧ್ರದ ಆರಾಧ್ಯ ಬ್ರಾಹ್ಮಣರಲ್ಲಿ ವಿರಕ್ತ ಸಂಪ್ರದಾಯವಿಲ್ಲ. ಆರಾಧ್ಯ ಬ್ರಾಹ್ಮಣರು ದೇವಾಲಯಗಳಲ್ಲಿ ಶಿವಪೂಜೆ ಮಾಡುವ ಶಿವಬ್ರಾಹ್ಮಣರು ಅಲ್ಲ. (ಶಿವದ್ವಿಜ ಅಥವಾ ಶಿವಬ್ರಾಹ್ಮಣರಿಗೆ ಬ್ರಾಹ್ಮಣ ಸಮಾಜದಲ್ಲಿ ಕೀಳುಸ್ಥಾನವಿದೆಯಾದರೂ ಮಲ್ಲಿಕಾರ್ಜುನ ಪಂಡಿತಾರಾಧ್ಯನ ತಂದೆ ದ್ರಾಕ್ಷಾರಾಮದಲ್ಲಿ ಭೀಮೇಶ್ವರ ದೇವಾಲಯದ ಪ್ರಧಾನ ಅರ್ಚಕನಾಗಿದ್ದ).

ಆಂಧ್ರದ ಆರಾಧ್ಯ ಬ್ರಾಹ್ಮಣ ಸಮಾಜವು ಅನೇಕ ಮೂಲಪದ್ಧತಿಗಳನ್ನು ಉಳಿಸಿಕೊಂಡು ಬಂದಿದೆ. ಅವರು ಈ ದಿನ ಬಸವನ ಅನುಯಾಯಿಗಳ ಜೊತೆ ಅವರು ಅಬ್ರಾಹ್ಮಣರೆಂಬ ಕಾರಣಕ್ಕೆ ಮಿಶ್ರವಾಗುವುದಿಲ್ಲ. ಅವರು ಇಂದು ಬಹು ದೊಡ್ಡ ಸಂಸ್ಕೃತ ವಿದ್ವಾಂಸರಾಗಿದ್ದಾರೆ. ಅವರನ್ನು ಕರ್ನಾಟಕದ ವೀರಶೈವರೊಡನೆ ಐತಿಹಾಸಿಕವಾಗಿ ಮತ್ತು ಸಮಕಾಲೀನವಾಗಿ ಹೋಲಿಸಿ ಅಧ್ಯಯನ ನಡಸಿದರೆ ಆಗ ಲಿಂಗವಂತ ಸಮಾಜದ ಸಮಾಜೋಧಾರ್ಮಿಕ ಇತಿಹಾಸವನ್ನು ಗಟ್ಟಿ ನೆಲದ ಮೇಲೆ ನೆಲೆ ನಿಲ್ಲಿಸಲು ಸಾಧ್ಯವಾಗುತ್ತದೆ. ಅನೇಕ ಮೂಲಭೂತ ಸಮಸ್ಯೆಗಳ ಮೇಲೆ ಆಂಧ್ರದ ಆರಾಧ್ಯ ಬ್ರಾಹ್ಮಣರನ್ನು ಕುರಿತಾದ ಅಧ್ಯಯನವು ಸ್ವಾಗತಾರ್ಹ ಬೆಳಕನ್ನು ಚೆಲ್ಲುವ ಸೂಚನೆಗಳಿವೆ.

ಆರಾಧ್ಯ ಬ್ರಾಹ್ಮಣರು (ಮೈಸೂರು)

ಈ ಶತಮಾನದ ಮೊದಲ ದಶಕಗಳ ಮೈಸೂರು ಪ್ರಾಂತದ ಆರಾಧ್ಯ ಜಾತಿಯ ಸ್ವರೂಪದ ಬಗ್ಗೆ ಎಚ್. ವಿ. ನಂಜುಂಡಯ್ಯ ಮತ್ತು ಎಲ್. ವಿ. ಅನಂತ ಕೃಷ್ಣ ಅಯ್ಯರ್ ಅವರ The Mysore Tribes and Castes (II) ಕೆಲವು ವಿವರಗಳನ್ನು ನೀಡಿದೆ. ಕ್ರಿ.ಶ. 1881 ರಲ್ಲಿ ಜನಗಣತಿ ಪ್ರಕಾರ ಮೈಸೂರು ಪ್ರಾಂತದಲ್ಲಿ 5912 ಆರಾಧ್ಯರಿದ್ದರು. ಏಳನೇ ಎಂಟನೇ ವಯಸ್ಸಿನಲ್ಲಿ ಉಪನಯನ ವನ್ನೂ ದೀಕ್ಷೆಯನ್ನೂ ಪಡೆಯುತ್ತಿದ್ದರು. ವಿವಾಹವಿಧಿಗಳೆಲ್ಲ ಬ್ರಾಹ್ಮಣರ ರೀತಿಯಲ್ಲಿ. ಲಿಂಗಾಯತರಲ್ಲಿರುವಂತೆ ಅವರಲ್ಲಿ ವಿಧವಾವಿವಾಹವಿರಲಿಲ್ಲ. ಶೀಲ ವನ್ನು ಕಳೆದುಕೊಂಡ ಹೆಂಗಸರಿಗೆ ಬ್ರಾಹ್ಮಣರಂತೆ "ಘಟಶ್ರಾದ್ಧ"ವನ್ನು ಮಾಡಿ ತ್ಯಜಿಸುತ್ತಿದ್ದರು. ಆ ಕಾಲದಲ್ಲಿ (20ನೇ ಶತಮಾನದ ಆದಿ) ಆರಾಧ್ಯರಿಗೂ ಲಿಂಗಾಯತರಿಗೂ ಸಂಪರ್ಕಗಳು ಕಡಮೆಯಾಗಿದ್ದುವು, ಮತ್ತು ಆರಾಧ್ಯರು ಲಿಂಗಾಯತ ಜನರ ಮದುವೆಯ ಪೌರೋಹಿತ್ಯ ಕಾರ್ಯವನ್ನು ನಿಲ್ಲಿಸಿಬಿಟ್ಟಿದ್ದರು; ಏಕೆಂದರೆ ಲಿಂಗಾಯತರು ಅವರು, ಬಹುಶಃ ಜನಿವಾರ ಧರಿಸುತ್ತಿದ್ದುದರಿಂದ ಅನ್ಯರೆಂದು ತಿಳಿದು ಪೌರೋಹಿತ್ಯಕ್ಕೆ ಆಹ್ವಾನಿಸುತ್ತಿರಲಿಲ್ಲ. ಮೈಮೇಲೆ ಜನಿವಾರ ಲಿಂಗ ಎರಡನ್ನೂ ಧರಿಸುತ್ತಿದ್ದರು. (The Mysore Tribes and Castes II ರಲ್ಲಿ ಕೊಟ್ಟಿರುವ ಆರಾಧ್ಯರ ಚಿತ್ರದಲ್ಲಿ ಕೊರಳಲ್ಲಿ ಜನ್ನಿವಾರ, ಇಷ್ಟಲಿಂಗಗಳು ಸ್ಪಷ್ಟವಾಗಿ ಕಾಣಿಸುತ್ತವೆ.) ಅವರು ಲಿಂಗಾಯತರ ಮನೆಯಲ್ಲಿ ಊಟ ಮಾಡು ತ್ತಿರಲಿಲ್ಲ. ಅವರು ಲಿಂಗಾಯತರಂತೆ ಅಷ್ಟಾವರಣ, ಪಂಚಾಚಾರ, ಷಟ್ಸ್ಥಲಗಳನ್ನು ಗೌರವಿಸಿದರೂ, ವೇದಗಳಲ್ಲಿ ಅಚಲಶ್ರದ್ಧೆ ಇರುತ್ತಿತ್ತು. ಆರಾಧ್ಯರಲ್ಲಿ ಸಾವು ಸಂಭವಿಸಿದರೆ, ಸತ್ತವನ ಲಿಂಗವನ್ನು ಬೂದಿಯಲ್ಲಿ ತೊಳೆದು ತೋಳಿಗೆ ಕಟ್ಟು ತ್ತಿದ್ದರು. ಸ್ಮಶಾನದಲ್ಲಿ ಚೌಕಾಕಾರದ ಸಮಾಧಿಯನ್ನು ಸಿದ್ಧಪಡಿಸಿಯಾದಮೇಲೆ, ಸ್ಮಶಾನದಿಂದ ನಾಲ್ವರು ಹೆಣವಿದ್ದ ಮನೆಗೆ ತಾವು ಶಿವದೂತರೆಂದು ಹೇಳಿಕೊಂಡು

ಬಂದಾಗ ಆ ಮನೆಯವರು ಅವರನ್ನೂ ಉಳಿದವರನ್ನೂ ಸತ್ಕರಿಸಿ ಭೋಜನ ಮಾಡಿಸುತ್ತಿದ್ದರು (ಶವಸಂಸ್ಕಾರಕ್ಕೆ ಮೊದಲು ಭೋಜನ ಮಾಡಿಸುವ ವಿಷಯ ನಿಜವಾದರೂ ಆರಾಧ್ಯರು ಆ ಸಂಗತಿಯನ್ನು ನಿರಾಕರಿಸುತ್ತಿದ್ದರು). ಬಳಿಕ ಅಲಂಕರಿಸಿದ ಮಂಟಪದಲ್ಲಿ ಶವವನ್ನು ಕೊಂಡೊಯ್ದು ಪದ್ಮಾಸನದಲ್ಲಿ ಹೂಳುತ್ತಿದ್ದರು. ಹನ್ನೊಂದನೇ ದಿನ ಹನ್ನೊಂದು ಆರಾಧ್ಯರಿಗೆ ಊಟ ಹಾಕುತ್ತಿದ್ದರು. ಮುಂದೆ ಆ ವರ್ಷದ ಪ್ರತಿತಿಂಗಳು ಅದೇ ತಿಥಿಯಲ್ಲಿ ಕೊನೆಯ ಪಕ್ಷ ಇಬ್ಬರು ಆರಾಧ್ಯರಿಗೂ ಉಳಿದವರಿಗೂ ಊಟ ಹಾಕುತ್ತಿದ್ದರು. ಬ್ರಾಹ್ಮಣರಂತೆ ವಾರ್ಷಿಕ ಶ್ರಾದ್ಧ ಇಲ್ಲ; ಬರೀ ಆರಾಧನೆ ಮಾತ್ರ ಇರಬಹುದು. ಶಿವಭಕ್ತ ಶಿವನ ಲೋಕಕ್ಕೆ ಹೋಗಿ ಮುಕ್ತನಾಗಿದ್ದಾನೆ ಎಂಬುದರ ಆಚರಣೆಗಾಗಿ ಮಾತ್ರ ಆರಾಧನೆ. ಆರಾಧನೆ ಅಥವಾ ಸಾಮೂಹಿಕ ಭೋಜನದಲ್ಲಿ ಜನಿವಾರದ "ಅಪಸವ್ಯ" ಇಲ್ಲ (ಅಪಸವ್ಯ : ಬಲದಿಂದ ಎಡಕ್ಕೆ ಧರಿಸುವುದು) : ಎಳ್ಳಿನ ಬಳಕೆಯಿಲ್ಲ, ದರ್ಭೆ ಬಳಕೆ ಇಲ್ಲ; ಹೋಮ ಪಾರ್ವಣ ತರ್ಪಣಗಳು ಇಲ್ಲ. ಅವರು ದೇವಾಲಯದ ಅರ್ಚಕರಲ್ಲ; ದೇವಾಲಯದ ಪ್ರಸಾದವನ್ನು ಸ್ವೀಕರಿಸುವುದಿಲ್ಲ. ಅವರು ವಿಜಯನಗರದ ದೊರೆಗಳ ಕಾಲದಲ್ಲಿ ಮೈಸೂರು ಪ್ರಾಂತಕ್ಕೆ ಬಂದಿರಬೇಕೆಂದು ಊಹೆ. ಅವರು ಆಚರಿಸುವ ಹಬ್ಬಗಳು ಮತ್ತು ಉಪವಾಸಗಳು: ರೇಣುಕ ಜಯಂತಿ, ಪಂಡಿತಾರಾಧ್ಯ ಜಯಂತಿ, ಮರುಳಾರಾಧ್ಯ ಜಯಂತಿ, ಏಕೋರಾಮಾರಾಧ್ಯ ಜಯಂತಿ, ಅಮಾವಾಸ್ಯೆ, ಏಕಾದಶಿ, ಯುಗಾದಿ ಮತ್ತು ಸಂಕ್ರಮಣಗಳು. ವರ್ಣಾಶ್ರಮ ಪದ್ಧತಿಯಲ್ಲಿ ಅವರಿಗೆ ನಂಬಿಕೆ ಉಂಟು.

ಇಂದಿನ ಕರ್ನಾಟಕದ ಆರಾಧ್ಯರು ಲಿಂಗಾಯತ ಸಮಾಜದೊಂದಿಗೆ ಪೂರ್ಣ ಹೊಂದಿಕೊಂಡಿರುವುದಲ್ಲದೆ, ತಾವೂ ಲಿಂಗಾಯತರೆಂದೇ ಭಾವಿಸಿದ್ದಾರೆ. ಅವರಲ್ಲಿ ಕೆಲವರು ಉಪನಯನ ಸಂಸ್ಕಾರವನ್ನು ಉಳಿಸಿಕೊಂಡೂ, ಮೈಮೇಲೆ ಜನಿವಾರ ಧರಿಸಿಯೂ ಲಿಂಗಾಯತರಲ್ಲಿ ಒಂದಾಗಿದ್ದಾರೆ. ಶಿಖೆ ಅಗ್ನಿಪ್ರತಿಷ್ಠಾಪನೆಗಳನ್ನು ವೇದಗಳ ಬಗ್ಗೆ ಶ್ರದ್ಧೆಯನ್ನೂ ಉಳಿಸಿಕೊಂಡು ಬಂದಿದ್ದಾರೆ. ಜಂಗಮರ ಜೊತೆ ಅವರು ವಿವಾಹಸಂಬಂಧಗಳನ್ನು ಒಪ್ಪಿಕೊಂಡಿದ್ದಾರೆ. ಉಳಿದವರಿಗಿಂತ, ಜಂಗಮರಿಗಿಂತ, ಹೆಚ್ಚಿನ ಸಂಸ್ಕೃತ ಪಕ್ಷಪಾತ ಅವರಲ್ಲಿದೆ.

ಇಂದಿನ ದಕ್ಷಿಣ ಕರ್ನಾಟಕದ ಆರಾಧ್ಯರು ಲಿಂಗಾಯತ ಸಮಾಜದೊಂದಿಗೆ ಪೂರ್ಣವಾಗಿ ಹೊಂದಿಕೊಂಡಿರುವುದಲ್ಲದೆ ತಾವೂ ಲಿಂಗಾಯತರೆಂದೇ ಭಾವಿಸಿದ್ದಾರೆ. ಕೆಲವು ವರ್ಷಗಳ ಹಿಂದೆ ತಾವು ಬ್ರಾಹ್ಮಣರ ಜೊತೆ ಸೇರಬೇಕೋ ಲಿಂಗಾಯತರ ಜೊತೆ ಸೇರಬೇಕೋ ಎಂಬ ವಾದ ಬಂದಾಗ ಬಹುಸಂಖ್ಯಾತರಾದ ಲಿಂಗಾಯತರ ಜೊತೆ ಇರುವುದೇ ಕ್ಷೇಮವೆಂಬ ತೀರ್ಮಾನಕ್ಕೆ ಬಂದರಂತೆ (ಕೆಲವರು ಯಾವ ಗುಂಪಿಗೂ ಸೇರದೆ ತಾವೇ ಪ್ರತ್ಯೇಕವಾಗಿ ಇದ್ದುಬಿಡೋಣವೆಂಬ ಸಲಹೆಯನ್ನೂ

ಕೊಟ್ಟಿದ್ದರಂತೆ) ಅವರು ಇಂದಿಗೂ ಉಪನಯನ ಸಂಸ್ಕಾರವನ್ನು ನೇರವೇರಿಸುತ್ತಾರೆ ಮತ್ತು ಮೈಮೇಲೆ ಇಷ್ಟ ಲಿಂಗದ ಜೊತೆ ಜನಿವಾರವನ್ನು ಧರಿಸುತ್ತಾರೆ. ಶಿಖಾ, ಅಗ್ನಿ ಪ್ರತಿಷ್ಠಾಪನೆ, ವೇದಗಳ ಬಗ್ಗೆ ಶ್ರದ್ಧೆಗಳನ್ನು ಉಳಿಸಿಕೊಂಡು ಬಂದಿದ್ದಾರೆ, ಮತ್ತು ತಮ್ಮ ಮನಸ್ಸಿನ ಅಂತರಾಳದಲ್ಲಿ ಜಂಗಮರ ಬಗ್ಗೆ ಸ್ವಲ್ಪ ಕೀಳು ಮನೋಭಾವವನ್ನು ಹೊಂದಿದ್ದರೂ ಅವರ ಜೊತೆ ವಿವಾಹ ಸಂಬಂಧಗಳಾಗುವುದನ್ನು ಒಪ್ಪಿಕೊಂಡಿದ್ದಾರೆ. ಮೈಸೂರಲ್ಲಿ ಆರಾಧ್ಯ ಮಹಾಸಭಾ ಇದ್ದು ಅದು ಸಂಸ್ಕೃತ ಶಾಲೆಯನ್ನು ನಡಸುತ್ತ ಆರಾಧ್ಯ ಜನರ ಹಿತಾಸಕ್ತಿಗಳನ್ನು ನೋಡಿಕೊಳ್ಳುತ್ತಿದೆ. ಜಂಗಮರಿಗಿಂತ ಹೆಚ್ಚಿನ ಸಂಸ್ಕೃತ ನಿಷ್ಠೆ ಆರಾಧ್ಯರಲ್ಲಿದೆ. ಆರಾಧ್ಯ ಪಂಗಡದವರು ಯಾರೂ ಕಾವಿ ಬಟ್ಟೆ ಧರಿಸಿ ಮಠಸ್ಥರು ಅಥವಾ ಸನ್ಯಾಸಿಗಳಾಗುವುದಿಲ್ಲ. ಇವರು ಬೇರೆ ಬೇರೆ ಜಾತಿಯ ಜನರಿಗೆ ಪೌರೋಹಿತ್ಯವನ್ನು ನಡೆಸುತ್ತಾರೆ.

ತುಮಕೂರು ಪ್ರದೇಶದ ಕೆಲವು ಆರಾಧ್ಯರು ಮೈಮೇಲೆ ಜನಿವಾರವನ್ನು ಧರಿಸುತ್ತಿಲ್ಲ; ಹೆಸರಿಗೆ ಆರಾಧ್ಯರಾದರೂ ಉಳಿದಂತೆ ಅವರ ಆಚಾರ ವಿಚಾರಗಳೆಲ್ಲ ಜಂಗಮರವೇ ಆಗಿವೆ.*

---

* ದಕ್ಷಿಣ ಕರ್ನಾಟಕದ ಅನೇಕ ವಿಶ್ವಕರ್ಮರು ಮೈಮೇಲೆ ಜನಿವಾರದ ಜೊತೆ ಇಷ್ಟ ಲಿಂಗವನ್ನೂ ಧರಿಸುತ್ತಾರೆ ; ಅವರು ಶೈವ ವಿಶ್ವಕರ್ಮ ಬ್ರಾಹ್ಮಣರು. ಬರಿಯ ವಿಶ್ವಕರ್ಮ ಬ್ರಾಹ್ಮಣರೆಂದು ಕರೆದು ಕೊಳ್ಳುವವರು ಕೇವಲ ಜನಿವಾರವನ್ನು ಮಾತ್ರ ಧರಿಸುತ್ತಾರೆ. ಲಿಂಗಧಾರಿ ನಗರ್ತರೂ ಕೂಡ ಇಷ್ಟ ಲಿಂಗದ ಜೊತೆ ಜನಿವಾರವನ್ನು ಧರಿಸುತ್ತಾರೆಂದು ತಿಳಿದು ಬಂದಿದೆ. ದಕ್ಷಿಣ ಕರ್ನಾಟಕದ ಎಲ್ಲ ಜಾತಿಯ ದೈವಗಳ ವಿಗ್ರಹಗಳ ಕೊರಳಲ್ಲಿ ಕರಡಿಗೆಯಿರುವುದೂ ಅಧ್ಯಯನ ಯೋಗ್ಯವಾಗಿದೆ.

ತಮಿಳುನಾಡಿನಲ್ಲಿ 'ವೀರಶೈವ'ರೆಂದು ಹೆಸರಿಗೆ ಮಾತ್ರ ಕರೆದುಕೊಳ್ಳುತ್ತ, ಪಂಚ ಪೀಠಗಳು ಬಸವ, ಅಲ್ಲಮರ ಹೆಸರೂ ತಿಳಿಯದ ಹಲವರಿದ್ದಾರೆಂದು ತಿಳಿದು ಬರುತ್ತದೆ. ಅವರು ತಮಿಳುನಾಡಿನ ಶೈವಸಿದ್ಧಾಂತವನ್ನು ಒಪ್ಪಿಕೊಂಡಿದ್ದಾರೆ. ಹಿಂದೊಮ್ಮೆ ಯಾವಾಗಲೋ "ಮಡತ್ತಾರ್"ಗಳು (ಮಡ = ಮಠ) ಅಥವಾ ಕರ್ನಾಟಕದ ಮಠಸ್ಥ ಜಂಗಮರು ತಮಿಳುನಾಡಿಗೆ ಹೋಗಿ ಅವರಿಗೆ ಲಿಂಗದೀಕ್ಷೆ ಕೊಟ್ಟು ಅವರನ್ನು ವೀರಶೈವರೆಂದು ಕರೆದರು. ಮುಂದೆ "ಮಡತ್ತಾರ್"ಗಳಿಗೂ ಅವರಿಗೂ ಸಂಪರ್ಕ ತಪ್ಪಿತು. ಮೊದಲು ಹೇಳಿಕೊಟ್ಟಿದ್ದ ಆಚಾರ ವ್ಯವಹಾರಗಳು ಮರೆತು ಹೋದುವು ; ಹೆಸರು ಮಾತ್ರ ನೆನಪಲ್ಲಿ ಉಳಿಯಿತು. ತಮಿಳುನಾಡಿನ ಲಿಂಗವಂತರನ್ನು "ಪಂಡಾರಂ" (= ಭಂಡಾರ) ಎಂದೂ ಕೆಲವೆಡೆ ಕರೆಯುತ್ತಾರೆ. ಚಿದಂಬರದಲ್ಲಿ ತನ್ನನ್ನು ತಾನು ವೀರಶೈವನೆಂದು ಕರೆದುಕೊಳ್ಳುವ, ಆದರೆ ವೀರಶೈವದ ಪದ್ಧತಿಗಳು ತಿಳಿಯದ ಒಬ್ಬ ಪದವೀಧರನನ್ನು ಭೇಟಿ ಮಾಡಿದ್ದೇನೆ. ತಮಿಳುನಾಡಿನ ವೀರಶೈವರ ಸಮೀಕ್ಷೆಯೂ ಅಗತ್ಯವಾಗಿ ನಡೆಯಬೇಕಾದ ಕೆಲಸವಾಗಿದೆ.

ಅನುಬಂಧ-3

ಲಿಂಗವಂತರಲ್ಲಿ ಜಾತಿ ಘರ್ಷಣೆ
(ಹತ್ತೊಂಬತ್ತನೇ ಶತಮಾನದ ಒಂದು ದಾಖಲೆ)

"ವಿಶೇಷ ವೀರಶೈವವಾದ ನಿರ್ಣಯ"

ಧಾರವಾಡ ಜಿಲ್ಲಾ ಕೋಡ ತಾಲ್ಕು ಮುಡ್ಯೂರು ಗ್ರಾಮದ ಪಟೇಲ ಸದಿಯಪ್ಪ ಗೌಪ್ಪಡನ ಮಗ ಮಲ್ಲನಗೌವುಡ ಮತ್ತು ಸೂಡಂಬಿ ಲಿಂಗನಗೌವುಡ ಹಾಂಗೂ ಅತ್ತೀಕಟ್ಟೀ ಬಸಪ್ಪ ಇವರೊಡನೆ ಹಿರಿ ಅಣಜಿ ಪಟೇಲ ಮಲ್ಲಗೌವುಡನ ಮಗ ಲಿಂಗನಗೌವುಡ ಇವರುಗಳ ಮತ ಸಂಬಂಧವಾದ ಕಲಹವನ್ನು ಸೂಡಂಬಿ ಗ್ರಾಮದಲ್ಲಿ ಸನ್ 1886ನೇ ಯಿಸವಿ ಜನವರಿ ತಾರೀಖು 21 ನೇ ದಿವ್ಸ ಗೋಪಾಲ ಗಣೇಶ ರಾಮಭಟ್ಟ ಬಾಳಕೃಷ್ಣಸ್ವಾಮಿ ಮುಂತಾದ ವಂಬತ್ತು ಜನ ಆಫೀಸರೆಂದು ಶೇರಿ ವಿಶೇಷ ದೀಕ್ಷ ವಿವಾದ ನಿರ್ಣಯವೆಂದು ಬರದ ಫೈಸಲಿನಲ್ಲಿ–

॥ ಪಂಚಾಯಿತರ ಅಭಿಪ್ರಾಯ ॥

ವೀರಶೈವ ವೆಂಬುವದೊಂದು ಮತವು ಅದರಲ್ಲಿ ಸಾಮಾನ್ಯ ವಿಶೇಷ ನಿರಾಭಾರಿಯೆಂದು ತ್ರಿವಿಧವಾಗಿ ಸ್ಕಂದ ಮುಂತಾದ ಶೈವ ಪುರಾಣಾದಿ ಆಗಮುಗಳಲ್ಲಿಯೂ ಕೂಡ ವಿದ್ಯುಕ್ತ ದೀಕ್ಷಾ ಸಂಸ್ಕಾರವು ವಿಶೇಷ ವೀರಶೈವರಲ್ಲಿ ಆ ಸಂಸ್ಕಾರದೀದಾ ಪ್ರಾಪ್ತವಾಗುವ ಐಯ್ಯಾತನವೆಂದರೆ ಗುರುಸ್ಥಲಾಧಿಕಾರವು ಷಟ್ಸ್ಥಲಾಧಿಕಾರವು ಸಾಮಾನ್ಯ ವೀರಶೈವ ನೊಣಬ ಸಾದು ಮತದಲ್ಲಿ ಆಗಕೂಡದೆಂತಲೂ ವಿಶೇಷ ವೀರಶೈವರಾದ ಮುಖಾರಿ ಪಂಚಮರಿಗೇನೆ ವಿದ್ಯುಕ್ತ ದೀಕ್ಷ ಸಂಸ್ಕಾರ ವಾಗಬಹುದೆಂತ ರಂಭಾಪುರಿ ಸಂಸ್ಥಾನದವರಿಂದ ಪ್ರಾಪ್ತವಾದ ಆಗಮ ಪ್ರಮಾಣಗಳಿಂದಾ ನಿಷ್ಕರ್ಷೆ ಮಾಡಿರುವದಾಗಿ ಉದಹರಿಸಿ ಹಿರಿ ಅಣಜಿ ಲಿಂಗನಗವುಡನ ಪಕ್ಷದವರಿಗೆ ಪ್ರಶ್ನೆ ಮಾಡಿದ್ದರಲ್ಲಿ ಗೋಡೇಕೆರೆ* ಮಹಲಿಂಗಯ್ಯಾ ಸರಿಯಾದ ಉತ್ತರ ಕೊಡಲಿಲ್ಲವೆಂತಲೂ ಮಡ ಲೂರು ಮಲ್ಲನಗೌಡನೆ ತರ್ಕಿನ ವಿರೂಪಾಕ್ಷ ಶಾಸ್ತ್ರಿಗಳು ಸಾದರು ನೊಣಬರು ಸಾಮಾನ್ಯ ವೀರ ಶೈವರು ವಿದ್ಯುಕ್ತ ದೀಕ್ಷ ಸಂಸ್ಕಾರದಿಂದ ಪ್ರಾಪ್ತವಾದ ಐಯ್ಯತನವಾಗಕೂಡದೆಂತ ಸಪ್ರಮಾಣ ಗ್ರಂಥಗಳ ತೋರಿಸಿದರೆಂದು ಪುರಾಣಾಗಮದ ಗ್ರಂಥಗಳನ್ನೇ ಉದಹರಿಸಿಧೆ-ಇದನ್ನು ಸಮಗ್ರ ಲಿಪಿಸುವದಕ್ಕೆ ಪತ್ರಿಕೆ ವಿಸ್ತಾರ ಸಾಲದ ಕಾರಣ ಮುಖ್ಯಾಭಿಪ್ರಾಯ ತ್ಯಗದುಕೊಳ್ಳಲಾಯಿತು॥

---

* ಚಿಕ್ಕನಾಯಕನಹಳ್ಳಿ ತಾಲ್ಲೂಕು ಗೋಡೆಕೆರೆಯಲ್ಲಿರುವ ಮಠವು ನೊಣಬ ಲಿಂಗ ವಂತರಿಗೆ ಬಹುಮುಖ್ಯವಾದುದು. ಆ ಮಠದ ಹತ್ತೊಂಬತ್ತನೇ ಶತಮಾನದ ಮಹಾಲಿಂಗಯ್ಯ ಎಂಬಾತ ಸುಪ್ರಸಿದ್ಧ ವ್ಯಕ್ತಿಯಾಗಿದ್ದ ವಿಷಯ ಈಗಲೂ ಜನರ ನೆನಪಿನಲ್ಲಿ ಉಳಿದಿದೆ. ಜಾತಿ ಸಂಬಂಧವಾಗಿ ಆ ಮಠಕ್ಕೂ ರಂಭಾಪುರೀ ಮಠಕ್ಕೂ ವಾದ ವಿವಾದಗಳಿದ್ದು, ನ್ಯಾಯಾಲಯಕ್ಕೂ ಹೋದ ವಿಷಯವು ಸುಪ್ರಸಿದ್ಧವಾಗಿದೆ, ಆ ಪ್ರದೇಶದ ನೊಣಬರಲ್ಲಿ. ಇವೆಲ್ಲವೂ ಪ್ರಸ್ತುತ ದಾಖಲೆಯ ನೈಜತ್ವವನ್ನು ಸಮರ್ಥಿಸುತ್ತದೆ. ನನಗೆ ತಿಳಿದುಬಂದಂತೆ, ಆ ವಾದ ವಿವಾದಗಳನ್ನು ಪ್ರಸ್ತಾಪಿಸುವ ಅತ್ಯಂತ ಪ್ರಾಚೀನ ದಾಖಲೆಯೂ ಇದೇ ಆಗಿದೆ.

"ಪಂಚಾಯಿತರು ಕೊಟ್ಟ ಪೈಸಲ್ ಖಂಡನೆ"

॥ಶ್ಲೋಕ॥ ಕಾಂಚನಂ ರಜತಂ ತಾಂಪ್ರ ಲೋಹಂ ಚೇತಿ ಚತುಷ್ಟಯಂ ಯದ್ವದೇತಿ ಸುವರ್ಣತ್ವಂ ರಸವೇಂದ್ರ ಪ್ರಭಾವತ ॥ ತದ್ವಚ್ಛೂದ್ರಾದಿ ಪಾತ್ರಂ ಹಿರಿಯ ಮಂತ್ರಾತ್ಮಕೇನಂ॥ ವಿದ್ಯಾದ್ರುಸೇನ ಮಹತಾ ಪರಬ್ರಹ್ಮತ್ವಮೇತ್ಯಲಂ॥ ಎಂದು ಘಂಟಾಘೋಷವಾಗಿ ನುಡಿಯುವ ಮಹಾವಾಕ್ಯನ-ದಿಕ್ಕರಿಸಿ ॥ಲಿಂಗಭೇದ ಕುತೋ ಯೇನ ರೌರವಂ ನರಕಂ ವ್ರಜೇತ್ ॥ ಯೆಂಬುವ ಶಾಸ್ತ್ರವ ಮರತು ಅಷ್ಟಾವರ್ನ ಪಂಚಾಚಾರ ಉಳ್ಳ ಸಾದು ಶಿವಭಕ್ತರಲ್ಲಿಯೂ ನೊಣಬ ಶಿವಭಕ್ತರಲ್ಲಿಯೂ ಸರ್ವತ್ರ ಏಕೀಭಾವವಾದ ಶಿವಚಾರದಲ್ಲಿಯೂ ಕುಲಾಚಾರ ಕಲ್ಪಿಸಿ ವೀರಶೈವತತ್ವಕ್ಕೆ ಮುಖ್ಯವಾದ ಗ್ರಂಥಗಳ ಲಿಖಿಸಿ ಸಾದ ನೊಣಬ ಮತದವರು ಸಾಮಾನ್ಯ ವೀರಶೈವರು ಇವರಿಗೆ ವಿದ್ಯುಕ್ತ ದೀಕ್ಷ ಸಂಸ್ಕಾರವಾಗಕೂಡದೆಂತಲೂ ಬರದ ಪೈಸಲಿನಲ್ಲಿರುವ ಗ್ರಂಥಗಳ ನೋಡಿದರೆ ಅಪ್ರಾಕೃತಾ ಬ್ರಹ್ಮ ಸೃಷ್ಟಿಯುಂಟುವ ತತ್ವವಂದೇ ವೀರಶೈವರಲ್ಲಿ ತೋರುತ್ತೆ ಹೊರ್ತು ಸಾದ ನೊಣಬ ಪಂಚಮ ಬಣಜಿಗಯೆಂದು ಯಾವ ಶಾಸ್ತ್ರವು ಹೇಳುವದಿಲ್ಲಾ ಆದರೆ ವೀರಶೈವರಲ್ಲಿ ಸಾಮಾನ್ಯ ವಿಶೇಷ ನಿರಾಭಾರಿಯೆಂದು ತ್ರಿವಿಧ॥ ಇದರಲ್ಲಿ ವಿಶೇಷ ವೀರಶೈವರಿಗೆ ದೀಕ್ಷಾ ಸಂಸ್ಕಾರವು ಇದರಿಂದ ಪ್ರಾಪ್ತವಾಗುವ ಗುರುಸ್ತಲಾಧಿಕಾರವು ಪಟ್ಟಸ್ಥಲಾಧಿಕಾರವು ಅನೂಚೀನವಾಗಿ ಆಚರಣೆಯಲ್ಲಿಯೇ ಇಧೆ ಸಾಮಾನ್ಯವೀರಶೈವರಾದ ಅಂಭಷ್ಟ ಕುಲಾಲ ನಾಪಿತಾದಿಗಳಿಗೆ ಷಡಧ್ವ ಶೋಧನಾದಿ ದೀಕ್ಷಸಂಸ್ಕಾರವಾಗಕೂಡದೆಂದು ಅನೇಕ ಶಾಸ್ತ್ರಗಳ ಪ್ರಮಾಣವಿಧೆ ಮತ್ತು॥ ಭಂಡಾರಿ ಗಣಪತಿಶ್ಚೈಲವ ಸ್ಥಾನೀಕಶ್ಚ ಕುಮಾರಕ। ವ್ಯಧವಿಸೋವಿಪುತ್ರಶ್ಚ ಷದೈತೆ ದೀಕ್ಷವರ್ಜಿತಃ॥ ಇಂಥಾ ಶಾಸ್ತ್ರಾಧಾರಗಳಿಲ್ಲದೆ ಉನ್ಮತ್ತರು ಬೊಗುಳುವಂತೆ ನಿರಾಧಾರವಾಗಿ ಪಂಚಾಯಿತರು ಸಾಧು ಶಿವಭಕ್ತರಲ್ಲಿಯೂ ಮೋಕ್ಷ ಶಿವಭಕ್ತರಲ್ಲಿಯೂ ವಿಪರೀತ ಬುದ್ಧಿಯನೆಣಿಸಿ ಸಾಮಾನ್ಯ ವೀರಸೈವರೆಂದು ರಚಿಸಿ ಲಿಖಿಸಿದವರಿಗೆ ಯಾವ ಗತಿಯೋ ನಮಗೆ ತಿಳಿಯದು ಸಾದು ಶಿವಭಕ್ತರು ಮೋಕ್ಷಶಿವಭಕ್ತರು ವಿಶೇಷ ವೀರಶೈವರೆಂದು ಪ್ರಾಚೀನದಿಂದ ವಿದ್ಯುಕ್ತ ದೀಕ್ಷ ಸಂಸ್ಕಾರದೊಡನೆ ಭಕ್ತ ಮಾಹೇಶ್ವರರಾಗಿ ಮಠಮಹತಂಗಳಂ ಪಡೆದು ಪುರವರ್ಗ ಮುಂತಾದ ಗ್ರಾಮಗಳ ಅನುಭವಿಸಿದ್ದಕ್ಕೆ ರಾಜಾಧಿರಾಜರುಗಳಿಂದಾ ಸನದು ಸೂತ್ರ ಶಿಲಾಸಾಸನ ಮುಖ್ಯವಾದ ದೃಷ್ಟಾಂತ ಸಂಪಾದಿಸಿ ಬಹುಮಾನಾರ್ಥವಾಗಿ ಕೊಟ್ಟ ಅನೇಕ ಬಿರಿದುಗಳಿಂದಾ ಸಾವಿರಾರು ಬುಡುಕಟ್ಟಿನ ಯೆಲ್ಲಾ ಕೋಮಿನ ಶಿಷ್ಯವರ್ಗದೊಡನೆ ಯೀಗಲೂ ಸಂಚರಿಸುತ್ತಿದ್ದಾಗ್ಯು ಸಾಮಾನ್ಯ ವೀರಶೈವ ಧರ್ಮವಲ್ಲದ ನಿಶ್ಚಯವೆಯಾದ ವಿಶೇಷ ವೀರಶೈವರೆಂಬ ಯೀ ಸಾಧುಶಿವಭಕ್ತರು ಯೀ ಮೋಕ್ಷಶಿವಭಕ್ತರಲ್ಲಿಯೂ ನ್ಯಾಯವಿರುದ್ಧವಾದ ಪ್ರಶ್ನೋತ್ತರಗಳಿಂದಾ ಪಂಚಾಯಿತರುಗಳು ಬರದ ಪೈಸಲ್ ನೋಡಿದರೆ ಜಲಪ್ರಮಾಣ ತಾವರೆ ಕುಲಪ್ರಮಾಣ ನಾಲಿಗೆ ಯೆನ್ನುವ ಗಾಧೆ ಮರಿಸಲಿಲ್ಲಾ ಸಾದ ಶಿವಭಕ್ತರು ಮೋಖ ಶಿವಭಕ್ತರು ವಿಶೇಷ ವೀರಶೈವರಲ್ಲವೆಂದು ಬರದಿರುವದ ನೋಡಿದರೆ ಗಂಡನ ಸೊತ್ತು ಹೆಂಡತಿಯಾದ ತನಗೆ ಸಲ್ಲಬೇಕೆಂದು ನ್ಯಾಯಸ್ಥಳದಲ್ಲಿ ವ್ಯಾಜ್ಯ ತಂದ ಗಳಿಗೆ ಮಗನು ಕೊಟ್ಟ ಉತ್ತರವೇನೆಂದರೆ ನನ ತಂದೆಗೆ ಹೆಂಡತಿ ನೀನೆ ಹೌದು ನನ್ನ ಜನಕಳು ನೀನಾದಾಗ್ಯು ಮದುವೆಯಾದ ಲಾಗಾಯ್ತು ನನ್ನ ತಂದೆಯಾದ ನಿನ ಗಂಡನ ಶೇರಿದವಳಲ್ಲಾವಾದ ಕಾರಣ ಸೊತ್ತಿಗೆ ನಾನೇ ಭಾಧ್ಯ ನಿನಗೆ ಸಲ್ಲತಕ್ಕದ್ದಲ್ಲಾ ವೆಂದು ಒಂದು ಮುಂದರಿಯದವಿವೇಕಿ ಹೇಳಿದಂತಾಯಿತು ಪಂಚರಾದ ನಿಮ್ಮಭಿಪ್ರಾಯದ ಸಾಧುಶಿವಭಕ್ತರಲ್ಲಿಯು ಮೋಕ್ಷಶಿವಭಕ್ತರಲ್ಲಿಯೂ ಅನುಸರಿಸಿ ಬಂದ ವಿಶೇಷ ವೀರಸೈವತ್ವವು ಜಗದಾದಿಯಿಂದಾ ಬಂದದ್ದು ನೂತನ ಕಾಲದಲ್ಲಿ ಅಮಾರ್ಗಿಗಳ ಬರವಣಿಗೆಯಿಂದ ಮರೆಯಾಗಲಾರದು ಇದಲ್ಲದೆ ವೀರಶೈವಕ್ಕೆ ಉದ್ದಂಡಗ್ರಂಥಗಳಾದ ನಿಗಮಾಗಮಾ ವೀರಶೈವಚಿಂತಾಮಣಿ ಕ್ರಿಯಾಸಾರ ಅನಾದಿವೀರಶೈವ ಸಂಗ್ರಹ ಚೋಳರೇಣುಕಸಂವಾದ ಮೊದಲಾದ ಗ್ರಂಥಗಳ ಸಮಗ್ರ ನೋಡಿದಾಗ್ಯು ಯೀ ಪಂಚರು ಬರದ ಫೈಸಲಿನಂತೆ ಹೇಳುವದಿಲ್ಲಾ ಇಂಥಾದ್ದರಲ್ಲಿಯು ಕುಹಕಿಗಳಾದ ದುರ್ಮಾರ್ಗಿಗಳ ಶಾಸ್ತ್ರವಿರುದ್ಧವಾದ ಭಕ್ತ ಮಹೇಶ್ವರರಲ್ಲಿ ಸಾಮಾನ್ಯ ವೀರಶೈವರೆಂದು ಬರಿಯುವದಕ್ಕೆ ಧಾವ

ಕುಶಾಸ್ತ್ರ ಲಭಿಸಿತೋ ನಮಗೆ ತಿಳಿಯದು ಆದ್ದರಿಂದ ಇಧಕ್ಕೆ ಶೇರಿದ ಸಭಾನಾಯಕರು* ವೀರ ಶೈವತತ್ವ ವಿರೋಧಿಗಳೆಂದು ನಿಚ್ಚೈಸಿ ಈ ಫೈಸಲನ್ನು ತಿರಸ್ಕರಿಸಲಾಯಿತು ॥ಓಷ್ಟ್ರೋಷ್ಟ್ರ ವಿವಾಹೇ ಚ ಸಭಾನಾಯಕ ವಾನರಾಃ ಗಾರ್ಧಪೋ ಗಾಯತೇ ಗಾನಂ ಸ್ವಾನಃ ಕಂಪಾಯತೇ ಶಿರಃ॥ ಯೆಂಬುವ ಶ್ಲೋಕವ ನೆನಪಿಗೆ ತರಬೇಕಾಯಿತು ॥ಇದಂತಿರಲಿ॥ ಯೀ ಪಂಚಾಯಿತರು ಉತ್ಕೃಷ್ಟ ರೆಂದು ಬರದ ಮುಖಾರಿ ಪಂಚಮರ ಉತ್ಪತ್ತಿ ನಿರ್ಣಯಿಸಬೇಕಾಗಿದೆ॥

॥ ಶ್ರೀಮದ್ರಾಮಾಯಣೆ ಬಾಲಖಾಂಡೆ ॥

ವಿಶ್ವಾಮಿತ್ರರು ಮಾಡುವ ಯಜ್ಞಕ್ಕೆ ವಿಘ್ನಕಾರಿಗಳಾದ ಮಾರೀಚ ಮೊದಲಾದ ರಾಕ್ಷಸರೆಂದು ಹೇಳುತ್ತೆ ಯೀ ಮುಖಾರಿ ಪಂಚಮರು ಯಿವರಿಂದ ಉತ್ಪನ್ನರಾದರೆಂದು ಅನ್ವಯಿಸಬೇಕು॥ ಸೂಜಿ ಕಲ್ಲಿಗೆ ಹೋಗಿ ಮಾಜಿ ವೇಷಿಯುರಾಗಿ ಸೋಜಿಗದ ಸುತರ ವಡದ ಪಂಚಮರ ಬೀಜವೋಳರದು ಸರ್ವಜ್ಞ ॥ ಇವರು ನಡಿಸುವ ಕೃತ್ಯಗಳು ಸಾಧುಗಳ ಫಳಿಯುವದು ಸತ್ಪುರುಷರ ಧಿಕ್ಕರಿಸುವದು ಸಾತ್ವೀಕರ ಅವಹೇಳನಂಗೈಯ್ಯುವದು ಅಸುರೋತ್ಪನ್ನರ ಧರ್ಮವಾಗಿದೆ ಆದ ಕಾರಣ ಶಾಸ್ತ್ರಧಾರ ಗಳ ನೋಡಿದರೆ ॥ಸದ್ಯಶ್ಚಂಡಾಲ ಪಂಚಮ॥ ಇತ್ಯಾದಿ ಪ್ರಮಾಣಗಳ ನೆನಪಿಗೆ ತಂದು ಯೀ ಮುಖಾರಿ ಪಂಚಮರು ರಾಕ್ಷಸರಿಂದಾ ಹುಟ್ಟಿದರೆಂದು ನಿಮ್ಮ ಠರಾವ್ ಅರ್ಥ ಕೊಡುವದರಿಂದ ಇವರಲ್ಲಿರುವ ಶೂದ್ರತ್ವವನ ವಿವರಿಸುತ್ತೆ ॥ ಸೂಜಿಕಲ್ಲ ಪಟ್ಟಣದ ಚಾರಿತ್ರದಲ್ಲಿ ಹೇಳುವ ಅವಮಾನ ವನ್ನೆಣಿಸದೆ ಗಾರ್ಧಪ ಶವವ ಹೊರುವ ಹೇಹ ವಂದು ಮನಸ್ಸಿಗೆ ತಂದು ಪ್ಯಾಟೆಬಸವಿ ಮುಂತಾದ ವೇಷಿಯರಂ ಸ್ವಜನರಲ್ಲಿ ಬಿಟ್ಟು ಅವರಲ್ಲಿಗೆ ಕೊಟ್ಟು ತರುವ ಬಳಿಕ ಭೋಜನ ಮೊದಲಾದ್ದು ನಡಿಸಿ ಶೂದ್ರಚಾರಕ್ಕೆ ಮೊದಲಿಗರಾದ ಈ ಮುಖಾರಿಪಂಚಮರು ವಿಶೇಷ ವೀರಶೈವರೆಂದರೆ ಸತ್ಕುಲ ಪ್ರಸೂತರು ವಪ್ಪಲಾರರು ॥ ಈ ಪೈಸಲ್ ಪಂಚಾಯಿತರು ಬರೆದರೆಂದು ನಮೂದಿದೆ ಅವರುಗಳು ನ್ಯಾಯನಿರ್ಣಯಿಸುವದ ಪರೀಕ್ಷಿಸೋಣವೇ ಮುಖ್ಯೋದ್ದೇಶವಲ್ಲದೆ ಪಂಚಾಯಿತರೆಂದರೆ ಮತ ತತ್ವವನರಿತವರಾಗಿ ದ್ವಿಪಕ್ಷನ್ಯಾಯಗಳಲ್ಲಿಯೂ ಸಮಚಿತ್ತರಾಗದಿದ್ದರೆ ಲೋಕಾಭಾಸವಲ್ಲವೇ ಪಂಚರು ವಿಚಾರಮಾಡುವಾಗ್ಯೆ ಲಿಂಗನಗವುಡ ಹಾಜುರ್ಮಾಡಿದ ಮೈಸೂರು ಮಹಾರಾಜರು ಕೊಟ್ಟ ಸನದಿನಲ್ಲಿ ರಂಭಾಪುರಿ ವೀರ ಸಿಂಹಾಸನಾಧಿಪತಿ ಗೋಡೆಕೆರೆ ಮಠದ ಬಸವಪ್ರಭು ಸ್ವಾಮಿಗಳು ಯೆಂತಾ ಇಧೆ॥ ಇವರು ತಮ್ಮ ನೊಣಬ ಕುಲದವರೆಂದು ಹೇಳುತಿಯಲ್ಲ ಇದಕ್ಕೆ ಆಧಾರವೇನೆಂದು ಲಿಂಗನಗವುಡ ಕೇಳುವ ಕಾಲದಲ್ಲಿ ಪ್ರತಿಕಕ್ಷಿಯಾದ ಮಲ್ಲನಗವುಡನು ಕೊಟ್ಟ ಉತ್ತರ॥ ರಂಭಾಪುರೀ ಸ್ವಾಮಿಗಳು ಗೋಡೇಕೆರೆಗೆ ದಯಮಾಡಿಸಿದ ಕಾಲದಲ್ಲಿ ಈ ಸನದು ಹುಟ್ಟಿದ್ದಾಗಿರಬಹುದು ಎಂದು ಹೇಳಿದ್ದನ್ನೇ ನಂಬಿದ ಪಂಚರು ಇದರಂತೆ ಈ ರಂಭಾಪುರಿ ವೀರ ಸಿಂಹಾಸನಕ್ಕೆ ಅನೇಕ ಕಡೆ ಮಠ ಗಳಿದೆಯಷ್ಟೆ ಆಯಾಯ ಮಠಗಳ ಹೆಸರು ನಮೂದಾದ ಸನದು ಈ ಬಾಳೇಹಳ್ಳಿ ಸಂಸ್ಥಾನದವರಲ್ಲಿ ಇದ್ದರೆ ಹಾಜರ್ಮಾಡಬಹುದೆಂದು ಕೇಳಬಹುದಾಗಿತ್ತಲ್ಲ ಇದಲ್ಲದೆ ಈ ಮಠದವರಿಗೆ ಈ ಮರ್ಯಾದೆ ಯಾಗಿ ಮಹಾರಾಜರು ಸನದು ಕೊಟ್ಟಿದ್ದರೆ ಚಿಕ್ಕಮಗಳೂರು ತಾಲೋಕು ಅಮಲ್‌ದಾರರಿಗೆ ಸಾದರು ನೊಣಬರು ತುಂಟತನದಿಂದಾ ಹೊಸದಾಗಿ ಐಯ್ಯತನ ಮಾಡಿಕೋಡು ಪುಂಡಾಟ ನಡಿಸು ತ್ತಾರಂತೆ ಕರಸಿ ಬಂದೂಬಸ್ತು ಮಾಡಿಸಬೇಕೆಂದು ಮಹಾರಾಜರೇ 710ನೇ ನಂಬ್ರು ಸರ್ಕಿಲಾರ್ ಕೊಟ್ಟಿದ್ದಾರೆಂದು ಬಾಳೇಹಳ್ಳಿ ಸಂಸ್ಥಾನದ ಮುನಿಷಿ ವೀರಭದ್ರಪ್ಪ ಕೊಟ್ಟ ದಾಖಲೇ ನಂಬಿ ಬಹು ಮಾನಾರ್ಥವಾಗಿ ಕೊಟ್ಟ ಸನದನ್ನು ನಿರಾಕರಿಸಿದ ಪಂಚಾಯಿತರು ಈ ಬಾಳೇಹಳ್ಳಿ ಸಂಸ್ಥಾನದವರಿಗೆ ಶಿಕಾರಿಪುರದ ವ್ಯಾಜ್ಯದಲ್ಲಿ ಹೆಚ್ಚಿಗೆ ಬರಿದು ನಾವು ಕೊಡಲಿಲ್ಲವೆಂದು ಅದೇ ಮಹಾರಾಜರು ಅಪ್ಪಣೆ

---

* ಈ ಸಾಲಿನ ಮೇಲೆ ಸಣ್ಣಕ್ಷರಗಳಲ್ಲಿ "ಪಟೆಲ ಯೀರಂಣನ ಬರಹ ॥೧॥" ಎಂದಿದೆ.

ಕೊಡಿಸಿದ ಮೇರೆ ನಗರ ಡಿವಿಜನ್ ಸೂಪ್ರೇಂಟ್ಯಾಂಟು ಸಾಹೇಬರವರು 1884ನೇ ಯಿಸ್ವಿ ನಂಬ್ರು 88ನೇ ಸರ್ಕ್ಯುಲಾರ್ ಜನಪ್ರಸಿದ್ಧಿಯಾಗಿದಿಯುಷ್ಟೆ ಇದರಂತೆ ಬಾಳೆಹಳ್ಳಿ ಸಂಸ್ಥಾನದಲ್ಲಿರುವ ಯೆಲ್ಲಾ ಸನದುಗಳು ಸುಳ್ಳೆಂಬುವದಕ್ಕೆ ಸಂದೇಹವೇನು ಇಂಥಾ ಅಬಲವಾದ ರಿಕಾರ್ಟುಗಳ ನಂಬಿ ಸಿಕ್ಮಂಪೆಯಿಂದ ಪಂಚಾಯಿತರು ಸಾದರು ನೊಣಬರು ಸಾಮಾನ್ಯ ವೀರಶೈವರೆಂತ ಶಾಸ್ತ್ರಾಧಾರವಿಲ್ಲದೆ ಪೈಸಲ್ ಬರಿಯಲು ತಪ್ಪಿದವರ ಯೋಗ್ಯತೆ ನೋಡಿದರೆ ಶಿಶುಗಳು ನಿಶಾಪತಿಯ ತುಡುಕಲು ಕೈ ಚಾಚಿದಂತಾಯಿತು ॥ ಇಂಥಾ ವ್ಯಾಜ್ಯಗಳಿಗೆ ಪಕ್ಷಪಾತರಹಿತರಾಗದಿದ್ದರೆ ಯಜ್ಞದ ಪಶುವಧೆ ಕಾಲದಲ್ಲಿ ಕಟಕರವನ ಜ್ಞಪ್ತಿ ಬರುತ್ತೆಂದು ಹೇಳುವನಂತಲ್ಲದೆ ಇದಂತಿರಲಿ ॥ ವೀರಶೈವ ತತ್ವಾನುಭವಿಗಳಲ್ಲದ ಇತರ ಮತಸ್ಥರು ಯೆಷ್ಟು ಪಾಂಡಿತ್ಯರಾದಾಗ್ಯೂ ತಿಳಿ(ಯು)ದವರಲ್ಲವೆಂದು ನಾವುಗಳೇ ಧಾರಾಳವಾಗಿ ಹೇಳುತ್ತೇವೆ. ವೀರಶೈವರಲ್ಲಿ ಶಾಸ್ತ್ರಿಗಳೆಂದು ಹೇಳಿಸಿಕೊಂಡು ಈ ಸಭಾಕ್ಕೆ ಸೇರಿ ಪೈಸಲಿನಲ್ಲಿ ಹೊಗಳಿಸಿಕೊಳ್ಳುವರ ಯೋಗ್ಯತೆಗಳ ಸ್ವಲ್ಪ ವಿಚಾರಮಾಡೋಣ ಮುಖ್ಯ ತಾತ್ಪರ್ಯವಾಗಿದೆ ॥ ಈ ಶಾಸ್ತ್ರಿಗಳಿಗಾಗಿ ನಾವುಗಳು ಹೇಳುವದೇನಂದರೆ ॥ ಕ್ರಿಯಾಸಾರೇ ಚತುರ್ವಿಂಶತೋಪದೇಶಃ ॥ ಲಿಂಗಸ್ಥಳ ಸಮಾಸೇನ ವಕ್ಷೆ ಷಡ್ವಿಧಮಾದಿಶಃ ಭಕ್ತೋ ಮಾಹೇಶ್ವರಶ್ಚೈವ ಪ್ರಸಾದಿ ಪ್ರಾಣಲಿಂಗತಃ ॥ ಶರಣಃ ಶಿವಲಿಂಗೈಕ್ಯ ಷಟ್ಸ್ಥಲಂ ಮಾಮ ಪಾರ್ವತಿತ್ಯತ್ವಂ ಪಿತ್ರದಿ ಮೋಹಸ್ಯಂ ಗುರುಲಿಂಗೈಕ್ಯ ಮೋಹವಾನ್ ॥ ಏವಂ ಏವರ್ತತೇ ದೇವಿ ಸತನ್ಮೋಹೇತಿ ಕಥ್ಯತೇ ಲೌಕಿಕಾ ಬಾಂಧವಾಸ್ತ್ಯತ್ವಾ ಗುರುಲಿಂಗೈಖ್ಯ ಬಾಂಧವಃ ॥ ಯೆಂತಲೂ ವೀರಾಗಮ ॥ ಕಮಂಡಲಕರೋ ಯೋಗ ಕ್ರಾಂತಶ್ಚೈವಗ್ರಣಾಗ್ರಣಿಃ ಜಾತಿಗೋತ್ರವಿಹೀನಸ್ಯ ಮೋಕ್ಷ ಮಾರ್ಗ ಪ್ರದರ್ಶತಃ ॥ ಮತ್ತು ॥ ನ ಜಾತಿ ಭೇದ ಲಿಂಗಾರ್ಚೆ ಸರ್ವೇ ರುದ್ರ ಗಣಾ ಸ್ಮೃತ॥ ಇದಲ್ಲದೆ ॥ ಶಿವದೀಕ್ಷಾಭಿಜಾತಸ್ಯ ಪೂರ್ವಜಾತಿ ಸ ತಿಂಚಯೇತ್ ಸುಪ್ರತಿಷ್ಟಿತ ಲಿಂಗೇ ತು ನ ಯಥಾಃ ಪೂರ್ವ ಭಾವನ ॥ ಈ ಮೇರೆ ವಿಶೇಷ ವೀರಶೈವರಾದ ಸಾಧು ಶಿವಭಕ್ತರಲ್ಲಿಯೂ ಮೋಕ್ಷ ಶಿವಭಕ್ತರಲ್ಲಿಯೂ ಭಕ್ತ ಮಾಹೇಶ್ವರರು ಇದ್ದಾಗ್ಯು ಕೀಳು ಮೇಲು ಯೆಂದು ಹೇಳಿದ್ದ ನೋಡಿದರೆ ॥ ಮುತ್ತು ಮೊದಲಾದ ರತ್ನವ ಕತ್ತೇ ತಾ ಪೊತ್ತಡೇನು ಕ್ರಯುವಂ ಬಲ್ಲುದೆ। ಯುನ್ನುವ ರೀತಿಗೆ ಸರಿಯಾಗಿಧೆ। ಈ ಸಂಘಕ್ಕೆ ಶೇರಿದ ಶಾಸ್ತ್ರಿಗಳು ವ್ಯಾಸೋಕ್ತವಾದ ಪುರಾಣಗಳಲ್ಲಿ ಹೇಳುವ ಪುರಾತನರ ಕಥೆಗಳು ಆಗಮ ಪ್ರಮಾಣಗಳು ಕೂಡ ಅಪನಂಬಿಕೆಯೆಂದು ತೋರುತ್ತೆ ಹಾಗೆ ಆ ಅಪ್ರನಂಬಿಕೆ ಇದ್ದರೆ ಶಾಸ್ತ್ರಿಗಳೆಂದು ಹ್ಯಾಗೆ ಹೇಳಿಸಿಕೊಂಡರು ಪರಂತು ॥ ಚಾಂಡಾಲವಾಟಿಕಯಾತಿ ಶಿವಭಕ್ತ ಸ್ಥಿತೋ ಯಥ ತದ್ವಾಟಿ ಶಿವಲೋಕಸ್ಯ ತದ್ಗೃಹಂ ಶಿವಮಂದಿರಂ ॥ ಯಂಬಂತೆ ಶೋಭಚ್ಚೈಯ್ಯ ಮೊದಲಾದ ಮಾನಿಯರಲ್ಲಿ ಸಾಮವೇದಿ ಮುಂತಾದ ಪ್ರಭೃತಿಗಳು ನಡಸಿದ ಅವಮಾನಕ್ಕೆ ಆದ ಗತಿ ಮರತು ಲೋಕಪ್ರಸಿದ್ಧಿಯಾದ ರಿಕಾರ್ಡಿಗೆ ಶಾಸ್ತ್ರಿಗಳೆಂದು ಹೇಳಿಸಿಕೊಂಡವರು ಶೇರಬಹುದೇ ಆದರೆ ಅಪ್ಪಾ ಶಾಸ್ತ್ರಿಗಳ ಮಗಳಾಗಿ ತಿಪ್ಪಾಶಾಸ್ತ್ರಿಗಳ ಸೊಸೆಯಾಗಿ ಲವಣ ಅಂದರೆ ನನಗೆ ತಿಳಿಯದೆ ಯಮ್ಮ ಸಗಣಿಯೆಂದು ತಂದಿಕ್ಕಿ ಬಗುಳೋ ಹೆಂಗಸಿನ ಮಾತ ನೆನಪಿಗೆ ತರಬೇಕಾಯಿತು ವಿಶೇಷ ವೀರಶೈವರಲ್ಲಿ ಕೊಟ್ಟು ತರುವದಕ್ಕೆ ಕುಲಾಚಾರವು ಹೊಕ್ಕು ಬಳಕೆಗೆ ಶಿವಾಚಾರವು ಎಂದು ಪೂರ್ವಾಚಾರ್ಯರು ನಡಸಿದ ತತ್ವಕ್ಕೆ ವಿದ್ವಾಂಸರೆಂದು ಸೀಲುಗಳು ಸೇರಿದಕ್ಕೆ ವೀರಶೈವ ತತ್ವದಂಸರೆಂದು ಯಿದುವೆರಾದಲು ಕರಿಯುಬೇಕಾಗಿಧೆ ॥ ಯಿದಕ್ಕೆ ಸಹಾಯಭೂತರಾದ ಯೀ ರಂಭಾಪುರೀ ವೀರಸಿಂಹಾಸನದಲ್ಲಿ ತತಲದಲ್ಲಿರತಕ್ಕವರ ವಿಷಯುದಲ್ಲಿ ಕೆಲವು ವಿಚಾರ ಮಾಡಬೇಕಾಯಿಧೆ ॥ ಯೀ ಯಿಲಾಖ ಮುನುಷಿ ವೀರಭದ್ರ್ರಪನು ಯೀ ಸಂಸ್ಥಾನಕ್ಕೆ ಮುಖ್ಯನೆಂದು ತೋರುತ್ತೆ ಯೀ ಪುರುಷನು ಸಂನ್ 1859ನೇ ಅಗಟಂಬ್ರು ತಾರೀಖು 14ರಲ್ಲು ಚಿತ್ರದುರ್ಗದ ಡಿವಿಜನ್ ಸುಪ್ರೇಟಾಂಟು ಸಾಹೆಬರವರು ಕೊಟ್ಟ ನಂಬ್ರು 31ನೇ ಹುಕೂಂನಲ್ಲಿ ನಮೂದಾದ ಹೊನ್ನವಳಿ ಸಬಾದಲ್ಲಿ ನಡದ ಅವಮಾನನೊಳು ಮೂಕ ಬರದಿರನಾಗಿರಬಹುದೆಂದು ಯೋಚಿಸುತ್ತೆವೆ ಯೀಗ ಸ್ವಮತದಲ್ಲಿ ಶೂದ್ರತ್ವವನ್ನು ಸ್ಥಾಪಿಸುವದಕ್ಕೆ ಬಹಳವಾದ ಲಿಖಿತಗಳು ದೊರದಂಥಾವು ಆ ಕಾಲದಲ್ಲಿ ಮರೆಯಾಗಿದ್ದಾವ್ರೋ ಏನೋ ಅದಂತಿರಲಿ ಯೀ ಮಹಾಸಂಸ್ಥಾನದ ಮೂಲಪುರುಷರು ಮತಸ್ಥಾಪನಚಾರ್ಯರೆನಿಸಿ ಈ ಪರಮತಗಜಃಕುಶರಾಗಿ ಅಖಂಡ ಕೀರ್ತಿಯನ್ನು

ಪಡೆದಂತ ಯೀ ಸಿಂಹಾಸನದ ನೂತನಕಾಲವಾಸಿಗಳು ಸ್ವಮತ ಗಜಾಂಕುಶರೆಂಬ ಕೀರ್ತಿಯಂ ಪಡೆಯಬೇಕೆಂಬ ವುದ್ಧ್ಯಸ್ಯವೀರಬಹುದು ಹುಲಿಯಂ ಹೊಡೆಯುವ ಶೂರನಾದಾಗ್ಯೂ ಮನೆ ಯಲ್ಲಿರುವ ಯಿಲಿಯ ಹೊಡೆಯುವದಕ್ಕುವಕ್ರಮಿಸಿದರೆ ಬಾಂಡವೆಲ್ಲ ನಷ್ಟವಾಗುವದು ಸಿದ್ಧವಷ್ಟೇ ಯಿಂತಾದ್ದ ಯೋಚಿಸದೆ ಈ ದುಸ್ಸಂಘಟಿ ಸಹಕಾರಿಗಳಾದ ರಂಭಾಪುರಿ ಸಂಸ್ಥಾನದ ತತಲವಾಸಿ ಗಳಾದ ಚಂದ್ರಸೇಖರ ದೇವರು ಪಂಚರು ಬರದ ಪೈಸಲನ್ನು ಪ್ರಂಟು ಮಾಡಿಸಿದ್ದ ನೋಡಿದರೆ ಆಹಾರಕ್ಕೆ ಬರುವ ಕಾಳೋರಗನ ಯೆದುರಿಗೆ ಗುಟಕಿನಾಸೆಯಿಂದ ಬಾಯಿ ತೆರದು ಸಮೀಪ ಶೇರುವ ಗುಬ್ಬಿಮರಿಯಂತಾಯ್ತು ಮಹಾರಾಜೇಶ್ರೀ ಲರ್ವಿ ದಿವಾನ್ ॥ಸಾ॥ ರಂಗಾಚಾರ್ಯರ ದಿವಸದಲ್ಲಿ ವೀರಶೈವದವರೆಲ್ಲ ಶೂದ್ರರೆಂದು ಲೋಕ ಪ್ರಸಿದ್ಧಿಯಾದ ರಿಕಾರ್ಟು ನಡಸಿದ್ದ ಖಂಡನೆ ಮಾಡುವ ಶಕ್ತಿಯಿಲ್ಲದೆ ಯೆತ್ತು ಕೊತ್ತಿ ತಂದರೆ ಯಿಲಿ ಮೇಲೆ ಮೀಸೆ ತಿರಿವಿದಂತೆ ಸ್ವಮತರಲ್ಲಿ ಶೂದ್ರತ್ವ ವನ್ನು ಸ್ಥಾಪಿಸಿಹ ರಿಕಾರ್ಡು ಲೋಕಪ್ರಸಿದ್ಧಿ ಮಾಡಿದ ನಿಮ್ಮ ಯೋಗ್ಯಥೆ ನೋಡಿದರೆ ಪರರ ಅಪಶಕುನಕ್ಕಾಗಿ ತನ್ನ ನಾಸಿಕಛೇದನ ಮಾಡಿಕೊಂಡು ವುಂಡಾಡ ಬಂಟನ ಗಾದೆಗೆ ಸರಿಯಾಯಿತು. ತದುಪರಿ ರಂಭಾಪುರೀ ವೀರ ಸಿಂಹಾಸನಕ್ಕೆ ಮಾನಿಯರಾದ ರೇಣುಕರೆ ಮೂಲಪುರುಷರು ಯಿವರಿಗೆ 700 ಜನ ರಾಜಕುಮಾರಿಯರು ಪತ್ನಿಯರು ಯಿವರೊಳು ಯಾವ ಜಾತಿ ಸ್ತ್ರೀಯರಲ್ಲಿ ಶುದ್ರಮುನಿಸ್ವಾಮಿಗಳ ವುತ್ಪತ್ತಿ ಅವರ ಕರಕಮಲ ಸಂಜಾತದ ಪೂರ್ವಾಶ್ರಮಯಾವ್ಯಾವದು ಅವರ ಶಿಷ್ಯರ ಜನ್ಮಸ್ಥಳವ್ಯಾವದು ಅವರಿಂದೀಚೆಗೆ ಶಿಷ್ಯವರ್ಗದಲ್ಲಿಯೂ ಸಂಸ್ಥಾನವಿರುತ್ತಷ್ಟೆ ಆಯಾಯ ಕಾಲದ ಸ್ವಾಮಿಗಳ ಜನ್ಮಸ್ಥಾನಗಳ ತಾವರಿಯದೆ ಘನವನ್ನು ಹೊಂದಿ ಪೂರ್ವಾಚಾರ್ಯರ ಗೌರವಕ್ಕೆ ರಂಭಾಪುರಿ ವೀರಸಿಂಹಾಸನದ ಸಕಲವಾಸಿಗಳು ಭಂಗತಂದದ್ದಕ್ಕಾಗಿ ಸರ್ವರು ವಿಷಾದಪಡ ಬೇಕಾಗಿದೆ 86ನೇ ಯಿಸವಿ ಯಪ್ರುಲ್ ತಾರಿಖು 16ರಲ್ಲು ದಾರ್ವಾಡ ಜಿಲ್ಲ ಆಸಿಗಲ್ಲು ಗ್ರಾಮದಲ್ಲಿ ಪಂಚರು ಬರದ ಠರಾವಿನಲ್ಲಿ ಸಾಧು ಶಿವಭಕ್ತರು ಮೋಕ್ಷಶಿವಭಕ್ತರು ಸಾಮಾನ್ಯ ವೀರಶೈವರೆಂದು ಲಿಖಿಸಿರುವದಕ್ಕೆ ಸಂತೋಷಚಿತ್ತರಾಗಿ ರಿಕಾರ್ಡುಗಳನ್ನು ಪ್ರಂಟು ಮಾಡಿಸಿದ ರಂಭಾಪುರಿ ಸಂಸ್ಥಾನ ಕ್ಕಾದಿಪತಿಗಳೆಂದು ಹೇಳಿಕೊಳ್ಳುವ ಚಂದ್ರಶೇಖರ ದೇವರ..." (ಅಪೂರ್ಣ)

ಟಿಪ್ಪಣಿ :

ಈ ಐತಿಹಾಸಿಕ ದಾಖಲೆಯಲ್ಲಿ ಬರುವ ಸಾಧು ಶಿವಭಕ್ತರು ಈಗಿನ ಸಾದರು. ನೊಣಬರನ್ನು ಮೋಕ್ಷ ಶಿವಭಕ್ತರೆಂದು ಕರೆಯಲು ಕಾರಣ ಹೀಗಿದೆ. "ನೊಣಬ" ಶಬ್ದದ ಮೂಲದಲ್ಲಿ "ನೊಣ" ಶಬ್ದವಿದೆಯೆಂದು ಗ್ರಹಿಸಿ, ನೊಣಬರನ್ನು "ಮಕ್ಷಿಕಾ ಶಿವಭಕ್ತ"ರೆಂದು ಶಿಪಟೂರು ಪ್ರದೇಶದಲ್ಲಿ ಹಿಂದೆ ಕರೆಯುತ್ತಿದ್ದರೆಂದು ತಿಳಿದು ಬರುತ್ತದೆ. (ಕೆಲವು ವರ್ಷಗಳ ಹಿಂದೆ ನಡೆದ ನೊಣಬರ ಸಮ್ಮೇಳನವನ್ನು "ಮಕ್ಷಿಕಾ ಶಿವಭಕ್ತರ ಸಮ್ಮೇಳನ"ವೆಂದು ಹೆಸರಿಸಲಾಗಿತ್ತು). "ಮಕ್ಷಿಕಾ" ಪದವು ಸಂಸ್ಕೃತವಾದರೂ, ಅದರ ಅರ್ಥ ತಿಳಿಯದ ಯಾರೋ ಉಚ್ಚಾರದ ದೃಷ್ಟಿ ಯಿಂದ ಅದಕ್ಕೆ ಹತ್ತಿರವಾದ "ಮೋಕ್ಷ" ಪದವನ್ನು ಅದರ ಜಾಗಕ್ಕೆ ಸೇರಿಸಿದರು ; ಅಥವಾ ಅದರ ಅರ್ಥ ತಿಳಿದೂ, ಉನ್ನತ ಅರ್ಥದ ಮೋಕ್ಷ ಪದವನ್ನು ಬಳಸಿರ ಬಹುದು. ನೊಣಬ→ಮಕ್ಷಿಕಾ→ಮೋಕ್ಷ ಇದು ಆ ಪದ ಬೆಳೆದುಕೊಂಡು ಬಂದ ಬಗೆ. ತರೀಕೆರೆ ಅಜ್ಜಂಪುರ ಪ್ರದೇಶದಲ್ಲಿ ನೊಣಬರನ್ನು ಮೋಕ್ಷ ಶಿವಭಕ್ತರೆಂದೇ ಈಗಲೂ ವ್ಯವಹರಿಸುತ್ತಿರುವುದರಿಂದ ಮೇಲಿನ ದಾಖಲೆಯ ಮೂಲ ಅಲ್ಲೇ ನಿರ್ಮಾಣಗೊಂಡಿದ್ದು ಎಂದು ತನ್ನಷ್ಟಕ್ಕೆ ತಾನೇ ಸ್ಪಷ್ಟವಾಗುತ್ತದೆ. ಮೂಲ ದಾಖಲೆಯ ಕಾಗದದ ಪ್ರತಿ ನನಗೆ ಸಿಕ್ಕಿದ್ದು ಅಮೃತಾಪುರದಲ್ಲಿ (ತರೀಕೆರೆಯ ಪಕ್ಕದ

ಊರು) ಎಂಬುದು ಅದರಲ್ಲಿದ್ದ ಬೇರೊಂದು ಇಂಗ್ಲಿಷ್ ಬರಹದಿಂದ ತಿಳಿದು ಬರುತ್ತದೆ.

ಈಗ ಸಾದರೂ ನೊಣಬರೂ ತಮ್ಮಲ್ಲೇ ಅಯ್ಯನವರನ್ನು (ಜಂಗಮರನ್ನು) ಮಾಡಿಕೊಳ್ಳುತ್ತಿದ್ದಾರೆ. ಅದು ಈ ಶತಮಾನದ ಬೆಳವಣಿಗೆ. ಅದಕ್ಕೆ ಮುಂಚೆ ಅವರು ಪಂಚಪೀಠಗಳ ಹುಟ್ಟು ಜಂಗಮರನ್ನೇ ಆಹ್ವಾನಿಸುತ್ತಿದ್ದರು. ಆದರೂ ಸಾದರೂ ನೊಣಬರೂ ಅಯ್ಯನವರನ್ನು ಮಾಡಿಕೊಳ್ಳುವ ಪ್ರವೃತ್ತಿಯು ಕೊನೇಪಕ್ಷ 1886 ರಷ್ಟು ಹಳೆಯದೆಂದು ತೋರುತ್ತದೆ. (ಅದರ ನಿಜವಾದ ಇತಿಹಾಸ ಕ್ರಿ.ಶ. 1860–70ರಷ್ಟು ಹಿಂದಕ್ಕೆ ಹೋಗುವಂತೆ ತೋರುತ್ತದೆ). ಆ ಪರಿಪಾಠ ಆರಂಭವಾದಾಗ ಹುಟ್ಟು ಜಂಗಮರೂ ಪಂಚಮರೂ (ಪಂಚಾಚಾರದವರೂ) ರಂಭಾಪುರೀ ಪೀಠವೂ ಅದನ್ನು ವಿರೋಧಿಸಿ ನೊಣಬರೂ ಸಾದರೂ ಶೂದ್ರರಾದ್ದರಿಂದ ಅವರಿಗೆ ಅಯ್ಯಾಚಾರದ ಹಕ್ಕಿಲ್ಲವೆಂದು ಪ್ರತಿಪಾದಿಸಿದ್ದು ಮಾತ್ರವೇ ಅಲ್ಲ, ಬ್ರಾಹ್ಮಣ ವಿದ್ವಾಂಸರ ಪಂಚಾಯಿತ್ತಿ ಸಭೆಯ ಮುಂದೆ ಆ ವಿಷಯವನ್ನಿಟ್ಟು ತಮ್ಮ ಪರವಾಗಿ ತೀರ್ಪು ಪಡೆಯುವುದರಲ್ಲಿ ಜಯಶೀಲರೂ ಆದರು. ಆದರೆ ಸಾದರೂ ನೊಣಬರೂ ಒಂದಾಗಿ ತಾವು ಕ್ಷೌರಿಕ, ಕುಂಬಾರ ಲಿಂಗವಂತರಂತೆ ಸಾಮಾನ್ಯ ವೀರಶೈವರಲ್ಲವೆಂದೂ, ತಾವು ವಾಸ್ತವವಾಗಿ ವಿಶೇಷ ಶಿವಭಕ್ತರೆಂದೂ ವಾದಿಸಿ, ಪಂಚಾಯತರ ಫೈಸಲನ್ನು ಖಂಡಿಸಿದರು. ಬಾಳೆಹಳ್ಳಿ ಮಠವು ಸಾದರೂ ನೊಣಬರೂ ಶೂದ್ರರೆಂಬ ಪಂಚಾಯ್ತರ ತೀರ್ಮಾನವನ್ನು ಅಚ್ಚು ಮಾಡಿಸಿ ("ಪ್ರಿಂಟುಮಾಡಿಸು") ಎಲ್ಲಾ ಕಡೆಗೂ ಹಂಚಿಸಿದ್ದ ವಿಷಯವೂ ಮೇಲಿನ ದಾಖಲೆಯಿಂದ ತಿಳಿದು ಬರುತ್ತದೆ. ಮತ್ತು ಆ ಹಿಂದೆ ದಿವಾನರಾಗಿದ್ದ ರಂಗಾಚಾರ್ಲು ಅವರು ಲಿಂಗವಂತರೆಲ್ಲರೂ ಶೂದ್ರರೆಂದು "ರಿಕಾರ್ಡು ನಡೆಸಿದ್ದ" ವಿಷಯವೂ ಇದರಲ್ಲಿ ದಾಖಲಾಗಿದೆ. ದಿವಾನರು ಆ ಘೋಷಣೆ ಹೊರಡಿಸಿದಾಗ, ಅದನ್ನು ಪ್ರತಿಭಟಿಸುವ ಧೈರ್ಯವಿಲ್ಲದೆ ಸ್ವಮತದವರ ಮೇಲೆ "ಮೀಸೆ ತಿರುವಿ"ರುವ ಪಂಚಮರನ್ನು ಟೀಕಿಸಿರುವ ರೀತಿ ಸ್ವಾರಸ್ಯವಾಗಿದೆ. ಲಿಂಗವಂತ ಸಮಾಜದ ಸಾಮಾಜಿಕ ಇತಿಹಾಸದಲ್ಲಿ ಈ ತೇದಿ ಸಮೇತ ದಾಖಲೆಗೆ ಮಹತ್ವವಿದೆ.

ಅನುಬಂಧ 4

ಪಂಚಮಸಾಲಿಗಳು

ಪಂಚಮಸಾಲಿಗಳು ಜಂಗಮರಲ್ಲ ; ಅವರು ಭಕ್ತರೇ ಆದರೂ ಲಿಂಗಾಯತ ಸಂಪ್ರದಾಯದ ಪ್ರಕಾರ ಅವರಿಂದ ಜಂಗಮರು ಅಗತ್ಯಬಿದ್ದರೆ ಹೆಣ್ಣು ಮಕ್ಕಳನ್ನು ಮನೆಗೆ ತಂದುಕೊಳ್ಳಬಹುದಾದ್ದರಿಂದ (ಅವರಿಗೆ ಹೆಣ್ಣು ಕೊಡುವುದಿಲ್ಲ), ಜಂಗಮೇತರ ಲಿಂಗಾಯತ ಜಾತಿಗಳಲ್ಲಿ ಅವರ ಸ್ಥಾನ ಮೇಲಿನದು ಎಂದು ಊಹಿಸಬಹುದು. ಪಂಚಮಸಾಲಿಗಳನ್ನು ಪಂಚಮರೆಂದೂ ಕರೆಯುತ್ತಾರೆ (ದಾವಣಗೆರೆ

ಬಳ್ಳಾರಿ ಪ್ರಾಂತದಲ್ಲಿ ಇವರನ್ನೇ 'ಪಂಚಾಚಾರ್ಯ'ರೆಂದೂ 'ಪಂಚಾಚಾರದವರೆಂದೂ' ಕರೆಯುವುದುಂಟು). ಮತಾಚಾರ, ಸಂಪ್ರದಾಯನಿಷ್ಠೆಗಳಲ್ಲಿ ಅವರನ್ನು ಸಮೀಪಿಸುವವರೆಂದರೆ ಬಹುಶಃ ಶೀಲವಂತರು ಮತ್ತು ಬಣಜಿಗರು. ಬಣಜಿಗರು ವರ್ತಕರೂ ಧನವಂತರೂ ಆಗಿರುವುದರಿಂದ ಸಮಾಜದಲ್ಲಿ ಪ್ರಭಾವಶಾಲಿಗಳಾದ ಅವರು ಯಾವುದೇ ಧಾರ್ಮಿಕ ವ್ಯವಸ್ಥೆಗೂ ಬಹು ಬೇಗ ಹತ್ತಿರದವರಾಗುತ್ತಾರೆ. ಇದರಿಂದ ಕೆಲವೊಮ್ಮೆ ಮೇಲ್ಮೆಯಲ್ಲಿ ಬಣಜಿಗರಿಗೂ ಪಂಚಮಸಾಲಿಗಳಿಗೂ ಸ್ಪರ್ಧೆ ಕಂಡು ಬಂದರೂ ಪರಂಪರೆ ಒಪ್ಪಿಕೊಂಡಿರುವಂತೆ ಅನುಶ್ರೇಣಿಯಲ್ಲಿ ಪಂಚಮಸಾಲಿಗಳು ಮೊದಲ ಜಾಗದಲ್ಲಿದ್ದಾರೆ ಎಂಬುದು ಸತ್ಯಕ್ಕೆ ಬಹಳ ದೂರವಿರಲಾರದು.

ದೇವರು ಸೃಷ್ಟಿಸಿದ ಪ್ರಥಮ ಭಕ್ತವರ್ಗ ಪಂಚಮಸಾಲಿಗಳು ಎಂದು ಕೆಲವು ಸಂಸ್ಕೃತ ಗ್ರಂಥಗಳಲ್ಲಿ ಹೇಳಿದೆ. ಈಶ್ವರನ ಐದು ಮುಖಗಳಾದ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನಗಳಿಂದ ಕ್ರಮವಾಗಿ ಮುಖಾರಿ, ಕಾಲಾರಿ, ಪುರಾರಿ, ಸ್ಮರಾರಿ, ವೇದಾರಿ ಎಂಬ ಐದು ಜನ ಪಂಚಮರು ಹುಟ್ಟಿದರೆಂದೂ ಅವರೇ ಪಂಚಮಸಾಲಿಗಳ ಮೂಲಪುರುಷರೆಂದೂ ಕ್ರಿ.ಶ. 1893ರಲ್ಲಿ ಅಚ್ಚಾದ ಪಟವೊಂದು ತಿಳಿಸುತ್ತದೆ. "ವೀರಶೈವ ಸದಾಚಾರ ಸಂಗ್ರಹ"ವು ಶಿವನ ಐದನೆಯದಾದ ಈಶಾನಮುಖದಿಂದ ಪಂಚಮುಖಿ ಗಣೇಶ್ವರನು ಹುಟ್ಟಿದನೆಂದೂ ಆದ್ದರಿಂದ ಆತನಿಗೆ 'ಪಂಚಮ'ನೆಂಬ ಹೆಸರಾಯಿತೆಂದೂ ಆತನ ಐದು ಮುಖಗಳಿಂದ ಐದು ಜನ ಪಂಚಮರು ಹುಟ್ಟಿದರೆಂದೂ ಗೃಹಸ್ಥರಾದ ಅವರೇ ಪಂಚಮಸಾಲಿಗಳ ಮೂಲಪುರುಷರೆಂದೂ ಪಂಚಮಗಣೇಶ್ವರನ ಮುಖದಿಂದ ಹುಟ್ಟಿದ ಕಾರಣ ಎಲ್ಲ ಭಕ್ತರಿಗಿಂತ ಪಂಚಮರೇ ಶ್ರೇಷ್ಠರೆಂದೂ ತಿಳಿಸುತ್ತದೆ. ಆ ಐದು ಜನ ಪಂಚಮರಿಗೆ ಪ್ರತ್ಯೇಕ ಪ್ರತ್ಯೇಕ ಗುರುಗಳಿದ್ದು ಆಯಾ ಗುರುಗಳ ಗೋತ್ರ, ಸೂತ್ರ ಪ್ರವರಗಳೇ ಆಯಾ ಪಂಚಮನಿಗೆ ಉಂಟು. ಆದ್ದರಿಂದ ಪಂಚಮರಲ್ಲಿ ಎರಡು ಕುಟುಂಬಗಳ ಮಧ್ಯೆ ವಿವಾಹಗಳು ನಡೆಯುವಾಗ ಆ ಸಂಸಾರಗಳು ಒಬ್ಬನೇ ಗುರುವಿನ ಶಿಷ್ಯರಾಗಿರಬಾರದು. ಉದಾಹರಣೆಗೆ ರೇವಣಾರಾಧ್ಯ ಅಥವಾ ರಂಭಾಪುರಿ ಶಾಖೆಗೆ ಸೇರಿದ ಪಂಚಮಸಾಲಿಗಳು ಅಣ್ಣ ತಮ್ಮಂದಿರಾಗುವುದರಿಂದ ಅವರಲ್ಲಿ ವಿವಾಹ ಸಂಬಂಧಗಳು ಸಾಧ್ಯವಿಲ್ಲ. ಅಂತೆಯೇ ಜಂಗಮರು ಪಂಚಮಸಾಲಿಗಳಿಂದ ಹೆಣ್ಣು ತರುವಾಗ ತಮ್ಮ ಗೋತ್ರ ಶಾಖೆಗೆ ಸೇರಿರದ ಪಂಚಮಸಾಲಿ ಕುಟುಂಬಗಳೇ ಆಗಬೇಕಾಗುತ್ತದೆ. ಈ ಕೆಳಗೆ ಐದು ಜನ ಪಂಚಮರು, ಅವರ ಗೋತ್ರ ಇತ್ಯಾದಿ, ಅವರಿಂದ ಹುಟ್ಟಿದ ಹನ್ನೆರಡು ಉಪಪಂಚಮರು ಇವರ ಪಟ್ಟಿ ಹೀಗಿದೆ :

ಮುಖಾರಿ

ವೀರ ಗೋತ್ರ, ಪಡ್ವಿಡಿ ಸೂತ್ರ ಇತ್ಯಾದಿ. ಉಳಿದ ವಿವರಗಳೆಲ್ಲ ರೇವಣಾರಾಧ್ಯರಿಗೆ ಅನ್ವಯಿಸುತಕ್ಕುವೆಲ್ಲ ಇವನಿಗೂ ಅನ್ವಯ. ಇವನಿಂದ ಹುಟ್ಟಿದ

ಹನ್ನೆರಡು ಉಪಪಂಚಮರು: ಶತಾಂಗ, ಪ್ರಮುಖ, ಶರ್ಕರ, ವೃಷಭ, ಸಹಸ್ರಾಕ್ಷ, ಸಧರ್ಮ, ವಿಷಮ, ಮೋಚಕ, ವೃಕಭೇದಿ, ಕುಂಜರಾರಿ, ಶೇಷ ಮತ್ತು ಶಿಖಿವಾಹ.[14]

('ಮುಖಾರಿ ಪಂಚಮ'ರ ಬಗ್ಗೆ ಅನುಬಂಧ 3ನ್ನೂ ನೋಡಿ)

ಕಾಲಾರಿ

ನಂದಿ ಗೋತ್ರ, ವೃಷ್ಟಿ (ಮಳೆ) ಸೂತ್ರ ಇತ್ಯಾದಿ. ಉಳಿದ ವಿವರಗಳೆಲ್ಲ ಮರುಳಾರಾಧ್ಯರಿಗೆ ಅನ್ವಯಿಸತಕ್ಕವು ಇವನಿಗೂ ಅನ್ವಯ. ಇವನಿಂದ ಹುಟ್ಟಿದ ಹನ್ನೆರಡು ಉಪಪಂಚಮರು: ಕೇಶರಾಕ್ಷ, ಮೃಗಾರಿ, ನಾಕೇಶ, ಋಷ, ಶಿಲಾಂಗ, ಶೃಂಗಶೀರ್ಷ, ಚೇಲಾಂಬರ, ಕುಹಾಸನ, ಶತಭುಕ್, ಬಹುಂಜಿಹ್ವ, ನಾಗದಂತ, ಸರ್ಪ ಶರೀರಕ.[15]

ಪುರಾರಿ

ಭೃಂಗಿಗೋತ್ರ, ಲಂಬನ ಸೂತ್ರ ಇತ್ಯಾದಿ. ಉಳಿದ ವಿವರಗಳು ಏಕೋರಾಮಾರಾಧ್ಯರಿಗೆ ಅನ್ವಯಿಸತಕ್ಕವು ಇವನಿಗೂ ಅನ್ವಯ. ಇವನಿಂದ ಹುಟ್ಟಿದ ಹನ್ನೆರಡು ಉಪಪಂಚಮರು: ಅಗ್ನಿಭುಕ್, ಕರ್ಮಕಾರಿ, ಜಾಬಾಲ, ನಿರ್ಜರ,

---

14 ಕ್ರಿ.ಶ. 1893ರಲ್ಲಿ ಅಚ್ಚಾಗಿರುವ ಚಿತ್ರಪಟದಲ್ಲಿ ವಿವರಗಳು ಹೀಗಿವೆ–ಶಿವನ ಸದ್ಯೋಜಾತ ಮುಖದಿಂದ ಮುಖಾರಿ ಪಂಚಮ. ನಂದೀಶ್ವರ ಗೋತ್ರ, ದಾರುಕ ಶಾಖಾ, ಏಕಾಕ್ಷರಪ್ರವರ, ಪಡವಡೀ ಸೂತ್ರ, ನಕಾರ ಮಂತ್ರಬೀಜ, ತಾಮ್ರದ ಕಮಂಡಲು, ರೇವಣಾರಾಧ್ಯರೇ ಗುರು, ಪ್ರಸಾದ ಪಂಚಾಕ್ಷರೀ ಮಂತ್ರ, ಪೂರ್ವದಿಕ್ಕು, ಋಗ್ವೇದ, ಇಷ್ಟಲಿಂಗಧಾರಣ; ಮುಖಾರಿ ಪಂಚಮನಿಂದ ಹುಟ್ಟಿದ ಉಪ ಪಂಚಮರು–ಕೇಶರಾಕ್ಷ, ಮದಕರಿ, ನಾಕೇಶ, ವೃಷಭ, ಶಿವಾಂಗ, ಶೃಂಗಶೀರ್ಷ, ಚಿದಂಬರ, ಕ್ರೂರಾಸನ, ಶತಭುಜ, ಬರಿಜಿಂಹ್ವ, ನಾಗದಂತ, ಸರ್ಪಶರೀರ.

15 1893ರ ಚಿತ್ರಪಟದ ವಿವರಗಳು–ಶಿವನ ವಾಮದೇವ ಮುಖದಿಂದ ಕಾಲಾರಿ ಪಂಚಮ, ಭೃಂಗೀಶ್ವರ ಗೋತ್ರ, ರೇಣುಕಶಾಖಾ, ದ್ವ್ಯಕ್ಷರಪ್ರವರ, ಮಳೆಸೂತ್ರ, ಮಕಾರ ಮಂತ್ರಬೀಜ, ಕಂಚಿನ ಕಮಂಡಲು, ಮರುಳಾರಾಧ್ಯರೇ ಗುರು, ಮಾಯಾಖ್ಯ ಪಂಚಾಕ್ಷರೀಮಂತ್ರ, ಪಶ್ಚಿಮದಿಕ್ಕು, ಯಜುರ್ವೇದ, ಇಷ್ಟಲಿಂಗಧಾರಣ. ಕಾಲಾರಿಯಿಂದ ಹುಟ್ಟಿದ ಉಪಪಂಚಮರು-ಶತಾಂಗ, ಪ್ರಮುಖ, ಶರ್ಕರ, ವೃಷಭ, ಸಹಸ್ರಾಕ್ಷ, ಸಧರ್ಮ, ವಿಷಮ, ಮೋಚಕ, ವೃಕಭೇಧಿ, ಕುಂಜರಾರಿ, ಶೇಷಶಿಖಿ, ಹರಿದಾಖ್ಯ.

ನಿಃಶೂಲ, ಶಶಾಂಕ, ಲಲಾಟಾಕ್ಷ, ಅಕ್ಷರ, ಪಾದ, ವಿಕಟಾಂಗ, ಶಿಲಾದ, ಹರಿನ್ಮುಖಿ.[16]

ಸ್ಮರಾರಿ

ವೃಷಭಗೋತ್ರ, ಮುಕ್ತಾಗುಚ್ಛ ಸೂತ್ರ, ಇತ್ಯಾದಿ ಉಳಿದ ವಿವರಗಳು ಪಂಡಿತಾರಾಧ್ಯರಿಗೆ ಅನ್ವಯವಾಗುತಕ್ಕವೆಲ್ಲ ಇವನಿಗೂ ಅನ್ವಯ. ಇವನಿಂದ ಹುಟ್ಟಿದ ಹನ್ನೆರಡು ಉಪಪಂಚಮರು-ಸಹಸ್ರಶೀರ್ಷ, ಶೀತಾಂಗ, ನಗಮಾಲಿ, ನಿರಾಶನ, ಯಮದ್ಯುತಿ, ಸಪ್ತಾಂಗ, ಲತಾಂಗ, ಮೃತ್ಯುನಾಶನ, ನತನು, ಘೋಟವಕ್ತ್ರ ನಿರೋಗಿ, ಅಭಯಂ.[17]

ವೇದಾರಿ

ಸ್ಕಂದ ಗೋತ್ರ, ಪಂಚವರ್ಣಸೂತ್ರ ಇತ್ಯಾದಿ. ಉಳಿದ ವಿವರಗಳು ವಿಶ್ವಾರಾಧ್ಯರಿಗೆ ಅನ್ವಯುವಾಗತಕ್ಕುವೆಲ್ಲ ಇವನಿಗೂ ಅನ್ವಯ. ಇವನಿಂದ ಹುಟ್ಟಿದ ಹನ್ನೆರಡು ಉಪ ಪಂಚಮರು: ಪಶ್ಚಾದ್ದೃಷ್ಟಿ, ಪುಷ್ಪಾಸ್ಯ, ಗಿರಿವಕ್ತ್ರ, ಗೋಮುಖಿ, ಸುವರ್ಣನಖಿ, ಪದ್ಮಾಂಘ್ರಿ, ದಶಾನನ, ವಿಷಾನನ, ಉಗ್ರದೇಹ, ಶತಪದ, ಸಹಸ್ರಸ್ಕಂದ, ತ್ರಿವಹನ.[18]

---

16 1893ರ ಚಿತ್ರಪಟದ ವಿವರಗಳು. ಶಿವನ ಅಘೋರ ಮುಖದಿಂದ ಪುರಾರಿ ಪಂಚಮ. ವೀರೇಶ್ವರಗೋತ್ರ. ಶಂಖಕರ್ಣಶಾಖೆ. ತ್ರ್ಯಕ್ಷರ ಪ್ರವರ. ಮುತ್ತಿನಕಂಥೀಸೂತ್ರ. ಶಿಕಾರ ಮಂತ್ರಬೀಜ. ಸುವರ್ಣಕಮಂಡಲು. ಪಂಡಿತರಾಧ್ಯರು ಗುರು. ಸೂಕ್ಷ್ಮ ಪಂಚಾಕ್ಷರಿಮಂತ್ರ. ದಕ್ಷಿಣದಿಕ್ಕು. ಸಾಮವೇದ. ಇಷ್ಟಲಿಂಗಧಾರಣ.

17 1893ರ ಚಿತ್ರಪಟದ ವಿವರಗಳು. ಶಿವನ ತತ್ಪುರುಷ ಮುಖದಿಂದ ಸ್ಮರಾರಿ ಪಂಚಮ. ವೃಷಭೇಶ್ವರ ಗೋತ್ರ. ಧೇನುಕರ್ಣ ಶಾಖಾ. ಚತುರಕ್ಷರ ಪ್ರವರ. ಉದ್ಧಾನ ಸೂತ್ರ. ನಕಾರ ಮಂತ್ರಬೀಜ. ಲೋಹ ಕಮಂಡಲು. ಏಕಾರಾಮಾರಾಧ್ಯರು ಗುರು, ಸ್ಥೂಲ ಪಂಚಾಕ್ಷರಿ ಮಂತ್ರ. ಉತ್ತರ ದಿಕ್ಕು. ಅಥರ್ವಣವೇದ. ಇಷ್ಟಲಿಂಗಧಾರಣ. ಸ್ಮರಾರಿಯಿಂದ ಹುಟ್ಟಿದ ಉಪಪಂಚಮರು: ಸಹಸ್ರಶೀರ್ಷ. ಶೀತಾಂಗ. ನಾಗಮಾಲಾ. ನಿಶಾನನ. ಯಮದ್ಯುತಿ. ಸಪ್ತಾಂಗ. ಲತಾಂಗ. ಮೃತ್ಯುನಾಶ. ನತನು, ಘೋಕವಕ್ತ್ರ. ನಿರೋಗ. ಹೈವವ.

18 1893ರ ಚಿತ್ರಪಟದಲ್ಲಿರುವಂತೆ ಶಿವನ ಈಶಾನ ಮುಖದಿಂದ ವೇದಾರಿ ಪಂಚಮ. ಕೆಂದಾವರೆ ನೂಲಿನ ಸೂತ್ರ. ಸ್ಕಂದಗೋತ್ರ. ವಿಶ್ವಕರ್ಣಶಾಖೆ. ಯಕಾರ ಮಂತ್ರ ಬೀಜ. ಕಂಚಿನ ಕಮಂಡಲು. ವಿಶ್ವಾರಾಧ್ಯರು ಗುರು. ಮೂಲ ಪಂಚಾಕ್ಷರಿ ಮಂತ್ರ. ಊರ್ಧ್ವದಿಕ್ಕು. ಅಜಪವೇದ, ಇಷ್ಟಲಿಂಗಧಾರಣ. ವೇದಾರಿಯಿಂದ ಹುಟ್ಟಿದ ಹನ್ನೆರಡು ಉಪಪಂಚಮರು : ಪಂಚದೃಕ್, ಪುಷ್ಪಾನನ. ಗಿರಿವಕ್ತ್ರ, ಗೋಮುಖಿ, ಸ್ವರ್ಣನಖಿ. ಪಾದಕಾಷ್ಠ. ದಶಾನನ, ವಿಷಾನನ, ಉಗ್ರದೇಹ. ಶ್ವೇತಪಾದ, ಸಹಸ್ರ ಸ್ಕಂದ, ದ್ವಿಜಿಹ್ವ (1893ರ ಚಿತ್ರಪಟದಲ್ಲಿ ಅಚ್ಚಿನ ದೋಷಗಳು ಸಾಕಷ್ಟಿವೆ).

ಪಂಚಮಸಾಲಿಗಳು ಬೇರೆ ಬೇರೆ ಪಂಚಪೀಠಗಳಿಗೆ ಸಂಬಂಧಿಸಿದ್ದರೂ ಅವರಲ್ಲಿ ಆಯಾ ಪಂಚಮ-ಉಪಪಂಚಮರ ವರ್ಗಗಳಿಗೆ ಸೇರಿದ್ದೇವೆಂದು ಹೇಳಿಕೊಳ್ಳುವ ಜನರು ಯಾರೂ ಇಲ್ಲದಿರುವುದರಿಂದ ಪಂಚಮ-ಉಪಪಂಚಮರ ಹೆಸರುಗಳೆಲ್ಲ ಜಂಗಮರಿಂದ ಆಧುನಿಕ ಕಾಲದಲ್ಲಿ ಕಲ್ಪಿತಗಳಾಗಿ ತೋರುತ್ತವೆ. ಪಂಚಮಸಾಲಿಗಳಿಗೆ ಗೋತ್ರ ಸೂತ್ರ ಇತ್ಯಾದಿಗಳನ್ನು ಕಲ್ಪಿಸುವುದರ ಮೂಲಕ ಅವರ ಜೊತೆ ಜಂಗಮರು ರಕ್ತಸಂಬಂಧ ಬೆಳೆಸಲು ಅನುಕೂಲ ಕಲ್ಪಿಸಿಕೊಂಡಿರುವಂತೆ ತೋರುತ್ತದೆ. ಪಂಚಮ ಸಾಲಿ" ಎಂಬ ಪದದ ಅಕ್ಷರಶಃ ಅರ್ಥವೇನೆಂಬುದು ತಿಳಿಯದು.

ಅನುಬಂಧ 5

ಶವಸಂಸ್ಕಾರದ ಒಂದು ವಿಲಕ್ಷಣ ಆಚರಣೆ

ಉತ್ತರ ಕರ್ನಾಟಕದ ಕೆಲವೆಡೆ ಈಗಲೂ (ದಕ್ಷಿಣ ಕರ್ನಾಟಕದ ಆರಾಧ್ಯರಲ್ಲಿ ಹಿಂದೆಯೂ—ಅನುಬಂಧ 2 ನೋಡಿ) ಮನೆಯಲ್ಲಿ ಸಾವು ಆದಾಗ ಶವ ಮನೆಯಲ್ಲಿರುವಾಗಲೇ ಮನೆಯನ್ನೆಲ್ಲ ಸಾರಿಸಿ, ಅಡಿಗೆ ಮಾಡಿಸಿ ಜಂಗಮರಾದಿಯಾಗಿ ಎಲ್ಲರಿಗೂ ಭೋಜನ ಮಾಡಿಸಿ ಬಳಿಕ ಶವವನ್ನು ಸ್ಮಶಾನಕ್ಕೆ ಒಯ್ಯುವ ಪದ್ಧತಿಯಿದೆ. ಸಾವು ಎಂಬುದು ದುಃಖಪಡುವಂತಹುದಲ್ಲ; ವ್ಯಕ್ತಿಯನ್ನು ಶಿವನಲ್ಲಿಗೆ ಕೊಂಡೊಯ್ಯುವ ಸಾಧನ; ಸಾವಿನ ಮೂಲಕ ವ್ಯಕ್ತಿ ಮೋಕ್ಷಕ್ಕೆ ಹೋದ ಎಂಬುದನ್ನು ಸಾಂಕೇತಿಕವಾಗಿ ವ್ಯಕ್ತಪಡಿಸಲು ನಡೆಸುವ ಅರ್ಥಪೂರ್ಣಪದ್ಧತಿ ಇದು. ಶಿವಾಧೀನರಾದವರಿಗಾಗಿ ಮನೆಯಲ್ಲಿ ಪುಷ್ಪಾಂಜಲಿ ಮಾಡುವ ಪದ್ಯಗಳು ಹೀಗಿವೆ—

"(1) ಗುರುದೀಕ್ಷೆಯಂ ಪಡೆದು ಶರೀರಧರ್ಮವ ನೀಗಿ ಗುರುಲಿಂಗಮದ ಗುಪ್ತಭಕ್ತಿಯ ಮಾಡಿ ವರತೀರ್ಥಪ್ರಸಾದವಂ ಪಡೆದು ಸೇವಿಸುತ್ತಂ. ಶಿರದೊಳಿಹ ಕಳೆ ಇಪ್ಪವೇ ಪರಬ್ರಹ್ಮವೆಂಬರು ಹಿಡಿದು ಸತ್ಕ್ರಿಯಗಳಿಂದಾಚರಿಸುತ್ತ ಧರೆಯ ಭೋಗವನಳಿದು ಹರಲೋಕಕ್ಕೈದಿ ತಿರುಗದಿರು ಎಂದು ರಜತಪುಷ್ಪವನೀಯ್ವೆನು (2) ಶಿವಜನ್ಮದಲಿ ಹುಟ್ಟಿ ಶಿವದೀಕ್ಷೆಯಂ ಪಡೆದು ಶಿವಶೇಷವನೆ ಸವಿದು ಭವವ ಪರಿಹರಿಸುತ್ತ ಶಿವಮಂತ್ರದರುಹಿಂದೆ ಸಂಸಾರ ನಿಃಪ್ರಿಯನಾಗಿ ತವೆ ಹರುಷದಿಂದ ಷಟ್‌ಸ್ಥಲವನಂನಗೊಡುತಂ ಸವಿಕಲ್ಪತೆ ತತ್ವಾದಿ ಇದೆ ಎಂದು ನವಸ್ಥಾನದೊಳಿಹ ನವವರ್ಣವಸ್ತುವಿನೊಳಗೆ ಶಿವಶಿವಾಶಿವ ಎನುತ ಶಿವಲೋಕಕ್ಕೈದಿ ಬುವನವನು ಬಯಸಬೇಡೆಂದು ಸುವರ್ಣಪುಷ್ಪವನೀಯ್ವೆನು (3) ತನುಗುರುವು ಆಯತದೀಕ್ಷೆಯಿಂ ಶುದ್ಧ ತಾನಾಗಿ ಪ್ರಾಣಚರ ಸನ್ನಿಹಿತ ದೀಕ್ಷದಿಂ ಪ್ರಸಿದ್ಧನು ತಾನಾಗಿ ಸನ್ನುತುಪದೇಶದನುಗ್ರವನು ಪಡೆದು ಮತ್ತಂ ಮನಬುದ್ಧಿ ಚಿತ್ತ ಅಹಂಕಾರವನಳಿದು ಇನಿತು ವಂಚನೆಯಿಲ್ಲದೆ ಗಣಸಾಕ್ಷಿ ಮುಂತಾಗಿ ಘನಲಿಂಗ ತಾನಾಗಿ ಗಗನಕ್ಕೈದಿದ ಬಳಿಕ ಮನುಜ ಜನ್ಮಕ್ಕಿಳಿಯದಿರು ಎಂದು ಸರ್ವ ಪುಷ್ಪವನೀಯ್ವೆನು ॥"

ಸಮಾಧಿ ಮಾಡಿಯಾದ ಮೇಲೆ ಹೇಳುವ ಪದ್ಯಗಳು :

"(1) ಶಿವಲೋಕದಿಂದಲಾ ಪರಮನಪ್ಪಣೆವಿಡಿದು ಶಿವನ ವಂಶೋದ್ಭವನಾಗಿ ಮರ್ತ್ಯಕಿಳಿದು ವಿವರಿಸುತ ತತ್ವವಂ ಪಂಚಾಕ್ಷರಿಯ ಮಹಾಷಟ್‌ಸ್ಥಲಂಗಳನು ಮುದದಿಂ ತವೆ ತಿಳಿದು ಆಚರಿಸಿ ಸಾತ್ವಿಕೋತ್ತಮನೆನಿಸಿ ಶಿವಪುರವ ಪೊಕ್ಕು ಸಮರಸವಾದ ಬಳಿಕ ನೀಂ ಶಿವ ಬಿಟ್ಟು

ಮರ್ತ್ಯಕ್ಕಿಳಿಯಬೇಡೆಂದು ರಜತಪುಷ್ಪವ ನೀಯ್ವೆನು. (2) ರಜತಗಿರಿಯೊಳಿರ್ದ ರಜಧರನ ಅಪ್ಪಣೆಯ ನಿಜಸಿರದೋಳ್ ತಾಳ್ದು ನೀತಿವಿಡಿದಾಚರಿಸಿ ಭಜಿಸುತಿಹ ಭಕ್ತರ್ಗೆ ಅಷ್ಟಮದ ಸಿದ್ಧಿಗಳ ನಿಜಮೋಕ್ಷಗಳನು ಕೊಡುತಾ ತ್ರಿಜಗವಂದಿತನಾಗೆ ತ್ರೈಮಲವ ಧಿಃಕರಿಸಿ ಅಜಹರಿ ಸಹಸ್ರಾಕ್ಷವಂದಿತನ ಪಾದಮಂ ನಿಜವಾಗಿ ಸಾರಿ ಮರ್ತ್ಯವ ಬಯಸಬೇಡೆಂದು ಸುವರ್ಣಪುಷ್ಪವ ನೀಯ್ವೆನು (3) ಪರಶಿವನ ರೂಪದಿಂ ಮರ್ತ್ಯಲೋಕಕ್ಕಿಳಿದು ಪರಿಪೂರ್ಣ ಬ್ರಹ್ಮಮಯನಾಗಿ ಆಚರಿಸುತಾ ಪರತತ್ವಗಳ ತಿಳಿದು ಪಾಪಗಳ ಖಂಡಿಸುತ ಶರಣಮಾರ್ಗದೋಳ್ ಕೂಡಿ ಗುರುಲಿಂಗ ಜಂಗಮದ ಗುಪ್ತಪೂಜೆಯ ಮಾಡಿ ಶರೀರ ಕರ್ಣೇಂದ್ರಿಯುಗಳನ್ನೆಲ್ಲ ಧಿಃಕರಿಸಿ ನೆರೆ ಪರಮನೋಳ್ ಬೆರೆದು ಮರ್ತ್ಯವ ಬಯಸಬೇಡೆಂದು ಸರ್ವಪುಷ್ಪವನೀಯ್ವೆನು".

ಶವವನ್ನು ಸಮಾಧಿ ಮಾಡಿದ ಮೇಲೆ ಅಲ್ಲಿ ಸೇರಿದ್ದ ಜನ ಊರಿಗೆ ಹಿಂದಿರುಗಿ ಬರುವಾಗ ಅವರಲ್ಲೇ ಒಂದು ಗುಂಪು ಮೊದಲು ಹೋಗಿ ಊರಿನಿಂದ ಸ್ಮಶಾನದ ಕಡೆ ಬರುತ್ತ ಸ್ಮಶಾನದಿಂದ ಹಿಂದಿರುಗುತ್ತಿರುವ ಇನ್ನೊಂದು ಗುಂಪಿಗೆ ಎದುರಾಗುತ್ತಾರೆ. ಆ ಎರಡು ಗುಂಪುಗಳಿಗೆ ಸಂಭಾಷಣೆ ನಡೆಯುತ್ತದೆ. ಊರಿನಿಂದ ಬರುತ್ತಿರುವವರು ''ಎಲ್ಲಿಗೆ ಹೋಗಿದ್ದಿರಿ'' ಎಂದರೆ, ಸ್ಮಶಾನದಿಂದ ವಾಪಸಾಗುತ್ತಿರುವವರು ''ಒಬ್ಬ ಶರಣ ಈ ದಿನ ಕೈಲಾಸಕ್ಕೆ ಹೋದ, ಆ ಘಟನೆಯನ್ನು ಆಚರಿಸಲು ನಾವು ಹೋಗಿದ್ದೆವು. ಇದರಲ್ಲಿ ದುಃಖಪಡುವುದೇನೂ ಇಲ್ಲ'' ಎಂದು ಹೇಳುತ್ತ ಎರಡೂ ಗುಂಪುಗಳೂ ಭಜನೆ ಮಾಡುತ್ತ ಊರಿಗೆ ಹಿಂದಿರುಗುತ್ತವೆ. (ಈ ಅನುಬಂಧ ಪ್ರಸ್ತುತ ಬರಹಕ್ಕೆ ಸ್ವಲ್ಪ ಹೊರಗಾಗಿದ್ದರೂ ಅದರ ವಿಶಿಷ್ಟತೆಗಾಗಿ ಅದನ್ನು ಇಲ್ಲಿ ಸೇರಿಸಿದ್ದೇನೆ.)

ಅನ್ಯೋಕ್ತಿ ವಿಲಾಸ

ಬಿ. ಜಿ. ಶ್ರೀಲಕ್ಷ್ಮಿ

ಜಗನ್ನಾಥನ ಅನ್ಯೋಕ್ತಿ ವಿಲಾಸವು ಭಾಮಿನೀ ವಿಲಾಸದ ಕಾವ್ಯಗುಚ್ಛದಲ್ಲಿ ಮೊದಲನೆಯದು. ಈ ಕಾವ್ಯಮಾಲೆಯ ಇತರ ಮೂರು ಕಾವ್ಯಭಾಗಗಳು ಹೀಗಿವೆ- 1) ಶೃಂಗಾರ ವಿಲಾಸ, 2) ಕರುಣಾ ವಿಲಾಸ ಮತ್ತು 3) ಶಾಂತ ವಿಲಾಸ. 'ಭಾಮಿನೀ ವಿಲಾಸ'ದ ಶೀರ್ಷಿಕೆಯಲ್ಲಿ ಭಾಮಿನೀ ಪದಕ್ಕೆ 'ಸುಂದರ ಸ್ತ್ರೀ' ಎಂಬ ಅರ್ಥ ಇದೆ. ಅಲ್ಲದೆ, ಈ ಪದವು ಓರ್ವ ಸ್ತ್ರೀಯ ಹೆಸರನ್ನೂ ನಿರ್ದೇಶಿಸಬಹುದಾಗಿದೆ.[1] ಮತ್ತು ಕವಿಯು ಕವಿತೆಯನ್ನೇ ಭಾಮಿನೀ ಎಂದು ರೂಪಿಸಿದಂತೆಯೂ ಕಾಣುತ್ತದೆ.[2] ಈ ಭಾಮಿನಿಯ ಸೊಬಗೇ ಭಾಮಿನೀ ವಿಲಾಸ. ನಾಲ್ಕು ವಿಲಾಸಗಳುಳ್ಳ ಭಾಮಿನೀ ವಿಲಾಸದಲ್ಲಿ ಭಾಮಿನಿಗೆ ಸಂಬಂಧಿಸಿದಂತಹ ಅಥವಾ ಶೃಂಗಾರ ವಿಷಯಕವಾದ ಪದ್ಯಗಳು ಹೆಚ್ಚಾಗಿವೆ. ಇವು ಕೇವಲ ಶೃಂಗಾರ ವಿಲಾಸದಲ್ಲಿಯೇ ಅಲ್ಲ, ಅನ್ಯೋಕ್ತಿ ವಿಲಾಸ ಮತ್ತು ಕರುಣಾ ವಿಲಾಸಗಳಲ್ಲಿಯೂ ಇವೆ. ಅಲ್ಲದೆ, ನಾಲ್ಕು ವಿಲಾಸಗಳ ಪೈಕಿ ಶೃಂಗಾರ ವಿಲಾಸವು ಅತ್ಯಂತ ದೊಡ್ಡ ವಿಲಾಸ. ಇದರಲ್ಲಿ ಸುಮಾರು 150 ಶ್ಲೋಕಗಳಿವೆ. ಅನ್ಯೋಕ್ತಿ, ಕರುಣಾ ಮತ್ತು ಶಾಂತ ವಿಲಾಸಗಳಲ್ಲಿ ಕ್ರಮವಾಗಿ ಸುಮಾರು 120, 20 ಮತ್ತು 40 ಶ್ಲೋಕಗಳುಂಟು. ಈ ಕೆಲಕಾರಣಗಳಿಂದ ಜಗನ್ನಾಥನು ತನ್ನ ಕಾವ್ಯಸಮುಚ್ಚಯಕ್ಕೆ ಭಾಮಿನೀ ವಿಲಾಸವೆಂಬ ಹೆಸರು ಕೊಟ್ಟಿದ್ದಾನೆ ಎಂದು ಹೇಳುವುದರಲ್ಲಿ ಔಚಿತ್ಯವಿದೆ.

ಅನ್ಯೋಕ್ತಿ ವಿಲಾಸಕ್ಕೆ ಅನ್ಯೋಕ್ತಿ ಉಲ್ಲಾಸ, ಅನ್ಯೋಕ್ತಿ ಸಮುಲ್ಲಾಸ ಮತ್ತು ಪ್ರಾಸ್ತಾವಿಕ ವಿಲಾಸಗಳೆಂಬ ನಾಮಾಂತರಗಳಿವೆಯೆಂದು ಹಸ್ತಪ್ರತಿಗಳಿಂದ

---

1. (ಅ) ಜಗನ್ನಾಥನು ದಿಲ್ಲಿಯಲ್ಲಿದ್ದಾಗ ಯವನ ತರುಣಿ ಲವಂಗಿಕೆಯೊಡನೆ ನಿಕಟಸಂಪರ್ಕ ಹೊಂದಿದ್ದನು. ಆದರೂ ತನ್ನ ದೂರದ ಪತ್ನಿ ಭಾಮಿನಿಯನ್ನು ನೆನೆಯುತ್ತಲಿದ್ದನು. ಈ ನೆನಸಿನ ಫಲವೇ ಭಾಮಿನೀವಿಲಾಸ. ಇದು ಕವಿಯು ಪತ್ನಿಯ ಮೇಲಿನ ಪ್ರೇಮಕ್ಕಿತ್ತ ಬೆಲೆ – ಎಂಬ ಅಭಿಪ್ರಾಯವಿದೆ. ಇದಕ್ಕೆ ಪುರಾವೆಗಳೂ ಸಾಕಷ್ಟಿವೆಯೆಂಬ ಅಂಶವನ್ನು ಜ್ಞಾಪಕದಲ್ಲಿಡಬೇಕು.

   (ಬ) 'ಭಾಮಿನೀ' ಪದವು ಶೃಂಗಾರವಿಲಾಸದ ಆರಂಭ ಪದ್ಯದಲ್ಲಿ ಮತ್ತು ಇನ್ನೂ ಹಲವು ಸ್ಥಳಗಳಲ್ಲಿ ಪ್ರಯುಕ್ತವಾಗಿದೆ—ಶೃ. 1 ; 17 ; ಕ. 17 ; ಇದೇ ರೀತಿ ಹಲವೆಡೆ ಉಲ್ಲಾಸ – ವಿಲಾಸ ಪದಗಳು ಬಳಸಲ್ಪಟ್ಟಿವೆ–ಶೃ. 4 ; 118 ; ಕ. 5 ; 8 ;

2. ಕ. 6 ; 10 ;

ತಿಳಿದುಬರುತ್ತದೆ. ಹೆಚ್ಚು ಬಳಕೆಯಲ್ಲಿರುವ ಹೆಸರೆಂದರೆ ಅನ್ಯೋಕ್ತಿ ವಿಲಾಸ.[3] ಅನ್ಯೋಕ್ತಿ ವಿಲಾಸವೆಂದರೆ ಅನ್ಯೋಕ್ತಿಗಳ ಸೊಬಗು ಎಂದು. ಇದನ್ನು ಎಲ್ಲಿ ಕಾಣುತ್ತೇವೆಯೋ ಅದು ಅನ್ಯೋಕ್ತಿ ವಿಲಾಸ ಕಾವ್ಯ–ಅನ್ಯೋಕ್ತೀನಾಂ ವಿಲಾಸಃ ಯತ್ರ; ಇದೇ ರೀತಿ ಅನ್ಯೋಕ್ತಿಗಳ ವೈಭವ ಮತ್ತು ವೈಭವದ ಪರಿಚಯವು ಎಲ್ಲಿ ಆಗುವುದೋ ಅದೇ ಅನ್ಯೋಕ್ತಿ ಉಲ್ಲಾಸ: ಅನ್ಯೋಕ್ತೀನಾಂ ಉಲ್ಲಾಸಃ ಯತ್ರ; ಅಥವಾ ಅನ್ಯೋಕ್ತಿಗಳಿಂದ ಮೂಡಿಬರುವ ಉಲ್ಲಾಸ[4] ಅಂದರೆ ಆನಂದ ಮತ್ತು ಆನಂದದಾಯಕವಾದ ಅನ್ಯೋಕ್ತಿ ಕಾವ್ಯ ಅನ್ಯೋಕ್ತಿ ಉಲ್ಲಾಸ–ಅನ್ಯೋಕ್ತಿ ಅಭಿಃ ಉಲ್ಲಾಸಃ ಯತ್ರ ಎಂತಲೂ ವಿವರಿಸಬಹುದು. 'ಅನ್ಯೋಕ್ತಿ' ಪದವನ್ನಾದರೋ ಅನ್ಯಂ ಪ್ರತಿ ಉಕ್ತಿಃ; ಅನ್ಯಾ ಉಕ್ತಿಃ; ಅನ್ಯಸ್ಯ ಉಕ್ತಿಃ–ಎಂದು ಮೂರು ವಿಧವಾಗಿ ವಿಗ್ರಹ ಮಾಡಬಹುದು. ಅಂದರೆ ಹೇಳಬೇಕಾದ ವ್ಯಕ್ತಿಗೆ ಹೇಳುವ ಮಾತನ್ನು ನೇರವಾಗಿ ಅವನಿಗೆ ಹೇಳದೆ ಬೇರೆ ವಸ್ತುವನ್ನು ನಿರ್ದೇಶಿಸಿ ಹೇಳುವುದು ಅನ್ಯೋಕ್ತಿ ಅಥವಾ, ಪ್ರಸ್ತುತಕ್ಕೆ ಸಂಬಂಧಿಸಿರುವ ವೃತ್ತಾಂತವನ್ನು ಮರೆಮಾಡಿ (ಅದಕ್ಕೆ ಸಂಬಂಧಿಸದ ಹಾಗೆ) ಅಪ್ರಸ್ತುತಕ್ಕೆ ಸಂಬಂಧಿಸುವಂತಹ ವೃತ್ತಾಂತದ ವರ್ಣನೆಯು ಅನ್ಯೋಕ್ತಿಯಾಗುತ್ತದೆ. ಇದು ಮೊದಲನೆಯ ವಿಗ್ರಹವಾಕ್ಯದ ಅರ್ಥವಾಗುತ್ತದೆ, ಎರಡನೆಯ ಪ್ರಕಾರ, ಅನ್ಯೋಕ್ತಿ ಪದಕ್ಕೆ ಹೇಳಬೇಕಾದ ರೀತಿಯಲ್ಲಿ ಅಥವಾ ಹೇಳ ಬೇಕಾದುದನ್ನು ಹೇಳದೆ ಬೇರೆ (ರೀತಿಯಲ್ಲಿ) ಹೇಳುವುದು ಎಂದು ಅರ್ಥ ವಾಗುತ್ತದೆ. ಇನ್ನು ಮೂರನೆಯ ಪಕ್ಷದಲ್ಲಿ (ಕವಿಯು ಈಗ ನಮಗೆ ತಿಳಿಸಿಕೊಡು ವಂತೆ) ಮೂರನೆಯ ವ್ಯಕ್ತಿಯು ಪ್ರಸ್ತುತ ವ್ಯಕ್ತಿಗೆ ತಿಳಿಸುವ ಮಾತು ಎಂದಾಗುತ್ತದೆ. ಈ ಮೂರು ಪ್ರಕಾರಗಳು ಮೇಲ್ನೋಟಕ್ಕೆ ಬೇರೆಯಾಗಿ ಕಂಡರೂ ಪ್ರಯೋಜನವು ಒಂದೇಯಾದುದರಿಂದ ಅನ್ಯೋಕ್ತಿಯ ಮೂಲತತ್ವಕ್ಕೆ ಭಂಗ ಬರುವುದಿಲ್ಲ.

ನಮ್ಮ ನಿತ್ಯ ಜೀವನದಲ್ಲಿ ಕೆಲವು ಸಂಗತಿಗಳನ್ನು ಪ್ರತ್ಯಕ್ಷವಾಗಿ ಹೇಳಲಾಗದೆ ಪರೋಕ್ಷವಾಗಿ ಹೇಳಬೇಕಾಗುವ ಸಂದರ್ಭಗಳು ಒದಗುತ್ತವೆ. ಮತ್ತು ಸಂದರ್ಭ ಗಳಿಗೆ ತಕ್ಕ ಮಾತುಗಳನ್ನು ಆಡುತ್ತೇವೆ. ಪ್ರಕೃತ ವ್ಯಕ್ತಿಗೆ ಅನ್ವಯಿಸುವಂತೆ ಇನ್ನೊಬ್ಬನನ್ನೋ ಅಥವಾ ಇನ್ನೊಂದು ವಸ್ತುವನ್ನೋ ಉದ್ದೇಶಿಸಿ ತಿಳಿಸುವುದು ಸಾಮಾನ್ಯ ವ್ಯವಹಾರವಾಗಿರುತ್ತದೆ. ಕೆಲವು ವೇಳೆ ಬಳಸು ಮಾತುಗಳನ್ನಾಡುತ್ತೇವೆ. ಅಥವಾ ಮಾತಿನ ಭಂಗಿಯನ್ನೇ ಬೇರೆಮಾಡುತ್ತೇವೆ. ಇದಕ್ಕೆ ಸಂಕೋಚ–ದುಃಖ– ವಿನೋದಗಳು ಕಾರಣವಾಗಿರಬಹುದು. ಆದರೆ ಇವುಗಳ ಹಿನ್ನೆಲೆಯಲ್ಲಿ ಹೊರಡುವ ಬಳಸುಮಾತುಗಳು ನವಿರಾಗಿಯೂ, ಸಭ್ಯವಾಗಿಯೂ ಮತ್ತು ಸುಂದರವಾಗಿಯೂ

---

3. ಉಲ್ಲಾಸ ಪದಕ್ಕೆ ಅಧ್ಯಾಯವೆಂಬ ಅರ್ಥವೂ ಇದೆ.

4. ಶ್ರೀ ರಾಧೇಶ್ಯಾಮರು ಅನ್ಯೋಕ್ತಿ ವಿಲಾಸವೆಂಬ ಹೆಸರು ನಂತರದಲ್ಲಿ ಬಂದಿದ್ದು ಮೂಲ ಹೆಸರು ಪ್ರಾಸ್ತಾವಿಕ ವಿಲಾಸವೇ ಆಗಿರುವುದೆಂದು ಅಭಿಪ್ರಾಯಪಡುತ್ತಾರೆ.

ತೋರುತ್ತವೆ. ಸ್ತುತಿಮಾಡುವ ತರದಲ್ಲಿ ನಿಂದೆಮಾಡುವುದು ಮತ್ತು ನಿಂದಿಸುವ ಮೂಲಕ ಸ್ತುತಿಸುವುದೂ ಇದರ ವೈಖರಿ. ಈ ಬಗೆಯ ನುಡಿ ಆಡುವವನ ಮತ್ತು ಅರಿಯುವವನ ಜಾಣ್ಮೆ, ಸೂಕ್ಷ್ಮ ಪರಿಜ್ಞಾನ ಮತ್ತು ಜಾಗ್ರತೆಗಳನ್ನು ಅವಲಂಬಿಸಿರುತ್ತದೆ. ಇದನ್ನೇ ಕವಿಯು ಆಡುವುದೆಂದರೆ ರಮಣೀಯತೆಯು ಇದರ ಪ್ರಯೋಜನವಾಗುತ್ತದೆ ಮತ್ತು ಸಹೃದಯತೆ ಮತ್ತು ಸೌಂದರ್ಯ ಪ್ರಜ್ಞೆಗಳೇ ಇದರ ಆಧಾರವಾಗುತ್ತವೆ. ಇಂತಹ ಸನ್ನಿವೇಶಗಳ ಮತ್ತು ಅವುಗಳನ್ನು ವರ್ಣಿಸುವ ಪದವಾಕ್ಯಗಳ ಆವಲಿಯೇ ಅನ್ಯೋಕ್ತಿ ವಿಲಾಸ.

ಸಂಸ್ಕೃತ ಕಾವ್ಯಮೀಮಾಂಸೆಯಲ್ಲಿ 'ಅನ್ಯೋಕ್ತಿ' ಪದವು ಒಂದು ಕಾವ್ಯಾಲಂಕಾರ ಪ್ರಕಾರದ ಹೆಸರಾಗಿ ರುದ್ರಟನ ಕಾವ್ಯಾಲಂಕಾರ ಸಾರಸಂಗ್ರಹದಲ್ಲಿ ಪ್ರಯುಕ್ತವಾಗಿದೆ.[5] ರುದ್ರಟನು ಇದನ್ನು ಔಪಮ್ಯವರ್ಗದ ಅಲಂಕಾರಗಳಲ್ಲಿ ವಿಂಗಡಿಸುತ್ತ ಇದರ ಲಕ್ಷಣವನ್ನೂ ಕೊಡುತ್ತಾನೆ.[6] ಉಪಮಾನ ವೃತ್ತಾಂತ ವರ್ಣನೆಯಿಂದ ಉಪಮೇಯ ವೃತ್ತಾಂತವನ್ನು ಸೂಚಿಸುವುದೇ ಇದರ ತತ್ತ್ವ. ಇದು ಇತರ ಆಲಂಕಾರಿಕರು ಹೇಳಿರುವ ಅಪ್ರಸ್ತುತ ಪ್ರಶಂಸಾಲಂಕಾರದ ತತ್ತ್ವಕ್ಕಿಂತ ಬೇರೆಯಲ್ಲ. ರುದ್ರಟನ ಪೂರ್ವಾಲಂಕಾರಿಕರಾದ ಭಾಮಹ, ದಂಡೀ ಮತ್ತು ಉದ್ಭಟರ ಕಾವ್ಯಶಾಸ್ತ್ರ ಗ್ರಂಥಗಳಲ್ಲಿ ಈಗಾಗಲೇ ಅಪ್ರಸ್ತುತಾಲಂಕಾರವು ಉಕ್ತವಾಗಿದೆ ಮತ್ತು ಇವನ ನಂತರದ ಆಲಂಕಾರಿಕರೆಲ್ಲರೂ ಇದನ್ನು ಪರಿಗಣಿಸಿದ್ದಾರೆ.

---

5. ಇದಕ್ಕಿಂತ ಮೊದಲು ಭರತನ ನಾಟ್ಯ ಶಾಸ್ತ್ರದಲ್ಲಿ 'ಅನ್ಯಾಪದೇಶ' ಪದವು ಮನೋರಥವೆಂಬ ಕಾವ್ಯ ಭೂಷಣದ ಲಕ್ಷಣದಲ್ಲಿ ಉಪಯೋಗಿಸಲ್ಪಟ್ಟಿರುವುದನ್ನು ಕಾಣುತ್ತೇವೆ.

ಅ) ಹೃದಯಾರ್ಥಸ್ಯ ವಾಕ್ಯಸ್ಯ ಗೂಢಾರ್ಥಸ್ಯ ವಿಭಾವಕಮ್ ।
ಅನ್ಯಾಪದೇಶೈಃ ಕಥನಂ ಮನೋರಥ ಇತಿ ಸ್ಮೃತಃ ॥

ಆ) ಹೋಲಿಸಿ—ಸ್ವಾಭಿಪ್ರಾಯಸ್ಯ ಕಥನಂ ಯದಿ ವಾಪ್ಯನ್ಯಭಾವನಾ।
ಅನ್ಯಾಪದೇಶೋ ವಾ ಯಸ್ತು ತ್ರಿವಿಧಂ ಭಾವಿಕಂ ವಿದುಃ ॥

ಸರಸ್ವತೀ. ಕಂ. 4. 86

ಇ) 'ದಶರೂಪಕ' ಕಾರನಾದ ಧನಂಜಯನು ಅನ್ಯೋಕ್ತಿ ಆಧರಿತ ಪತಾಕಾಸ್ಥಾನ ಭೇದವನ್ನು ಪರಿಗಣಿಸಿದ್ದಾನೆ :–
ಪ್ರಸ್ತುತಾಗಂತುಭಾವಸ್ಯ ವಸ್ತುನೋಽನ್ಯೋಕ್ತಿ ಸೂಚಕಮ್ ।
ಪತಾಕಾಸ್ಥಾನಕಂ ತುಲ್ಯಸಂವಿಧಾನ ವಿಶೇಷಣಮ್ ।

ದಶ. 1. 14.

6. ಅಸಮಾನ ವಿಶೇಷಣಮಪಿ ಯತ್ರ ಸಮಾನೇತಿವೃತ್ತಮುಪಮೇಯಮ್ ।
ಉಕ್ತೇನ ಗಮ್ಯತೇ ಪರಮುಪಮಾನೇನ ಸಾಽನ್ಯೋಕ್ತಿಃ

ರುದ್ರಟ. ಕಾ. 8. 74.

ಅಪ್ರಸ್ತುತ ಪ್ರಶಂಸಾ ಎಂದರೆ ಅಪ್ರಸ್ತುತದ ಮಾತು, ವರ್ಣನೆಯೆಂದರ್ಥ. ಅಪ್ರಸ್ತುತವೃತ್ತಾಂತವು ಪ್ರಸ್ತುತವೃತ್ತಾಂತವನ್ನು ಸೂಚಿಸುವುದಾದರೆ ಅದು ಅಪ್ರಸ್ತುತ ಪ್ರಶಂಸೆ.[7] ಇದು ಕೆಲವು ವೇಳೆ ಅಪ್ರಸ್ತುತದ ಸ್ತುತಿಯಲ್ಲಿ ಇಲ್ಲವೆ ನಿಂದೆಯಲ್ಲಿ ಪರ್ಯವಸಾನವಾಗುವುದುಂಟು.[8] ಇದರ ತತ್ತ್ವವನ್ನು ರುದ್ರಟನ ಅನ್ಯೋಕ್ತಿ ತತ್ತ್ವಕ್ಕೆ ಹೋಲಿಸಿ ನೋಡಿದರೆ ರುದ್ರಟನು ಪ್ರಸ್ತುತ–ಅಪ್ರಸ್ತುತ ಶಬ್ದಗಳಿಗೆ ಬದಲಾಗಿ ಉಪಮೇಯ–ಉಪಮಾನ ಶಬ್ದಗಳನ್ನು ಪ್ರಯೋಗಿಸಿದ್ದಾನೆಂದು ವಿದಿತವಾಗುತ್ತದೆ. ಮತ್ತು ಇನ್ನೊಂದು ಗಮನೀಯ ಅಂಶವೆಂದರೆ ರುದ್ರಟನು ಅಪ್ರಸ್ತುತ ಪ್ರಶಂಸೆಯೆಂದು ಪ್ರತ್ಯೇಕ ಅಲಂಕಾರವನ್ನು ಹೇಳಿಲ್ಲ.[8] ಆದುದರಿಂದ ರುದ್ರಟನ ಅನ್ಯೋಕ್ತಿಯೂ ಇತರರು ಹೇಳಿರುವ ಅಪ್ರಸ್ತುತ ಪ್ರಶಂಸೆ. ಹೀಗೆಂದ ಮಾತ್ರಕ್ಕೆ, ಕೇವಲ ಈ ಕಾರಣದಿಂದ, ಅನ್ಯೋಕ್ತಿ ಅಥವಾ ಅನ್ಯಾಪದೇಶ ಸಾಹಿತ್ಯವೇ ಅಪ್ರಸ್ತುತಾಲಂಕಾರದಿಂದ ಬೆಳೆದು ಬಂತೆಂದು ಪ್ರತಿಪಾದಿಸುವುದೂ ತಪ್ಪಾಗುತ್ತದೆ. ಹೀಗೆ ನಿಶ್ಚಯಕ್ಕೆ ಬರುವುದು ಸಂಕುಚಿತ ದೃಷ್ಟಿಯೆಂತಲೂ ಅನಿಸುತ್ತದೆ. ಹಾಗೆ ನೋಡಿದರೆ ಅನ್ಯೋಕ್ತಿ ಪದ್ಯಗಳಲ್ಲಿ ವ್ಯಾಜಸ್ತುತಿ.[9] ವ್ಯಾಜನಿಂದಾ, ಪ್ರಸ್ತುತಾಂಕುರಾದಿ ಅಲಂಕಾರಗಳಿಗೂ ಪ್ರವೇಶವಿರುತ್ತದೆ.[10] ಇಲ್ಲವೆ, ಅನ್ಯೋಕ್ತಿ ಕಾವ್ಯಗಳು ಧ್ವನಿಯಿಂದ ಕೂಡಿರುವ ಉತ್ತಮ ಕಾವ್ಯಗಳಾಗಬಹುದು. ಆದರೆ ಈ ಅಂಶವಂತೂ ನಿಜ. ಇದು–ಅಪ್ರಸ್ತುತ ಪ್ರಶಂಸೆಯನ್ನು ಬಹುಮಟ್ಟಿಗೆ ಅನ್ಯೋಕ್ತಿಶ್ಲೋಕಗಳಲ್ಲಿ ಗುರುತಿಸಬಹುದು.

ಸಾಮಾನ್ಯವಾಗಿ, ನೀತಿಬೋಧನೆಯು ಎಲ್ಲ ಅನ್ಯೋಕ್ತಿಗಳ ಉದ್ದೇಶವಾಗಿದೆ. ಅನ್ಯೋಕ್ತಿ ಕಾವ್ಯವು ನೀತಿಕಾವ್ಯಗಳ ಪ್ರಭೇದವೆಂದು ಪರಿಗಣಿತವಾಗಿದೆ ಕೂಡ. ಈ ದೃಷ್ಟಿಯಿಂದ ನೋಡಿದಾಗ, ಇದರ ತುಣುಕುಗಳು ಋಗ್ವೇದ ಸಾಹಿತ್ಯದಲ್ಲಿ ಕಂಡು ಬರುತ್ತವೆ. ಐತರೇಯ ಬ್ರಾಹ್ಮಣದ ಉಪಾಖ್ಯಾನಗಳಲ್ಲಿ ವಿಶೇಷವಾಗಿ

---

7. ಅಪ್ರಸ್ತುತಪ್ರಶಂಸಾ ಸ್ಯಾತ್ ಸಾ ಯತ್ರ ಪ್ರಸ್ತುತಾಶ್ರಯಾ। ಕುವಲಯ ಪು.82
8. ಪ್ರಶಂಸಾಪದಕ್ಕೆ ಸ್ತುತಿಯೆಂದು ಅರ್ಥಮಾಡಿರುವುದೂ ಉಂಟು.
9. ರುದ್ರಟನು ವಾಸ್ತವ ವರ್ಗದಲ್ಲಿ ಹೇಳಿರುವ ಪರ್ಯಾಯವೆಂಬ ಮತ್ತೊಂದು ಅಲಂಕಾರದ ಪ್ರಭೇದದಲ್ಲಿ ನವ್ಯಾಲಂಕಾರಿಕರು ಹೇಳಿರುವ ಅಪ್ರಸ್ತುತ ಪ್ರಶಂಸೆಯ ಪ್ರಭೇದವನ್ನು ಗುರುತಿಸಬಹುದು–ರುದ್ರಟ. ಕಾ. 7. 42.
10. ಪ್ರಸ್ತುತ-ಅಪ್ರಸ್ತುತ ವೃತ್ತಾಂತವನ್ನೊಳಗೊಂಡ ಸಮಾಸೋಕ್ತಿ ಅಲಂಕಾರದ ಮೊದಲನೆಯ ಹಂತದ ಬೆಳವಣಿಗೆಯಲ್ಲಿ ಇದಕ್ಕೂ ಮತ್ತು ನವ್ಯಾಲಂಕಾರಿಕರ ಅಪ್ರಸ್ತುತ ಪ್ರಶಂಸೆಯ ಪ್ರಭೇದಕ್ಕೂ ವ್ಯತ್ಯಾಸವು ಕಾಣುವುದಿಲ್ಲ. ಭೋಜನು 'ಅನ್ಯೋಕ್ತಿ' ಎಂಬ ಸಮಾಸೋಕ್ತಿ ಭೇದವನ್ನೇ ಹೇಳಿದ್ದಾನೆ. ಆದರೆ ನಂತರದಲ್ಲಿ ಸಮಾಸೋಕ್ತಿ ಮತ್ತು ಅಪ್ರಸ್ತುತ ಪ್ರಶಂಸೆಗಳು ಪರಸ್ಪರ ವಿರುದ್ಧಾಲಂಕಾರಗಳಾದವು. ಹೆಚ್ಚಿನ ವಿವರಗಳಿಗೆ ನೋಡಿ. Evolution of Anyokti Poetry in Sanskrit by Narayana Das

ಶುನಃಶೇಪ ಆಖ್ಯಾನದಲ್ಲಿ ಉಪದೇಶಾತ್ಮಕ ಮಾತುಗಳು ಹೇರಳವಾಗಿವೆ. ಪಾಲಿ ಭಾಷೆಯ ಧಮ್ಮ ಪದವು ಬೌದ್ಧರ ನಡವಳಿಕೆ–ನಿಯಮಗಳನ್ನು ಬೋಧಿಸುವ ಧರ್ಮ ಗ್ರಂಥವೇ ಆಗಿದೆ. ಸ್ಮೃತಿ–ಸೂತ್ರಗಳಂತೂ ಬಹುಮಟ್ಟಿಗೆ ನೀತಿಯ ಆಕರಗಳಾಗಿವೆ. ಹೀಗೆಯೇ ಪುರಾಣ, ಮಹಾಕಾವ್ಯ, ಗದ್ಯ ಮತ್ತು ನಾಟಕಗಳಲ್ಲಿ ಹಲವೆಡೆ ಸಾಮಾನ್ಯ ನೀತಿಗಳು ಕಂಡು ಬರುತ್ತವೆ. ಮಹಾಭಾರತದ 'ವಿದುರನೀತಿ' ಎಂದು ಪ್ರಖ್ಯಾತವಾಗಿರುವ ಭಾಗವು ಇದಕ್ಕೆ ಅತ್ಯಂತ ಸ್ಪಷ್ಟ ಮತ್ತು ಪ್ರಸಿದ್ಧ ಉದಾಹರಣೆ. ಈ ಸಂದರ್ಭದಲ್ಲಿ ವ್ಯಾಖ್ಯಾನಕಾರನಾದ ನೀಲಕಂಠನು ಇಲ್ಲಿ ವಿದುರನು, ಧೃತರಾಷ್ಟ್ರನಿಗೆ ಸಜ್ಜನನ ಕರ್ತವ್ಯ, ದುರ್ಜನನ ಸ್ವಭಾವ, ಸಜ್ಜನ–ದುರ್ಜನರ ಸಂಬಂಧ ಮತ್ತು ಪರಿಣಾಮವೇನೆಂದು ತಿಳಿಸುತ್ತಾನೆ. ಮತ್ತು ಈ ಹಿತ–ಪದ್ಯಕಾವ್ಯಗಳು ಕೆಲವು ಪ್ರಾಸಂಗಿಕವಾದರೂ ಕೆಲವು ಸಾರ್ವಕಾಲಿಕ ನೀತಿ ವಾಕ್ಯಗಳೆಂದು ಬರೆಯುತ್ತಾನೆ.[11] ಇದರಿಂದ, ಇವು ಅನ್ಯೋಕ್ತಿ ಕಾವ್ಯ ಪ್ರಕಾರ ಗಳೆಂಬುದು ಹೆಚ್ಚು ಸ್ಪಷ್ಟವಾಗುತ್ತದೆ. ಆದರೆ ಇವು ಪ್ರಾಯಶಃ ಸಾಮಾನ್ಯ ಅಪ್ರಸ್ತುತದಿಂದ ಪ್ರಕಾರದಿಂದ ಅನ್ಯೋಕ್ತಿಗಳಾಗಿರುತ್ತವೆ.

ಮತ್ತು ನೀತಿಯನ್ನು ಬೋಧಿಸುವಾಗ್ಗೆ ಅದು ನೇರವಾಗಿ ಪ್ರತಿಪಾದಿತ ವಾಗಿರದೆ ಒಂದು ವಸ್ತುವಿನ ವಿಶೇಷ ವರ್ತನೆಯ ಮೂಲಕ ಸಾಂಕೇತಿಕವಾಗಿ ನಿರೂಪಿತವಾಗಿರುತ್ತದೆ. ಇದು ಅನ್ಯೋಕ್ತಿ ಕಾವ್ಯದ ವಿಶೇಷ. ಸಾಂಕೇತಿಕ ಪ್ರಯೋಗಗಳು ವೇದೋಪನಿಷತ್ತುಗಳಲ್ಲಿ ಸಾಕಷ್ಟಿವೆ. ಉದಾಹರಣೆಗಾಗಿ :—

> ದ್ವಾಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ ।
> ತಯೋರೇಕಃ ಪಿಪ್ಪಲಂ ಸ್ವಾದತ್ತ್ಯನಶ್ನನ್ನನ್ಯೋ ಅಭಿಚಾಕಶೀತಿ ॥
>
> ಋ. 1.164.20

—ಈ ಸೂಕ್ತದಲ್ಲಿ ವರ್ಣಿಸಿರುವ ಎರಡು ಹಕ್ಕಿಗಳು, ಮರ ಮತ್ತು ಫಲ ಗಳು ಕ್ರಮವಾಗಿ ಜೀವಾತ್ಮ–ಪರಮಾತ್ಮ, ಸಂಸಾರ ಮತ್ತು ಕರ್ಮಫಲಗಳ ಸಂಕೇತಗಳು.[12] ಈ ವಿಧಾನವನ್ನು ಪಾಲಿ ಜಾತಕಗಳಲ್ಲಿಯ ಕಥೆಗಳು ಪ್ರಧಾನವಾಗಿ

---

11. ಅತಃ ಪ್ರಭೃತಿ ಧೃತರಾಷ್ಟ್ರವಿದುರಸಂವಾದೇ ವಿದುರವಾಕ್ಯಾನಿ ಕಾನಿಚಿತ್ ಧೃತರಾಷ್ಟ್ರನಿಂದಾ-ಪರಾಣಿ ಕಾನಿಚಿತ್ ಯುಧಿಷ್ಠಿರಪ್ರಶಂಸಾಪರಾಣಿ ಕಾನಿಚಿತ್ ಸಾಧಾರಣೋಪದೇಶ ಪರಾಣಿ ಬೋದ್ಧವ್ಯಾನಿ ।

ಮ. ಭಾ. ಉ. ಪ. ನೀಲ. ವ್ಯಾ. ಪು. 52.

12. ಅ) ಈ ಹಕ್ಕಿಗಳು ಬುದ್ಧಿ ಮತ್ತು ಮನಸ್ಸುಗಳು ಎಂದು ಕೆಲವರೂ ಪಂಡಿತ ಮತ್ತು ಪಾಮರ ಎಂದು ಇನ್ನು ಕೆಲವರೂ ವ್ಯಾಖ್ಯಾನಿಸುತ್ತಾರೆ.

ಆ) ಇಲ್ಲಿ ಲೋಕನೀತಿಯು ಉದ್ದೇಶವಾಗಿರದೆ ಜಟಿಲವಾದ ವೇದಾಂತ ವಿಚಾರವು ಈ ಸಂಕೇತಗಳ ಮೂಲಕ ಸುಲಭವಾಗಿ ವಿದಿತವಾಗುತ್ತದೆ.

ಅಳವಡಿಸಿಕೊಂಡಿವೆ. ಸಾಂಕೇತಿಕ ಉಪಾಖ್ಯಾನಗಳಂತೂ ಮಹಾಭಾರತದ ವೈಶಿಷ್ಟ್ಯ. ಅಲ್ಲದೆ, ರಾಮಾಯಣ ಮಹಾಭಾರತಗಳ ಹಲವಾರು ರೂಪಕೋಕ್ತಿಗಳು ಇಂತಹ ಪ್ರಯೋಗಗಳಿಗೆ ಉಪಸ್ಕಾರಕವಾಗಿ ಬಂದಿವೆ.[13] ಮುಂದೆ ಬಂದ ಪಂಚ ತಂತ್ರ ಮತ್ತು ಹಿತೋಪದೇಶ ಕಥಾ ಸಾಹಿತ್ಯವು ಇವುಗಳಿಗೆ ಆಕರವೆಂದು ಬೇರೆ ಹೇಳಬೇಕಾಗಿಲ್ಲ. ಇವೆರಡು ಕೃತಿಗಳು, ಪೂರ್ಣವಾಗಿ ಬೆಳೆದು ರೂಢವಾದ ಅನ್ಯೋಕ್ತಿ ಕಾವ್ಯಗಳ ಪೂರ್ವತನ ಸ್ಥಿತಿಯೆನ್ನಬಹುದು.[14]

ಇಲ್ಲಿಯವರೆಗಿನ ಇತಿಹಾಸ ಪುರಾಣಗಳಲ್ಲಿ ಸಾಮಾನ್ಯ ನೀತಿಬೋಧಕ ಉಕ್ತಿಗಳು ಮತ್ತು ಸಾಂಕೇತಿಕ ಪ್ರಯೋಗಗಳು ಪ್ರಯುಕ್ತವಾಗಿದ್ದರೂ ಕಥೆಗಳ ಮಧ್ಯದಲ್ಲಿ ಹೆಣೆದುಕೊಂಡು ಸೇರಿವೆಯಷ್ಟೆ. ಅಂದರೆ ಇವೇ ಕವಿಯ ಪ್ರಧಾನ ಉದ್ದೇಶವಾಗಿರದೆ ಇವು ಕಾವ್ಯ ತಂತ್ರಗಳಲ್ಲಿ ಒಂದಾಗಿದ್ದವು. ನಂತರ ಇವುಗಳಿಗೆ ಮನ್ನಣೆ ದೊರಕಿ 'ನೀತಿಕಾವ್ಯಗಳು' ಎಂಬುದಾಗಿ ಸಾಮಾನ್ಯ ರೀತ್ಯಾ ಕರೆಯಲ್ಪಟ್ಟವು. ಇವುಗಳನ್ನು, ನೀತಿ–ವೈರಾಗ್ಯ ತತ್ವಗಳನ್ನು ಪದ್ಯರೂಪದಲ್ಲಿ ಹೇಳುವ ಸಾಹಿತ್ಯ ಪ್ರಭೇದಗಳೆನ್ನುವುದಕ್ಕಿಂತ ನೈತಿಕ ಮನೋಧರ್ಮಗಳ ಕಾವ್ಯೋದ್ಗಾರವೆಂದರೆ ತಪ್ಪಾಗಲಾರದು. ಬೇರೆ ಮಾತಿನಲ್ಲಿ ಹೇಳುವುದಾದರೆ, ಇವು ಶಾಸ್ತ್ರ ಗ್ರಂಥಗಳಲ್ಲದೆ ಕಾವ್ಯಗುಣಗಳಿಂದ ಕೂಡಿದ ಕಲಾಕೃತಿಗಳು. ಈ ಕಾರಣದಿಂದ ಮನುಧರ್ಮಶಾಸ್ತ್ರ ಮತ್ತು ಚಾಣಕ್ಯ ನೀತಿಶಾಸ್ತ್ರ ಸಾಹಿತ್ಯಗಳು ನೀತಿ ಕಾವ್ಯಗಳಿಗಿಂತ ಭಿನ್ನವೆಂದು ಪರಿಗಣಿಸಲ್ಪಟ್ಟಿರುವುದು. ಆದುದರಿಂದ ನೀತಿಸಾಹಿತ್ಯವೆಲ್ಲವನ್ನೂ ನೀತಿ ಕಾವ್ಯಗಳೆಂದು ಕರೆಯಲಾಗುವುದಿಲ್ಲ. ಆದರೆ ಹಲವುಬಾರಿ ಶಾಸ್ತ್ರ ಕೃತಿಗಳ ಆಚಾರ-ವ್ಯವಹಾರ ಭಾಗಗಳು ಹೃದಯಂಗಮವಾದ ಉಪಮೆಗಳನ್ನು ಮತ್ತು ಪ್ರತಿಮೆಗಳನ್ನು ಬಳಸಿಕೊಂಡಿರುವುದು ಕಾಣುತ್ತದೆ. ಹೀಗೆ ಶಾಸ್ತ್ರ ಗ್ರಂಥಗಳು ಕಾವ್ಯಾಂಶಗಳಿಂದ ಬೆರೆತು ಹೋಗಿರುವುದರಿಂದ ಶಾಸ್ತ್ರ ಮತ್ತು ಕಾವ್ಯಗಳಿಗೆ ಪರಸ್ಪರ ಭೇದವನ್ನು ಕಂಡುಕೊಳ್ಳುವುದು ಕಷ್ಟವಾದೀತು. ಆದಾಗ್ಯೂ, ನೀತಿಶಾಸ್ತ್ರ ಪ್ರವರ್ತಕನೆಂದು ಪರಿಗಣಿಸಲ್ಪಟ್ಟಿರುವ ಕೌಟಿಲ್ಯ (ಚಾಣಕ್ಯ)ನ ಶಾಸ್ತ್ರಗ್ರಂಥಕ್ಕೂ ಮತ್ತು ನೀತಿಕಾವ್ಯಗಳು ಬೇರೊಡೆದು ಬೆಳೆಯಲು ಮೊದಲಾದ ಭರ್ತೃಹರಿಯ (ಕಾಲದ) ನೀತಿ ಶತಕಗಳಿಗೂ ವ್ಯತ್ಯಾಸವನ್ನು ಮಾಡದಿರುತ್ತೇವೆಯೇ ?

---

13) ಲತಾಧರ್ಮಾ ಧಾರ್ತರಾಷ್ಟ್ರಾಃ ಶಾಲಾಃ ಸಂಜಯ ಪಾಂಡವಾಃ ।
ನಲತಾ ವರ್ಧತೇ ಜಾತು ಅನಾಶ್ರಿತ್ಯ ಮಹಾದ್ರುಮಮ್ ॥
ಮ.ಭಾ. 5. 29. 49.

14) "ಅನ್ಯೋಕ್ತಿ ಕಾವ್ಯಗಳು ಸಾಮಾನ್ಯ ಮನುಷ್ಯನನ್ನು ಕುರಿತು ಹೇಳುವ ನೀತಿ ಮಾತುಗಳಾದರೆ ಪಂಚತಂತ್ರವು ರಾಜರಿಗಾಗಿ ಮತ್ತು ರಾಜಕಾರಣಿಗಳಿಗಾಗಿ"— Evolution of Anyokti in Sanskrit Poetry P. 118.

ಉಪದೇಶಾತ್ಮಕ ನೀತಿಕಾವ್ಯಗಳು ಕಾವ್ಯ ದೃಷ್ಟಿಯಿಂದ ಗೀತಕಾವ್ಯ, ಭಕ್ತಿ ಕಾವ್ಯ, ಶೃಂಗಾರಾದಿ ಕಾವ್ಯಗಳನ್ನು ಬಹುಮಟ್ಟಿಗೆ ಹೋಲುತ್ತವೆ ನಿಜ. ಅಲ್ಲದೆ ಹಲವು ಕಾವ್ಯಗಳಲ್ಲಿ ಪ್ರೇಮ, ನೀತಿ ಮತ್ತು ವೈರಾಗ್ಯ ವಿಷಯಗಳ ಒಕ್ಕಣೆ ಮಾಡುವ ಪ್ರಯತ್ನವೂ ನಡೆದಿದೆ ಮತ್ತು ಇವೆಲ್ಲ ಕಾವ್ಯ ಪ್ರಭೇದಗಳಿಗೂ ವಸ್ತು-ವಿಷಯಗಳು ಸಾಧಾರಣವಾಗಿರುತ್ತವೆ-ಲೋಕದ ನಡೆನುಡಿ, ಪುರುಷ ಪ್ರಯತ್ನ-ವಿಧಿ, ಋತ-ಅನೃತ, ದುರ್ಬಲತೆ-ಧೃಢತೆ, ದಾರಿದ್ರ್ಯ-ಶ್ರೀಮಂತಿಕೆ, ವಿರಹ-ವಿಲಾಸ, ಔತ್ಸುಕ್ಯ-ವೈರಾಗ್ಯ ಇತ್ಯಾದಿ ತಾರತಮ್ಯಗಳ ತುಲನೆ. ಇವು ವಿಶಾಲ ವೈಯಕ್ತಿಕ ಅನುಭವಗಳಾದುದರಿಂದ ಜೀವನದ ಸಮಗ್ರ ಕ್ಷೇತ್ರಗಳನ್ನೊಳಗೊಂಡಿವೆ. ಧರ್ಮ, ಅರ್ಥ, ಕಾಮ, ಆಧ್ಯಾತ್ಮ ಮೊದಲ್ಗೊಂಡು ನಿತ್ಯಜೀವನವನ್ನು ನಡೆಸುವುದಕ್ಕೆ ದಾರಿಗೋಲಾಗಿವೆ. ಇಂದಿಗೂ ಇವನ್ನು ವಿದ್ಯೆ ಕಲಿತವರು ಪ್ರಸಂಗಾಂತರಗಳಲ್ಲಿ ಜ್ಞಾಪಕದಲ್ಲಿಟ್ಟು ಉಲ್ಲೇಖಿಸುವುದು ಅವಶ್ಯ ಅಭ್ಯಾಸವಾಗಿರುವುದನ್ನು ಕಾಣುತ್ತೇವೆ.

ಹಿಂದೆ ಹೇಳಿದ ಕಾರಣಗಳಿಂದ ಪ್ರತ್ಯೇಕವಾಗಿ ಉಳಿದ ನೀತಿಕಾವ್ಯಗಳ ಉಪಭೇದವಾಗಿರುವುದು ಅನ್ಯೋಕ್ತಿ ಕಾವ್ಯ. ಇದು ಇನ್ನೊಂದು (ನೀತಿ) ಕಾವ್ಯ ವಿಧಾನವಷ್ಟೆ. ನೀತಿಶತಕಾದಿ ಕಾವ್ಯಗಳಿಗೂ ಅಥವಾ ಕಲಾವಿಲಾಸಾದಿ ವಿಡಂಬದ ಕಾವ್ಯಗಳಿಗೂ ಮತ್ತು ಅನ್ಯೋಕ್ತಿ ವಿಲಾಸಾದಿ ಕಾವ್ಯಗಳಿಗೂ ಇರುವ ವ್ಯತ್ಯಾಸ ಹಿತೋಪದೇಶದಲ್ಲಿ ಅಲ್ಲ ; ಹಿತೋಪದೇಶದ ಮಾಧ್ಯಮದಲ್ಲಿ. ಅನ್ಯೋಕ್ತಿಗಳು ಹಿತೋಪದೇಶವನ್ನು ಸಂಕೇತಗಳ ಮೂಲಕ ಕೊಡುವ ಮುಕ್ತಕಗಳು. ಇವುಗಳಲ್ಲಿ ಅಪ್ರಸ್ತುತ ವಾಚ್ಯಾರ್ಥಗಳಿಗೂ ಮತ್ತು ಪ್ರಸ್ತುತ ವ್ಯಂಗ್ಯಾರ್ಥಗಳಿಗೂ ನಿಕಟ ಸಂಬಂಧವಿರುತ್ತದೆ. ಈ ವಾಚ್ಯಾರ್ಥ-ವ್ಯಂಗ್ಯಾರ್ಥಗಳ ಪ್ರಧಾನತೆ ಅಪ್ರಧಾನತೆಯಿಂದ ಅನ್ಯೋಕ್ತಿಯು ಆಸ್ವಾದನೀಯವಾಗಿ ಉತ್ತಮ ಕಾವ್ಯವಾಗುತ್ತದೆ. ಇದಲ್ಲದೆ ಸದರ್ಥವನ್ನು ಬೋಧಿಸುವ ಇದು ಈ ದೃಷ್ಟಿಯಿಂದ ಸುಭಾಷಿತವೂ ಆಗಿದೆ. ಅಂದರೆ, ಕವಿಯು ತನ್ನ ಅನ್ಯೋಕ್ತಿಗಳ ಮೂಲಕ ಓದುಗರಿಗೆ ಪರೋಕ್ಷವಾಗಿ ಉಪದೇಶವನ್ನೀಯುತ್ತಿದ್ದಾನೆಂದು ಇದರ ಫಲಿತಾರ್ಥ. ನೇರವಾಗಿ ವಿಧಿ-ನಿಷೇಧಗಳನ್ನು ತಿಳಿಸದೆ, ಕಾಂತೆಯಂತೆ ರಂಜನೀಯ ರೀತಿಯಲ್ಲಿ ಅಲಂಕಾರ, ಭಾವ ಮತ್ತು ರಸಗಳ ಮೂಲಕ ಪಥ್ಯವಾದುದನ್ನು ಸೂಚಿಸುತ್ತದೆ.

ಇಂತಹ ಅಮೂಲ್ಯ ಅನ್ಯೋಕ್ತಿಗಳ ಕೊಡುಗೆಯಿಂದ ಕವಿಯು ಲೋಕವನ್ನು ಎಚ್ಚರಿಸುವ ಮತ್ತು ಅದರ ಏಳಿಗೆಗಾಗಿ ಶ್ರಮಿಸುವ ಆತ್ಮೀಯನಂತೆ ಕಂಡು ಬರುತ್ತಾನೆ. ಇವನ ಅನ್ಯೋಕ್ತಿಗಳು ಗುಣವಂತನನ್ನು, ಹೆಚ್ಚು ಗುಣವಂತನಾಗಲು ಮತ್ತು ದುರ್ಜನನನ್ನು ಗುಣಗಳಲ್ಲಿ ವಿಶೇಷ ಒಲವು ತೋರಿಸುವಂತೆ ಮಾಡಲು ಸಹಾಯಕವಾಗುತ್ತವೆ.

ಹಿಂದೆ ತಿಳಿಸಿರುವ ಹಾಗೆ, ಹಲವು ಪ್ರಾಚೀನ ಕಾವ್ಯೇತಿಹಾಸಗಳ ನೀತಿ ವಾಕ್ಯಗಳಲ್ಲಿ ಸಾಂಕೇತಿಕ ಪ್ರಯೋಗಗಳಲ್ಲಿ ಮತ್ತು ಕಾವ್ಯಶಾಸ್ತ್ರ ಗ್ರಂಥಗಳಲ್ಲಿ ಚರ್ಚಿಸಲ್ಪಟ್ಟ ಅಪ್ರಸ್ತುತ ಅಲಂಕಾರದ ಬೆಳವಣಿಗೆಯಲ್ಲಿ ಅನ್ಯೋಕ್ತಿ ಕಾವ್ಯಪ್ರಕಾರದ ಉಗಮವನ್ನು ಗುರುತಿಸಿದ್ದಾಯಿತು, ನಿಜ. ಆದರೆ ಅನ್ಯೋಕ್ತಿ ಸಾಹಿತ್ಯವೆಂದೇ ಪ್ರತ್ಯೇಕವಾಗಿ ಹೊರಟದ್ದು ಎಂಟನೇ ಶತಮಾನದಿಂದೀಚೆಗೆ. ಅನ್ಯಕಾವ್ಯ ಪ್ರಕಾರಗಳು ಬೆಳೆದು ಹೆಮ್ಮರವಾಗಿ ನಿಂತ ಈ ಸಮಯದಲ್ಲಿ ಎಂಟನೆಯ ಶತಮಾನಕ್ಕೆ ಸೇರಿದ ಭಲ್ಲಟ ಶತಕ ಮತ್ತು ಹತ್ತನೆಯ ಶತಮಾನದ ಅನ್ಯೋಕ್ತಿ ಮುಕ್ತಾಕಲಾಪ ಕೃತಿಗಳ ಮೂಲಕ ಈ ಸಾಹಿತ್ಯವು ಆರಂಭವಾಯಿತೆನ್ನಬಹುದು. ಇದಕ್ಕೂ ಮೊದಲು ಸುಭಾಷಿತಗಳಲ್ಲಿ ಅನ್ಯೋಕ್ತಿಗಳೆಂದೇ ಕರೆಯಲ್ಪಡುವ ಹಲವಾರು ಪದ್ಯಗಳು ಕಂಡು ಬರುತ್ತವೆ. ಆದರೂ ಸಾಮಾನ್ಯ ನೀತಿ ಕಾವ್ಯಗಳಿಗಿಂತ ಬೇರೆಯಾಗಿ ನಿಂತು ಅವುಗಳಿಂದ ಕವಲೊಡೆದು ಅವುಗಳ ವಿಶೇಷ ಪ್ರಕಾರವೆಂದು ಪ್ರಚಾರಕ್ಕೆ ಬಂದುದು ನಂತರ. ಜಗನ್ನಾಥನ ಕಾಲಕ್ಕಾಗಲೇ ಇವು ರೂಢಬದ್ಧವಾಗಿದ್ದವು. ಎಷ್ಟರ ಮಟ್ಟಿಗೆ ರೂಡಿಬದ್ಧವಾಗಿದ್ದವೆಂದರೆ ಇವುಗಳಲ್ಲಿ ಹಲವು ಪುನರುಕ್ತವಾಗಿವೆ. ಮತ್ತೆ ಕೆಲವು ತಮ್ಮ ಸಾಮಾನ್ಯ ನೀತಿಯಿಂದ ಅತ್ಯಂತ ಜನಪ್ರಿಯವಾಗಿವೆ. ಈ ಕಾರಣದಿಂದ ಇವುಗಳ ಮೂಲಕರ್ತೃವು ಮರೆಯುವಂತಾಗಿ ಅನಾಮಧೇಯವಾಗಿಯೇ ಉಳಿದುಬಿಟ್ಟಿವೆ. ಇಂತಹ ಹಲವಾರು ಅನ್ಯೋಕ್ತಿ ಶ್ಲೋಕಗಳು ಸುಭಾಷಿತ ಸಂಕಲನಗಳಲ್ಲಿ ಸೇರಿವೆ. ಆದರೆ ಎಷ್ಟೇ ಜನಗತವಾಗಿ, ಅನಾಮಧೇಯವಾಗಿ ದೊರಕಿದರೂ ಇವನ್ನು ದೇಶಿಯ ಗಾದೆಗಳಂತೆ ಜನ (ಪದ) ಸಾಹಿತ್ಯವೆನ್ನಲೂಬಾರದು. ಏಕೆಂದರೆ ಇವು ಕವಿತಾ ಸಾಮರ್ಥ್ಯದಿಂದ ಮೂಡಿಬಂದ ಕಾವ್ಯಗಳು ಮತ್ತು ಇವುಗಳಲ್ಲಿ ವೈವಿಧ್ಯವನ್ನು ಕಾಣುತ್ತೇವೆ. ಈ ಸಂದರ್ಭದಲ್ಲಿ ನಾವು ವಿಂಟರ್‌ನಿಟ್ಸ್ ಮತ್ತು ಕೀತ್ ಅವರ, ನೀತಿ ಕಾವ್ಯಗಳ ಉಗಮವನ್ನು ಕುರಿತ ಅಭಿಪ್ರಾಯಗಳನ್ನು ಸ್ಮರಿಸಬಹುದು. ''ಇವನ್ನು ಜನ ಸಾಹಿತ್ಯವೆಂದು ಕರೆಯುವುದುತಪ್ಪಾಗುತ್ತದೆ. ಇವು ಮೂಲತಃ ಪಂಡಿತಗೋಷ್ಠಿಯಲ್ಲಿಯೇ ಬೆಳೆದು, ಇವುಗಳ ಕವಿನಾಮಧೇಯವು ಮರೆತು ಹೋಗಿದೆಯಷ್ಟೆ''[13]. ''ಇವು ನಾಣ್ಣುಡಿಗಳಲ್ಲ ವೈವಿಧ್ಯವುಳ್ಳ ಇವು ಕವಿ ಪ್ರತಿಭೆ ಮತ್ತು ಧೀಮಂತಿಕೆಗಳ ಪರಿಣಾಮ''.[16]

ಅನ್ಯೋಕ್ತಿ ವಿಲಾಸ

ಅನ್ಯೋಕ್ತಿ ವಿಲಾಸವು ಹಲವಾರು ಸಂದರ್ಭಗಳಲ್ಲಿ ಮೂಡಿಬಂದ ಅನ್ಯೋಕ್ತಿ ಕಾವ್ಯಗಳ ಸಂಕಲನ (ಅಥವಾ ಕೋಶ).[17] ಇದು ಸಂಕಲನವೆಂಬುದಕ್ಕೆ ನಮಗೆ

---

15. History of Indian Literature. Vol. III Pr. I. P. 151 Prof. Winternitz.
16. A History of Sanskrit literature-P. 227. Prof. Keith.
17. ಕೋಶಃ ಶ್ಲೋಕ ಸಮೂಹಸ್ತು ಸ್ಯಾದನ್ಯೋನ್ಯಾನಪೇಕ್ಷಕಃ । ಸಾ.ದ. 6.329

ಕವಿಯೇ ಪ್ರಮಾಣ. ತನ್ನ ಕಾವ್ಯರತ್ನಗಳನ್ನು ಕದ್ದಾರೆಂಬ ಭಯದಿಂದ ಇವೆಲ್ಲವನ್ನೂ ಒಟ್ಟುಗೂಡಿಸಿದ್ದೇನೆಂದು ಜಗನ್ನಾಥನು ಶಾಂತ ವಿಲಾಸದಲ್ಲಿ (ಹೆಮ್ಮೆಯಿಂದ) ಹೇಳಿಕೊಂಡಿದ್ದಾನೆ.[18] ಈ ಕಾರಣದಿಂದ ಇವುಗಳಿಗೆ ಪರಸ್ಪರವಾಗಿ ಪ್ರಕೃತಾರ್ಥ ಸಂಬಂಧವನ್ನು ಕಲ್ಪಿಸದೆ ಇವುಗಳನ್ನು ಕೇವಲ ಬಿಡಿ ಪದ್ಯಗಳನ್ನಾಗಿ ಉಳಿಸಿಕೊಳ್ಳುವುದು ಉಚಿತವೆಂದು ತೋರುತ್ತದೆ.[19] ಹೀಗೆ ಉಳಿಸಿಕೊಂಡಾಗ ಇವುಗಳ ಪ್ರಕೃತಾರ್ಥವನ್ನು ಸುಲಭವಾಗಿ ವಿವರಿಸಬಹುದೂ ಕೂಡ. ಈ ಅಂಶವು ಮುಂದೆ ಸ್ಪಷ್ಟವಾಗುತ್ತದೆ. ಇವರಲ್ಲಿ ಸುಮಾರು ನೂರರಿಂದ ನೂರಮೂವತ್ತು ಶ್ಲೋಕಗಳಿವೆ. ಉಪಲಬ್ಧವಾಗಿರುವ ಇದರ ನಾನಾ ಪ್ರತಿಗಳಲ್ಲಿ ಶ್ಲೋಕಗಳ ಸಂಖ್ಯೆಯು ವ್ಯತ್ಯಾಸವಾಗುತ್ತಾ ಹೋಗುತ್ತದೆ. ಆದರೆ ಸಾಮಾನ್ಯವಾಗಿ ವಿದ್ವಾಂಸರು ನೂರೆಂದು ಒಪ್ಪುತ್ತಾರೆ. ಇದರ ಸುಮಾರು ನಲವತ್ತು ಶ್ಲೋಕಗಳ ಸಂದರ್ಭಗಳು ಕವಿಯ ಇನ್ನೊಂದು ಕೃತಿಯಾದ ರಸಗಂಗಾಧರದಲ್ಲೇ ಚರ್ಚಿಸಲ್ಪಟ್ಟಿರುವುದರಿಂದ ಈ ವಿಮರ್ಶೆಗಳು ಶ್ಲೋಕ ವಿವರಣೆಗೆ ಸಹಾಯಕವಾಗುತ್ತವೆ.

ಪ್ರಸಕ್ತ ಕಾವ್ಯದಲ್ಲಿ ಕವಿಯು ತನ್ನ ಉದ್ದೇಶಸಫಲತೆಗಾಗಿ ಹಲವಾರು ವಸ್ತುಗಳು, ಅವುಗಳ ಪರಸ್ಪರ ಸಂಬಂಧ, ವಿಶೇಷಗುಣ, ವರ್ತನೆ ಮತ್ತು ದೋಷಗಳನ್ನು ಪರಿಶೀಲಿಸಿ ಅವುಗಳನ್ನು ಸಂಕೇತ ಮಾಧ್ಯಮಗಳನ್ನಾಗಿ ಬಳಸಿದ್ದಾನೆ. ಸಾಮಾನ್ಯವಾಗಿ ಕಮಲ, ದುಂಬಿ, ಸಿಂಹ, ಚಂದನ, ಹಂಸ ಇತ್ಯಾದಿ ವಸ್ತುಗಳ ಗುಣದೋಷಗಳನ್ನು ಪಥಿಕ, ವ್ಯಾಧ ಮೊದಲಾದವರ ಮನೋಧರ್ಮಗಳನ್ನು, ಕಮಲ-ದುಂಬಿ-ಮಾರುತ, ಕುಟಜ–ದುಂಬಿ, ಕೋಗಿಲೆ–ಮಾವು, ಚಂದನ–ಸರ್ಪ, ಸಮುದ್ರ–ಮೋಡ, ಹಂಸ–ಸರೋವರ. ಮೃಗ–ಮೃಗರಾಜ, ಆನೆ–ಸಿಂಹ......... ಇತ್ಯಾದಿ ಸಂಬಂಧಗಳನ್ನು, ಸಜ್ಜನನ ಸೌಜನ್ಯ, ಔದಾರ್ಯ...... ದುರ್ಜನನ ದೌರ್ಜನ್ಯ ಕಾಪಟ್ಯ......ಮೊದಲಾದ ಸಾಮಾನ್ಯ ಗುಣದೋಷಗಳನ್ನು ಮತ್ತು ಸೀತಾ, ಮನ್ಮಥ ಇತ್ಯಾದಿ ಪೌರಾಣಿಕ ದೃಷ್ಟಾಂತಗಳನ್ನೂ ಕವಿಯು ಪ್ರಯೋಗಿಸಿದ್ದಾನೆ. ಇವುಗಳನ್ನು ಅಪ್ರಸ್ತುತ ವೃತ್ತಾಂತದಲ್ಲಿ ಅಳವಡಿಸಿಕೊಂಡು ತನ್ಮೂಲಕ ಸಜ್ಜನನೊಬ್ಬನ ಸ್ವಭಾವ, ದುರ್ಜನನೊಬ್ಬನ ಎಲ್ಲೆ ಮೀರಿದ ನಡತೆ, ವಿಧಿ ವಿಪರ್ಯಾಸಾದಿಗಳ (ಪ್ರಕೃತ) ವೃತ್ತಾಂತವನ್ನು ವ್ಯಕ್ತಗೊಳಿಸುತ್ತಾನೆ. ಈ ವರ್ಣನೆಗಳನ್ನು ಕವಿಯು ನಿದರ್ಶನ, ದೃಷ್ಟಾಂತ, ಪ್ರತಿವಸ್ತೂಪಮೆ, ರೂಪಕ, ಉಪಮಾದಿ ಅಲಂಕಾರಗಳಿಂದ ಶೋಭಿತಗೊಳಿಸಿ ರಮ್ಯವಾಗುವಂತೆ ಮಾಡಿದ್ದಾನೆ. ಪದ್ಯಗಳು ವಿವಿಧ ರಸ–ಭಾವಗಳಿಂದ ಪುಷ್ಟವಾಗಿದೆ. ಆದರೆ ಕೆಲವೊಮ್ಮೆ ಇವುಗಳ ತೆರೆಯಲ್ಲಿ ಕವಿಯು ತನ್ನ ಕವಿತಾ

---

18. ದುರ್ವೃತ್ತಾ ಜಾರಜನ್ಮಾನಃ ಹರಿಷ್ಯಂತೀತಿ ಶಂಕಯಾ।
ಮದೀಯ ಪದ್ಯರತ್ನಾನಾಂ ಮಂಜೂಷೈಷಾ ಮಯಾಕೃತಾ ॥ ಶಾ.ತ.ವಿ. 45.

19. ಅಚ್ಯುತರಾಯ ಮೋಡಕರ ವ್ಯಾಖ್ಯಾನದಲ್ಲಿ ಹಲವೆಡೆ ಪ್ರಕೃತ ಸಂಬಂಧ ಶ್ರೇಣಿಯನ್ನು ಗುರುತಿಸಬಹುದು.

ನೈಪುಣ್ಯದ ಬಗ್ಗೆ ಇರುವ ಸ್ವಾಭಿಮಾನ ಅಥವಾ ಹೆಮ್ಮೆಯ ಮನೋಭಾವವನ್ನು ಸೂಕ್ಷ್ಮವಾಗಿ ತೋರಿಸಿದ್ದಾನೆ.[20]

ಅನ್ಯೋಕ್ತಿ ವಿಲಾಸಕ್ಕೆ (ಭಾಮಿನೀ ವಿಲಾಸಕ್ಕೆ) ಅಜ್ಞಾತರಾದಂ ವಿರಚಿತ ಪ್ರಣಯ ಪ್ರಕಾಶ ಮತ್ತು ಮಹದೇವ ದೀಕ್ಷಿತ ರಚಿತ ಪ್ರದೀಪಿಕಾ (ಪ್ರೋಲ್ಲಾಸ) ಗಳೆಂಬ ಎರಡು ವ್ಯಾಖ್ಯಾನಗಳಿವೆ.

ಮೇಲಿನ ಅಂಶಗಳನ್ನು ದಿಟಪಡಿಸುವುದಕ್ಕಾಗಿ ಆಯ್ದ ಕೆಲವೇ ಪದ್ಯಗಳನ್ನು ಉದಾಹರಣೆ ರೂಪದಲ್ಲಿ ಕೆಳಗೆ ಕೊಡಲಾಗಿದೆ. ಇವುಗಳಿಂದ ಜಗನ್ನಾಥನ ಕಾವ್ಯ ಸೊಬಗಿನ ಪರಿಚಯವೂ ನಮಗಾಗುತ್ತದೆ.

1) ದಿಗಂತೇ ಶ್ರೂಯಂತೇ ಮದಮಲಿನಗಂಡಾಃ ಕರಟಿನಃ
ಕರಿಣ್ಯಃ ಕಾರುಣ್ಯಾಸ್ಪದಮಸಮಶೀಲಾಃ ಖಲು ಮೃಗಾಃ
ಇದಾನೀಂ ಲೋಕೇಸ್ಮಿನ್ನನುಪಮಶಿಖಾನಾಂ ಪುನರಯಂ
ನಖಾನಾಂ ಪಾಂಡಿತ್ಯಂ ಪಕಟಯತು ಕಸ್ಮಿನ್ ಮೃಗಪತಿಃ

ಮದಜಲದಿಂದ ಮಲಿನವಾದ ಕುಂಭಸ್ಥಗಳುಳ್ಳ ಆನೆಗಳು ದಿಕ್ಪಾಲಾಗಿವೆ. ಹೆಣ್ಣಾನೆಗಳು ಅನುಕಂಪೆಗೆ ಪಾತ್ರವಾಗಿವೆ. ಜಿಂಕೆಗಳು ಸಮನಾದ ಸಾಮರ್ಥ್ಯ ವಿಲ್ಲದಾಗಿವೆ, (ಹೀಗಾಗಿ), ಈ ಮೃಗರಾಜನು ಈಗ ಈ ಲೋಕದಲ್ಲಿ ಅತ್ಯಂತ ಚೂಪಾದ ತಂದಿಗಳುಳ್ಳ ತನ್ನ ಉಗುರುಗಳ ನೈಪುಣ್ಯವನ್ನು ಪುನಃ ಯಾರ ಮೇಲೆ ತೋರಿಸಬೇಕು?

ಇದು ಅನ್ಯೋಕ್ತಿ ವಿಲಾಸದ ಆರಂಭಶ್ಲೋಕ, ಸಕಲ ಪ್ರಾಣಿಗಳಿಗೂ ಶ್ರೇಷ್ಠವೆನಿಸಿದ ಮೃಗಪತಿಯ ಅನ್ಯೋಕ್ತಿಯಿಂದ ಕೃತಿಯನ್ನು ಪ್ರಾರಂಭಿಸಿರುವುದು ಉಚಿತವಾಗಿದೆ. ಈ ಸಿಂಹಾನ್ಯೋಕ್ತಿಯಲ್ಲಿ ಸಿಂಹವು ವಾಚ್ಯಾರ್ಥವು. ಪರಾಕ್ರಮಿ ಯಾದ ರಾಜನೊಬ್ಬನು ವ್ಯಂಗ್ಯಾರ್ಥವು. ಸಿಂಹಕ್ಕೆ ಸಂಬಂಧಿಸಿದ ವಾಚ್ಯಾರ್ಥವು ಸ್ಪಷ್ಟವಾಗಿದೆ, ಇದರ ಮೂಲಕವಾಗಿ ಕವಿಯು ವರ್ಣಿಸಬಯಸುವ ಪ್ರಸ್ತುತ ಅರ್ಥ ಹೀಗಿದೆ: ಪರಾಕ್ರಮಿಯಾದ ರಾಜನೊಬ್ಬನು ಎಲ್ಲ ಶತ್ರು ರಾಜರನ್ನು ಯುದ್ಧದಲ್ಲಿ ಪರಾಜಿತಗೊಳಿಸಿದ್ದಾನೆ. ತತ್ಪರಿಣಾಮವಾಗಿ ಆ ರಾಜರೆಲ್ಲರೂ ದಿಕ್ಪಾಲಾಗಿದ್ದಾರೆ. ಈ ರಾಜರ ಸ್ತ್ರೀಯರು ತಮ್ಮ ಒಡೆಯರಿಲ್ಲದೆ ಅನಾಥ ರಾಗಿದ್ದು ಕರುಣೆಗೆ ಪಾತ್ರರು. ಸುತ್ತಲೂ ಕಣ್ಣಿಗೆ ಬೀಳುತ್ತಲಿರುವ ಇತರ ರಾದರೋ ಕೇವಲ ನಿರ್ಬಲರು. ಹೀಗಿರುವುದರಿಂದ ರಾಜನು ತನ್ನ ಪರಾಕ್ರಮ ವನ್ನು ಯಾರಲ್ಲೂ ತೋರಿಸಲು ಸಾಧ್ಯವಿಲ್ಲವಾಗಿದೆ.

ಆದರೆ ಈ ಅನ್ಯೋಕ್ತಿಯು ಚಕ್ರವರ್ತಿಯೊಬ್ಬನ ವೀರ್ಯಾತಿಶಯದ ವರ್ಣನೆ ಗಾಗಿಯೇ ಸೀಮಿತವಾಗಿರದೆ ಶ್ರೇಷ್ಠ ಪಂಡಿತನೊಬ್ಬನ ಪಾಂಡಿತ್ಯವರ್ಣನೆಯಾಗಿರ

20. **ಅನ್ಯೋಕ್ತಿ ವಿಲಾಸ** : 60, 48, 1,

ಬಹುದು. ಆ ಪಂಡಿತನು ಜಗನ್ನಾಥನೇ ಆಗಿರಬಹುದು. ಅಥವಾ ಹಿರಣ್ಯಕಶಿಪುವನ್ನು ಈಗಾಗಲೇ ಸಂಹರಿಸಿದ ಮೃಗಪತಿ ನರಸಿಂಹನ ಶೌರ್ಯ ವರ್ಣನೆಯಾಗಿದ್ದು ಮಂಗಳಾರ್ಥವು ವ್ಯಂಜಿತವಾಗಿರಲು ಸಾಧ್ಯ. ಮೃಗಸಿಂಹನು ಅಸುರನಾದ ಹಿರಣ್ಯಕಶಿಪುವನ್ನು ಕೊಂದಿದ್ದಾನೆ. ಉಳಿದಿರುವ ಅಸುರಸ್ತ್ರೀಯರು. ಅನುಕಂಪನೀಯರು. ಇತರ ದೈತ್ಯರೊ ನಿರ್ಬಲರು. ಆದುದರಿಂದ, ಮೃಗಸಿಂಹನಿಗೆ ತನ್ನ ಪರಾಕ್ರಮವನ್ನು ಮತ್ತೊಮ್ಮೆ ತೋರಿಸಲು ಅವಕಾಶವೇ ಇಲ್ಲವಾಗಿದೆ. ಇದರಂತೆ ವಿಷ್ಣುವಿನ ಅಪರಾವತಾರವಾದ ಪರಶುರಾಮನ ಪರಾಕ್ರಮದ ವರ್ಣನೆಯೂ ಇದಾಗಿರಬಹುದು. ಹೀಗೆ, ಒಂದೊಂದು ಅನ್ಯೋಕ್ತಿಯಲ್ಲೂ ನಾನಾ ಪ್ರಸ್ತುತಾರ್ಥಗಳನ್ನು ಸಂದರ್ಭಕ್ಕನುಗುಣವಾಗಿ ಹೊಂದಿಸಲು ಶಕ್ಯ.

ಈ ಪದ್ಯದಲ್ಲಿ ಕಾವ್ಯಲಿಂಗಾಲಂಕಾರದಿಂದ ಉಪಸ್ಕೃತವಾದ ಅಪ್ರಸ್ತುತಪ್ರಶಂಸಾಲಂಕಾರವು ಸ್ಪಷ್ಟವಾಗಿದೆ. ಇವುಗಳಿಂದ ವ್ಯಂಜಿತವಾದ ವೀರರಸವು ಬಹುರಮ್ಯವಾಗಿದೆ. ಹಾಗೆಯೇ ಸನ್ನಿವೇಶಕ್ಕೆ ಹೊಂದಿಕೊಳ್ಳುವಂತೆ ಶಿಖರಿಣೆವೃತ್ತ ಮತ್ತು ಪದಗಳ ರಚನೆ. ಇಲ್ಲಿ ನೀತಿ ಬೋಧನೆಯು ಪ್ರಮುಖವಾಗಿ ಕಾಣದೆ ವರ್ಣನೆಯ ಪ್ರಾಮುಖ್ಯವಿದೆಯೆಂದು ತೋರುತ್ತದೆ.

2) **ಅಯಿ ದಲದರವಿಂದ! ಸ್ಯಂದಮಾನಂ ಮರಂದಂ**
ತವಕಿಮಪಿ ಲಿಹಂತೋ ಮಂಜು ಗುಂಜಂತು ಭೃಂಗಾಃ ।
ದಿಶಿ ದಿಶಿ ನಿರಪೇಕ್ಷಸ್ತಾವಕೀನಂ ವಿವೃಣ್ವನ್
ಪರಿಮಲಮಯಮನ್ಯೋ ಬಾಂಧವೋ ಗಂಧವಾಹಃ ॥

ಅರಳುತ್ತಿರುವ ಕಮಲವೇ ! ಸುರಿಯುತ್ತಿರುವ ನಿನ್ನ ಮಕರಂದವನ್ನು ಅಸ್ವಾದಿಸುತ್ತಿರುವ ದುಂಬಿಗಳು ಮನೋಹರವಾಗಿ ಏನಾದರೂ ಗುಂಜಾರವ ಮಾಡಲಿ (ಆದರೆ) ದಿಕ್ಕು ದಿಕ್ಕುಗಳಲ್ಲಿಯೂ ಯಾವ ಪ್ರತಿಫಲದ ಆಸೆಯೂ ಇಲ್ಲದೆ ನಿನ್ನ ಸುಗಂಧವನ್ನು ಪಸರಿಸುತ್ತಿರುವ ಪವನನು ಬೇರೆ ಬಗೆಯ ಬಂಧುವಾಗಿದ್ದಾನೆ.

ದುಂಬಿಗಳು ಕಮಲಗಳಿಗೆ ಸಂತೋಷವನ್ನುಂಟು ಮಾಡುವಂತೆ ಮನೋಹರವಾದ ಧ್ವನಿಯಿಂದ ಕಮಲಗಳ ಬಂಧುವಿನಂತೆ ವರ್ತಿಸಬಹುದು. ಆದರೆ ಈ ಬಾಂಧವ್ಯ ಸಹಜವಾದುದಲ್ಲ. ಕಮಲಗಳ ಮಕರಂದ ರಸದ ಆಸ್ವಾದನೆಯಿಂದ ಉಂಟಾದದ್ದು. ಆದರೆ ಪವನ ಕಮಲಗಳಿಂದೇನನ್ನೂ ಸ್ವೀಕರಿಸದೆ ಅವುಗಳ ಸುಗಂಧವನ್ನು ಮಾತ್ರ ಎಲ್ಲೆಡೆಯಲ್ಲಿಯೂ ಹರಡುತ್ತಾ ತೋರಿಸುವ ಬಾಂಧವ್ಯವು ಅಕೃತಿಮವಾದದ್ದು. ಈ ಅಪ್ರಸ್ತುತವರ್ಣನೆಯಿಂದ ಕವಿಯು ಪ್ರಸ್ತುತ ವ್ಯಕ್ತಿಗಳ ಕೃತ್ರಿಮ ಮತ್ತು ಅಕೃತಿಮ ಸ್ವಭಾವವನ್ನು ಬಣ್ಣಿಸಿದ್ದಾನೆ. ಧನಕನಕ ಮೊದಲಾದ ಪ್ರತಿಫಲಾಪೇಕ್ಷೆಯಿಂದ ಪ್ರೀತಿಯ ಮಾತನಾಡುತ್ತ ಸ್ನೇಹವನ್ನು ಪ್ರದರ್ಶಿಸುವವರು

ಕೃತಿಮ ಬಂಧುಗಳು ; ನಿಸ್ವಾರ್ಥಬುದ್ಧಿಯಿಂದ ಸ್ನೇಹಬಯಸುವವರು ಅಕೃತಿಮ ಬಂಧುಗಳು.

ಇಲ್ಲಿ, ಕಮಲವು (ಅಚೇತನವಾದುದರಿಂದ) ಅದನ್ನು ಸಂಬೋಧಿಸಿರುವುದು ಅನುಪಪನ್ನವಾಗುತ್ತದೆ. ಆದುದರಿಂದ ಪ್ರಸ್ತುತವ್ಯಕ್ತಿಯ ತಾದಾತ್ಮ್ಯವು ಅಪೇಕ್ಷಿತ ವಾಗುತ್ತದೆ. ಹೀಗೆ ವಾಚ್ಯಾರ್ಥಕ್ಕೆ ವ್ಯಂಗ್ಯಾರ್ಥ ತಾದತ್ಮ್ಯ ಮತ್ತು ವ್ಯಂಗ್ಯಾರ್ಥಕ್ಕೆ ವಾಚ್ಯಾರ್ಥ ತಾದಾತ್ಮ್ಯದಿಂದ ಅರ್ಥೋಪಪತ್ತಿಯನ್ನು ಹೇಳಬೇಕಾಗುತ್ತದೆ. ಅಪ್ರಸ್ತುತ ದುಂಬಿ ಮತ್ತು ಪವನಗಳ ನಡುವಿನ ವಿಸದೃಶ್ಯತೆಯಿಂದ ಪ್ರಸ್ತುತ ಕೃತ್ರಿಮ ಮತ್ತು ಅಕೃತ್ರಿಮ ಬಂಧುಗಳ ವ್ಯತಿರೇಕವು ಸುಂದರವಾಗಿ ಮೂಡಿದೆ. ಇದರಿಂದ ಅಪ್ರಸ್ತುತ ಪ್ರಶಂಸಾಲಂಕಾರವು ಇನ್ನಷ್ಟು ಚಮತ್ಕಾರಕವಾಗಿದೆ. ಇದಲ್ಲದೆ, ಈ ಪದ್ಯದಲ್ಲಿ ವಿದ್ವಾಂಸರು ಕುಂತಕನು ತಿಳಿಸುವ 'ಸಂವೃತಿ ವಕ್ರತೆ' ಯನ್ನು (ವಕ್ರೋಕ್ತಿ ಜೀ. 2.16) ಗುರುತಿಸುತ್ತಾರೆ.

3) ನಿತರಾಂ ನಿಚೋಽಸ್ಮೀತಿ ತ್ವಂ ಖೇದಂ ಕೂಪ
ಮಾಕದಾಪಿ ಕೃಥಾಃ ।
ಅತ್ಯಂತಸರಸ ಹೃದಯೋ ಯತಃ ಪರೇಷಾಂ ಗುಣಗ್ರಹೀತಾಸಿ ॥

ಕೂಪವೇ! ಅತ್ಯಂತ ತಗ್ಗಿನಲ್ಲಿದ್ದೇನೆಂದು ನೀನೆಂದೂ ದುಃಖಿಸಬೇಡ, ಏಕೆಂದರೆ ಅತ್ಯಂತ ಸರಸಹೃದಯನಾದ ನೀನು ಪರರ ಗುಣಗ್ರಾಹಿಯಾಗಿದ್ದೀಯೆ.

ನೀರೆಳೆಯುವ ಹಗ್ಗವನ್ನು ಆಕರ್ಷಿಸುವ (ಗುಣಗ್ರಹೀತಾ), ನೀರಿನಿಂದ ತುಂಬಿರುವ (ಅತ್ಯಂತ ಸರಸಹೃದಯಃ) ಕೂಪವು ತಾನು ಕೆಳಗಿದ್ದೇನೆಂದು ದುಃಖಿಸಬೇಕಾಗಿಲ್ಲ. ಇದರಿಂದ, ತನ್ನ ಬಗ್ಗೆ ನೈಚ್ಯಾನುಸಂಧಾನದಿಂದ ದುಃಖಿಯಾಗಿರುವ ಆದರೆ ಸಹೃದಯನೂ, ಅತ್ಯಂತ ಮಾರ್ದವದಿಂದ ಕೂಡಿದ ಅಂತಃಕರಣವುಳ್ಳವನೂ (ಅತ್ಯಂತ ಸರಸ ಹೃದಯ) ಮತ್ತು ಪರರ ಗುಣಗಳನ್ನು ಮೆಚ್ಚುವ (ಗುಣಗ್ರಹೀತಾ) ಓರ್ವ ವ್ಯಕ್ತಿಯ ಪ್ರಶಂಸೆ, ತನ್ಮೂಲಕ ಅವನನ್ನು ಸ್ವಾಂತನಗೊಳಿಸುವುದು ಧ್ವನಿತ ವಾಗುತ್ತದೆ. ಇದನ್ನು ಶ್ಲಿಷ್ಟ ವಿಶೇಷಣಗಳಿಂದ ಅಥವಾ ದ್ವಂದ್ವಾರ್ಥದ ಶಬ್ದಗಳಿಂದ ಸಾಧಿಸಲಾಗಿದೆ. ಯಾರು ವಿನಮ್ರರು, ಸರಸಹೃದಯಿಗಳೂ ಆಗಿ ಇತರರ ಗುಣಗ್ರಾಹಿಯಾಗಿರುತ್ತಾರೋ ಅವರು ಕ್ಷುದ್ರರಲ್ಲ, ಮಹಾವ್ಯಕ್ತಿಗಳು ಎಂದು ಒಟ್ಟು ಭಾವ. ಇಲ್ಲಿ, ಅನ್ಯೋಕ್ತಿಯ ಮೂಲಕ ಹಿತವಚನವನ್ನು ಹೇಳಬಯಸುವ ಕವಿಯು ನಮಗೆ ಅತ್ಯಂತ ಆತ್ಮೀಯನಾಗಿ ಕಾಣಿಸುತ್ತಾನೆ. ಇದರಲ್ಲಿಯ ಕಾವ್ಯಲಿಂಗಾಲಂಕಾರವು ಅತ್ಯಂತ ರಂಜನೀಯವಾಗಿದೆ. ಅದು ಅಪ್ರಸ್ತುತ ಪ್ರಶಂಸೆಗೆ ಇಂಬು ಕೊಟ್ಟಿದೆ.

4) ಅಯಿ ಮಲಯಜ । ಮಹಿಮಾಯಂ ಕಸ್ಯ ಗಿರಾಮಸ್ತು ವಿಷಯಸ್ತೇ ।
ಉದ್ಗಿರತೋ ಯದ್ಗರಲಂ ಫಣಿನಃ ಪುಷ್ಣಾಸಿ ಪರಿಮಲೋದ್ಗಾರೈಃ ॥

ಚಂದನವೇ, ವಿಷವನ್ನುಗುಳುತ್ತಿರುವ ನಾಗರಗಳನ್ನು ಸುಗಂಧದ ಪ್ರಸರಣ ದಿಂದ ಪೋಷಿಸುತ್ತಿದ್ದೀಯಲ್ಲ, ಈ ನಿನ್ನ ಮಹಿಮೆಯು ಯಾರ ನುಡಿಗೆ ಸಿಲುಕುವುದು?

ಸ್ವಭಾವದಿಂದ ದುಷ್ಟರಾದವರನ್ನು ಪ್ರೀತಿಯಿಂದ ಪೋಷಿಸುವ ಗುಣಶಾಲಿ ಯಾದ ಸಜ್ಜನನೊಬ್ಬನ ಸ್ತುತಿಯನ್ನು ಇಲ್ಲಿ ಚಂದನಾನ್ಯೋಕ್ತಿಯ ಮೂಲಕ ಮಾಡ ಲಾಗಿದೆ. ಸರ್ಪಗಳು ಚಂದನ ವೃಕ್ಷದ ಪರಿಮಳಕ್ಕೆ ಮನಸೋತು ಅವುಗಳಲ್ಲಿ ಆಶ್ರಯ ಪಡೆಯುತ್ತವೆಯೆಂದು ಪ್ರಸಿದ್ಧಿಯಿದೆ. ಹೀಗೆ ವಿಷಮಯವಾದ ಸರ್ಪಗಳಿಗೂ ತನ್ನ ಸುಗಂಧ ಪ್ರಸರಣದಿಂದ ಪೋಷಿಸುವ ಚಂದನವು ದುಷ್ಟರಲ್ಲಿಯೂ ಔದಾರ್ಯ ವನ್ನು ತೋರಿ ಸಲಹುವ ಗುಣಶಾಲಿ ಪುರುಷನನ್ನು ನಿರ್ದೇಶಿಸುತ್ತದೆ. ಸ್ತುತಿಪರ ವಾದ ಈ ಅಭಿಪ್ರಾಯವನ್ನು ಹೇಳಿದಾಗ ಈ ಶ್ಲೋಕದಲ್ಲಿ ಕಾವ್ಯಲಿಂಗಾಲಂಕಾರವು ಸೊಗಸಾಗಿ ಕಾಣಬರುತ್ತದೆ.

ಅಥವಾ, ಈ ಅನ್ಯೋಕ್ತಿಯ ಮೂಲಕ ಅವಿವೇಕಿಯೊಬ್ಬನ ನಿಂದೆಯನ್ನು ಕವಿಯು ಮಾಡುತ್ತಿರುವನೆಂದು ಹೇಳಬಹುದು. ಇದು ಪ್ರಕರಣದ ಮೂಲಕ ತಿಳಿಯಲು ಸಾಧ್ಯವಾಗುತ್ತದೆ ಭಯಂಕರ ಸರ್ಪಗಳಿಗೂ ಆಶ್ರಯವನ್ನೀಯುವುದು ಚಂದನಕ್ಕೆ ಭೂಷಣವಲ್ಲ. ಇದರಿಂದ ವಿವೇಕವಿಲ್ಲದ ಲೋಕಕಂಟಕರಾದ ದುಷ್ಟರಿಗೂ ಆಶ್ರಯವನ್ನೀಡುವ ವ್ಯಕ್ತಿಯ ನಿಂದೆಯು ಸೂಚಿತವಾಗುತ್ತದೆ. ಹೀಗೆ ಸ್ತುತಿಯ ಮೂಲಕ ನಿಂದೆಯು ವ್ಯಕ್ತವಾಗುವುದರಿಂದ ವ್ಯಾಜಸ್ತುತಿ ಅಲಂಕಾರವಿದೆ.

5) ನೀರಕ್ಷೀರವಿವೇಕೇ ಹಂಸಾಲಸ್ಯಂ ತ್ವಮೇವ ತನುಷೇ ಚೇತ್ ।
ವಿಶ್ವಸ್ಮಿನ್ನಧುನಾನ್ಯಃ ಕುಲವ್ರತಂ ಪಾಲಯಿಷ್ಯತಿ ಕಃ ॥

ಹಂಸವೇ, ನೀರು–ಹಾಲುಗಳನ್ನು ಬೇರ್ಪಡಿಸುವ ಕಾರ್ಯದಲ್ಲಿ ನೀನೆ ಉದಾ ಸೀನ ತೋರುವೆಯಾದರೆ ಈಗ ಲೋಕದಲ್ಲಿ ಕಾಲಕ್ರಮದಿಂದ ಬಂದ ಪದ್ಧತಿಯನ್ನು ಪಾಲಿಸುವವರು ಬೇರೆಯಾರಿದ್ದಾರೆ?

ನೀರು ಬೆರೆತ ಹಾಲಿನಿಂದ ನೀರನ್ನು ಬೇರ್ಪಡಿಸುವ ಸಾಮರ್ಥ್ಯ ಹಂಸಕ್ಕೆ ಇರುವುದೆಂದು ನಂಬಿಕೆ ಅಥವಾ ಕವಿಸಮಯ ; ಇದರ ಮೂಲಕ ಕವಿಯು, ನ್ಯಾಯಾ ನ್ಯಾಯಗಳನ್ನು ತೀರ್ಮಾನಿಸುವ ಹೊಣೆ ಹೊತ್ತಿರುವ ರಾಜನೋ ಅಥವಾ ಅಧಿ ಕಾರಿಯೋ ತನ್ನ ಕರ್ತವ್ಯದಲ್ಲಿ ಉದಾಸೀನನಾಗಿರುವುದನ್ನು ಕಂಡು, ತಾನೇ ಕರ್ತವ್ಯ ಲೋಪಿಯಾದರೆ ಇನ್ನು ಯಾರು ತಾನೇ ಕರ್ತವ್ಯ ಪಾಲನೆಮಾಡುತ್ತಾರೆ? ಯಾರೂ ಮಾಡುವುದಿಲ್ಲವೆಂಬ ಅಭಿಪ್ರಾಯವನ್ನು ಕಾಕುವಿನಿಂದ ಅರುಹುವುದರ ಮೂಲಕ ಹಿತೋಕ್ತಿಯನ್ನು ಹೇಳುತ್ತಿದ್ದಾನೆ—ಇದೇ ಪ್ರಸ್ತುತವೃತ್ತಾಂತ.

ಇಲ್ಲಿ, ಪ್ರಕೃತ ವ್ಯಕ್ತಿಯನ್ನು ಕಂಡು ಅವನ ಹಿತವನ್ನು ಬಯಸುವ ಕವಿಯೋ ಅಥವಾ ತಟಸ್ಥಪುರುಷನೋ 'ನೀನು ಕರ್ತವ್ಯ ಭ್ರಷ್ಟನಾಗಿದ್ದೀಯೆ' ಹಾಗಾಗ

ಕೂಡದು ಎಂದು ಪ್ರತಿಷೇಧವನ್ನು ನೇರವಾಗಿ ತಿಳಿಸದೆ ಈ ರೀತಿ ಸಭ್ಯವಾಗಿ, ಸೂಕ್ಷ್ಮವಾಗಿ ಮತ್ತು ಅಷ್ಟೇ ಪರಿಣಾಮಕಾರಿಯಾಗಿ ತಿಳಿಸುತ್ತಿದ್ದಾನೆ.

6) ಉಪರಿ ಕರವಾಲಧಾರಾಕಾರಾ : ಕ್ರೂರಾ ಭುಜಂಗಮಪುಂಗವಾ: ।
ಅಂತ; ಸಾಕ್ಷಾತ್ ದ್ರಾಕ್ಷಾದೀಕ್ಷಾಗುರವೋ ಜಯತಿ ಕೇ ಽಪಿ ಜನಾ: ॥

ಮೇಲು ನೋಟಕ್ಕೆ ಖಡ್ಗದ ಅಲಗಿನಂತೆ ಕ್ರೂರವಾಗಿ ತೋರುವ, ಸರ್ಪಶ್ರೇಷ್ಠದಂತೆ (ಕೇಳಲು ಕಟುವಾದ ಉದ್ಗಾರವನ್ನು ಮಾಡುವ) ದಾರುಣ ಸ್ವಭಾವವುಳ್ಳ ಆದರೆ ಅಂತಃಕರಣದಲ್ಲಿ ಮಧುರವಾದ ದ್ರಾಕ್ಷಾಫಲಕ್ಕೂ ಮಾಧುರ್ಯವನ್ನು ಕಲಿಸಿಕೊಡುವಷ್ಟು ಮಧುರತೆಯನ್ನು ಹೊಂದಿರುವ ಕೆಲವು ಜನರು ಎಲ್ಲರಿಗಿಂತಲೂ ಶ್ರೇಷ್ಠರು.

ಹೊರ ನೋಟಕ್ಕೆ ಅತ್ಯಂತ ಕಠಿಣ ಸ್ವಭಾವದವನೆಂದು ತೋರುವ ಆದರೆ ಹೃದಯದಲ್ಲಿ ಅತ್ಯಂತ ಮಾರ್ದವವನ್ನು ಪಡೆದಿರುವ ಒಬ್ಬ ವ್ಯಕ್ತಿಯನ್ನು ಕವಿಯು ಇಲ್ಲಿ ಅನ್ಯೋಕ್ತಿಯ ಮೂಲಕ ಪ್ರಶಂಸೆ ಮಾಡುತ್ತಿದ್ದಾನೆ. ಆ ವ್ಯಕ್ತಿಯನ್ನು ನೇರವಾಗಿ ನಿರ್ದೇಶಿಸದೆ ಆ ಸ್ವಭಾವದವರನ್ನು ಸಾಮಾನ್ಯವಾಗಿ ನಿರ್ದೇಶಿಸಿ ಅದರ ಮೂಲಕ ಪ್ರಸಕ್ತ ವ್ಯಕ್ತಿಯನ್ನು ಸೂಚಿಸುವುದರಿಂದ ಇದು ಸಾಮಾನ್ಯ-ವಿಶೇಷ ರೂಪವಾದ ಅಪ್ರಸ್ತುತ ಪ್ರಶಂಸೆಯಾಗಿದೆ. ಇಲ್ಲವೆ ಹೀಗೆ ಸಾಮಾನ್ಯ ನೀತಿ ಕಾವ್ಯವಾಗುತ್ತದೆ–ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ।

ಇಲ್ಲಿ ಒಂದೇ ವಸ್ತುವನ್ನು (ಜನಾಃ) ಕರವಾಲಧಾರಾಕಾರ, ಭುಜಂಗಮಪುಂಗವ, ದ್ರಾಕ್ಷಾದೀಕ್ಷಾಗುರುವೆಂದು ನಾನಾವಿಧವಾಗಿ ಉಲ್ಲೇಖ ಮಾಡಿರುವುದರಿಂದ ಉಲ್ಲೇಖಾಲಂಕಾರವಿದೆ.

ಹೀಗೆ, ಕೇವಲ ದಿಕ್ಸೂಚಿಯಾಗಿ ಕೊಡಲ್ಪಟ್ಟ ಮೇಲಿನ ಉದಾಹರಣೆಗಳಲ್ಲಿ ಜಗನ್ನಾಥನ ಕಾವ್ಯತ್ವವು ಕೂಡಲೆ ಭಾಸವಾಗುತ್ತದೆ. ಪ್ರತಿಯೊಂದು ಕಾವ್ಯದಲ್ಲೂ ಕವಿಯ ಪ್ರತಿಭೆ ಮತ್ತು ಕವಿತಾ ಚಾತುರ್ಯ ಹೊರಹೊಮ್ಮುತ್ತದೆ. (ಅನ್ಯೋಕ್ತಿ) ಕವಿಗಿರಬೇಕಾದ ಸೂಕ್ಷ್ಮ ಪರಿಜ್ಞಾನ ಧರ್ಮಾಧರ್ಮವಿವೇಚನೆ, ವಿಸ್ತಾರವಾದ ಲೋಕಾನುಭವ ಮತ್ತು ಹೃದಯವಂತಿಕೆ ಕಾವ್ಯಗಳಲ್ಲಿ ಕಾಣುತ್ತದೆ. ಇವನ ಶಬ್ದಾರ್ಥಗಳ ಸಮನ್ವಯ ಮತ್ತು ರಸಾನುಭವ ಸ್ಪಂದನಗಳು ಬೆರಗುಗೊಳಿಸುತ್ತವೆ. ಪದ್ಯಗಳು ಅತ್ಯಂತ ಮಧುರ ಹಾಗೂ ಲಲಿತ. ಕಾವ್ಯವೇ ಸ್ವಭಾವವಾಗಿರುವ ಇವನು ಪ್ರಥಮ ವರ್ಗದ ಕವಿ. ಸಕಲ ಕಾವ್ಯಗುಣಗಳಿಂದ ತುಂಬಿರುವ ಇವನ ಕವಿತೆಗಳು ಯಾರ ಮನವನ್ನು ತಾನೇ ಅಪಹರಿಸುವುದಿಲ್ಲ? ಕವಿಯೇ ಒಂದೆಡೆ ತನ್ನ ಕಾವ್ಯಗಳ ಬಗ್ಗೆ ಇಂತೆಂದಿದ್ದಾನೆ–

ಧುರ್ಯೈರಪಿ ಮಾಧುರ್ಯೈರ್ದ್ರಾಕ್ಷಾಕ್ಷೀರೇಕ್ಷುಮಾಕ್ಷಿಕಸುಧಾನಾಮ್
ವಂದ್ಯೇವ ಮಾಧುರೀಯಂ ಪಂಡಿತರಾಜಸ್ಯ ಕವಿತಾಯಾಃ ॥

ಭಾಮಿನೀ 4.44

ಇದು ಹೆಮ್ಮೆಯ ಮಾತೆಂದು ತೋರಿದರೂ ಸತ್ಯಸಂಗತಿ.

ಗುಲಾಬಿ

ರಘುಕುಲಕರ್ಣಿ

ಕುರಿಗಳಂತೆ ತಲೆಹಾಕಿ
ಜನರೆಲ್ಲ ಸ್ವಾತಂತ್ರ್ಯ ಮೇಯುತ್ತಾರೆ
ಜೋತು ಬಿದ್ದು ಗಂಟೂ ಹಾಕಿಕೊಳ್ಳುತ್ತಾರೆ
ನಾನು ಉಂಡಿದ್ದೇನೆ ಸ್ವಾತಂತ್ರ್ಯದ ರುಚಿ
ಮೂಸಿದ್ದೇನೆ ವಾಸನೆ,

ಗುಲಾಬಿ ಗರ್ಭದಲ್ಲಿಯೂ ಸಾವಿದೆ
ಒಮ್ಮೊಮ್ಮೆ ಧಡಫಡ ಬಡಿದು
ಬಿರುಕು ಬಿಟ್ಟು ಬಸಿಬಸಿದು
ಕಾಲು ತೊಡಕುತ್ತದೆ.

ಅದೇಕಂಟಿಯ ಮೇಲೆ
ಹಸಿದ ಹಕ್ಕಿ ಶಾಂತಿ ಗೀತ ಹಾಡಿ
ಹೊಸ ವರ್ಷ ತರುತ್ತದೆ
ನನ್ನ ಭೂಮಿ ಸ್ವತಂತ್ರವು ; ಭೂಮಿಯ ಮಕ್ಕಳು
ಸ್ವಾತಂತ್ರ್ಯದ ಚಕ್ರಕ್ಕೆ ಸಿಲುಕಿ
ಹರಿದು ಹೆಣವಾದಾಗ್ಯೂ ಕಚ್ಚುತ್ತಿಲ್ಲ
ಕಚ್ಚಲು ಶಕ್ತಿಯೂ ಇಲ್ಲ
ರಕ್ತಕ್ಕಾಗಿ ರಕ್ತ ಬಸಿಯುತ್ತಿಲ್ಲ
ರಕ್ತ ಹಿಂಡಿ ಕಾಯ್ದ ಚಾಟಿ ಏಟು
ಬಿಗಿಯುತ್ತದೆ.

ಸ್ವಾತಂತ್ರ್ಯದ ತಗ್ಗಿನಲ್ಲಿ ಹುಟ್ಟಿದ
ಎಳೆ ಎಲುಬುಗಳೂ ಕೂಡ
ಕಾಲು ತೊಡಕಿದ ಹಾಡ ಹಾಡಿ
ತಾವೇ ಕೇಳುತ್ತಾ ಕುಣಿಯುತ್ತಾ
ಬೆಳೆದು ಒಂದು ದಿನ ಬೆನ್ನು ಹೊರಳಿಸಿ
ಮುಂಗೈಗೆ ರಂಗು ಹಚ್ಚಿ

ರಣಡೋಲು ಬಡಿದು
ನಿಮ್ಮ ಕಟಬಾಯಲ್ಲಿ ನಿಮ್ಮ ಸ್ವಾತಂತ್ರ್ಯತುರುಕಿ
ಅಲ್ಲಿ ಇಲ್ಲಿ ಎಲ್ಲೆಲ್ಲೂ
ಹೊಟ್ಟೆ ತುಂಬಿದ ಹದ್ದುಗಳಾಗಿ
ಹರಿದ ಮಾಂಸದ ತುಣಕುಗಳ
ಚೆಲ್ಲುತ್ತಾರೆ
ಗುಲಾಬಿ ಹೂವುಗಳನ್ನಲ್ಲ, ಸ್ವಾಮೀ.

ಒಕ್ಕಲಿಗ ಮತ್ತು ಹಕ್ಕಿ
(ಒಂದು ಜನಪದ ಕಥೆಯ ವಿಶ್ಲೇಷಣೆ)

ವೀರಣ್ಣ ಎಸ್. ದಂಡೆ

I

ಹೀಂಗ ಒಂದೂರಾಗ ಒಬ್ಬ ಒಕ್ಕಲಿಗ್ಯಾ ಇದ್ದ್ನಂತ. ಅಂವಂದು ಈಟ ಅಂಗೈಯುಟ ಹೊಲಾ ಇತ್ತಂತ. ಅಂವ ಆ ಹೊಲ್ದಾಗ ಜ್ವಾಳಾ ಬಿತ್ತೀನಂತ. ಜ್ವಾಳಾ ಭರ್ಚಕ ಹೊಡಿಗ ಬಂದು, ಒಂದೊಂದ ತೆನಿ ಒಂದೊಂದು ಸೇರಿನಟು ಆದುವಂತ. ಕಾಳ ಹಾಲ ತುಂಬಿ ಭರ್ಚಕ ಸೀತ್ನಿಗಿ ಬಂದುವಂತ. ಹಕ್ಕಿ ಕಾಟ ಭಾಳ ಆಯ್ತುಂತ. ಅಂವ ಹಕ್ಕಿ ಹೊಡೀಕ ಒಂದ ಈಟ ಅಂಟಾ ಹಾಕಿ ಕವಣ್ಯಾಗ ಕಲ್ಲಿಟ್ಟು ಹಕ್ಕಿ ಹೊಡಿಕತ್ನಂತ. ಏಟ ಹೊಡ್ದ್ರೂ ಹಕ್ಕಿಗೋಳು ಹೋಗ್ಲಿಲ್ಲಂತ. ಅವ್ನಿಗಿ ಬ್ಯಾಸರ ಬಂದು: "ಇರ್ಲೂಕೆ ನಂದ ಈಟ ಹೊಲ, ಎಲ್ಲಾ ಹಕ್ಕಿಗೋಳ ಪಾಲಾಗ್ತಾದ" ಅಂತ ಇಚಾರ ಮಾಡಿ ಅಳ್ಕೋತ ಕುತ್ನಂತ. ಆವಾಗ ಅಲ್ಲಿಂದೆ ಹಾಯ್ಸಿ ಶಿವ-ಪಾರ್ವತಿ ನಡ್ದೀರಂತ. ಪಾರ್ವತಿ ತೆಳಗ ನೋಡಿ: "ಯಾಕೊ ಈ ಮನಸ್ಯಾ ಅಳ್ಕೋತ ಕುಂತಾನ, ಕೇಳ್ಕೊಂಡರೆ ಬಾ" ಅಂತ ಅಂದು ಖಳಊದೂಳಂತ. ಶಿವ ಒಬ್ಬ ಸಾದಾ ಮನ್ಸ್ಯಾನ ರೂಪಾ ತೊಗೊಂಡು ಅಲ್ಲಿಗಿ ಬಂದು 'ಯಾಕಪ ಅಳ್ಳೂಕತ್ತೀದಿ' ಅಂತ ಕೇಳ್ದ್ನಂತ. ಅದಕ ಒಕ್ಕಲಿಗ್ಯಾ 'ಏನ್ಮಾಡ್ಲಿ ನಂದ ಇರಾದೆ ಈಟೆ ಹೊಲ ; ಎಂದೂ ಇಲ್ದ ಈ ವರ್ಸರೆ ಜ್ವಾಳಾ ಚಲೊ ಬಂದಾದ ; ಅದ್ರಾಗ ಈ ಹಕ್ಕಿಗೋಳ ಹತ್ಯಾವ ; ಏಟ ಹೊಡ್ದ್ರೂ ಹೋಗಾಲಾಗ್ಯಾವ' ಅಂತ ಅಂದ್ನಂತ. ಅವಾಗ ಪರಮಾತ್ಮ, "ಏನ್ತವ್ಮ ನಾ ಹೇಳಿದ ನೀ ಕೆಳ್ತೀನು?" ಅಂದ್ರ– 'ಕೇಳ್ತಿನಿ'. 'ನೋಡು ಈ ಹಕ್ಕಿಗೋಳ ಹೋಗ್ಬೇಕಾದ್ರ, ನೀ ಏನ ಮಾಡ್ಬೇಕಂದ್ರ, ನಿನ್ನ ತೆಲಿ ಬೋಳ್ಸ್ಗ, ಬೋಳ್ಸ್ಗಂಡು ತೆಲಿಗ ಬೆಳ್ಳಗ ಸುಣ್ಣ ಬಡಕೊ, ಬಡಕೊಂಡು ಹೊಲ್ದಾಗ ಬಂದು ಅಂಟದ ಮ್ಯಾಲ ಕೂಡು. ಅಂದ್ರ ಹಕ್ಕಿಗೋಳು ಬರಾಂಗಿಲ್ಲ' ಅಂತ ಹೇಳೂನು. ಇಂವ ಒಕ್ಕಲಿಗ್ಯಾ 'ಯಾಕಾಗಲ್ದು' ಅಂತ ಹೇಳಿ ಮನಿಗ ಬಂದು, ಹಜಾಮನ ಮನಿಗ ಹೋಗಿ ನುಣ್ಣಗ ತೆಲಿ ಬೋಳಸ್ಗೊಂಡ್ನಂತ. ಬಂದು ತೆಲಿಗ ಸುಣ್ಣ ಬಡ್ಕೊಂಡು, ಹೋಗಿ ಅಂಟದ ಮ್ಯಾಲ ಕುಂತ್ನಂತ. ಇವ್ನ ತೆಲಿಗ ನೋಡಿ ಯಾವೂ ಹಕ್ಕಿಗೋಳು ಬರ್ಲಿಲ್ಲಂತ. ಆದ್ರ ಎಡ್ಡ ಹೆಣ್ಣ–ಗಂಡ ಹಕ್ಕಿಗೋಳು ಅವ್ನ ತೆಲಿಮ್ಯಾಲ ಬಂದು ಕುಂತುವಂತ. ಆವಾಗ ಅಂವ 'ಎಲಾ

ವ್ನವ್ನ' ಅಂದು ಅವ್ಕ ಒಡಿಕ ಕೈ ಒಯ್ದ್ರ ಹೆಣ್ಣ ಹಕ್ಕಿ ಒಂದೇ ಅವ್ನ ಕೈಗಿ ಸಿಕ್ತು, ಗಂಡ ಹಕ್ಕಿ ಹಾರಿಹೋಯ್ತು. ಅದಕ ಅಂವ ಸಿಟ್ಟಿಗಿ ಬಂದು ಒಯ್ದು ಭಾವ್ಯಾಗ ನೀರಾಗ ಮುಣಗುಸಿ ಮುಣಗುಸಿ ತಗದು ಕೇಳ್ದನಂತ—'ಸತ್ತೇನ ಗುಬ್ಬಿ' ಅಂತ. ಹಕ್ಕಿ ಅಂತಂತ—

ಸತ್ತಿಲ್ಲ ಮುತ್ಯಾ ಕೆಟ್ಟದಿ ಮುತ್ಯಾ
ಗುಂಡ ಗುಂಡ ತೆನಿ ತಿಂದು, ಗುಂಡದಾನ ನೀರ ಕುಡೀಕತ್ತೀನಿ ನೋಡು.

ಅಂತಂತ. ಅವಾಗ ಒಕ್ಕಲಿಗ್ಯಾ ಅದಕ ಒಯ್ದು ಅಂಟದ ಕಾಲಿಗ ಹಗ್ಗಕ ಕಟ್ಟಿ ಜುರು ಜುರು ತೂಗಿ 'ಸತ್ತೇನ ಗುಬ್ಬಿ' ಅಂತ ಅಂದ್ನಂತ—

ಸತ್ತಿಲ್ಲ ಮುತ್ಯಾ ಕೆಟ್ಟಿಲ್ಲ ಮುತ್ಯಾ
ಗುಂಡ ಗುಂಡ ತೆನಿ ತಿಂದು, ಗುಂಡದಾನ ನೀರ ಕುಡ್ದು
ಅಂಟದ ಕಾಲಿಗ ಜೋಕಾಲಿ ಆಡೂಕತ್ತಿನಿ ನೋಡು.

ಅಂತಂತ. ಅವ್ನಿಗಿ ಭಾರಿ ಸಿಟ್ಟ ಬಂತಂತ. ಅದಕ ಫುಂಡಿಕಟ್ಗ್ಯಾಗ ಹಾಕಿ ಕಟಕಟ ಕುಟ್ತಾನ. ತುಳ್ದು ಕೇಳ್ತಾನ, 'ಸತ್ತೇನ ಗುಬ್ಬಿ' ಅಂತ. ಅವಾಗ ಹಕ್ಕಿ ಅಂತಾದ—

ಸತ್ತಿಲ್ಲ ಮುತ್ಯಾ ಕೆಟ್ಟಿಲ್ಲ ಮುತ್ಯಾ
ಗುಂಡ ಗುಂಡ ತೆನಿ ತಿಂದು, ಗುಂಡದಾನ ನೀರ ಕುಡ್ದು
ಅಂಟದ ಕಾಲಿಗ ಜೋಕಾಲಿ ಆಡಿ
ಫುಂಡಿ ಕಟ್ಗ್ಯಾಗ ಫುಗಡಿ ಆಡೂಕತ್ತೀನಿ ನೋಡು.

ಅಂತಂತ. ಅವಾಗ ಗಾಣ್ಗ್ಯಾರ ಮನಿಗ ಒಯ್ತಾನ. ಗಾಣಾ ನಡ್ದಿರತಾದ, ಅದಕ ಒಯ್ದು ಗಾಣ್ದಾಗ ಹಾಕ್ತಾನ. 'ಸತ್ತೇನ ಗುಬ್ಬಿ' ಅಂತ ಕೇಳ್ತಾನ. ಅವಾಗ ಹಕ್ಕಿ—

ಸತ್ತಿಲ್ಲ ಮುತ್ಯಾ ಕೆಟ್ಟಿಲ್ಲ ಮುತ್ಯಾ
ಗುಂಡ ಗುಂಡ ತೆನಿ ತಿಂದು, ಗುಂಡದಾನ ನೀರ ಕುಡ್ದು
ಅಂಟದ ಕಾಲಿಗ ಜೋಕಾಲಿ ಆಡಿ. ಫುಂಡಿ ಕಟ್ಗ್ಯಾಗ ಫುಗಡಿ ಆಡಿ
ಗಾಣ್ಗ್ಯಾರ ಗಾಣ್ದಾಗ ಎಣ್ಣಿ ಹಚ್ಗೋಕತ್ತಿನಿ ನೋಡು.

ಅಂತಂತ. ಅಂಬಾಣಾ ಅಂವ ಅದಕ ಒಯ್ದು ಗೌಡರ ಮನ್ಯಾಗ ಬಿಸಿ ಬಿಸಿ ನೀರಾಗ ಒಯ್ದು ಎದ್ದಿ, 'ಸತ್ತೇನ ಗುಬ್ಬಿ' ಅಂತ ಕೇಳ್ದ.

ಸತ್ತಿಲ್ಲ ಮುತ್ಯಾ ಕೆಟ್ಟಿಲ್ಲ ಮುತ್ಯಾ
ಗುಂಡ ಗುಂಡ ತೆನಿ ತಿಂದು, ಗುಂಡದಾನ ನೀರ ಕುಡ್ದು
ಅಂಟದ ಕಾಲಿಗ ಜೋಕಾಲಿ ಆಡಿ ಫುಂಡಿ ಕಟ್ಗ್ಯಾಗ ಫುಗಡಿ ಆಡಿ
ಗಾಣ್ಗ್ಯಾರ ಮನ್ಯಾಗ ಎಣ್ಣಿ ಹಚ್ಗೊಂಡು
ಗೌಡ್ರ ಮನ್ಯಾಗ ಎರ್ಕೊಳ್ಳಿಕತ್ತೀನಿ ನೋಡು.

ಅಂತಂತ. ಒಕ್ಕಲಿಗ್ಯಾಗ ಭಾರಿ ಸಿಟ್ಟ ಬಂತು. ಇವ್ನವ್ನ ಇದಕ ಕೊಲ್ಲಲಾರ್ದೆ ಬಿಡಬಾರ್ದು ಅಂದು ಕಂಬಾರ ಮನಿಗ ಒಯ್ದನಂತ. ಅವಾಗೇ ಕಂಬಾರ ಗುಂಡಪ್ಪ ಕುಲುಮಿ ಹಾಕೀಸಂತ. ಬೆಂಕಿ ಲಿಗಿಲಿಗಿ ಉರಿತೀತಂತ. ಒಯ್ದು ಬೇಕ್ಯಾಗ ಹಾಕಿ 'ಸತ್ತೇನ ಗುಬ್ಬಿ' ಅಂದ್ನಂತ. ಅದ್ಕ ಹಕ್ಕಿ—

ಸತ್ತಿಲ್ಲ ಮುತ್ತ್ಯಾ ಕೆಟ್ಟಿಲ್ಲ ಮುತ್ತ್ಯಾ
ಗುಂಡ ಗುಂಡು ತೆನಿ ತಿಂದು, ಗುಂಡ್ದಾನ ನೀರ ಕುಡ್ದು
ಅಂಟದ ಕಾಲಿಗ ಜೋಕಾಲಿ ಆಡಿ ಘಂಡಿ ಕಟ್ಟ್ಯಾಗ ಪುಗಡಿ ಆಡಿ
ಗಾಣ್ಗ್ಯಾರ ಮನ್ಯಾಗ ಎಣ್ಣಿ ಹಚ್ಗೊಂಡು ಗೌಡರ ಮನ್ಯಾಗ ಎರ್ಕೊಂಡು
ಕಂಬಾರ ಮನ್ಯಾಗ ಕಾಸ್ಗೋಕತ್ತಿನಿ ನೋಡು,

ಅಂತಂತ. ಅವಾಗ ಒಯ್ದು ಕುಂಬಾರ ಮನ್ಯಾಗ ಕತ್ತಲ ಬೋಲ್ಯಾಗ ಹಾಕಿ 'ಸತ್ತೇನ ಗುಬ್ಬಿ' ಅಂದ್ರು—

ಸತ್ತಿಲ್ಲ ಮುತ್ತ್ಯಾ ಕೆಟ್ಟಿಲ್ಲ ಮುತ್ತ್ಯಾ
ಗುಂಡ ಗುಂಡ ತೆನಿ ತಿಂದು, ಗುಂಡದಾನ ನೀರ ಕುಡ್ದು
ಅಂಟದ ಕಾಲಿಗ ಜೋಕಾಲಿ ಆಡಿ, ಘಂಡಿ ಕಟ್ಟ್ಯಾಗ ಪುಗಡಿ ಆಡಿ
ಗಾಣ್ಗ್ಯಾರ ಮನ್ಯಾಗ ಎಣ್ಣಿ ಹಚ್ಗೊಂಡು, ಗೌಡರ ಮನ್ಯಾಗ ಎರ್ಕೊಂಡು
ಕಂಬಾರ ಮನ್ಯಾಗ ಕಾಸ್ಗೊಂಡು
ಕುಂಬಾರ ಮನ್ಯಾಗ ಕತ್ಲಾಗ ಸೀರಿ ಉಟ್ಗೋಕತ್ತೀನಿ ನೋಡು,

ಅಂತ ಅಂದು, ಫುರ್ ಅಂತ ಹಾರಿಹೋಯ್ತು'.1

II

ಈ ಕಥೆಯ ಇನ್ನೊಂದು ಪಾಠ ಶ್ರೀ ಸಿಂಪಿ ಲಿಂಗಣ್ಣ ಅವರ 'ಉತ್ತರ ಕರ್ನಾಟಕದ ಜನಪದ ಕಥೆಗಳು' ಎಂಬ ಪುಸ್ತಕದಲ್ಲಿ ಪ್ರಕಟಗೊಂಡಿದೆ. ನಾನು ಮುಂದೆ ಮಾಡಲಿರುವ ಕಥೆಯ ವಿಶ್ಲೇಷಣೆಯಲ್ಲಿ ಹೇಳಿದ ಕೆಲವು ಮಾತುಗಳಿಗೆ ಆಧಾರವಾಗಿ ಶ್ರೀ ಸಿಂಪಿಯವರ ಪಾಠವನ್ನು ನೋಡುವುದು ಉತ್ತಮವೆಂದು ತೋರುತ್ತದೆ. ನಮ್ಮ ಪಾಠದಲ್ಲಿ ಇರುವ ಪ್ರವೇಶಿಕೆಯ ರೂಪದ ವಿವರಣೆ ಸಿಂಪಿಯವರ ಪಾಠದಲ್ಲಿಲ್ಲ. ಪಕ್ಷಿಯನ್ನು ಗುಂಡದ ನೀರಿನಲ್ಲಿ ಅದ್ದುವುದಾಗಲಿ, ಮಂಜಿಗೆ ಕಾಲಿಗೆ ಕಟ್ಟಿ ಉರಲು ಹಾಕುವುದಾಗಲಿ ಕಥೆಯಲ್ಲಿ ವಿವರಣೆ ನೀಡಿಲ್ಲವಾದರೂ

---

1. ವಕ್ತೃ : ಶಿವಶರಣಪ್ಪಾ ಪಿ. ಭೀಮ್ನಳ್ಳಿಕರ, ವಯಸ್ಸು-51, ಜಾತಿ-ಕಬ್ಬಲಿಗರು. ಮ್ಯಾಟ್ರಿಕ್‌ವರೆಗೆ ಅಭ್ಯಾಸ ಮಾಡಿದ್ದು ರೇಲ್ವೆ ಇಲಾಖೆಯಲ್ಲಿ ಗೂಡ್ಸ್ ಹೆಡ್ ಕ್ಲಾರ್ಕ್ ಎಂದು ಕೆಲಸ ಮಾಡುತ್ತಾರೆ. ಚಿತಾಪೂರ ತಾಲೂಕಿನ ಭೀಮ್ನಳ್ಳಿಯವರಾದ ಇವರು ಈಗ ಕಲಬುರಗಿಯ ಬ್ರಹ್ಮಪೂರದಲ್ಲಿ ವಾಸವಾಗಿದ್ದಾರೆ.
ಸಂಗ್ರಹಕಾರರು : ವೀರಣ್ಣಾ ಎಸ್. ದಂಡೆ,
ಸಂಗ್ರಹ ಮಾಡಿದ ದಿನಾಂಕ : 11-11-1975.

ಗೀತೆಯಲ್ಲಿ ಈ ಘಟನೆಗಳು ಸಂಭವಿಸಿದಂತೆ ನಿರೂಪಿಸಲಾಗಿದೆ. ನಮ್ಮ ಪಾಠದಲ್ಲಿಲ್ಲದ–ಗುಬ್ಬಿಯನ್ನು ಹೊಳೆಯ ನೀರಿನಲ್ಲಿ ಹಾಕುವುದು ಹಾಗು ಕೊನೆಯಲ್ಲಿ ಅದನ್ನು ಅಡಿಗೆ ಮಾಡಿ ತಿನ್ನುವುದು–ಈ ಎರಡು ಘಟನೆಗಳು ಸೇರಿಕೊಂಡಿವೆ. ಇಲ್ಲಿಯೂ 'ಗುಬ್ಬಿ' ಎಂಬ ಪದ ಪ್ರಯೋಗವಾಗಿರುವದೂ ಗಮನಾರ್ಹ.

ಸಿಂಪಿಯವರ ಪಾಠದ ಸಾರಾಂಶ ಇಂತಿದೆ : ಮಂಜಿಗೆಯ ಮೇಲೆ ನಿಂತು ಒಕ್ಕಲಿಗ ಕವಣಿಕಲ್ಲು ಬೀಸುತ್ತಿದ್ದಾನೆ. ಎಲ್ಲ ಗುಬ್ಬಿಗಳು ಹಾರಿಹೋದವು, ಒಂದು ಗುಬ್ಬಿ ಮಾತ್ರ ತೆನೆ ಹಿಡಿದು ಕುಳಿತಿತ್ತು. ಈತ ಮೆಲ್ಲನೆ ಹೋಗಿ ಗಪ್ಪನೆ ಹಿಡಿದು, ಅದನ್ನು 'ಸತ್ತಿಯೇನು ಗುಬ್ಬಿ' ಎಂದು ಕೇಳಿದ. ಅದಕ್ಕೆ ಗುಬ್ಬಿ–

ಗುಂಡ ಗುಂಡ ತೆನೆತಿಂದು
ಗುಂಡದಾನ ನೀರು ಕುಡಿದು
ಮಂಚಗೀ ಕಾಲಿನಲ್ಲಿ
ಜೋಕಾಲಿ ಆಡ ಹತ್ತಿದ್ದೇನೆ
ನಾನೇಕೆ ಸಾಯುವೆನು ?

ಎಂದಿತು. ನಂತರ ಅದನ್ನು ಹಳ್ಳದಲ್ಲಿ ಹಾಕಿದರೆ ಈಸಾಡುತ್ತಿದ್ದೇನೆಂದು, ಗಾಣದಲ್ಲಿ ತುರುಕಿದರೆ–ಎಣ್ಣೆ ಹೂಸಿಕೊಳ್ಳುತ್ತಿದ್ದೇನೆಂದು, ತನ್ನ ಮನೆಯಲ್ಲಿ ಬಿಸಿ ನೀರಿನ ಭಾಂಡೆಯಲ್ಲಿ ಹಾಕಿದರೆ-ಎರೆಕೊಳ್ಳುತ್ತಿದ್ದೇನೆಂದೂ ಹೇಳುತ್ತದೆ. ಕಡೆಗೆ ತನ್ನ ಹೆಂಡತಿಯಿಂದ ಅದನ್ನು ಕೊಯ್ದು ಅಡಿಗೆ ಮಾಡಿಸಿ ತಿಂದು, 'ಸತ್ತೆಯಾ ಗುಬ್ಬಿ' ಎಂದಾಗ, ಒಕ್ಕಲಿಗ ಕಾರಿಕೊಳ್ಳುತ್ತಾನೆ. ಗುಬ್ಬಿ ಹೊರಗೆ ಬಂದು–

ಗುಂಡ ಗುಂಡ ತನೆ ತಿಂದು
ಗುಂಡದಾನ ನೀರ ಕುಡಿದು
ಮಂಚಗೀ ಕಾಲಿನಲ್ಲಿ ಜೋಕಾಲಿ ಆಡಿ
ಹಳ್ಳದ ತಿಳಿ ನೀರಿನಲ್ಲಿ ಈಸಾಡಿ
ಗಾಣಗರ ಗಾಣದಲ್ಲಿ ಎಣ್ಣೆ ಹೂಸಿಕೊಂಡು
ಬಿಸಿ ಬಿಸಿ ನೀರಿನಿಂದ ಎರಕೊಂಡು
ಪಲ್ಲೆ ಮಾಡಿ ಉಂಡುಗಿಂಡು
ಹೊರಟಿದ್ದೇನೆ ನೋಡು
ನಾನೇಕೆ ಸಾಯುವೆನು ?

ಎನ್ನುತ್ತ ಹಾರಿ ಹೋಯಿತು ಸಾವಿಲ್ಲದ ಗುಬ್ಬಿ'[2]—

---

2. ಪೂರ್ಣ ಪಾಠಕ್ಕಾಗಿ ನೋಡಿ : ಉತ್ತರ ಕರ್ನಾಟಕದ ಜನಪದ ಕಥೆಗಳು' ಸಂ. ಶ್ರೀ ಸಿಂಪಿ ಲಿಂಗಣ್ಣ ಅವರು. (ಸತ್ತೇನ ಗುಬ್ಬಿ-ಪುಟ 177), ಸಾಹಿತ್ಯ ಅಕಾಡೆಮಿ, ಹೊಸ ದೆಹಲಿ 1972.

ನಾನು ಕೇಳಿದ ಇನ್ನೂ ಒಂದೆರಡು ಪಾಠಗಳಲ್ಲಿ ಹಕ್ಕಿ ಅಥವಾ ಗುಬ್ಬಿಯು ಬದಲಾಗಿ 'ಬಳು' ಎಂಬ ಪಕ್ಷಿಬರುತ್ತದೆ. ಜೋಳದ ಹೊಲದ ಬದಲಾಗಿ 'ಸಜ್ಜೆ'ಯು ಹೊಲವೆಂತಲೂ ಇಲ್ಲವೆ ಮಾಳಿಗೆ ಮೇಲೆ ಸಜ್ಜೆ ಬಿಸಿಲಿಗೆ ಹಾಕಿದಾಗ ಪಕ್ಷಿಬಂದು ತಿನ್ನುತ್ತಿರುವಂತೆಯೂ ವಿವರಿಸಲಾಗುತ್ತದೆ. ಒಕ್ಕಲಿಗನ ಬದಲಾಗಿ ಒಂದು ಕಡೆ (ಮಾಳಿಗೆ ಮೇಲೆ ಸಜ್ಜೆ ಒಣಗಲು ಹಾಕಿದವ) ಸಾಹುಕಾರನೆಂದು ಹೇಳಲಾಗಿದೆ. ಅಲ್ಲಿಯ ಘಟನೆಗಳು ಮಾತ್ರ ಬಹುತೇಕ ನಮ್ಮ ಪಾಠದಲ್ಲಿ ಕಾಣಿಸಿಕೊಂಡಂತೆಯೇ ಬರುತ್ತವೆ.

ಇದೊಂದು ಸೂತ್ರ ಕಥೆ (comulative tale). ಇದು ಮುಖ್ಯವಾಗಿ ಎರಡು ಹಂತಗಳಲ್ಲಿ ಬೆಳವಣಿಗೆ ಹೊಂದಿದೆ. ಪ್ರವೇಶಿಕೆಯು ರೂಪದಲ್ಲಿ ಜೋಳದ ಹೊಲದಲ್ಲಿ ಮೇಯುತ್ತಿರುವ ಹಕ್ಕಿಗಳನ್ನು ಓಡಿಸಲು ಮಂಚಿಗೆಯ ಮೇಲೆ ನಿಂತು ಒಕ್ಕಲಿಗನು ಕವಣೆ ಬೀಸುವುದರಿಂದ, ಹಕ್ಕಿ ಆತನ ಕೈಗೆ ಸಿಗುವ ವರೆಗಿನ ಭಾಗ ಮೊದಲನೆಯದು. ನಂತರ ಒಕ್ಕಲಿಗನು ಹಕ್ಕಿಯನ್ನು ನಾನಾ ತೊಂದರೆಗೀಡು ಮಾಡಿ, ಸತ್ತೆಯಾ ? ಎಂದು ಪ್ರಶ್ನಿಸಿದಾಗ ಹಕ್ಕಿ ಸಂತೋಷದಿಂದ ತಾನು ಬದುಕುಳಿದಿರುವದನ್ನು ಹೇಳುವುದು ಮೊದಲಾಗಿ ಕಡೆಗೆ ಹಕ್ಕಿ ಕತ್ತಲು ಮನೆಯಿಂದ ಹಾರಿ ಹೋಗುವವರೆಗಿನ ಒಂದು ಹಂತ ಎರಡನೆಯದು.

ಕಥೆಯಲ್ಲಿ ಒಟ್ಟಿಗೆ ಎರಡು ಆಶಯಗಳಿವೆ. ಸಂಕಟದಲ್ಲಿ ಸಹಾಯಕರಾಗಿ ಬರುವ ದೈವೀಜೋಡಿಗಳಾದ ಶಿವ–ಪಾರ್ವತಿಯರ ಆಗಮನ (ಶಿವನು ಮನುಷ್ಯನ ವೇಷದಲ್ಲಿ ಒಕ್ಕಲಿಗನಿಗೆ ಭೇಟಿಯಾಗುವುದು) ಪ್ರವೇಶಿಕೆಯ ಮೊದಲ ಭಾಗದಲ್ಲಿಯ ಆಶಯವಾಗಿದೆ. ಎರಡನೆ ಭಾಗದಲ್ಲಿ ಬರುವ ಒಂದೇ ಒಂದು ಆಶಯ "ಮೇಲಿಂದ ಮೇಲೆ ಸಾವನ್ನಪ್ಪುವ ಹಕ್ಕಿ" (chains involving a death–Bird actor). ತನ್ನ ಸುತ್ತಲಿನ ಆವರಣವನ್ನು ನವೀಕರಣಗೊಳಿಸುತ್ತಾ ಪುನಃ ಪುನಃ ಪ್ರವೇಶ ಪಡೆಯುತ್ತದೆ. ಕಥೆಯ ಮುಖ್ಯ ಆಶಯವು ಕೂಡ ಇದೇ ಆಗಿದೆ.

ವಕ್ತೃ ಒಳ್ಳೆಯ ಮಾತುಗಾರ ಹಾಗು ಹಾಸ್ಯಗಾರ. ಅಂತಲೇ ಇದೇ ಕಥೆಯು ಬೇರೆ ಪಾಠಗಳಿಗಿಂತ ಪ್ರಸ್ತುತ ಪಾಠದ ಪ್ರವೇಶಿಕೆಯ ಭಾಗ ವಿಸ್ತಾರವಾಗಿ ಹಾಸ್ಯಭರಿತವಾಗಿ ತುಂಬಿ ಬಂದಿದೆ. ಬೇರೆ ಪಾಠಗಳಲ್ಲಿ ಮಂಚಿಗೆಯ ಮೇಲೆ ನಿಂತ ಒಕ್ಕಲಿಗ ಕವಣೆ ಬೀಸಿದಾಗ ಹಕ್ಕಿಯ ಗುಂಪೆಲ್ಲ ಹಾರಿಹೋಗಿ ಅವನ ಕೈಗೆ ಒಂದೇ ಒಂದು ಹಕ್ಕಿ ಸಿಕ್ಕು ಅನೇಕ ತೊಂದರೆಗಳಿಗೆ ಒಳಗಾಗುತ್ತದೆ.[3] ಆದರೆ ಒಳ್ಳೆಯ ಮಾತುಗಾರನಾದ ನಮ್ಮ ಕಥೆಗಾರ ಶಿವ-ಪಾರ್ವತಿಯರ ಪ್ರವೇಶ ತಂದು,

3. ಬೇರೆ ಪಾಠಗಳಲ್ಲಿ ಹಕ್ಕಿಯ ಬದಲು ಗುಬ್ಬಿ, ಬಳುವುಗಳು ಬರುತ್ತವೆ. ಈ ಪಾಠದ ಉದ್ದಕ್ಕೂ 'ಹಕ್ಕಿ' ಎಂದೇ ಹೇಳಿದರೂ 'ಸತ್ತೇನ ಗುಬ್ಬಿ' ಎಂದು ಬರುತ್ತದೆ. ಬಹುಶ ಮೂಲ ಪಾಠದಲ್ಲಿ ಗುಬ್ಬಿಯೇ ಇರುವ ಸಾಧ್ಯತೆ ತೋರುತ್ತದೆ.

ಒಕ್ಕಲಿಗನ ತಲೆ ಬೋಳಿಸಿ, ಸುಣ್ಣ ಬಳಿದು ನಿಲ್ಲಿಸುವಲ್ಲಿ ಕಥೆಗೆ ಹಾಸ್ಯದ ಮೆರಗನ್ನು ಬೆರಸುವಲ್ಲಿ ಕೈವಾಡ ನಡೆಸಿದ್ದಾನೆ. ಹಕ್ಕಿಗಳು ಗಂಡು-ಹೆಣ್ಣುಗಳು ಅವನ ತಲೆಯ ಮೇಲೆಯೇ ಕುಳಿತು ಕೊಳ್ಳುವಂತೆ ಹೇಳಿದನಾದರೂ ಕಡೆಗೆ ಒಕ್ಕಲಿಗನ ಕೈಗೆ ಸಿಕ್ಕಿಸಿದುದು ಎಲ್ಲ ಪಾಠಗಳಂತೆ ಒಂದೇ ಒಂದು ಹಕ್ಕಿಯನ್ನು.

ನಮ್ಮ ವಕ್ತೃ ಒಳ್ಳೆ ಮಾತುಗಾರನಾಗಿರುವಂತೆ ಅಷ್ಟೇ ಜಾಣನಾಗಿದ್ದಾನೆ. ಆತನ ಜಾಣತನವು ಕಥೆಯ ಒಟ್ಟು ಔಚಿತ್ಯವನ್ನು ಕಾಯ್ದುಕೊಂಡು ಬರಲು ಕಾರಣವಾಗಿದೆ. ಒಕ್ಕಲಿಗನ ತಲೆಯ ಮೇಲೆ ಗಂಡು-ಹೆಣ್ಣು ಎರಡು ಹಕ್ಕಿಗಳು ಕುಳಿತವು. ಆತ ಹಕ್ಕಿಯನ್ನು ಹಿಡಿಯಲು ಪ್ರಯತ್ನಿಸಿದಾಗ ಅವನ ಕೈಗೆ ಹೆಣ್ಣು ಹಕ್ಕಿ ಮಾತ್ರ ಸಿಗುತ್ತದೆ. ಸಿಕ್ಕುಬಿದ್ದ ಹಕ್ಕಿ ಯಾವುದು ಎಂದು ನಿರ್ಣಯಿಸುವಲ್ಲಿಯೇ ಸಹಜ ಬುದ್ಧಿವಂತಿಕೆ ತನ್ನ ಕೆಲಸಮಾಡಿದೆ. ಮುಂದೆ ಬರುವ ಘಟನೆಗಳು (ಹಕ್ಕಿ ಕೊಡುವ ಉತ್ತರಗಳು) ಜಗಡಿಯಾಡುವುದು, ಎಣ್ಣೆ ಹಚ್ಚಿಕೊಳ್ಳುವುದು ಮುಂತಾದ ಕಾರ್ಯಗಳೆಲ್ಲ ಹೆಣ್ಣಿನವು. ಇತರ ಪಾಠಗಳಲ್ಲಿ ಒಕ್ಕಲಿಗನ ಕೈಗೆ ಸಿಕ್ಕ ಹಕ್ಕಿ ಹೆಣ್ಣೋ ಗಂಡೋ ಎಂಬ ಪ್ರಸ್ತಾಪ ಬರುವುದೇ ಇಲ್ಲ. ಆದರೆ ನಮ್ಮ ಕಥೆಗಾರ ತನ್ನ ಚತುರ ಜಾಣತನವನ್ನು ಔಚಿತ್ಯ ಪ್ರಜ್ಞೆಯನ್ನು ತೋರ್ಪಡಿಸಿ ಯಶಸ್ವಿಯಾಗಿದ್ದಾನೆ.

ಇಲ್ಲಿ ನಾನು ವಕ್ತೃವಿನ ಪರ ವಕೀಲಿ ವಹಿಸಿದಂತೆ ಭಾಸವಾಗಬಹುದು. ಆದರೆ ಕಥೆಯ ವಕ್ತೃ ಆ ಕಥೆ ಸಾಗಿಬಂದ ಅವನ್ನು ಉಳಿಸಿಕೊಂಡು ಬಂದ, ವಕ್ತೃ ಸಂಪ್ರದಾಯವನ್ನೇ ಸಂಕೇತಿಸುತ್ತಾನೆ. ಕಥೆಯ ಆ ರೂಪವನ್ನು ಹೊರಗೆಡಹುವ ಆತ ಒಂದಿನವರಷ್ಟೇ ಜವಾಬುದಾರನಾಗಿರುವುದರಿಂದ ಇಡಿಯಾಗಿ ವಕ್ತೃ ಸಂಪ್ರದಾಯವನ್ನೆ ಈತನನ್ನು ಎದುರು ನಿಲ್ಲಿಸಿ ಸಂಬೋಧಿಸಿದ್ದೇನೆ.

ಒಕ್ಕಲಿಗರ ಪರಿಸರವುಳ್ಳ ಈ ಕಥೆ ಅವರಿಂದಲೆ ಹುಟ್ಟಿಕೊಂಡಿರಬೇಕು. ಆದರೆ ಕಥೆ ಹೇಳಿದ್ದು ಮಾತ್ರ ಮಕ್ಕಳಿಗಾಗಿ. ಮಕ್ಕಳ ಮನವನ್ನು ರಂಜಿಸುವುದೇ ಇಲ್ಲಿಯ ಮುಖ್ಯ ಉದ್ದೇಶ. ಕಥೆಯ ಘಟನಾವಳಿಯು ಗೀತೆಯ ತುಣುಕುಗಳು ಮಕ್ಕಳನ್ನು ಉಲ್ಲಾಸಗೊಳಿಸುವಲ್ಲಿ ಯಶಸ್ವಿಯಾಗಿವೆಯಲ್ಲದೆ ಕಥೆಯ ಪರಿಣಾಮಕತೆಯನ್ನು ಹೆಚ್ಚಿಸಿವೆ. ಕಥೆ ಹೇಳುತ್ತಿರುವ ವಕ್ತೃ ಒಕ್ಕಲಿಗನ ಪಕ್ಷವಹಿಸಿದರೆ, ಮಕ್ಕಳು ಹಕ್ಕಿಯ ಪಕ್ಷದತ್ತ ವಾಲುತ್ತಾರೆ. ಕಾರಣವೆಂದರೆ ಹಕ್ಕಿಯ ಚಿತ್ರಣದಲ್ಲಿ-ಮಕ್ಕಳಲ್ಲಿರುವಂತೆ-ಸದಾ ಚಿಮ್ಮುತ್ತಿರುವ ಸ್ಫೂರ್ತಿಯ ಲಕ್ಷಣ ಕಾಣಿಸಿಕೊಂಡಿರುವುದು. ದಮನವನ್ನು ಸಹಿಸದ ಹಕ್ಕಿ ಹಿಡಿಲುಮರಿಯಂತೆ ಪ್ರತಿಘಟಿಸಿ ಅಣಕಿಸುತ್ತದೆ–ಮಕ್ಕಳನ್ನು ನಿಗ್ರಹಿಸಿ ಹೋದಂತೆ ಅವರ ಹಟ ಹೆಚ್ಚುತ್ತದೆ. ಬೇಡವಾದುದನ್ನು ಬೇಕಂತಲೇ ಮಾಡುವ ಪ್ರವೃತ್ತಿ ಮಕ್ಕಳದು. ಅವರು ಸೋಲನ್ನು ಸಹಿಸರು; ಚುರುಕಿನ ಚಟುವಟಿಕೆ,

ಸಾಹಸದ ಯಶಸ್ಸುಗಳು ಸದಾ ಅವರ ಎದೆ ತುಂಬಿರುತ್ತವೆ–ಹಕ್ಕಿಯನ್ನು ಮೇಲಿಂದ ಮೇಲೆ ಆತಂಕ ಪಡಿಸಿದಂತೆ ಅದರ ಚೇತನ ಚಿಗುರುತ್ತ ಹೋಗುತ್ತದೆ. ಒಕ್ಕಲಿಗನು ಹಕ್ಕಿಯನ್ನು ನಾನಾ ತೊಂದರೆಗೀಡು ಮಾಡುವನಾದರೂ, 'ಹಕ್ಕಿ-ಸತ್ತಿತು' ಎಂದು ಖಚಿತವಾಗಿ ಯಾವ ಕಥೆಗಾರನೂ ಹೇಳಿಲ್ಲ, ಹಾಗೆ ನೋಡಿದರೆ ಹಕ್ಕಿ ಸಾಯುವುದೇ ಇಲ್ಲ. ಒಕ್ಕಲಿಗ ಹಕ್ಕಿ ಸತ್ತಿತೊ ಇಲ್ಲವೊ ಎಂದು ತಿಳಿಯಲು ತಿರುಗಿ ಅದನ್ನೇ 'ಸತ್ತಿಯಾ ?' ಎಂದು ಪ್ರಶ್ನಿಸುತ್ತಾನೆ. ಅದು ಸಂತೋಷದಿಂದ ಕೊಡುವ ಉತ್ತರ ನಮಗೆ ಗೊತ್ತು; 'ಸತ್ತಿಲ್ಲ ಕೆಟ್ಟಿಲ್ಲ'ವೆಂದು. ಒಂದು ವೇಳೆ ಹಕ್ಕಿಯನ್ನು ಕೊಂದಿದ್ದರೆ, ಅದು ಮಕ್ಕಳಿಗೊಂದು ದುರಂತ ಘಟನೆಯಾಗಿ ಪರಿಣಮಿಸಿ, ಮಾನಸಿಕ ಆಘಾತವನ್ನುಂಟು ಮಾಡುತ್ತಿತ್ತು, ಈ ವ್ಯಥೆಗೆ ಕಾರಣವೆಂದರೆ ಪರ್ಯಾಯವಾಗಿ ಅವರ ಚೇತನದ ರೂಪವೇ ಹಿಂಸೆಗೆ ಒಳಗಾಗುವುದು. ಆದ್ದರಿಂದ ಹಾಗೇನಾದರೂ ಸಂಭವಿಸಿದ್ದರೆ ಅವರನ್ನು ಕರುಳು ಹಿಚುಕಿದ ಸಂಕಟಕ್ಕೀಡು ಮಾಡಿದಂತಾಗುತ್ತಿತ್ತು. ಅಂತಲೇ ಹಕ್ಕಿಯನ್ನು ಘಾಸಿಗೊಳಿಸದಂತೆ ಕಥೆಯನ್ನು ಬಹು ಜಾಣ್ಮೆಯಿಂದ, ಅದರ ಸೂಕ್ಷ್ಮ ಎಳೆಯ ಸುರುಳಿಯನ್ನು ಬಿಚ್ಚಿ ತೋರಿಸುವಲ್ಲಿ ಕಥೆಗಾರರೂ ಸಫಲ ರಾಗಿದ್ದಾರೆ. ಕಡೆಗೂ ಹಕ್ಕಿ ಅಣಕಿಸುತ್ತ ಸ್ವತಂತ್ರವಾಗಿ-ಹಾರಿ ಹೋಗುವುದು ಮಕ್ಕಳ ಇಚ್ಛೆಯಂತಾಗುತ್ತದೆ. ಈ ರೀತಿ ಮಕ್ಕಳ ಮನವನ್ನು ಗೆಲ್ಲುವುದರಲ್ಲಿ ಯಶಸ್ವಿಯಾದ ಈ ಕಥೆ ಒಂದು ಉತ್ತಮ ಮಕ್ಕಳ ಕಥೆಯಾಗಿ ಸಾರ್ಥಕತೆ ಪಡೆಯುತ್ತದೆ.

ಕಥೆಯಲ್ಲಿ ಒಂದು ಹಕ್ಕಿ ಹಾಗೂ ಒಬ್ಬ ಒಕ್ಕಲಿಗ ಈ ಎರಡೂ ಪಾತ್ರಗಳು ಸಮಸಮ ಸೆಣಸಾಟ ನಡೆಸುತ್ತವೆ. ಆದರೆ ಇಲ್ಲಿಯ ಕೇಂದ್ರ ಆಶಯವು 'ಮೇಲಿಂದ ಮೇಲೆ ಸಾವನ್ನಪ್ಪುವ ಹಕ್ಕಿ' ಯನ್ನವಲಂಬಿಸಿಯೇ ಸುತ್ತುವರಿಯುತ್ತದೆ. ಹೀಗಾಗಿ ಒಕ್ಕಲಿಗನ ಪಾತ್ರ ಗೌಣವಲ್ಲವಾದರೂ ಆಕರ್ಷಣೆಯಲ್ಲಿ ಎರಡನೆಯದಾಗಿ ನಿಂತು, ಕೇಂದ್ರ ಪಾತ್ರ ಹಕ್ಕಿಯದೆ ಎನಿಸುತ್ತದೆ. ಶಿವ–ಪಾರ್ವತಿಯರ ಆಗಮನವು ಕಥೆ ಗಾರನ ಚಾತುರ್ಯದಿಂದಾದುದು, ಇಲ್ಲವೆ ಕಥೆ ಹರಿದು ಬಂದ ಸಂಪ್ರದಾಯ ಮಾರ್ಗವೇ ಅಂತಹುದಾಗಿರಬೇಕು. ಶಿವ–ಪಾರ್ವತಿಯರ ಬದಲಾಗಿ ಯಾರಾದರೂ ಸಾಮಾನ್ಯ ಮನುಷ್ಯರೇ ಬರಬಹುದಾಗಿತ್ತು. ಆದರೆ ಅವರ ಪ್ರವೇಶದಿಂದ ಕಥೆಗೆ ಅಲೌಕಿಕ ಲೇಪನ ಮಾಡಿದಂತಾಗಿದೆ. ಶಿವಪಾರ್ವತಿಯರು ಅಮಾನುಷ ವ್ಯಕ್ತಿಗಳಾ ದರೂ ಶಿವನು ಒಕ್ಕಲಿಗನಿಗೆ ಭೇಟಿಯಾಗುವುದು ಮಾತ್ರ ಸಾಧಾರಣ ಮಾನವ ವೇಷದಲ್ಲಿಯೆ. ಶಿವ ಮಾಡಿದ ಸಲಹೆ ಕೂಡ ನಗೆತರಿಸುವಂತಹದು. ಆ ಸಲಹೆ ಯಂತೆ ನಟಿಸುವ ಒಕ್ಕಲಿಗ ನಮಗೆ ದಡ್ಡನಂತೆ ತೋರುತ್ತಾನೆ. ಹಾಗೆಂದರೆ 'ದಡ್ಡನು ನಿರ್ವಹಿಸುವ ಕಾರ್ಯಗಳು' - (Foolish imitations) – ಎಂಬ ಇನ್ನೊಂದು ಆಶಯವು ಇಲ್ಲಿರುವುದೆಂದು ಸೂಚಿಸಬೇಕಾಗುತ್ತದೆ. ಶಿವ ಮಾಡುವ ಸಲಹೆ ಸಾಮಾನ್ಯವಾದುದು. ಅದನ್ನು ಅನುಕರಿಸುವುದು ಹೆಡ್ಡತನ ವಾಗಿ ಕಂಡರೂ, ಅದರಿಂದಾಗುವ ಪರಿಣಾಮ – ಎಲ್ಲ ಹಕ್ಕಿಗಳು ಹಾರಿ ಹೋಗು

ವುದು ಅಲೌಕಿಕವಲ್ಲವಾದರೂ ನಗೆ ತರಿಸುವಂತಹ ಸಲಹೆಗೆ ಅಲ್ಪಮಟ್ಟಿಗಾದರೂ ಗಭೀರತ್ವ ದಯಪಾಲಿಸುವಂತಹದಾಗಿದೆ. ಬಹುಶಃ ಕಥೆಯ ಮುಖ್ಯ ಘಟನೆಗೆ ಕಾಲಿರಿಸುವ ತಿರುವನ್ನು ಒಕ್ಕಲಿಗನ ಮೂರ್ಖ ಅನುಕರಣೆ ತಂದು ಕೊಡುತ್ತದೆ.

ಒಕ್ಕಲಿಗ ಕರ್ತೃತ್ವ ಶಕ್ತಿಯುಳ್ಳವ. ಆತನಲ್ಲಿ ಸಹಜ ಮಾನವ ಮನೋಭಾವವಿದೆ. ತನ್ನ ಜೋಳದ ಹೊಲ-ಆಸ್ತಿ-ಕಾಯಲು ಆತ ಶತ ಪ್ರಯತ್ನ ಮಾಡಿದ್ದಾನೆ. ಮಂಚಿಗೆ ಹಾಕಿದ್ದಾನೆ ; ಕವಣೆ ಬೀಸುತ್ತಾನೆ. ಆದರೂ ತನ್ನ Igo ವನ್ನೇ ಕವಡುವ ಧೈರ್ಯ ಒಂದು ಹಕ್ಕಿ ಮಾಡುತ್ತದೆ. ಅದು ಅವನ ಆತ್ಮಕ್ಕೆ ಸಂದ ಅಗೌರವ ; ಅಭಿಮಾನಕ್ಕೊದಗಿದ ಭಂಗ. ಅದಕ್ಕಾಗಿ ಮತ್ಸರ ; ಆದನ್ನು ಕೊನೆಗೊಳಿಸಬೇಕೆಂಬ ಹಟಕ್ಕೆ ಕಾರಣವಾಗುತ್ತದೆ.

ವಿಚಿತ್ರವೆಂದರೆ ಒಕ್ಕಲಿಗನ ಕೈಗೆ ಹಕ್ಕಿ ಅನಾಯಾಸವಾಗಿ ದೊರಕುತ್ತದೆ. ಅಥವಾ ಕಥೆಗಾರ ಹಾಗೆ ಮಾಡುತ್ತಾನೆ. ನಮ್ಮ ಕಥೆಗಾರ ಒಕ್ಕಲಿಗನ ಕೈಯಿಂದ ಹಕ್ಕಿ ದಕ್ಕಿಸಿಕೊಳ್ಳಲು ಮಾಡಿದ ಪ್ರಯತ್ನಗಳ ಬಗೆಗೆ ಯಾವ ವಿವರಣೆಯನ್ನೂ ನೀಡಿಲ್ಲ. ಇಲ್ಲವೆ ಒಕ್ಕಲಿಗನು ಅದನ್ನು ಮರುಳುಗೊಳಿಸಿ ಜಾಣತನದಿಂದ ಕೈವಶ ಮಾಡಿಕೊಂಡ ಬಗ್ಗೆಯೂ ವಿವರಿಸಿಲ್ಲ.[4] ಬಹುಶಃ ಕಥೆಯ ಕೇಂದ್ರದ ಕಡೆಗೆ ಆತನ ಒಲವಿರಬೇಕು. ಇಲ್ಲವೆ ತಾನು ಕೇಳಿಸಿಕೊಂಡ ಕಥೆ ಹರಿದು ಬಂದ ಸಂಪ್ರದಾಯ ಮಾರ್ಗವೆ ಹಾಗಿರಬೇಕು. ಹೀಗಾಗಿ ಈ ಭಾಗ ಮೊಟಕಾಗಿರುವುದಕ್ಕೆ ಖಚಿತ ಕಾರಣ ಕೊಡಲು ನಮ್ಮ ಊಹೆ ಸಾಲದು. ಆದರೂ ಕೊಟ್ಟ ಕಾರಣಗಳಲ್ಲಿ ಒಂದಾದರೂ ಭಾಗಿಯಾಗಿರಬೇಕು.

ಒಕ್ಕಲಿಗನ ಕೈಗೆ ಸಿಕ್ಕ ಹಕ್ಕಿ ಅನೇಕ ತೊಂದರೆಗಳಿಗೆ ಒಳಗಾಗುತ್ತದೆ. ಅಥವಾ ಆತ ಹಾಗೆ ಮಾಡುತ್ತಾನೆ. ಬಾರಿ ಬಾರಿಗೂ ಮುಖ ಭಂಗ-ಹಕ್ಕಿ ದಕ್ಕುತ್ತಲೇ ಹೋಗುತ್ತದೆ. ನಗುನಗುತ್ತ ಉತ್ತರಿಸುತ್ತದೆ ಆತನ ಆಶಾದಾಯಕ ಪ್ರಶ್ನೆಗೆ. ಕಡೆಗೆ 'ಒಕ್ಕಲಿಗ ಬಿಡಲಾರ ಹಕ್ಕಿ ಸಾಯುದು' ಎಂಬುದು ಮುನವರಿಕೆಯಾಯಿತೆಂದು ತೋರುತ್ತದೆ ; ಅಥವಾ ಕಥೆಯ ತಂತ್ರವೇ ಹಾಗಿದೆ. ಅದಕ್ಕಾಗಿ ಕಥೆ ಮುಕ್ತಾಯಗೊಳಿಸಲು ಕತ್ತಲು ಕೋಣೆಯಿಂದ ಹಕ್ಕಿಯನ್ನು ಕಥೆಗಾರನೆ ಹಾರಿಸುತ್ತಾನೆ. ಒಕ್ಕಲಿಗನ ಸ್ಥಿತಿ ಏನಾಯಿತು ? ಆತನ ಆತ್ಮಭಂಗದ ಕೊನೆಯ ಸ್ಥಿತಿ ಏನು ? ಮುಂತಾಗಿ ಅನೇಕ ಪ್ರಶ್ನೆಗಳು ಗಾಢ ಕತ್ತಲೆಯಲ್ಲಿ ಕೇಳುಗರ ತಲೆಯಲ್ಲಿ ಸುಳಿದಾಡುತ್ತಿರುತ್ತವೆ ; ಆದರೆ ಕಥೆಗಾರನ ಕಥೆ ಮೊದಲೇ ಮುಗಿದಿರುವುದರಿಂದ ಉತ್ತರದ ಪ್ರಶ್ನೆಯೇ ಇರುವುದಿಲ್ಲ.

---

4. ಸಿಂಪಿಯವರ ಪಾಠದಲ್ಲಿ ಒಕ್ಕಲಿಗನು ಹಕ್ಕಿಯನ್ನು ಹಿಡಿಯಲು ಮೆಲ್ಲನೆ ಹೋಗಿ ಗಪ್ಪನೆ ಹಿಡಿದ—ಎಂದು ವಿವರಿಸಲಾಗಿದೆ.

ಇಲ್ಲಿ ಮುಖ್ಯವಾಗಿ ಎರಡು ಶಕ್ತಿಗಳ ನಡುವೆ ಪರಸ್ಪರ ಘರ್ಷಣೆ ನಡೆದಿದೆ. ಈ ವಿರಸ ಹೇಗೆ ಉಂಟಾಯಿತು ? ಏಕೆ ಉಂಟಾಯಿತು ?

—ತನ್ನ ಬದುಕಿನ ಪೋಷಣೆಗಾಗಿ ಒಕ್ಕಲಿಗ ಬೆಳೆ ಬೆಳೆಸಿದ್ದಾನೆ. ಅದು ತನ್ನ ಆಹಾರ ಅದರಿಂದಲೆ ಅವನ ಜೀವನ ಸಾಗಬೇಕು. ಇಷ್ಟು ಬೆಳೆ ಬರಬೇಕಾದರೆ ಆತ ತಕ್ಕಮಟ್ಟಿನ ಪ್ರಯತ್ನ ಪಟ್ಟಿರಬೇಕು. ಹೊಲ ಉತ್ತಬೇಕು ಬಿತ್ತಬೇಕು. ಬೆಳೆ ಸಸಿಯಿಂದ ಕಾಯಾಗುವವರೆಗೆ ಕಾಯಬೇಕು. ಹೀಗೆ ಇನ್ನೂ ಏನೇನೋ ನಾನಾ ರೀತಿಯ ಪೋಷಣೆ ಕೊಟ್ಟು ಬೆಳೆ ಮನೆ ಸೇರುವವರೆಗೆ ಶ್ರಮವಹಿಸಬೇಕು. ಅದು ಅವನ ಧರ್ಮ ; ಕರ್ತವ್ಯ.

—ಹಕ್ಕಿಗೂ ಜೀವವಿದೆ ; ಅದೂ ಬದುಕಬೇಕು. ಜೋಳ ಅದರ ಆಹಾರ ಗಳಲ್ಲಿ ಒಂದು ; ಅದನ್ನು ತಿನ್ನುವ ಹಕ್ಕು ಹಕ್ಕಿಗಿದೆ. ಅದು ತನ್ನ ಆಹಾರಕ್ಕಾಗಿ ಅಲ್ಲಿಗೆ ಬಂದಿದೆ ; ಜೋಳ ತಿನ್ನುತ್ತಿದೆ.

ತಾನು ಪರಿಶ್ರಮವಹಿಸಿ ತನಗಾಗಿ ಮಾಡಿಕೊಂಡ ಆಶ್ರಯ ಹಾಳಾಗುತ್ತಿರು ವುದನ್ನು ಮನುಷ್ಯ ಸಹಿಸಲಾರ. ಆತ ಕವಣೆ ಬೀಸುತ್ತಾನೆ ; ತನ್ನದನ್ನು ದಕ್ಕಿಸಿ ಕೊಳ್ಳಲು ಹವಣಿಸುತ್ತಾನೆ. ಹಕ್ಕಿ ತನ್ನ ಇಚ್ಛೆಯಂತೆ ಮೇಯುತ್ತಿದೆ ; ಅದು ಕಿರಿಕಿರಿಗೋಗಾಯಿತು. ತನ್ನಮೇಲೆ ದಬ್ಬಾಳಿಕೆ ನಡೆಯಿತು ; ಎದುರಿಸಿತು. ಒಕ್ಕಲಿಗ ಬಿಡಲಿಲ್ಲ ; ಆತ ತನ್ನದನ್ನು ಹಾಳು ಮಾಡಿಕೊಳ್ಳುವ ಮನಸ್ಸು ಮಾಡ ಲಿಲ್ಲ. ರೋಷ ಉಕ್ಕಿತು ; ಹಕ್ಕಿಯನ್ನು ಹಿಡಿದ. ಅದನ್ನು ನೀರಿನಲ್ಲಿ ಮುಳುಗಿಸಿ ತನಗೊದಗಿದ ಕಂಟಕವನ್ನು ಕೊನೆಗೊಳಿಸಬೇಕೆಂದ. ಹಕ್ಕಿಗೂ ಜೀವವಿದೆ ; ಸ್ವತಂತ್ರ ರಕ್ಷಣೆ ಅದೂ ಬಯಸುತ್ತದೆ. ಅದಕ್ಕೂ ರೋಷವುಂಟು ; ಎದುರಾಳಿಯನ್ನು ಅಣಕಿಸುತ್ತದೆ. ದ್ವಂದ್ವಯುದ್ಧ ಬಿರುಸಾಗುತ್ತದೆ. ಒಂದು ವ್ಯವಸ್ಥೆ ಇನ್ನೊಂದು ವ್ಯವಸ್ಥೆಯೊಳಗಿನ ವಿರಸದ ತೀವ್ರ ಹೋರಾಟ ; ತಾನೇನೂ ಕಡಿಮೆಯಲ್ಲವೆಂಬ ತೋರಾಟ. ಒಂದನ್ನೊಂದು ಅಣಕಿಸುತ್ತವೆ ; ತೊಂದರೆ ಕೊಡುತ್ತವೆ. ಸಮಾಜ ದಲ್ಲಿ ಇಂಥ ದ್ವಂದ್ವ ವಿರಸ ಯಾವ ರೀತಿ ಒಳಗೊಳಗೇ ಕಾವೇರಿ ಬೆಳೆಯುತ್ತ ಹೋಗುತ್ತದೆ ಎಂಬುದರ ಸೂಕ್ಷ್ಮ ಎಳೆ ಇಲ್ಲಿ ಕಾಣಿಸುತ್ತದೆ. ಇದು ಒಂದು ರೀತಿಯಲ್ಲಿ ಅಂತ್ಯವಾಗದ, ದಣಿವರಿಯದ, ಸೋಲಪ್ಪದ ವಿರಸ ; ಘರ್ಷಣೆ. ಕಡೆಗೆ ವಿರಸದಲ್ಲೇ ಅಂತ್ಯವಾಗಬಹುದು. 'ಹಕ್ಕಿ ಸಾಯಲಿಲ್ಲ' ಒಕ್ಕಲಿಗನ ಇಚ್ಛೆ ಪೂರೈಸಲಿಲ್ಲ. ಇದರಲ್ಲಿ ಯಾರ ತಪ್ಪು ಇದ್ದಂತಿಲ್ಲ. ಜೀವಿಗಳಿಗಿರುವ ನೈಸರ್ಗಿಕ ಹಕ್ಕು ಈ ಸೆಣೆಸಾಟಕ್ಕೆ ಎಡೆಮಾಡಿಡೆ. ಅದಕ್ಕಾಗಿಯೇ ಏನೋ ನಾವೆಷ್ಟು ಸೌಹಾರ್ದತೆ ಯಿಂದಿದ್ದರೂ ಸಹಜತೆಯೇ ಸಮರಕ್ಕೆ ಕಾರಣವಾಗಬಲ್ಲುದಾಗುತ್ತದೆ. ಶಾಂತಿ ಜೀವಕೋಟಿ ಬಯಸುವ ಇಚ್ಛೆ. ನಿಸರ್ಗದ ನಿಯಮವೇ ಸಂಕೀರ್ಣ. ವಿರಸ ಅಲ್ಲಿ

ಅನಿವಾರ್ಯದ ಹುಟ್ಟು ಪಡೆಯುತ್ತದೆ. ವಿರಸ-ಶಾಂತಿಗಳ ತಿಕ್ಕಾಟ ; ಇದು ಕೊನೆಯಾಗದ ಮಾತು, ಸೋಲೊಪ್ಪದ ಮಾತು.

ಇದೊಂದು ಸಾಮಾನ್ಯ ಜನಪದ ಕಥೆಯಾದರೂ ತನ್ನ ಒಡಲಲ್ಲಿ ಅನೇಕ ವಿಷಯಗಳನ್ನು ಗರ್ಭೀಕರಿಸಿಕೊಂಡಿರುವಂತೆ ತೋರುತ್ತದೆ. ಆದುದರಿಂದ ಕಥೆ ಸಂಕೇತಿಸುತ್ತಿರುವ ಅಂತಹ ಒಂದೆರಡು ಅಂಶಗಳನ್ನು ನೋಡೋಣ :

ಜೋಳದ ಹೊಲ-ಪ್ರಪಂಚವನ್ನು ಸಂಕೇತಿಸುತ್ತದೆ. ಪ್ರಪಂಚದಲ್ಲಿ ಮುಖ್ಯವಾದ ವಸ್ತು ಜೀವಿ. ಇದನ್ನು ಹಕ್ಕಿ ಹಾಗು ಬೆಳೆದು ನಿಂತ ಜೋಳ ಪ್ರತಿನಿಧಿಸುತ್ತಿವೆ. ಈ ಪ್ರಪಂಚವನ್ನು ನಿಯಂತ್ರಿಸುವ ಒಂದು ಶಕ್ತಿ-ಸಾಮಾನ್ಯ ನಂಬುಗೆಯಂತೆ ವಿಧಿ. ಹೊಲದಲ್ಲಿ ಮಂಚಿಗೆ ಹಾಕಿ ಕವಣೆ ಬೀಸುತ್ತಿರುವ ಒಕ್ಕಲಿಗ ವಿಧಿಯನ್ನು ಪ್ರತಿನಿಧಿಸುತ್ತಿದ್ದಾನೆ. ಒಕ್ಕಲಿಗನನ್ನು ನಾವು ವಿಧಿಯೆಂದು ಗ್ರಹಿಸಿದರೆ, ನಮ್ಮ ಕಥೆಗಾರನ ಹೇಳಿಕೆಯಂತೆ ಅದೂ ಒಂದು ಶಕ್ತಿಯ ಸಂಜ್ಞೆಯ ಮೇರೆಗೆ ವರ್ತಿಸುತ್ತದೆ ಎಂಬ ಅಂಶವನ್ನು ಗ್ರಹಿಸಲು ಕಾರಣವಾಗುತ್ತದೆ.—ಒಕ್ಕಲಿಗ ಪರಮಾತ್ಮನ ಆದೇಶದಂತೆ ವರ್ತಿಸುವದನ್ನು ಕಾಣುತ್ತೇವೆ. ವಿಧಿ ಒಳ್ಳೆಯದಕ್ಕೆ ಒಳ್ಳೆಯದನ್ನು ಕೆಟ್ಟದಕ್ಕೆ ಕೆಟ್ಟದನ್ನು ಗೈಯ್ಯುವ ಒಂದು ವ್ಯವಸ್ಥೆಯಂತೆ ನಮ್ಮ ಕಲ್ಪನೆ ಇದೆ. ಬೆಳೆ-ತನ್ನಷ್ಟಕ್ಕೆ ತಾನು ಅಭಿವೃದ್ಧಿ ಹೊಂದುತ್ತಿರುವ-ಸಾತ್ವಿಕ ಜೀವಿ-ಎಂದು ಬಗೆದರೆ, ಅದನ್ನು ಹಾಳುಮಾಡುವ ದುಷ್ಟಶಕ್ತಿಯಾಗಿ ಹಕ್ಕಿ ಕಾಣಿಸುತ್ತದೆ. ಈ ಕಂಟಕವನ್ನು ದಮನ ಮಾಡಲೆಂದೇ ಒಕ್ಕಲಿಗ ಕವಣೆ ಬೀಸುತ್ತಿದ್ದಾನೆ. ವಿಧಿಯು ಇಚ್ಛೆಯಂತೆ ದುಷ್ಟಶಕ್ತಿಯನ್ನು ಸಂಪೂರ್ಣ ಇಲ್ಲವಾಗಿಸಬೇಕೆಂಬ ಹಂಬಲದ ಅನೇಕ ಯತ್ನಗಳು ನಡೆದರೂ ಅದು ಹೇಗೆ ವಿಧಿಗೂ ಮೀರಿ ಉಳಿದುಕೊಳ್ಳುತ್ತದೆ ಎಂಬುದು ನಮ್ಮ ಕಣ್ಣ ಮುಂದೆ ನಡೆಯುತ್ತದೆ. ಅಂದರೆ ನಿರಂತರವಾಗಿ ದುಷ್ಟಶಕ್ತಿ ಇದ್ದೇ ಇರುತ್ತದೆ. ವಿಧಿ ಅದನ್ನು ಮೇಲಿಂದ ಮೇಲೆ ದಮನ ಮಾಡುವ ಪ್ರಯತ್ನದಲ್ಲಿರುತ್ತದೆ. ಒಳ್ಳೆಯದಕ್ಕೆ ಕೆಟ್ಟದರ ಕಂಟಕ ತಪ್ಪಿಸುವಲ್ಲಿ ವಿಧಿಯೂ ಸೋಲುತ್ತಾನೆ. ಕಂಟಕದ ನಿರಂತರ ಕ್ರಿಯೆಗೆ ಉತ್ತೇಜನವಿಲ್ಲ, ಅದು ಆಗಾಗ ದಮನವಾಗುತ್ತಿದ್ದರೂ ಅದರ ಅಂಶ ಸಂಪೂರ್ಣ ಕೊನೆಗೊಳ್ಳುವುದಿಲ್ಲವೆಂಬುದು ಇಲ್ಲಿಯ ಮೊದಲ ಪ್ರಯತ್ನದ ಫಲವಾಗಿ ದೊರೆತ ಒಂದು ಸಾಂಕೇತಿಕ ಅರ್ಥ.

ಈಗ ಒಕ್ಕಲಿಗ-ವಿಧಿ ಎಂದು, ಹಕ್ಕಿ-ಜೀವಿಯೆಂದು, ಉಳಿದ ಪರಿಸರ ಕೇವಲ ಪ್ರಪಂಚವೆಂದು ಗ್ರಹಿಸೋಣ. ನಮ್ಮ ಕಥೆಗಾರ ಹಕ್ಕಿಯನ್ನು ಒಕ್ಕಲಿಗನ ಕೈಗೆ ಅನಾಯಾಸವಾಗಿ ಸಿಕ್ಕಿಸುವಲ್ಲಿ 'ವಿಧಿಯಿಂದ ನಾವು ದಕ್ಕಿಸಿಕೊಳ್ಳಲು ಸಾಧ್ಯವೇ ಇಲ್ಲ' ಎಂಬ ಸಾಮಾನ್ಯ ಮನೋಭಾವ ಕಂಡು ಬರುತ್ತದೆ. ಏಕೆಂದರೆ ನಾವು ಕುಣಿಯುತ್ತಿರುವುದು ಹಕ್ಕಿಯಂತೆ ವಿಧಿಯ ಆಧೀನದಲ್ಲಿ. ಆದರೂ ಜೀವಿಯು ವಿಧಿಯ

ಕೋಟಲೆಗಳಿಂದ ಪಾರಾಗಿ ಹೇಗೆ ವಿಧಿಯನ್ನೇ ಅಣಕಿಸಬಲ್ಲುದು ಎಂಬುದಕ್ಕೆ ಇದೊಂದು ಒಳ್ಳೆಯ ನಿದರ್ಶನ. ಹಕ್ಕಿ (ಜೀವಿ)ಯನ್ನು ನಾಶಗೊಳಿಸಬೇಕೆಂಬ ವಿಧಿಯ ಯತ್ನಗಳೆಲ್ಲ ವಿಫಲವಾಗುತ್ತವೆ. ಅದು ಒಡ್ಡಿದ ಅಗ್ನಿಪರೀಕ್ಷೆಗಳಲ್ಲೆಲ್ಲ ಯಶಸ್ವಿಯಾಗಿ ಜೀವಿ ಹಿಂದಿರುಗುತ್ತದೆ. ಬಾವಿಯಲ್ಲಿ ಹಾಕುವುದು, ಕಟ್ಟಿಗೆಯಲ್ಲಿ ತುಳಿಯುವುದು, ಗಾಣಿಗನ ಗಾಣದಲ್ಲಿ ಅರೆಯುವುದು, ನಿಗಿನಿಗಿ ಬೆಂಕಿಯಲ್ಲಿ ಸುಡುವುದು, ಕತ್ತಲೆಯ ಮನೆಯಲ್ಲಿ ಕಾದಿಡುವುದು–ಇಷ್ಟಾದರೂ ಹಕ್ಕಿ ಎಷ್ಟೊಂದು ಸಮಾಧಾನದಿಂದ ಉತ್ತರ ಕೊಡುತ್ತದೆ ; 'ಸತ್ತಿಲ್ಲ ಕೆಟ್ಟಿಲ್ಲ'ಎಂದು ನಾವು ಪ್ರಪಂಚದಲ್ಲಿ ದುಃಖಿಗಳಾಗಿದ್ದು, ವಿಧಿಯ ಕೋಟಲೆಗಳನ್ನು ಎದುರಿಸಿ, ಅನೇಕ ತೊಂದರೆಗಳನ್ನು ಸಹನೆಯಿಂದ ಸ್ವೀಕರಿಸಿ, ಅದರಲ್ಲಿ ಒಳ್ಳೆಯದನ್ನು ಬಿಗಿದು ನಗುನಗುತ್ತ ಇರುವ ರೀತಿ ಅನುಕರಣೀಯವಾಗಿದೆ. ಜೀವಿಗಳಿಗಿರುವ ಅನಿವಾರ್ಯವಾದ ತೊಡಕನ್ನು ತೀರ ಸರಳವಾಗಿ ಬಿಡಿಸಿ ತೋರಿಸಿದಂತಿದೆ.

ನಾವು ಇನ್ನೊಂದು ರೀತಿಯ ಸಾಂಕೇತಿಕ ವಿವರಣೆಯತ್ತ ಹಣಿಕಿ ನೋಡೋಣ. ಒಕ್ಕಲಿಗನನ್ನು ಒಬ್ಬ ಪ್ರಪಂಚ ಜೀವಿಗಳ ಸರ್ವತ್ರ ಸಂಕೇತವಾಗಿ ಪ್ರತಿನಿಧಿಸಿದರೆ, ಆತನ ಹೊಲ, ಬೆಳೆ, ಮಂಚಿಗೆ, ಕವಣೆ ಕಲ್ಲು ಬೀಸುವುದು ಇತ್ಯಾದಿಗಳೆಲ್ಲ ಪ್ರಾಪಂಚಿಕ ಜೀವನವನ್ನು ಪ್ರತಿನಿಧಿಸುತ್ತವೆ. ಹಕ್ಕಿ ಆತನ ಜೀವಾತ್ಮ ಸ್ವರೂಪ, ಆದಿಮಾನವನ ಒಂದು ಹಂತದ ಕಲ್ಪನೆಯಲ್ಲಿ ಜೀವವು ಹಾರಾಡಬಲ್ಲ ಒಂದು ಶಕ್ತಿ.[5] ಅದು ಚಿರಂತನವಾದುದು ; ಯಾವ ಕೋಟಲೆಗಳಿಗೂ ಸಿಕ್ಕದು–ಎಂದು ನಂಬಿದ್ದರು. ವಿಧಿಯ ನಿಯಮದಂತೆ ಜೀವವು ಹಲವು ದಿನ ಈ ಪ್ರಪಂಚದಲ್ಲಿ

---

5 Often the soul is conceived as a bird ready to take flight......the Borrors of Brafil family that the human soul has the shape of a bird, and passes in that shape out of the body in dreams — (33-34). ......Others are of the opinion that it does so in the form of a fly. Hence they make food ready to induce the absent soul to come back and the first fly that settles on the food is regarded as the returning truant. But in native poetry and popular expressions there are traces of the belief that the soul quits the body in the form of a bird — (36).

—The Golden Bough : A study in Magic and Religion. Part-II, Tabu and the Perils of the soul, (IIIrd Ed. 1976) By—Sir, James George Frazer.

ಬಂದಿದ್ದು, ಪುನಃ ಬಿಡುಗಡೆ ಹೊಂದುವಂತಹದು. ಜೀವಕ್ಕೆ ದೇಹದಲ್ಲಿ ಬಂದಿರುವದೇ ಒಂದು ಬಂಧನ. ಒಕ್ಕಲಿಗನ ಕೈಗೆ ಹಕ್ಕಿ ಅನಾಯಾಸವಾಗಿ ಸಿಕ್ಕು ನಾನಾ ಪೀಡೆಗಳಿಗೀಡಾಗುತ್ತದೆ. ಆದರೆ ಅದರಿಂದ ಯಾವುದೇ ಪರಿಣಾಮ ಹೊಂದದೆ, ನಗುನಗುತ್ತ ಉಲ್ಲಾಸದಿಂದ ಜಾರಿಕೊಳ್ಳುತ್ತದೆ. ಆಯಾಸ ಕಾಣಿಸುವುದು ಒಕ್ಕಲಿಗನಲ್ಲಿ ಮಾತ್ರ. ಜೀವವೂ ವಿಧಿಯ ಆದೇಶದ ಮೇರೆಗೆ ದೇಹದ ಬಂಧನದಲ್ಲುಳಿಯುತ್ತದೆ. ಜೀವಿಗೆ ಇದೊಂದು ಅನಿವಾರ್ಯವಾದ ಪ್ರಸಂಗ. ಅನೇಕ ತೊಂದರೆಗಳನ್ನು ಎದುರಿಸಬೇಕಾಗಿ ಬರುತ್ತದೆ. ಆದರೆ 'ದೇಹ ದಣಿಯುವುದೇ ಹೊರತು ಜೀವ ದಣಿಯದು'. ಒಕ್ಕಲಿಗನ ಕೈಗೆ ಹಕ್ಕಿ ಸಿಕ್ಕು ಬಂಧನಕ್ಕೀಡಾಯಿತು. ಆದರೆ ಹಕ್ಕಿ ಎಷ್ಟೊಂದು ನಿರ್ಲಿಪ್ತವಾಗಿತ್ತು ಎಂಬುದು ಅದರ ಉತ್ತರಗಳಿಂದ ತಿಳಿದು ಬರುತ್ತದೆ. ಕಡೆಗೆ ಒಕ್ಕಲಿಗನಿಂದ ಹಕ್ಕಿ ನಿರಾಯಾಸವಾಗಿ ಹಾರಿ ಹೋಯಿತು. ಅದರಂತೆ ಜೀವವೂ ಹಲವು ದಿನ ಈ ದೇಹದಲ್ಲಿದ್ದು ಕಡೆಗೆ ತನಗೇನೂ ಸಂಬಂಧವಿಲ್ಲದಂತೆ ನಿರ್ಲಿಪ್ತವಾಗಿ ಹಾರಿ ಹೋಗುವಂತಹದು.

ಅನೇಕ ಸಲ ಹೊಲವನ್ನು ದೇಹಕ್ಕೆ ಸಂಕೇತವಾಗಿ ಬಳಸುತ್ತೇವೆ. ಶಿವ–ಪಾರ್ವತಿಯ ಮಾತುಗಳು—ಗುರು ಮಂತ್ರಗಳಾಗಿ—ಹೊಲಕ್ಕೆ ಹಾಕಬೇಕಾದ ಗೊಬ್ಬರವನ್ನು ಸಂಕೇತಿಸುತ್ತವೆ. ಹಾಗೆ ತಿಳಿದರೆ ಒಕ್ಕಲಿಗ—ಜೀವಾತ್ಮನಾಗುತ್ತಾನೆ. ಕಂಟಕವನ್ನು ತಂದೊಡ್ಡುವ ಹಕ್ಕಿಗಳು—ಚಂಚಲ ಸ್ವಭಾವ, ಅಷ್ಟಮದಗಳೇ ಮೊದಲಾಗಿ ಅನೇಕ ವಿಷಯಗಳನ್ನು ಸಂಕೇತಿಸುತ್ತವೆ. ಈ ವಿಷಯಗಳೆಂಬ ಹಕ್ಕಿಗಳನ್ನು ಹೊಡೆಯಲು ಪಾರಮಾರ್ಥಿಕ ಮಾರ್ಗವೆಂಬ ಮಂಚಿಗೆಯನ್ನೇರಿ. ಕವಣೆಯಲ್ಲಿ ಕಲ್ಲಿಟ್ಟು ಬೀಸುವುದು—ಪ್ರಾರ್ಥನೆ ಮುಂತಾಗಿ ಸದಾಚಾರಗಳನ್ನು ಸಂಜ್ಞಿಸುತ್ತದೆ.[6]

ಹಕ್ಕಿಗಳನ್ನು ಓಡಿಸಲು ಕವಣೆ ಬೀಸಿ ಬೀಸಿ ದಣಿಯುತ್ತಾನೆ ತಾಪಕ್ಕೊಳಗಾಗಿ ರೋದಿಸುತ್ತಾನೆ. ಜಗದ ಜೀವಿಗಳ ಉದ್ಧಾರಕ ಶಿವ, ಸನ್ಯಾಸ ಸ್ವೀಕರಿಸಲು ಹೇಳುತ್ತಾನೆ. ತಲೆ ಬೋಳಿಸಿ ಮಂಚಿಗೆಯನ್ನೇರಿ ಕುಳಿತರೆ ಹಕ್ಕಿಗಳ ಕಾಟ ತಪ್ಪುತ್ತದೆಂಬುದು ಅವರ ಸಹಜ ಲೆಕ್ಕಾಚಾರ. ಇಲ್ಲಿ ನಾವು ಸನ್ಯಾಸ ಸ್ವೀಕರಿಸಿ ಗುಡ್ಡ ಹತ್ತಿ ಕುಳಿತರೆ ವಿಷಯಗಳ ಕಾಟ ತಪ್ಪುತ್ತದೆಂಬ ಸಾಮಾನ್ಯ ತಿಳುವಳಿಕೆಯನ್ನೇ

6 "ತನುವ ತೋಂಟವ ಮಾಡಿ"—ಪ್ರಭುದೇವರ ಒಂದು ವಚನದಿಂದ.
"ಚಂಚಲವೆಂಬ ಹಕ್ಕಿಯನ್ನು ಓಡಿಸಿರಯ್ಯ..."—ಕನಕದಾಸರ ಕೀರ್ತನೆಯೊಂದರಿಂದ.

"ಹಸ ಮಾಡರಿ ಭವ ಎಂಬೊ ಹೊಲವ

....
ಗುರುಮಂತ್ರವೆಂಬ ಗೊಬ್ಬರ ಹರವು
ಅಷ್ಟಮದಗಳ ಹಕ್ಕಿಯ ಹೊಡಿರಿಬೊ"—ಕಲಹಾಳ ಹನುಮಪ್ಪ ಕವಿಯ ಭಜನೆ ಹಾಡಿನಿಂದ.

ಗ್ರಹಿಸೋಣ. ತಲೆ ಬೋಳಿಸಿ ಸುಣ್ಣ (ಬೂದಿ, ವಿಭೂತಿ) ಬಳಿದುಕೊಳ್ಳುವುದು ಸನ್ಯಾಸಿ ಲಾಂಛನ. ಸರಿ ಸನ್ಯಾಸ ಸ್ವೀಕರಿಸಿ ಗಂಡ್ಲ ಹತ್ತಿ ಕುಳಿತರೆ ಎಲ್ಲಾ ವಿಷಯಂಗಳು ಹಾರಿಹೋದವು. ಪ್ರಾಪಂಚಿಕ ಪೀಡೆಗಳಿಂದ ದೂರಾದ. ಆದರೆ ಕಾಮವನ್ನು ಸಂಕೇತಿಸುವ ಹೆಣ್ಣು–ಗಂಡುಗಳೆಂಬ ಎರಡು ಹಕ್ಕಿಗಳು ಮಾತ್ರ ಸದಾ ಅವನನ್ನು ಬೆಂಬಿಡಿದು ಕಾಡುತ್ತವೆ. ಎಲ್ಲವನ್ನು ಗೆದ್ದರೂ ಕಾಮದ ಕಾಟದಿಂದ ತಪ್ಪಿಸಿಕೊಳ್ಳುವುದು ತುಂಬಾ ದುಸ್ತರ. ಅದು ನೀರಿನಲ್ಲಿ ನೆನೆಯದು, ಬಂಧನದಲ್ಲಿ ಸಿಕ್ಕಿಕೊಳ್ಳದು, ತುಳಿತದಲ್ಲಿ ಸಾಯದು, ಅರೆದರೆ ಪುಡಿಯಾಗದು, ಸುಟ್ಟರೆ ಸುಡದು, ಕಡೆಗೆ ಕಾಮದ ಬಾಧೆಯಿಂದ ಯಾರಿಗೂ ತಪ್ಪಿಸಿಕೊಳ್ಳಲು ಆಗದು—ಎಂಬಂತಹ ಸಾಮಾನ್ಯ ನಿಯಮ ಇಲ್ಲಿದೆ. ಒಕ್ಕಲಿಗನ ಕೈಯಿಂದ ಕಠೋರಯಾತನೆಗಳಿಗೊಳಗಾದರೂ ದೂರಾಗದ ಹಕ್ಕಿ ಆತನ ಕೈಯಿಂದ ತಪ್ಪಿಸಿಕೊಂಡಿತು, ಮತ್ತೆ ಅವನ ತಲೆಯ ಮೇಲೆ ಬಂದು ಕುಳಿತುಕೊಳ್ಳುವುದು ಖಂಡಿತ.

ಇಲ್ಲಿಯವರೆಗೆ ಕಥೆಯ ಅಂಗಾಂಗದ ಪದರುಗಳನ್ನು ಮುಟ್ಟಿ ಮುಟ್ಟಿ ತೋರಿಸುವ ಒಂದು ಪ್ರಯತ್ನವನ್ನು ಇಲ್ಲಿ ಮಾಡಿದೆ. ಸಾಧ್ಯವಾದಲ್ಲಿ ಕೆಲವೊಂದು ವಿವರಗಳನ್ನು ಕೊಡಲಾಗಿದೆ. ಆದರೆ, ಅದು ಹಾಗೇಕೆ? ಅದರಿಂದೇನು ಪ್ರಯೋಜನ? ಅಷ್ಟೆಲ್ಲ ಇದರಲ್ಲಿದೆಯೆ? ಎಂದರೆ ನಾನು ಬಾಯಿ ಮುಚ್ಚಿ ಸುಮ್ಮನಾಗಬೇಕಾಗುತ್ತದೆ.

ಮೈಸೂರು ಮತ್ತು ಏಕೀಕೃತ ಕರ್ನಾಟಕದ ರಚನೆ 1937-1956*

ಎಸ್. ಚಂದ್ರಶೇಖರ್

ಈ ಶತಮಾನದ ಪೂರ್ವಾರ್ಧದಲ್ಲಿ ಸ್ವಾತಂತ್ರ್ಯ ಹೋರಾಟದ ಜೊತೆಗೇ ನಡೆದು, ಚಿಂತನಶೀಲರ ಗಮನ ಸೆಳೆದು ಯಶಸ್ವಿಯಾದದ್ದೆಂದರೆ ಭಾಷಾವಾರು ಪ್ರಾಂತ್ಯ ರಚನೆಗಾಗಿ ನಡೆದ ಚಳವಳಿ ಎನ್ನಬಹುದು.

ಇಂದಿನ ಕರ್ನಾಟಕದ, ವಿವಿಧ ಪ್ರಾಂತ್ಯಗಳಲ್ಲಿ ಚದುರಿಹೋಗಿದ್ದ ಕನ್ನಡ ಮಾತನಾಡುವ ಒಂದೆರಡು ಪ್ರದೇಶಗಳೂ, ಪ್ರತ್ಯೇಕವಾಗಿ ಧಾರವಾಡ ನಗರ ಏಕೀಕರಣದ ಬಗ್ಗೆ 20ನೇ ಶತಮಾನದ ಆದಿಯಲ್ಲೇ ಗಂಭೀರ ಚಿಂತನೆಯನ್ನು ಕಂಡದ್ದುಂಟು. ಆದರೆ ಈ ಸಮಸ್ಯೆಯನ್ನು ರಾಷ್ಟ್ರೀಯ ಚಳವಳಿಯ ಕಡೆ, ಜನ ಸಾಮಾನ್ಯರ ಗಮನ ಸೆಳೆದು, ಅವರ ಬೆಂಬಲವನ್ನು ಗಳಿಸಿಕೊಳ್ಳುವುದಕ್ಕಾಗಿ, ಒಂದು ಸಾಧನವನ್ನಾಗಿ ಉಪಯೋಗಿಸಿಕೊಂಡರೆಂದು ಹೇಳಬಹುದು. ಆದ್ದರಿಂದಲೇ ಸ್ವಾತಂತ್ರ್ಯಗಳಿಸಿಕೊಳ್ಳುವವರೆಗೂ, ಏಕೀಕರಣ ಚಳವಳಿಗೆ, ರಾಷ್ಟ್ರೀಯ ಚಳವಳಿಯ ನಾಯಕ ವರ್ಗ ಹೆಚ್ಚಿನ ಪ್ರಾಮುಖ್ಯತೆ ಕೊಡದೆ ಹೋಯಿತು. ಅಂದರೆ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಹಿಂದಿನ ಈ ನಾಯಕರು ಪ್ರಾಮುಖ್ಯತೆ ಕೊಟ್ಟರೆಂದಲ್ಲ. ಆ ವಿಷಯ ಇಲ್ಲಿ ಅಪ್ರಸ್ತುತ.

ಭಾರತದ ಬೇರೆಡೆಯಲ್ಲಿ ನಡೆಯುತ್ತಿದ್ದ ಏಕೀಕರಣ ಪ್ರಯತ್ನಗಳಿಗೆ ಮೈಸೂರ ಸಂಸ್ಥಾನದ ಜನತೆ ಪ್ರತಿಕ್ರಯಿಸದೆ ವಿಮುಖರಾಗಿದ್ದರು. ಮುಂಬಯಿ ಕರ್ನಾಟಕ ದಲ್ಲಿ ದಿನೇ ದಿನೇ ಈ ಪ್ರಯತ್ನಗಳು ಜನಪ್ರಿಯವಾಗುತ್ತಿದ್ದರೆ, ಮೈಸೂರು ಈ ಬಗ್ಗೆ ಮೌನವಾಗಿತ್ತಲ್ಲದೆ, ಪ್ರತಿಕ್ರಯಿಸಿದಾಗ, ಸೊಲ್ಲೆತ್ತಿದ ಬಹುಜನರು ಏಕೀಕರಣ ವನ್ನು ಬಲವಾಗಿ ವಿರೋಧಿಸಿದರು.

ಮೈಸೂರಿನ 'ಕರುಣಾಳು ಮಹಾರಾಜರು (benign ruler) ಕನ್ನಡ ಭಾಷೆ, ಸಾಹಿತ್ಯಗಳ ಬೆಳವಣಿಗೆಗೆ ಉದಾರ ಉತ್ತೇಜನ ಕೊಟ್ಟಿದ್ದರಿಂದ ಜನರು ಭಾಷಾವಾರು ಪ್ರಾಂತ ರಚನೆಗಾಗಿ 'ಚಳವಳಿ ಹೂಡಬೇಕಾದ ಅಗತ್ಯವಿರಲಿಲ್ಲ, ಆದ್ದರಿಂದಲೇ

---

* ಯು.ಜಿ.ಸಿ. ಆಶ್ರಯದಲ್ಲಿ ಮಾರ್ಚಿ 1983ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದವರು ಏರ್ಪಡಿಸಿದ್ದ ''ಕರ್ನಾಟಕ ಏಕೀಕರಣದ ಇತಿಹಾಸ ಮತ್ತು ಪ್ರಭಾವ" ಎನ್ನುವ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ.

ಮೈಸೂರಿಗರು ಮೌನವಾಗಿದ್ದರು ಎನ್ನುವುದು ಬಹುತೇಕ ಎಲ್ಲರ ಅಭಿಪ್ರಾಯ. ಆದರೆ ಇದು ಅರ್ಧಸತ್ಯವೆಂದು ಹೇಳಬಹುದು. ಮತ್ತು "ಮೈಸೂರಿನ ಬಹುಜನರು (Vast Section) ಏಕೀಕರಣಕ್ಕೆ ದೃಢ ಬೆಂಬಲ (Staunch Support) ಕೊಟ್ಟರು" ಎನ್ನುವ ಅಭಿಪ್ರಾಯವೂ ಸತ್ಯಕ್ಕೆ ದೂರವಾದುದು. ಹಾಗೆಯೇ[1] ಕನ್ನಡ ಸಾಹಿತ್ಯ ಪರಿಷತ್ತು ಮತ್ತು "ಬರಹಗಾರರು ಮತ್ತು ಪತ್ರಕರ್ತರು" ಏಕೀಕರಣಕ್ಕಾಗಿ ದುಡಿದರು ಎನ್ನುವ ಹೇಳಿಕೆಯನ್ನು ಮೈಸೂರಿನ ಸಂದರ್ಭದಲ್ಲಿ ಸಮರ್ಥಿಸುವುದು ಕಷ್ಟ.[2] ಬದಲಾಗಿ, ಏಕೀಕರಣದ ಬಗ್ಗೆ ಮಾತನಾಡಿದ ಮೈಸೂರಿನ ಬಹುಜನರು, ಆಗಿನ ರಾಜಕೀಯ ತುರ್ತು ಸಂದರ್ಭಕ್ಕನುಗುಣವಾಗಿ, ತಮ್ಮ ರಾಜಕೀಯ ಹಿತ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ನಿಲುವು ತೆಗೆದುಕೊಂಡರೆನ್ನಬಹುದು.

ಈ ಲೇಖನದಲ್ಲಿ ಕರ್ನಾಟಕ ಪ್ರಾಂತ್ಯ ರಚನೆಯ ವಿಷಯದಲ್ಲಿ ಮೈಸೂರಿಗರು ನಡೆದುಕೊಂಡ ರೀತಿಯ ಬಗ್ಗೆ, ಈ ನಡವಳಿಕೆಯ ಹಿಂದಿನ ಪ್ರೇರಣೆಗಳ ಬಗ್ಗೆ ಮತ್ತು ಅಂತಿಮವಾಗಿ ಏಕೀಕರಣಕ್ಕೆ ಅನುವುಮಾಡಿಕೊಟ್ಟ ಸಂದರ್ಭಗಳನ್ನು ಕುರಿತು ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ಸ್ಥಳ ಧಾರವಾಡ; ಸಮಯ ಈ ಶತಮಾನದ ಮೊದಲ ದಶಕ. ಕನ್ನಡ ಮಾತ ನಾಡುವ ಪ್ರದೇಶಗಳ ಏಕೀಕರಣದ ಭಾವನೆ, ಬಂಗಾಳ ವಿಭಜನೆಯನ್ನೂ ಪ್ರತಿಭಟಿಸಿ ನಡೆದ ಚಳವಳಿಯಿಂದ ಪ್ರೇರಿತವಾಗಿ, ಕೆಲವರಲ್ಲಿ ತಲೆ ಎತ್ತಿತು. ಕನ್ನಡ ಮಾತ ನಾಡುವ ಪ್ರಾಂತ್ಯಗಳಲ್ಲಿ ಅರ್ಧಕ್ಕೂ ಹೆಚ್ಚು ಭಾಗ ಮತ್ತು ಜನರಿದ್ದ, ಮಿಗಿಲಾಗಿ ಕನ್ನಡಿಗ ಮಹಾರಾಜರೇ ಆಳುತ್ತಿದ್ದ ಮೈಸೂರನ್ನು ಏಕೀಕರಣಕ್ಕೆ ದುಡಿಸಿಕೊಳ್ಳಲು ಸಹಜವಾಗಿಯೇ ಧಾರವಾಡದ ಆಲೂರ ವೆಂಕಟರಾಯರ ಉತ್ಸಾಹೀ ಬಳಗ ಪ್ರಯತ್ನಿಸಿತು. ಆದರೆ ಇದು ಅಷ್ಟಾಗಿ ಯಶಸ್ವಿಯಾಗಲಿಲ್ಲ. ಮೈಸೂರು ಸರ್ಕಾರ ಈ ಪ್ರಯತ್ನವನ್ನು 'ರಾಜಕೀಯ'ವೆಂದು ಹಳಿದು ವಿರೋಧಿಸಿದ್ದೇ ಅಲ್ಲದೆ, ಮೈಸೂರ ನಾಯಕರೂ ಇದಕ್ಕೆ ಬೆಂಬಲ ಕೊಡಲಿಲ್ಲ.[3]

ಸಾಹಿತ್ಯ ಪರಿಷತ್ತು ಮತ್ತು ಕೆ.ಪಿ ಸಿ.ಸಿ. 1920-1937

ನಾವು ಹಲವು ಬಾರಿ ಕನ್ನಡ ಸಾಹಿತ್ಯ ಪರಿಷತ್ತು 'ಏಕೀಕರಣಕ್ಕಾಗಿ ಹೋರಾ ಡಿತು' ಎನ್ನುವುದನ್ನು ಕೇಳಿದ್ದೇವೆ, ಕೇಳುತ್ತಿದ್ದೇವೆ ಮತ್ತು ಬಹಳಷ್ಟು ಜನ ನಂಬಿಯೂ ಆಗಿದೆ. ಪರಿಷತ್ತು ಕನ್ನಡ ಭಾಷೆ, ಸಾಹಿತ್ಯ (ಸಂಸ್ಕೃತ ಭಾಷೆ, ಸಾಹಿತ್ಯ ಕೂಡಾ)ಗಳ ಏಳಿಗೆಗೆ ದುಡಿದು ಪರೋಕ್ಷವಾಗಿ ಏಕೀಕರಣಕ್ಕೆ ಬೆಂಬಲವಾಯಿತೇ ವಿನಹ ತನ್ನ ಒಂದು ರೀತಿಯ ವಿಚಿತ್ರ ಸ್ವರೂಪ (Peculiar Composition) ಮತ್ತು ದ್ವಂದ್ವಗಳಿಂದಾಗಿ ಈ ವಿಷಯದಲ್ಲಿ ಕನಿಷ್ಟ 1950ರವರಿಗೂ ಅಧಿಕೃತವಾಗಿ ಒಂದು ಸ್ಪಷ್ಟ ತೀರ್ಮಾನ ತೆಗೆದುಕೊಳ್ಳಲಿಲ್ಲ ಎನ್ನುವುದು ಆಶ್ಚರ್ಯಕರವಾದರೂ

ನಿಜ. 1950ರಲ್ಲಿ ಮೊದಲ ಬಾರಿಗೆ ಪರಿಷತ್ತು ಎಲ್ಲ ಕನ್ನಡ ಪ್ರಾಂತ್ಯಗಳ ಏಕೀಕರಣದ ಪರವಾಗಿ ಸ್ಪಷ್ಟ ನಿರ್ಣಯ ತೆಗೆದುಕೊಂಡಿತು.[4]

ಪರಿಷತ್ತಿನಲ್ಲಿ, ಏಕೀಕರಣ ಒಂದು 'ರಾಜಕೀಯ ವಿಷಯ' ಎನ್ನುವ ನೆಪವೊಡ್ಡಿ ಚರ್ಚೆಗೆ ಅವಕಾಶವನ್ನೇ ನಿರಾಕರಿಸಿದ್ದುಂಟು.[6] ಈ ವಿಷಯದ ಬಗ್ಗೆ ಯಾರಾದರೂ ಮಾತನಾಡಿದರೆ ವಿರೋಧಿಸಿಯೇ ಮಾತನಾಡುತ್ತಿದ್ದರು.[7] ಹೋಂ ರೂಲ್ ಲೀಗ್ ಶಾಖೆ (1916) ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (1920)ಗಳ ರಚನೆ ಕನ್ನಡ ಪ್ರದೇಶಗಳಿಗೆಲ್ಲಾ ಒಂದೇ ಆಗಿದ್ದು, ಕರ್ನಾಟಕವನ್ನು ಇಡಿಯಾಗಿ ಗುರುತಿಸುವಲ್ಲಿ ಪ್ರಥಮ ಪ್ರಯತ್ನಗಳಾಗಿದ್ದವು ಎನ್ನುವುದು ನಿಜವಾದರೂ, ಈ ಸಂಘಟನೆಗಳ ಪ್ರಭಾವ ಅಂದಿನ ಮೈಸೂರಿನ ಮೇಲೆ ಅಲ್ಪವಾಗಿತ್ತೆನ್ನುವುದೂ ನಿಜವೇ. ವಿಗಿಲಾಗಿ ಕುತೂಹಲಕರ ಸಂಗತಿಯೆಂದರೆ, ಮೈಸೂರು ಮತ್ತು ಮುಂಬೈ ಕರ್ನಾಟಕದ ಕಾಂಗ್ರೆಸ್ಸಿಗರ ನಡುವಣ ಸಂಬಂಧವೂ ಅಷ್ಟೇನೂ ಅನ್ಯೋನ್ಯವಾಗಿರಲಿಲ್ಲವೆಂಬುದು. 'ಹಿಂದುಳಿದ ಮುಂಬೈ ಕನ್ನಡ ಪ್ರಾಂತ್ಯಕ್ಕಿಂತಲೂ, ಮೈಸೂರು ಕನ್ನಡ ಮಾತನಾಡುವ ದೊಡ್ಡ ಮಾದರಿ ಪ್ರಾಂತ್ಯವೆಂದೂ, ಕನ್ನಡ ಸಾಂಸ್ಕೃತಿಕ ಪ್ರಸ್ತಭೂಮಿ ತುಂಗಭದ್ರಾನದಿಯ ದಕ್ಷಿಣ (ಮೈಸೂರು ಸಂಸ್ಥಾನ) ದಲ್ಲಿದೆಯೆಂಬುದೂ ಮೈಸೂರಿಗರ ಅಭಿಪ್ರಾಯವಾಗಿತ್ತು.[8] 1937ರವರೆಗೆ ಈ ಪರಿಸ್ಥಿತಿಯಿದ್ದರೆ, 1937ರಲ್ಲಿ ಮೈಸೂರಿನ ಪ್ರಜಾಸಂಯುಕ್ತ ಪಕ್ಷ ಕಾಂಗ್ರೆಸ್ಸಿನಲ್ಲಿ ವಿಲೀನಗೊಂಡ ನಂತರ, ಮೈಸೂರಿಗರು ತಮ್ಮದೇ ಒಂದು ಕಾಂಗ್ರೆಸ್ ಸಮಿತಿ ರಚಿಸಿಕೊಂಡು ಕೆ.ಪಿ.ಸಿ.ಸಿ.ಯ ಸಂಬಂಧವನ್ನು (ಅಲ್ಪಸ್ವಲ್ಪ ಇದ್ದಿದ್ದರೆ) ಕಡಿದುಕೊಂಡರು.

ಸಹಜವಾಗಿಯೇ ಮುಂಬಯಿ ಕರ್ನಾಟಕದ ಏಕೀಕರಣ ವಾದಿಗಳು ಮೈಸೂರಿಗರ ಬಗ್ಗೆ ದುಗುಡಗೊಂಡರು. ಅವರು ಮೈಸೂರಿಗರ ಏಕೀಕರಣ ಬಗೆಗಿನ ನಿಲುವಿನ ವಿಷಯದಲ್ಲಿ ಸಂಶಯ ಪಟ್ಟರು. ಈ ಸಂಶಯ ಮೈಸೂರಿಗರು, ಅಖಿಲ ಭಾರತ ಕಾಂಗ್ರೆಸ್ ಸಮಿತಿಯೊಡನೆ ಸತತವಾಗಿ ಹೋರಾಡಿ ತಮ್ಮ ಸಮಿತಿಗೆ ಅಧಿಕೃತ ಮಾನ್ಯತೆ ಗಳಿಸಿಕೊಂಡುದರೊಂದಿಗೆ (1947-48) ಹೆಚ್ಚು ಬಲವಾಯಿತು.

ಮೈಸೂರು ರಾಜಕೀಯ - ಏಕೀಕರಣ ಪ್ರಯತ್ನ 1937-1948

1937ರ ವರೆಗೂ ಹೆಸರಿಸಬಹುದಾದ, ಮೈಸೂರಿಗರಾರೂ ಏಕೀಕರಣದ ಬಗ್ಗೆ ಪ್ರತಿಕ್ರಿಯಿಸಲಿಲ್ಲ. ಆದರೆ ಬ್ರಿಟಿಷ್ ಭಾರತದಲ್ಲಾದ ರಾಜಕೀಯ ಬೆಳವಣಿಗೆಗಳು, ಮೈಸೂರಿಗರ ಮೇಲೆ ಒತ್ತಡತಂದು ಅವರು ಮೌನ ಮುರಿಯುವಂತೆ ಪ್ರೇರೇಪಿಸಿರಬೇಕು. 1920 ರಿಂದಲೂ ಭಾಷಾವಾರು ಪ್ರಾಂತ್ಯ ರಚನೆಯನ್ನು ಬೆಂಬಲಿಸುತ್ತಿದ್ದ ರಾಷ್ಟ್ರೀಯ ಕಾಂಗ್ರೆಸ್, ಪ್ರಾಂತೀಯ ಸ್ವಾಯತ್ತತೆ (Provinicial autonomy) ವ್ಯವಸ್ಥೆಯ ರೀತ್ಯಾ ಹಲವಾರು ಬ್ರಿಟಿಷ್ ಭಾರತ ಪ್ರಾಂತ್ಯಗಳಲ್ಲಿ

ಸರ್ಕಾರ ರಚಿಸಿ, ರಾಜಕೀಯ ಅಧಿಕಾರ ಪಡೆದುಕೊಂಡಿತು. ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಡುತ್ತಿದ್ದ ಮೈಸೂರಿನ ಪ್ರಜಾ ಸಂಯುಕ್ತ ಪಕ್ಷದವರು ಕಾಂಗ್ರೆಸ್ ನೀತಿಯನ್ನನುಸರಿಸಿ ಜನಾನುರಾಗಿಗಳಾಗಲು ಉತ್ಸುಕರಾಗಿ, ಭಾಷಾವಾರು ಪ್ರಾಂತ್ಯ ರಚನೆ (ಏಕೀಕರಣ)ಯ ಪರವಾಗಿ ಒಂದು ನಿರ್ಣಯವನ್ನು 1937ರಲ್ಲಿ ಅಂಗೀಕರಿಸಿದರು. ಆದರೆ ಈ ಏಕೀಕರಣ ನಿರ್ಣಯ ಎಲ್ಲ ಕನ್ನಡ ಪ್ರಾಂತ್ಯಗಳನ್ನು ಒಳಗೊಂಡಂತೆಯೋ ಅಲ್ಲವೋ ಸ್ಪಷ್ಟವಾಗಿಲ್ಲ. ಇದೇ ಸಂದರ್ಭದಲ್ಲಿ ಏಕೀಕರಣ ಸಂಘವೊಂದು ಬೆಂಗಳೂರಿನಲ್ಲಿ ಸ್ಥಾಪಿತವಾದುದೂ ಅರ್ಥಪೂರ್ಣವಾಗಿದೆ. ಈ ಸಂಘ ಮೈಸೂರು ಪ್ರಾಂತ್ಯದೊಳಗೆ ಕೆಲಸಮಾಡದೆ, ಗಡಿಪ್ರದೇಶಗಳಲ್ಲಿ ಮಾತ್ರ ಕಾರ್ಯ ನಿರ್ವಹಿಸಿತು.[10] ಏನೇ ಆದರೂ, ಈ ನಿರ್ಣಯದ ಅಂಗೀಕಾರವೇ ಮೈಸೂರಿನಲ್ಲಿ ಚಳವಳಿಯ ಪ್ರಾರಂಭವೆಂದು ಹೇಳಲಾಗದು.

ಪ್ರಜಾ ಸಂಯುಕ್ತ ಪಕ್ಷವನ್ನು ವಿಲೀನಗೊಳಿಸಿಕೊಂಡ ಕಾಂಗ್ರೆಸ್ ಮೈಸೂರು ಸಂಸ್ಥಾನದಲ್ಲಿ ಒಂದು ಬಲಿಷ್ಟ ಸಂಘಟನೆಯಾದರೂ ಕರ್ನಾಟಕದ ಇತರ ಪ್ರಾಂತ್ಯಗಳಲ್ಲಿ ಸೇರುತ್ತಿದ್ದ ಹಲವಾರು ಏಕೀಕರಣ ಸಭೆಗಳ ಬಗ್ಗೆ ಚಕಾರವೆತ್ತುತ್ತಿರಲಿಲ್ಲ. ಗಮನಿಸತಕ್ಕ ಮತ್ತೊಂದು ಅಂಶವೆಂದರೆ, ಈ ಸಭೆಗಳು ಅಂಗೀಕರಿಸುತ್ತಿದ್ದ ಏಕೀಕರಣ ಠರಾವುಗಳು ಬ್ರಿಟಿಷ್ ಕನ್ನಡ ಪ್ರಾಂತ್ಯಗಳಿಗೆ ಸೀಮಿತಗೊಂಡಿರುತ್ತಿದ್ದವೇ ವಿನಹ ದೇಶೀರಾಜ್ಯ (Princely Stats) ಗಳನ್ನಲ್ಲ.[11]

ಎರಡನೆಯ ಬಾರಿಗೆ ಮೈಸೂರಿನ ಕೆಲವರು ಏಕೀಕರಣವನ್ನು ಬೆಂಬಲಿಸುವಂಥ ನಿಲುವು ತೆಗೆದುಕೊಂಡದ್ದು, ಬಹುತೇಕ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಪಕ್ಷ ತಾತ್ಕಾಲಿಕ ಸರ್ಕಾರಗಳನ್ನು ರಚಿಸಿದ ನಂತರವೇ (1946). ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಅಧಿಕಾರಾವಧಿ ಕೇವಲ ಬೆರಳೆಣಿಕೆಯ ದಿನಗಳಿಷ್ಟಿದ್ದು, ಆ ಸ್ಥಾನವನ್ನು ಕಾಂಗ್ರೆಸ್ ಪಡೆಯುತ್ತದೆಂದು ನಿಶ್ಚಯವಾದ ತರುವಾಯ. ಆದರೂ ಮೈಸೂರಿಗರು ಜವಾಬ್ದಾರಿ ಸರ್ಕಾರ ರಚಿಸಲು ಆಸ್ಪದವಿರದೆ. ರಾಜಶಾಹಿಯ ನಿರಂಕುಶ ಆಡಳಿತದಲ್ಲೇ ತೊಳಲಾಡಬೇಕಾಗಿದ್ದಿತು. ಸ್ವಾತಂತ್ರ್ಯಬಂದರೂ ರಾಜಶಾಹಿಯಿಂದ ಮುಕ್ತರಾಗುವ ಭರವಸೆ ಇವರಿಗೆ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಪ್ರಪ್ರಥಮ ಬಾರಿಗೆ ಮೈಸೂರು ಸಂಸ್ಥಾನದ ದಾವಣಗೆರೆಯಲ್ಲಿ 1946ರಲ್ಲಿ ಏಕೀಕರಣ ಸಭೆ ನಡೆದುದನ್ನು ನಾವು ಅರ್ಥಮಾಡಿಕೊಳ್ಳಬಹುದು. ಮೈಸೂರು ಕಾಂಗ್ರೆಸ್ಸಿಗರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಭಾವೀ ನಾಯಕರ ಬೆಂಬಲವನ್ನು, ಅದರಲ್ಲೂ ತಾತ್ಕಾಲಿಕ ಸರ್ಕಾರದಲ್ಲಿ ಮಂತ್ರಿಗಳಾಗಿದ್ದವರ ವರ್ಚಸ್ಸನ್ನು ಉಪಯೋಗಿಸಿಕೊಂಡು, ಜವಾಬ್ದಾರಿ ಸರ್ಕಾರವನ್ನಾದರೂ ಪಡೆಯಬಹುದೆಂದು, ಮುಂಬಯಿ ಕರ್ನಾಟಕದವರಿಗೆ ಪ್ರಿಯವಾಗಿದ್ದ ಏಕೀಕರಣವನ್ನು ಬೆಂಬಲಿಸಿದರೇನೋ ಎನ್ನಿಸುತ್ತದೆ. ಇದೇ ಸಂದರ್ಭದಲ್ಲಿ ಗಮನ ಸೆಳೆಯುವ ಮುಖ್ಯ ಅಂಶವೆಂದರೆ ಮೊದಲಬಾರಿಗೆ ಮೈಸೂರಿನ ಹಲವಾರು ಪ್ರಭಾವೀ ನಾಯಕರು ಏಕೀಕರಣ

ಸಭೆಯಲ್ಲಿ ಪಾಲ್ಗೊಂಡದ್ದು ಹಾಗೂ ಈ ರೀತಿಯ ಸಭೆಯನ್ನು ಮೈಸೂರು ಪ್ರಾಂತ್ಯದಲ್ಲಿ ಸಂಘಟಿಸಿದ್ದು ಅದೇ ರೀತಿ ಇಂಥ ಸಭೆ ಮೈಸೂರಿನಲ್ಲಿ ನಡೆದದ್ದು ಕೊನೆಯ ಬಾರಿಯೂ ಹೌದು.

ದಾವಣಗೆರೆಯ ಸಮ್ಮೇಳನಾಧ್ಯಕ್ಷರು ಮೈಸೂರಿಗರ ಈ ಉತ್ಸಾಹವನ್ನು ಗಮನಿಸದೇ ಹೋಗಲಿಲ್ಲ. ಅಧ್ಯಕ್ಷರು ಈ ಬಗ್ಗೆ ಮಾತನಾಡುತ್ತಾ "ಮೊದಲ ಬಾರಿಗೆ ಇಷ್ಟು ಜನ ಮೈಸೂರಿಗರು (So many People) ಮತ್ತು ಮುಂಬಯಿ ಕರ್ನಾಟಕದವರು ಒಟ್ಟಿಗೆ ಸೇರಿದ್ದಾರೆ" ಎಂದು ಅರ್ಥಗರ್ಭಿತವಾಗಿ ಹೇಳಿಯೂ ಬಿಟ್ಟರು. ಆದರೆ ಈ ಸಭೆ ಬ್ರಿಟಿಷ್ ಕರ್ನಾಟಕ ಪ್ರಾಂತ್ಯದ ಏಕೀಕರಣದ ಬಗ್ಗೆ ಮಾತ್ರ ನಿರ್ಣಯ ಅಂಗೀಕರಿಸಿದಾಗ ಮೈಸೂರಿಗರು ನಿರಾಶರಾದದ್ದೇ ಅಲ್ಲದೆ ಆಕ್ರೋಶಗೊಂಡರು. ಈ ಆಕ್ರೋಶವು, ಮೈಸೂರನ್ನು ಏಕೀಕರಣವಾಗಬೇಕಾದ ಪ್ರಾಂತ್ಯಕ್ಕೆ ಸೇರಿಸಲಿಲ್ಲ ಎಂಬ ಕಾರಣಕ್ಕಿಂತ, ದೇಶೀ ರಾಜ್ಯಗಳು, ಜವಾಬ್ದಾರಿ ಸರ್ಕಾರ ಪಡೆದುಕೊಂಡನಂತರ ಸೇರಿಕೊಳ್ಳಬಹುದೆಂದು ತೆಗೆದುಕೊಂಡ ನಿರ್ಣಯದಿಂದಾಗಿ ಎನಿಸುತ್ತದೆ. ಈ ಸಭೆಯಲ್ಲಿ ಹಾಜರಿದ್ದ ಕೆಂಗಲ್ ಹನುಮಂತಯ್ಯ ಮತ್ತು ಹೆಚ್. ಸಿ. ದಾಸಪ್ಪನವರು, ಈ ನಿಯಮವನ್ನೊಪ್ಪಿಕೊಂಡರೆ ಮತ್ತೆ ಮೈಸೂರಿಗರು ರಾಜರ ನಿರಂಕುಶ ಆಡಳಿತದಲ್ಲೇ ಉಳಿಯಬೇಕಾಗುತ್ತದೆ ಹಾಗೂ ಕೆ.ಪಿ.ಸಿ.ಸಿ. ಯವರು ಮೈಸೂರಿಗರ ಹೋರಾಟಕ್ಕೆ ಬೆಂಬಲಕೊಡುವುದಿಲ್ಲವೇನೋ ಎಂದು ಶಂಕಿಸಿ. ಈ ನಿಯಮದ ವಿರುದ್ಧ ಪ್ರತಿಭಟಿಸಿದರು ಕೂಡಾ. (ದಾಸಪ್ಪನವರು 1955ರಲ್ಲಿ ಏಕೀಕರಣವನ್ನು ಬಹಿರಂಗವಾಗಿಯೇ ವಿರೋಧಿಸಿದರು.) ಇವರನ್ನು ಸಮಾಧಾನಗೊಳಿಸಲು ಕೆ.ಪಿ.ಸಿ.ಸಿ. ಯವರು, ಮೈಸೂರಿಗರು ಜವಾಬ್ದಾರಿ ಸರ್ಕಾರಕ್ಕಾಗಿ ಮಾಡುವ ಹೋರಾಟಕ್ಕೆ ಬೆಂಬಲ ಕೊಡುವುದಾಗಿ ಆಶ್ವಾಸನೆಯನ್ನೂ ಕೊಡಬೇಕಾಯಿತು.[12]

ಮೈಸೂರು ಕಾಂಗ್ರೆಸ್ ಸರ್ಕಾರ ಮತ್ತು ಏಕೀಕರಣ. 1947-1952

ಉತ್ತರ ಕರ್ನಾಟಕದ ಜನತೆ ಏಕೀಕರಣ ಚಳವಳಿಯನ್ನು ದಿನೇ ದಿನೇ ಹೆಚ್ಚು ಕ್ರಿಯಾತ್ಮಕಗೊಳಿಸುತ್ತಾ ಹೋದರೆ, ಸ್ವಾತಂತ್ರ್ಯ ಬಂದರೂ ರಾಜಶಾಹಿಯ ಪಳೆಯುಳಿಕೆಯಾಗಿ, ದಿವಾನರನ್ನುಳಿಸಿಕೊಂಡು, ಜವಾಬ್ದಾರಿ ಸರ್ಕಾರ ರಚಿಸಿದ ಮೈಸೂರು ಕಾಂಗ್ರೆಸ್, ತದ್ವಿರುದ್ಧವಾಗಿ ಈ ಬಗ್ಗೆ ಪ್ರತಿಕ್ರಿಯಿಸಲೂ ಹೋಗದೆ ಮೌನವಹಿಸಿತು. ಹೊರ ಮೈಸೂರ ಕನ್ನಡಿಗರು. ಮೈಸೂರಿಗರ ಈ ಧೋರಣೆಯ ಬಗ್ಗೆ ವ್ಯಗ್ರರಾದರು. ಪ್ರತ್ಯೇಕ ಕಾಂಗ್ರೆಸ್ ಘಟಕದ ಮುಂದುವರಿಕೆಯೂ ಏಕೀಕರಣ ಪ್ರಯತ್ನಕ್ಕೆ ಒಂದು ಸವಾಲೆಂದೇ ಅವರು ಪರಿಗಣಿಸಿದರು.

ಕಾಂಗ್ರೆಸ್ ಮುನ್ನಿನಂತೆ ಅಧಿಕಾರದಿಂದ ಹೊರಗಿದ್ದ ಒಂದು ಪಕ್ಷವಾಗಿರದೆ ಸ್ವತಂತ್ರ ಭಾರತವನ್ನಾಳುತ್ತಿತ್ತು. ಅಧಿಕಾರಕ್ಕಾಗಿ ನಡೆಯುತ್ತಿದ್ದ ಮೈಸೂರು

ಕಾಂಗ್ರೆಸ್ಸಿಗರ ಒಳಜಗಳ ಅವರನ್ನು ಅಖಿಲ ಭಾರತ ಕಾಂಗ್ರೆಸ್ ವರಿಷ್ಠ ನಾಯಕತ್ವವನ್ನು ಹೆಚ್ಚು ಹೆಚ್ಚಾಗಿ ಆಶ್ರಯಿಸಲು ಹಚ್ಚಿತು. ಒಮ್ಮೆ ಭಾಷಾವಾರು ಪ್ರಾಂತ್ಯ ರಚನೆಯನ್ನು ಬೆಂಬಲಿಸಿದ ರಾಷ್ಟ್ರೀಯ ಕಾಂಗ್ರೆಸ್ಸು ಅಧಿಕಾರಕ್ಕೆ ಬಂದನಂತರ ನಿರುತ್ಸಾಹ ತಳೆದು ನಿಧಾನ ನೀತಿ (Soft peddle) ಯನ್ನನುಸರಿಸಲಾರಂಭಿಸಿತು.

ಏಕೀಕರಣದ ಬಗ್ಗೆ ಮುಂಬೈ ಮತ್ತು ಮದ್ರಾಸ್ ಪ್ರಾಂತ್ಯಗಳ ಕಾಂಗ್ರೆಸ್ ಘಟಕಗಳು ಮತ್ತು ಶಾಸನ ಸಭೆಗಳು, ಒಮ್ಮತದ ತೀರ್ಮಾನ ತೆಗೆದುಕೊಂಡು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದರೆ, ಮೈಸೂರಿನಲ್ಲಿ ಈ ಬಗ್ಗೆ ಅಂಥ ಚರ್ಚೆ ನಡೆಯಲಿಲ್ಲವೆಂದರೂ ತಪ್ಪಾಗದು. ಈ ವಿಷಯದಲ್ಲಿ ಮೈಸೂರಿಗರ ಧೋರಣೆಯನ್ನು ಈ ಮೌನ ಸ್ಪಷ್ಟಪಡಿಸುತ್ತದೆ. ಬಹುಶಃ ಈ ನೀತಿಯನ್ನು ಕಂಡು ರಾಜ್ಯಗಳ ಪುನರ್ವಿಂಗಡನೆಯ ಬಗ್ಗೆ 1948 ರಲ್ಲಿ ವರದಿ ಸಲ್ಲಿಸಿದ 'ಧರ್‌ಸಮಿತಿ' "ಮೈಸೂರು ಇನ್ನೂ ಸಿದ್ಧವಾಗಿರುವಂತೆ ಕಾಣುವುದಿಲ್ಲ"ವೆಂದೂ ಸ್ಪಷ್ಟ ಪಡಿಸಿತು. ಏಕೀಕರಣಕ್ಕಾಗಿ ಹೋರಾಡಿದ ರಂಗನಾಥ ದಿವಾಕರರು, ಮೈಸೂರಿನ ಸಂವಿಧಾನ ಸಮಿತಿ (Constituent Assembly) ತನ್ನ ಧ್ಯೇಯ ಮತ್ತು ಧೋರಣೆಯಲ್ಲಿಯೇ ಏಕೀಕರಣವನ್ನು ಸ್ವಾಗತಿಸಿತ್ತು ಎಂದು ಹೇಳಿಕೊಂಡಿರುವರಾದರೂ, ಈ ಹೇಳಿಕೆಗೆ ಪುಷ್ಟಿಕೊಡುವುದು ಕಷ್ಟ. ಏಕೆಂದರೆ ಈ ಧ್ಯೇಯ ಧೋರಣೆಯಲ್ಲಿ "ಪರಸ್ಪರ ಅನುಮತಿಯೊಡನೆ ನೆರೆಯ ಪ್ರಾಂತ್ಯಗಳು ಮೈಸೂರಿನೊಡನೆ ವಿಲೀನಗೊಳ್ಳುವುದನ್ನು" ಸ್ವಾಗತಿಸಲಾಗಿತ್ತು. ಈ "ನೆರೆಯ ಪ್ರಾಂತ್ಯ" ಮತ್ತು "ವಿಲೀನ"ಪದಗಳ ಅರ್ಥೈಸುವಿಕೆ, ನಂತರದ ದಿನಗಳಲ್ಲಿ ದೊಡ್ಡ ವಿವಾದಕ್ಕೆಡೆಮಾಡಿಕೊಟ್ಟಿತು.

ಏಕೀಕರಣದ ಬಗ್ಗೆ ವರದಿ ಸಲ್ಲಿಸಿದ ಜೆ. ವಿ. ಪಿ. (ಜವಹರ್‌ಲಾಲ್ ನೆಹ್ರೂ, ವಲ್ಲಭಾಯಿ ಪಟೇಲ್ ಮತ್ತು ಪಟ್ಟಾಭಿ ಸೀತಾರಾಮಯ್ಯ) ಸಮಿತಿ ಮೈಸೂರ ಹೊರಗಿನ ಏಕೀಕರಣವಾದಿಗಳನ್ನು ನಿರಾಶೆಗೊಳಿಸಿ, ಅವರು ವರದಿಯನ್ನು ಖಂಡಿಸಿ, ಚಳುವಳಿ ನಡೆಸಲು ಪ್ರೇರೇಪಿಸಿದರೆ. ಮೈಸೂರಿಗರು (ಬೆರಳೆಣಿಕೆಯಷ್ಟು ಜನರನ್ನುಳಿದು) ಸಾಮಾನ್ಯವಾಗಿ ತಮ್ಮ ಗಂಭೀರ ಮೌನವನ್ನು ಮುಂದುವರಿಸಿದರು. ಆದರೆ ಮೈಸೂರಿಗರಿಗೆ ಒಳಗೊಳಗೇ ಇದ್ದ ಏಕೀಕರಣದ ವಿರೋಧ ಕ್ರಮೇಣ ಬಹಿರಂಗವಾಗಲಾರಂಭಿಸಿತು. ಏಕೆಂದರೆ ಇತರ ಭಾಗಗಳಲ್ಲಿ ನಡೆಯುತ್ತಿದ್ದ ಭಾಷಾವಾರು ಪ್ರಾಂತ್ಯ ರಚನಾ ಚಳವಳಿ, ರಾಜ್ಯಗಳ ಪುನರ್ವಿಂಗಡನೆಯನ್ನು ಹೆಚ್ಚು ಹತ್ತಿರಗೊಳಿಸುತ್ತಿತ್ತು. ಇದಕ್ಕೆ ಉತ್ತರವೋ ಎಂಬಂತೆ ಮೈಸೂರಿನ ಬಹುಸಂಖ್ಯಾತರು ಮತ್ತು ವಿರೋಧಿಸುತ್ತಿದ್ದವರು ಏಕೀಕೃತ ಕರ್ನಾಟಕಕ್ಕೆ ಪರ್ಯಾಯವಾಗಿ ಒಂದು ಸೂತ್ರ ಮಂಡಿಸಿದರು. ಈ ಸೂತ್ರದ ಉದ್ದೇಶವೆಂದರೆ ಕನ್ನಡ ಮಾತನಾಡುವ ಎರಡು ಪ್ರತ್ಯೇಕ ರಾಜ್ಯಗಳನ್ನು ರಚಿಸುವುದು. ಇದರ ಪ್ರಕಾರ ಮೈಸೂರು ಸಣ್ಣ ಪ್ರ

ಬದಲಾವಣೆಗಳೊಂದಿಗೆ ತನ್ನ ಸ್ವರೂಪವನ್ನು ಹಾಗೆಯೇ ಉಳಿಸಿಕೊಳ್ಳುವುದು. ಮಿಕ್ಕ ಪ್ರಾಂತ್ಯಗಳೆಲ್ಲಾ ಸೇರಿ ಒಂದು ಪ್ರತ್ಯೇಕ ರಾಜ್ಯವಾಗುವುದು.

ಮೈಸೂರಿನ ಪರಂಪರೆಯ ಬಗ್ಗೆ ಅತೀವ ವ್ಯಾಮೋಹವಿದ್ದವರನ್ನು, ಹಳೆಯ ದೇಶೀ ಸಂಸ್ಥಾನಗಳು ಬೇರೆ ಪ್ರಾಂತ್ಯಗಳೊಡನೆ ವಿಲೀನಗೊಂಡು "ಅವಶ್ಯಕ ಕಣ್ಮರೆಯಾಗಬೇಕು" (entail virtual disappearance) ಎಂಬ ಜೆ. ವಿ. ಪಿ. ಸಮಿತಿಯ ಶಿಫಾರಸು ರೊಚ್ಚಿಗೆಬ್ಬಿಸಿತೆಂದೇ ಹೇಳಬಹುದು.[14] ತೆರೆಯ ಮರೆಯಲ್ಲಿದ್ದ ಏಕೀಕರಣ ವಿರೋಧಿಗಳು ಈ ಹೇಳಿಕೆಯನ್ನು ನೆಪವಾಗಿಸಿಕೊಂಡು, ಬಹಿರಂಗವಾಗಿಯೇ ವಿರೋಧಿಸಲಾರಂಭಿಸಿದರು. ಈ ವಿರೋಧಿಗಳು, ಒಂದೇ ಕರ್ನಾಟಕವಾದರೆ "ಮಾದರಿ ಮೈಸೂರಿನ ವೈಲಕ್ಷಣ್ಯಗಳಿಗೆ (Composite Character) ಕುಂದುಂಟಾಗುತ್ತದೆ." ಈ ಕಾರಣವಾಗಿ "ಜಾತೀಯ ಅಸಮತೆ" ಉಂಟಾಗಿ "ಒಂದೇ ಕೋಮು ಪ್ರಬಲವಾಗುತ್ತದೆ" ಎನ್ನುವ ಸಂಶಯ, ಭಯಗಳನ್ನು ಮುಂದುಮಾಡಿದರು.[15]

ಈ ಹಂತದಲ್ಲಿ, ಅಧಿಕಾರ ಕಳೆದುಕೊಂಡಿದ್ದ, ಮೈಸೂರಿನ ಮಹಾರಾಜರನ್ನು ಏಕೀಕೃತ ರಾಜ್ಯದ, ರಾಜಪ್ರಮುಖರನ್ನಾಗಿ ಒಪ್ಪಿಕೊಳ್ಳಲು ವಿರೋಧಿಸುತ್ತಿದ್ದ, ಉತ್ತರ ಕರ್ನಾಟಕದ ಕಾಂಗ್ರೆಸ್ಸಿಗರು, ಮೈಸೂರಿಗರನ್ನೂ ಒಲಿಸಿಕೊಳ್ಳಲೋ ಎಂಬಂತೆ ಒಪ್ಪಿಕೊಂಡರೂ, ಮೈಸೂರಿಗರ ವಿರೋಧ ಕಡಿಮೆಯಾಗಲಿಲ್ಲ. ವಿರುದ್ಧವಾಗಿ ಅವರ ನಿಲುವು ಕಠಿಣವಾಗುತ್ತಾ ಹೋಯಿತು. ಈ ಬೆಳವಣಿಗೆಗಳ ಮಧ್ಯೆ 1953 ರಲ್ಲಿ ಬಳ್ಳಾರಿ ಪ್ರಾಂತ್ಯ ಮೈಸೂರಿಗೆ ವರ್ಗವಾಯಿತು.

ಮೈಸೂರಿನಲ್ಲಿ ಈ ವೇಳೆಗೆ ಹಲವಾರು ಮಹತ್ತರ ರಾಜಕೀಯ ಬೆಳವಣಿಗೆಗಳಾಗಿದ್ದವು. 1952 ರ ಮೊದಲ ಸಾರ್ವತ್ರಿಕ ಚುನಾವಣೆಯಾಗಿ ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿ ಪಟ್ಟಕ್ಕೆ ಏರಿದ್ದರು. ಅವರ ಪೂರ್ವದಲ್ಲಿ ಮುಖ್ಯ ಮಂತ್ರಿಯಾಗಿದ್ದ ಕೆ. ಸಿ. ರೆಡ್ಡಿಯವರು ಕೇಂದ್ರ ಮಂತ್ರಿ ಮಂಡಳಕ್ಕೆ ವರ್ಗಾಯಿಸಲ್ಪಟ್ಟಿದ್ದರು. ಇವರಿಬ್ಬರ ಮಧ್ಯೆ ವೈಮನಸ್ಯವಿದ್ದು ಅದು ಅವರ ಅನುಯಾಯಿಗಳಲ್ಲೂ ಹರಡಿ, ಅದು ಏಕೀಕರಣದ ಮೇಲೂ ತನ್ನ ಪ್ರಭಾವ ಬೀರಿತು. ಆದರೆ ಕೇಂದ್ರ ನಾಯಕತ್ವವನ್ನು ಒಲಿಸಿಕೊಳ್ಳುವಲ್ಲಿ ಮಾತ್ರ ಪೈಪೋಟಿಯಿದ್ದು, ಈ ಕಾರ್ಯದ ಸಾಫಲ್ಯಕ್ಕಾಗಿ ಎರಡೂ ಬಣಗಳು ಯಾವುದೇ ಕೆಲಸ ಮಾಡಲು ತಯಾರಿದ್ದರು. ಅಂತಿಮವಾಗಿ ಈ ಅಂಶವೇ ಏಕೀಕರಣವನ್ನು ಸಾಧ್ಯವಾಗಿಸಿತೆನ್ನಬೇಕು.

ಮುಂಬೈ ಕರ್ನಾಟಕ–ಮೈಸೂರಿನಲ್ಲಿನ ಏಕೀಕರಣಕ್ಕೆ ಸಂಬಂಧಪಟ್ಟ ವಿದ್ಯಮಾನಗಳ ಕಡೆ ಗಮನ ಹರಿಸಿದರೆ, ಉತ್ತರ ಕರ್ನಾಟಕದ ಏಕೀಕರಣ ವಾದಿಗಳು,

ಕೇಂದ್ರದ ನಿಧಾನ ನೀತಿಯ ಬಗ್ಗೆ ಅಸಂತುಷ್ಟರಾಗಿ ಪದೇ ಪದೇ ಕೇಂದ್ರ ಕಾಂಗ್ರೆಸ್ ವರಿಷ್ಠ ಮಂಡಳಿಯನ್ನು, ತಮ್ಮ ಚುನಾಯಿತ ಸ್ಥಾನಗಳಿಗೆ ರಾಜಿನಾಮೆ ನೀಡಲು ಅನುಮತಿ ಕೇಳಿ ಒತ್ತಡ ತರುತ್ತಿದ್ದರೆ, ಮೈಸೂರಿನ ಯಾವೊಬ್ಬ ಪ್ರತಿನಿಧಿಯೂ ಈ ಬಗ್ಗೆ ಚಕಾರವೆತ್ತಲಿಲ್ಲ. ಆದರೆ ಈಗಾಗಲೇ ವಿವರಿಸಿದಂತೆ ಮೈಸೂರು ಕಾಂಗ್ರೆಸ್ಸಿಗರ ಒಳಜಗಳ, ಬಹುತೇಕ ಎಲ್ಲರೂ ರಾಷ್ಟ್ರೀಯ ವರಿಷ್ಠರ ಸಖ್ಯ, ಬೆಂಬಲ ಗಳಿಸಿಕೊಂಡು, ತಮ್ಮ ಅಧಿಕಾರಸ್ಥಾನ ಭದ್ರಪಡಿಸಿಕೊಳ್ಳಲು ಮತ್ತು ಕೆಲವರು ತಮ್ಮ ಸ್ಥಾನ ಹೆಚ್ಚಿಸಿಕೊಳ್ಳಲು, ಅವರನ್ನು (ಕೇಂದ್ರವನ್ನು) ಆಶ್ರಯಿಸಬೇಕಾದ ಪರಿಸ್ಥಿತಿಯಿತ್ತು. ದಾವಣಗೆರೆಯ ಏಕೀಕರಣ ಸಭೆ (1946)ಯ ನಂತರ ಏಕೀಕರಣದ ಬಗ್ಗೆ ಸೊಲ್ಲೆತ್ತದೆ, ಮೈಸೂರು ಕಾಂಗ್ರೆಸ್ ಒಳಜಗಳದಲ್ಲಿ ನಿರತರಾಗಿದ್ದ ಕೆಂಗಲ್ ಹನುಮಂತಯ್ಯನವರು, 1952 ರಲ್ಲಿ ಮುಖ್ಯ ಮಂತ್ರಿಯಾಗಿ, 1953 ರಲ್ಲಿ ನಡೆದ ಹೈದರಾಬಾದ್ (ನಾಸಲನಗರ) ಕಾಂಗ್ರೆಸ್ ಅಧಿವೇಶನದಲ್ಲಿ ಜೆ. ವಿ. ಪಿ. ವರದಿಯನ್ನು ಟೀಕಿಸಿದರು.[16] ನಂತರ ಎಸ್. ಆರ್. ಸಿ. ವರದಿಯನ್ನು 1955 ರ ಕೊನೆಯಲ್ಲಿ ಬೆಂಬಲಿಸಿ ಆ ಮೂಲಕ ಕರ್ನಾಟಕ ಏಕೀಕರಣವನ್ನು ಸಮರ್ಥಿಸುವ ಪ್ರಕ್ರಿಯೆಯಲ್ಲಿ, ಏಕೀಕೃತ ಕರ್ನಾಟಕ ವಿದ್ಯುಕ್ತವಾಗಿ ಅಸ್ತಿತ್ವಕ್ಕೆ ಬರುವ ಮೊದಲೇ, ತೊಳಲಾಡಿ ತಮ್ಮ ಮುಖ್ಯ ಮಂತ್ರಿತ್ವಕ್ಕೇ ಸಂಚಕಾರ ತಂದುಕೊಂಡರು.

ಕೆ. ಪಿ. ಸಿ. ಸಿ ಯವರು ಏಕೀಕರಣದ ವಿಚಾರದಲ್ಲಿ ಅವಿರೋಧವಾಗಿ ತೀರ್ಮಾನ ಕೈಗೊಂಡು, ರಾಜ್ಯ ಪುನರ್ವಿಂಗಡನಾ ಸಮಿತಿ ಎದುರು ಏಕೀಕೃತ ಕರ್ನಾಟಕದ ಪರವಾಗಿ ಸಾಕ್ಷ್ಯ ನುಡಿದರೆ, ಮೈಸೂರು ಕಾಂಗ್ರೆಸ್‌ನಲ್ಲಿ ಎಂತಹ ಭಿನ್ನಾಭಿಪ್ರಾಯವಿತ್ತೆಂದರೆ, ಪಕ್ಷ ಇಬ್ಭಾಗವಾಗಿ, ಸರ್ಕಾರ ಪತನವಾಗುವುದನ್ನು ತಡೆಯಲು, ಕಾಂಗ್ರೆಸ್ಸಿಗರಾರೂ, ಸಮಿತಿಯ ಮುಂದೆ ಹೇಳಿಕೆ ನೀಡಬಾರದೆಂದು ಕಟ್ಟಾಜ್ಞೆ (whip) ಯನ್ನು ವಿಧಿಸಲಾಯಿತು. ಮೈಸೂರು ಮಂತ್ರಿ ಮಂಡಳದ ಸದಸ್ಯರೂ "ತಮ್ಮ ಅಧಿಕಾರ ಸ್ಥಾನ ಕಳೆದುಕೊಳ್ಳಲು ಹೆದರಿ" ಸಮಿತಿಯ ಮುಂದೆ ಹಾಜರಾಗಲಿಲ್ಲ.[17] ಎರಡು ವಿರೋಧಿ ಗುಂಪುಗಳಲ್ಲಿ ಒಂದು ಬಹುಸಂಖ್ಯಾತರದು, ಏಕೀಕರಣವನ್ನು ವಿರೋಧಿಸುತ್ತಲೂ, ಇನ್ನೊಂದು ಪರವಾಗಿಯೂ, ಬಹಿರಂಗ ಹೇಳಿಕೆಗಳನ್ನು ಕೊಡುತ್ತಾ ವೇದಿಕೆಗಳನ್ನು ಸೃಷ್ಟಿಸಿಕೊಂಡವು.

ಈ ವೇಳೆಗೆ, ಏಕೀಕರಣದ ಪರವಾಗಿ ತೀರ್ಮಾನ ಕೈಗೊಂಡಿದ್ದ (ಆದರೆ ಅದನ್ನು ಬಹಿರಂಗಗೊಳಿಸದೆ) ಮುಖ್ಯ ಮಂತ್ರಿಗಳು ಈ ಜಗಳದಿಂದ ಬೇಸತ್ತು, ಎರಡೂ ಬಣಗಳ ವಾದಗಳನ್ನು ಪರಿಶೀಲಿಸಿ, ವರದಿ ಸಲ್ಲಿಸಲು, ಒಂದು ಸಮಿತಿ (ಶೇಷಾದ್ರಿ ಸಮಿತಿ) ಯನ್ನು ನೇಮಿಸಿದರು. ಈ ಕ್ರಮ ಬಹುಶಃ ಸಮಿತಿ ಏಕೀಕರಣದ ಪರವಾಗಿ ವರದಿ ಸಲ್ಲಿಸುತ್ತದೆಂದು ನಿರೀಕ್ಷಿಸಿ, ತೆಗೆದುಕೊಂಡಿದ್ದಿರ

ಬಹುದೆಂದು ತರ್ಕಿಸಬಹುದೇನೋ. ಆದರೆ ಈ ಸಮಿತಿಯ ವರದಿ ಈ ನಿರೀಕ್ಷೆಯನ್ನು ಸುಳ್ಳಾಗಿಸಿ ಹನುಮಂತಯ್ಯನವರನ್ನು ಅಧೀರರನ್ನಾಗಿಸಿತು.[18]

ಕೆಂಗಲ್ ಹನುಮಂತಯ್ಯ – ಮೈಸೂರು ಕಾಂಗ್ರೆಸ್ ಏಕೀಕರಣ

ಕೆಂಗಲ್ಲರು ಮೊದಲಿನಿಂದಲೂ ಏಕೀಕರಣದ ಕಟ್ಟಾ ಬೆಂಬಲಿಗರಾಗಿದ್ದರು ಎಂಬ ನಂಬಿಕೆ ಪ್ರಬಲವಾಗಿಯೇ ಇದೆ. ಆದರೆ ಸಮಕಾಲೀನ ದಾಖಲೆ (Records) ಗಳನ್ನು ಎಚ್ಚರದಿಂದ ಪರೀಕ್ಷಿಸಿದರೆ. ಈ ನಂಬಿಕೆಯ ಬಗ್ಗೆ ಅನುಮಾನ ಬರುತ್ತದೆ. ಶೇಷಾದ್ರಿ ಸಮಿತಿಯ ವರದಿಯನ್ನು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಚರ್ಚಿಸುತ್ತಾ ಕೆಂಗಲ್ಲರು "ಸಮಿತಿ ಒದಗಿಸಿರುವ ಅಂಕಿ ಅಂಶಗಳು......ಕರ್ನಾಟಕ ಏಕೀಕರಣದ ವಿರುದ್ಧವಾಗಿವೆ...... ಈ ಸಮಿತಿಯ ನೇಮಕಾತಿಯನ್ನು ನೀವು ಗಮನಿಸಿದರೆ ನಾನು ಈ ವಿಷಯದ ಬಗ್ಗೆ ಯಾವ ರೀತಿಯ ಅಭಿಪ್ರಾಯ ಹೊಂದಿದ್ದೇನೆ ಎನ್ನುವುದು ಸ್ಪಷ್ಟವಾಗುತ್ತದೆ" ಎಂದು ಹೇಳಿದರೆಂಬ ವರದಿಯೂ ಇದೆ.[19] ಎಸ್. ಆರ್. ಸಿ. ವರದಿ ಪ್ರಕಟವಾಗಿ, ಮೈಸೂರಿನಲ್ಲಿ ಗಂಭೀರ ಪರಿಸ್ಥಿತಿಯುಂಟಾದರೂ, ಕೆಂಗಲ್ಲರು ತಮ್ಮ ಧೋರಣೆಯಲ್ಲಿ ಅಸ್ಪಷ್ಟವಾಗಿಯೇ ಇದ್ದರು. "ಎಲ್ಲ ಕಾಲಕ್ಕೂ ನಾನು ಮೈಸೂರಿನ ವಿಸ್ತರಣೆಯನ್ನು ಮಾತ್ರ ಬೆಂಬಲಿಸುತ್ತಿದ್ದೇನೆ" ಎಂದು ಹೇಳಿಕೆಯಿತ್ತು ಹೆಚ್ಚು ಗೊಂದಲಕ್ಕೆ ಕಾರಣರಾದರು.[20] ಕೆಂಗಲ್ಲರೇ ಶಾಸನ ಸಭೆಯಲ್ಲಿ ಹೇಳಿದಂತೆ ಅವರು "ಆರೇಳು ವರ್ಷಗಳ ಕಾಲ ಈ ಬಗ್ಗೆ (ಏಕೀಕರಣದ) ಮಾತನಾಡಿರಲಿಲ್ಲ".[21] ಅಂದರೆ ಅವರು ಸತತವಾಗಿ ಏಕೀಕರಣದ ಪರವಾಗಿದ್ದರೆ ಅಥವಾ ಇಲ್ಲವೆ ಎನ್ನುವುದನ್ನು ಊಹಿಸಬಹುದಾಗಿದೆ. ಕೆಂಗಲ್ಲರ ನಿಲುವು ಎಷ್ಟು ಎಡಬಿಡಂಗಿಯಾಗಿತ್ತೆಂದರೆ "ಕೆಂಗಲ್ಲರು ತಮ್ಮ ಅಡ್ಡಗೋಡೆಯ ಮೇಲೆ ದೀಪವಿಟ್ಟಂತಹ ಧೋರಣೆ" ಯನ್ನು ಬದಲಾಯಿಸಿ ಸ್ಪಷ್ಟ ನಿಲುವು ತಾಳಬೇಕೆಂದು ಬೆಂಗಳೂರಿನ ಮುಖ್ಯ ದೈನಿಕ ಪತ್ರಿಕೆಯೊಂದು ಸಂಪಾದಕೀಯದಲ್ಲಿ ಕರೆ ಕೊಟ್ಟಿತು.[22]

ಮುಖ್ಯ ಮಂತ್ರಿಗಳ ಈ ನಿಲುವು ಜನರನ್ನು ಒಂದು ರೀತಿಯಲ್ಲಿ ಗೊಂದಲಗೊಳಿಸಿ, ಊಹಾಪೋಹಗಳಿಗೆ ದಾರಿಮಾಡಿಕೊಟ್ಟಿತು. ಏಕೀಕರಣದ ವಿರೋಧಿಗಳಾದ ಶಾಸಕರು ಕೆಂಗಲ್ಲರ ಜಾಣಾಕ್ಷತೆಗೆ, ನುಸುಳಿಕೊಳ್ಳುವ ನಡತೆಯ ಬಗ್ಗೆ ಕೋಪೋದ್ರಿಕ್ತರಾಗಿ, ಮುಖ್ಯ ಮಂತ್ರಿಗಳು ತಮ್ಮ ಶಾಸಕತ್ವಕ್ಕೆ ರಾಜೀನಾಮೆ ನೀಡಿ, ಏಕೀಕರಣದ ವಿಷಯವನ್ನು ಮುಂದಿಟ್ಟುಕೊಂಡು, ಚುನಾವಣೆ ಎದುರಿಸಬೇಕೆಂದು ಸಭೆಯಲ್ಲೇ ಸವಾಲು ಹಾಕಿದರು. ಏಕೀಕರಣದ ಬಗ್ಗೆ "ಜನಮತಗಣನೆ" (Plebisite) ನಡೆಸಬೇಕು ಎಂಬ ಬೇಡಿಕೆಯನ್ನು ಕೆಲವರು ಮಂಡಿಸಿದರು.[23] ಸಚಿವ ಸಂಪುಟದಲ್ಲೇ ಬಲವಾದ ಭಿನ್ನಾಭಿಪ್ರಾಯ ತಲೆದೋರಿ ಬಿಕ್ಕಟ್ಟು ಉಂಟಾಯಿತು.

ಮೂವರು ಸಚಿವರು ಏಕೀಕರಣವನ್ನು ವಿರೋಧಿಸಿ ಬಹಿರಂಗ ಹೇಳಿಕೆಗಳನ್ನೂ ಕೊಟ್ಟರು. ಒಬ್ಬ ಸಚಿವರಂತೂ ಮುಖ್ಯ ಮಂತ್ರಿಯವರ ಹೇಳಿಕೆ "ಸ್ವಂತ ಅಭಿಪ್ರಾಯವೇ ಹೊರತು ಸಂಪುಟದ್ದಲ್ಲ" ಎಂದೇ ಹೇಳಿಕೆಯಿತ್ತರು.[24]

ಎಸ್. ಆರ್. ಸಿ. ವರದಿ ಪ್ರಕಟಗೊಂಡ ವಿಷಯ ತಿಳಿದ ಕೆಂಗಲ್ಲರು, ಶಾಸನ ಸಭೆಯಲ್ಲಿದ್ದ ವಿರೋಧಿ ಬಲವನ್ನು ಗ್ರಹಿಸಿ, ಬಹುಶಃ ವಿರೋಧಿಗಳನ್ನು ಒಲಿಸಿ ಕೊಳ್ಳಲು ಸಮಯ ಪಡೆಯುವುದಕ್ಕಾಗಿ ಸಭೆಯನ್ನು ಮುಂದೂಡಿದರು. ಈ ಸಮಯವನ್ನು ಉಪಯೋಗಿಸಿಕೊಂಡು ವಿರೋಧಿಗಳು ಕೇಂದ್ರ ನಾಯಕರ ಮುಂದೆ ತಮ್ಮ ಅಹವಾಲನ್ನು ಮಂಡಿಸಲು ದೆಹಲಿಗೆ ಹೋಗಿದ್ದಾಗ, ಹಠಾತ್ತನೆ ಅಧಿವೇಶನ ವನ್ನು ಕರೆದರು. (10, ನವೆಂಬರ್ 1955) ಮೈಸೂರು ಕಾಂಗ್ರೆಸ್ಸಿಗರ ಜಗಳ ವನ್ನು ಕಂಡು ಬೇಸತ್ತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ, ಈ ಬಗ್ಗೆ ವಿಚಾರಣೆ ನಡೆಸಿ, ತೀರ್ಮಾನಿಸಲು ಒಂದು ಉಪಸಮಿತಿಯನ್ನು ನೇಮಿಸಿತು.[25] ಏಕೀಕರಣದ ಪರವಾಗಿರುತ್ತದೆಂದು ನಿರೀಕ್ಷಿಸಲಾದ ಈ ಸಮಿತಿಯ ವರದಿ ನವೆಂಬರ್, 10ರ ವೇಳೆಗೆ ಬಹಿರಂಗಗೊಳ್ಳುತ್ತದೆಂದು ಭಾವಿಸಿ ಕೆಂಗಲ್ಲರು ಅಧಿವೇಶನವನ್ನು ಕರೆದಂತೆ ಕಾಣುತ್ತದೆ. ಆದರೆ ವರದಿಯ ಸಲ್ಲಿಕೆಯಲ್ಲಿ ವಿಳಂಬವಾದುದರಿಂದ, ಅಧಿವೇಶನವೂ ಮುಂದೂಡಲ್ಪಟ್ಟಿತು. ಆದರೆ ಶಾಸನಸಭೆ ವರದಿಯನ್ನು ಚರ್ಚಿಸುವುದಕ್ಕೂ ಮುನ್ನ (ತೀರ್ಮಾನ ತೆಗೆದುಕೊಳ್ಳುವ ಮಾತು ಒತ್ತಟ್ಟಿಗಿರಲಿ) ನವೆಂಬರ್, 16 ರಂದು, ಮೈಸೂರು ಕಾಂಗ್ರೆಸ್ ಅಧ್ಯಕ್ಷ ಸಾಹುಕಾರ್ ಚನ್ನಯ್ಯ ನವರು, ಕೇಂದ್ರ ನಾಯಕರ ಆಜ್ಞಾನುಸಾರವಾಗಿ, ದೆಹಲಿಯಿಂದ ಬಂದ ತಕ್ಷಣ "ಕೇಂದ್ರ ನಾಯಕರು ಏಕೀಕೃತ ಕರ್ನಾಟಕದ ಬಗೆ ಈಗಾಗಲೇ ತೀರ್ಮಾನ ಕೈಗೊಂಡಿದ್ದಾರೆಂದು" ಘೋಷಿಸಿದರು.[26]

ಈ ಘೋಷಣೆಯ ನಂತರ ತೀರ್ಮಾನವಾಗಲು ಏನೂ ಉಳಿದಿರಲಿಲ್ಲ. ಏಕೆಂದರೆ, ಕೇಂದ್ರ ಸರ್ಕಾರ ಮತ್ತು ಕಾಂಗ್ರೆಸ್ ಪಕ್ಷ S.R.C. ವರದಿಯ ಬಗ್ಗೆ ನಿಶ್ಚಿತಾಭಿಪ್ರಾಯ ಹೊಂದಿತ್ತು. ವಿರೋಧಿಸುತ್ತಿದ್ದ ಅನೇಕ ಕಾಂಗ್ರೆಸ್ ಶಾಸಕರು, ಈ ಪರಿಸ್ಥಿತಿಯಲ್ಲಿ ನಿರಾಶೆಯಿಂದ ಆಕ್ರೋಶವನ್ನು ನುಂಗಿಕೊಳ್ಳಬೇಕಾಯಿತು. ಆದರೂ ಕೆಲವು ಶಾಸಕರು ಹಿಂಜರಿಯದೆ ಕಟುವಾಗಿಯೇ ಮಾತನಾಡಿದರು. ಒಬ್ಬರು ಸದಸ್ಯರು "ಚರ್ಚೆ ಕೇವಲ ಔಪಚಾರಿಕ" (formality) ವೆಂದರೆ,[27] ಮತ್ತೊಬ್ಬರು "ಚರ್ಚೆಯೇ ಅನವಶ್ಯಕ" ಮತ್ತು "ಸಮಯ ಹಾಳು" ಮಾಡು ವಂಥಾದ್ದು ಎಂದೇ ವಾದಿಸಿದರು.[28]

ಶಾಸನ ಸಭೆಯಲ್ಲಿ S.R.C. ವರದಿಯನ್ನು ಮತಕ್ಕೆ ಹಾಕಿದಾಗ ಶೇ. 50ರಷ್ಟು ಸದಸ್ಯರು ಮಾತ್ರ ಭಾಗವಹಿಸಿದರೆ, ಮಿಕ್ಕವರು ತಟಸ್ಥರಾಗಿದ್ದರು.[29] ಈ ಮತ ಚಲಾವಣೆ ಮೈಸೂರು ನಾಯಕರ ನಿರಾಶೆ, ಅಸಮಾಧಾನಗಳಿಗೆ ದ್ಯೋತಕ

ವೆನ್ನಬಹುದು. ಎರಡನೆಯ ಸಾರ್ವತ್ರಿಕ ಚುನಾವಣೆಗಳು ಸಮೀಪಿಸುತ್ತಿದ್ದುದರಿಂದ, ಬಹುಶಃ ಏಕೀಕರಣವನ್ನು ವಿರೋಧಿಸುತ್ತಿದ್ದ ಕಾಂಗ್ರೆಸ್ ಶಾಸಕರು, ಬಹಿರಂಗವಾಗಿ ನಿರ್ಣಯದ ವಿರುದ್ಧ ಮತ ನೀಡಿ ವರಿಷ್ಠ ಮಂಡಳಿಯ ಆಗ್ರಹಕ್ಕೆ ತುತ್ತಾಗುವ ಮೂಲಕ, ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ನಿರಾಕರಿಸಲ್ಪಡುವ ಗುಂಪಿನಲ್ಲಿ ಸೇರಿ, ತಮ್ಮ ರಾಜಕೀಯ ಭವಿಷ್ಯವನ್ನು ಮಸುಕಾಗಿಸಿಕೊಳ್ಳಲು ಇಷ್ಟಪಡದೆ, ಕೆಲವರು ಮನಸ್ಸು ಬದಲಾಯಿಸಿ ಪರವಾಗಿ ಮಾತನಾಡಿದರೆ, ಮಿಕ್ಕವರು ತಟಸ್ಥರಾಗಿದ್ದರೆಂದು ಹೇಳಬಹುದು. ಮಿಗಿಲಾಗಿ "ಅಂತಿಮ ತೀರ್ಮಾನ ಕೇಂದ್ರ ಸರ್ಕಾರದ್ದು" ಎಂದು ಮುಖ್ಯ ಮಂತ್ರಿಗಳು ಘೋಷಿಸಿಯೂ ಆಗಿತ್ತು.[30]

ಸಾಹುಕಾರ್ ಚನ್ನಯ್ಯನವರು ಅಧ್ಯಕ್ಷರಾಗಿದ್ದ ಮೈಸೂರು ಕಾಂಗ್ರೆಸ್ ಮತ್ತು ಕೆ. ಸಿ. ರೆಡ್ಡಿಯವರ ಅನುಯಾಯಿಗಳೂ (ಪಕ್ಷದೊಳಗೆ ಕೆಂಗಲ್ಲರ ವಿರೋಧಿಗಳು) ಕೇಂದ್ರದಿಂದ ನಿರೂಪ ಬರುವವರೆಗೂ ಏಕೀಕರಣದ ಬಗ್ಗೆ ಮೌನ ವಹಿಸಿದ್ದರು.[31] ಭಿನ್ನಮತೀಯರಾದ ಇವರು, ಈ ಸ್ಥಿತಿಯಲ್ಲಿ ಕೆಂಗಲ್ಲರನ್ನು ಪದಚ್ಯುತಗೊಳಿಸುವ ಪ್ರಯತ್ನಕ್ಕಿಂತಲೂ ಹೆಚ್ಚಾಗಿ, ಕಾಂಗ್ರೆಸ್ ವರಿಷ್ಠ ಮಂಡಳಿ ಮತ್ತೂ ನೆಹ್ರೂ ಅವರನ್ನು ಒಲಿಸಿಕೊಳ್ಳುವುದರಲ್ಲೇ ಹೆಚ್ಚು ಆಸಕ್ತಿ ವಹಿಸಿದಂತೆ ಕಾಣುತ್ತದೆ. ಮೈಸೂರಿಗರು ನೆಹರಿಯ ಬೆಂಬಲಕ್ಕಾಗಿ ಹಾತೊರೆಯುತ್ತಿದ್ದರೆಂಬುದು ಈ ವಿಷಯದಿಂದ ಸ್ಪಷ್ಟವಾಗುತ್ತದೆ. ಮೈಸೂರಿಗರ ವಿರೋಧ ಎಷ್ಟು ಪ್ರಬಲವಾಗಿತ್ತೆಂದರೆ ದಿವಾಕರರಂಥವರು ಏಕೀಕರಣದ ಕನಸು ನನಸಾಗುತ್ತದೆಯೇ ಎಂದು ಅನುಮಾನಿಸುವಂತೆ ಮಾಡಿದರೆ,[32] ಕುವೆಂಪು ಅವರಂಥ ಕವಿಗಳಿಂ "ನೀ ಮೆಟ್ಟುವ ನೆಲ ಅದೆ ಕರ್ನಾಟಕ" (ನೀನೆಲ್ಲಿ ಇದ್ದರೂ ಅದೇ ಕರ್ನಾಟಕವೆಂದು ಭಾವಿಸು)ವೆಂಬಂಥ ಕವಿತೆಯನ್ನು ರಚಿಸುವಂತೆ ಮಾಡಿತು. ಆದರೆ ಕೇಂದ್ರ ಸರ್ಕಾರ ಪರಿಸ್ಥಿತಿಯನ್ನು ಕಟ್ಟುನಿಟ್ಟಾಗಿ ನಿಭಾಯಿಸುವ ಮೂಲಕ ವಿರೋಧವನ್ನು ಹತ್ತಿಕ್ಕಿ, ಪರಿಣಾಮವಾಗಿ, ಮೈಸೂರಿಗರು ಅನಿವಾರ್ಯವಾಗಿ ತಲೆಬಾಗಬೇಕಾಯಿತು.

ಉಪಸಂಹಾರ

"ಇತಿಹಾಸಕಾರನೊಬ್ಬನು ಈ ಬಗ್ಗೆ (ಏಕೀಕರಣದ) ಭಿನ್ನಾಭಿಪ್ರಾಯ (ಮೈಸೂರಿನಲ್ಲಿ)ವಿತ್ತೆಂದು ಹೇಳುವುದಕ್ಕೆ ಅವಕಾಶ ಕೊಡುವುದು ಬೇಡ" ಎಂದು ಅಂದಿನ ಮೈಸೂರಿನ ಪ್ರಭಾವೀ ನಾಯಕರೊಬ್ಬರು ಬಯಸಿ ನಿವಾರಿಸಲು ಯತ್ನಿಸಿದ್ದು ಇಂದು ವಿಫಲವಾಗಿದೆ. 1955ರ, ಮೈಸೂರಿನ ಗೊಂದಲಮಯ ಸನ್ನಿವೇಶದಲ್ಲಿ ಕೆ. ಸಿ. ರೆಡ್ಡಿಯವರು, ಏಕೀಕರಣವನ್ನು ವಿರೋಧಿಸುತ್ತಿದ್ದ ಎಸ್. ಚನ್ನಯ್ಯ ಮುಂತಾದ ತಮ್ಮ ಸ್ನೇಹಿತರಿಗೆ ಈ ರೀತಿ ಬರೆದು ತಿಳಿಸಿದ್ದರು.[33]

ಕೇಂದ್ರ ಸರ್ಕಾರ ಮತ್ತು ಕಾಂಗ್ರೆಸ್ ವರಿಷ್ಠ ಮಂಡಳಿ ಕರ್ನಾಟಕ ಏಕೀಕರಣ ಸಮಸ್ಯೆಯಲ್ಲಿ ನಡೆದುಕೊಂಡ ರೀತಿಯನ್ನು ಹಲವಾರು ಸಾರ್ವಜನಿಕ ಮೈಸೂರಿಗರ ವಿರೋಧವನ್ನು ಹತ್ತಿಕ್ಕಿದ್ದನ್ನೂ ಖಂಡಿಸಿದರು. S.R.C. ಯನ್ನು ರಚಿಸಿದ ತರುಣದಲ್ಲೇ ಮಾಜಿ ದಿವಾನ ಮಿರ್ಜಾ ಅವರು "ನೆಹರೂ ಅತಿಯಾಗಿ ಮುಂದು ವರಿಯುತ್ತಿದ್ದಾರೆ. ಅವರನ್ನು ತರಾಟೆಗೆ ತೆಗೆದುಕೊಳ್ಳಬೇಕು" ಎಂದು ಅಭಿಪ್ರಾಯ ಪಟ್ಟರು.[34] ಡಿ. ವಿ. ಗುಂಡಪ್ಪನವರು, "ದೆಹಲಿ ಪ್ರಾಮಾಣಿಕವಾಗಿ, ಪ್ರಜಾ ಸತ್ತಾತ್ಮಕ ರೀತಿಯಲ್ಲಿ ನಡೆದುಕೊಳ್ಳುತ್ತಿಲ್ಲ"[33] ವೆಂದು ನೋವನ್ನು ತೋಡಿ ಕೊಂಡರೆ, ಮಾಜಿ ದಿವಾನರುಗಳಾದ ಎನ್. ಮಾಧವರಾವ್ ಮತ್ತು ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು, ಕೇಂದ್ರ ಸರ್ಕಾರವನ್ನು ಟೀಕಿಸಿದರು.[36]

ಮೇಲಿನ ಚರ್ಚೆಯಿಂದ ಸ್ಪಷ್ಟವಾಗುವುದೆಂದರೆ, ಕೇಂದ್ರ ಸರ್ಕಾರ, ಮತ್ತು ಕಾಂಗ್ರೆಸ್ ಕಾರ್ಯಕಾರಿ, ಏಕೀಕರಣ ವಿಷಯದಲ್ಲಿ ನಿರ್ಣಯಾತ್ಮಕ ಪಾತ್ರವಹಿಸಿ ಕರ್ನಾಟಕದ ಏಕೀಕರಣವನ್ನು ಇತ್ಯರ್ಥಗೊಳಿಸಿದವು ಎನ್ನುವುದು. ಮೈಸೂರು ಈ ತೀರ್ಮಾನವನ್ನು ಒಂದು Fait accompli ಯಾಗಿ ಒಪ್ಪಿಕೊಳ್ಳಬೇಕಾಯಿತು. ಸಾಮಾನ್ಯವಾಗಿ ಮೈಸೂರಿಗರು ಯಾವುದೇ ಸಂದರ್ಭದಲ್ಲೂ ಏಕೀಕರಣಕ್ಕಾಗಿ ಚಳುವಳಿ ಮಾಡಲಿಲ್ಲ. ಚಳುವಳಿ ಹೋಗಲಿ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಧೇಬರ್‌ರವರು ಬೆಂಗಳೂರಿಗೆ ಈ ಸಂದರ್ಭದಲ್ಲಿ ಭೇಟಿಯಿತ್ತಾಗ, ಶಾಸನ ಸಭೆಯಲ್ಲಿ S.R.C. ವರದಿ ಚರ್ಚೆ ನಡೆಯುತ್ತಿದ್ದಾಗ ಏಕೀಕರಣವನ್ನು ವಿರೋಧಿಸಿ ಹಲವಾರು ಕಡೆ ಹಿಂಸಾತ್ಮಕ ಪ್ರದರ್ಶನಗಳಾದವು.[37] ಮೈಸೂರಿನಲ್ಲಿ ಯಾರೇ ಆಗಲಿ ಏಕೀಕರಣದ ಪರವಾಗಿ ಮಾತನಾಡಿದ್ದರೆ, ಯಾವುದೇ ಸಭೆ ಠರಾವುಗಳನ್ನು ಅಂಗೀಕರಿಸಿದ್ದರೆ, ಅದು ಹೆಚ್ಚಾಗಿ ತಮ್ಮ ರಾಜಕೀಯ ತುರ್ತು, ಭವಿಷ್ಯದ ಅನುಕೂಲಗಳನ್ನು ಗಮನ ದಲ್ಲಿಟ್ಟುಕೊಂಡೇ ವಿನಹ ಮನಃಪೂರ್ವಕವಾಗಿ ವರ್ತಿಸಿದ್ದು ಎಂದು ಹೇಳಲು ಸಾಧ್ಯವಾಗದು.

ಉತ್ತರ ಕರ್ನಾಟಕದ ಏಕೀಕರಣವಾದಿಗಳಾದ ಆಲೂರು ವೆಂಕಟರಾವ್ ಅಂಥವರಿಗೆ ಮೈಸೂರಿನ ವಿರೋಧಿಗಳ ಬಗ್ಗೆ ಎಂತಹ ಆಕ್ರೋಶವಿತ್ತೆಂದರೆ, ಏಕೀಕರಣವಾದ ಮೇಲೂ, ಈ ವಿರೋಧಿಗಳನ್ನು ಖಂಡಿಸುವುದನ್ನು ಬಿಡಲಿಲ್ಲ. "ಈ ಹೆಮ್ಮೆಯ ಕುಲ ನಿರ್ನಾಮವಾಗದಿದ್ದರೆ ಹೊಸ ರಾಜ್ಯಕ್ಕೆ ಶುಭವಾಗದು"[38] ಎಂದು ಆಲೂರರು ಶಪಿಸಿರುವುದನ್ನು ನೋಡಿದರೆ ಮೈಸೂರಿಗರ ವಿರೋಧ ಎಷ್ಟು ಪ್ರಬಲವಾಗಿತ್ತು ಎನ್ನುವುದು ಸ್ಪಷ್ಟವಾಗುತ್ತದೆ.

ಅಡಿ ಟಿಪ್ಪಣಿಗಳು

1. Diwakar R. R. (ed) 'Karnataka Through the Ages' (Bangalore 1968) P. 957
2. Suryanath U. Kamath. 'A concise History of Karnataka' (Bangalore 1980) P. 305.
3. ರಂಗನಾಥ ದಿವಾಕರ. 'ಕರ್ನಾಟಕದ ಏಕೀಕರಣದ ಕಥೆ' (ಹುಬ್ಬಳ್ಳಿ-1956) ಪು. 21
4. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ (ಕ. ಸಾ. ಪ. ಪ) ತ್ರೈಮಾಸಿಕ. ಸಂಪುಟ 35 ಸಂಖ್ಯೆ 1 1950. ಠರಾವುಗಳು. ಪು. 2 (ಬೆಂಗಳೂರು 1950)
5. ಪಾ. ವೆಂ. ಆಚಾರ್ಯ "ಆಲೂರು - ಗಾಂಧೀಜಿ" ಕನ್ನಡ ಪ್ರಭ 12 ಜುಲೈ 1980 (ದೈನಿಕ ಪತ್ರಿಕೆ ಬೆಂಗಳೂರು) ಮತ್ತು ಶ್ರೀರಂಗ 'ಕೆಲವು ವಿಚಾರಗಳು'. (ಅಂಕಣ ದ್ವೈಮಾಸಿಕ ಬೆಂಗಳೂರು) ಸಂಪುಟ 3. ಸಂಖ್ಯೆ 1 1983 ಪು. 1-8.
   ಮೈಸೂರು ರಾಜರ ಸರ್ಕಾರ ಕನ್ನಡ ಭಾಷೆಗೆ ಕೊಟ್ಟ ಉತ್ತೇಜನ ಅಷ್ಟು ಉದಾರ ವಾದುದಲ್ಲ. ಈ ಬಗ್ಗೆ ಕ.ಸಾ.ಪ. ಅನೇಕ ವೇಳೆ ಅಸಮಾಧಾನ ವ್ಯಕ್ತಪಡಿಸುವ ನಿರ್ಣಯಗಳನ್ನು ಅಂಗೀಕರಿಸಿ, ಸರ್ಕಾರ ಅಧಿಕ ಉತ್ತೇಜನ ಕೊಡಬೇಕೆಂದು ಕೇಳಿ ಕೊಳ್ಳುತ್ತಿತ್ತು. ಉದಾ. ನೋಡಿ ಕ.ಸಾ.ಪ.ಪ. ಸಂಪುಟ 9 ಸಂಖ್ಯೆ 2 ಪು. 82-84, ಸಂಪುಟ 21, ಸಂಖ್ಯೆ 2, ಪು. 129, ಸಂಪುಟ 24. ಸಂಖ್ಯೆ 1. ಪು. 82, ಮತ್ತು ಸಂಪುಟ 25. ಸಂಖ್ಯೆ 1, ಪು. 33 ಮತ್ತು 48.
6. ಉದಾ. ನೋಡಿ : 'ಕ.ಸಾ.ಪ. ಅಧ್ಯಕ್ಷರ ಭಾಷಣಗಳು' (ಸಂ) ರಂ. ಶ್ರೀ. ಮುಗಳಿ (ಬೆಂಗಳೂರು 1970) ಪು. 231-234 ಮತ್ತು ಕ.ಸಾ ಪ.ಪ. ಸಂಪುಟ 21 ಸಂಖ್ಯೆ 2 ಪು. 129 ಮತ್ತು ಸಂಪುಟ 25 ಸಂಖ್ಯೆ 1 ಪು. 48.
7. ಕ.ಸಾ.ಪ.ಪ ಸಂಪುಟ 25 ಸಂಖ್ಯೆ 1 ಪು. 347 ಮತ್ತು 348 ಮತ್ತು ಪು. 268-306.
8. Manor James – 'Political change in an Indian State Mysore. 1917-1955'. (New Delhi – 1977) P. 81
9. ದಿವಾಕರ ರಂಗನಾಥ 'ಕರ್ನಾಟಕದ ಏಕೀಕರಣದ ಕಥೆ' ಪು. 3 ಮತ್ತು Hindu 26 May 1950.
10. ದಿವಾಕರ ರಂಗನಾಥ. ಮೇಲಿನದೇ ಪು. 52-53 ಮತ್ತು ಕಾಮತ್. ಸೂ. ಪು. 307
11. ಕ.ಸಾ ಪ.ಪ. ಸಂಪುಟ 24 ಸಂಖ್ಯೆ 1 ಪು 10, ಮತ್ತು ಪು 27-57 ಹಾಗೂ ಶ್ರೀರಂಗ opp. cit
12. ಇಲ್ಲಿ ಆಸಕ್ತಿ ಕೆರಳಿಸುವುದೆಂದರೆ ಏಕೀಕರಣದ ಬೆಂಬಲಿಗರಾಗಿದ್ದ ಹೆಚ್. ಸಿ. ದಾಸಪ್ಪ ಮತ್ತು ಸಚಿವ ಎ. ಜಿ. ರಾಮಚಂದ್ರರಾವ್, ಇಬ್ಬರೂ ಕಟ್ಟಾ ವಿರೋಧಿಗಳಾದರು. ನೋಡಿ Deccan Herald 16 Nov. 1955, ಮತ್ತು ದಾವಣಗೆರೆ ಏಕೀ ಕರಣ ಸಭಾಧ್ಯಕ್ಷರಾದ ಕೆ. ಆರ್. ಕಾರಂತರ ಭಾಷಣ ಉದ್ಧೃತ ದಿವಾಕರ 'ಕರ್ನಾಟಕದ ಏಕೀಕರಣದ ಕಥೆ' ಪು. 56-60

13. ಅದೇ ಪು. 67.
14. Diwakar R. R. ಒಂದನೆಯ ಟಿಪ್ಪಣಿ ನೋಡಿ ಪು. 52
15. ಎಂ.ಪಿ.ಎಲ್. ಶಾಸ್ತ್ರಿಗಳೊಡನೆ ಸಂದರ್ಶನ 27 ಫೆಬ್ರವರಿ, 1983. ಶಾಸ್ತ್ರಿಗಳು ಏಕೀಕರಣವನ್ನು ಬಲವಾಗಿ ವಿರೋಧಿಸಿದ್ದರು. ವರದಿ ಚರ್ಚೆಯಾದಾಗ ಅವರು ಶಾಸಕರು.
16. Diwakar R. R. 'ಟಿಪ್ಪಣಿ ಒಂದು' ಪು. 954 ಮತ್ತು Mysore Legislative Assembly Debates November 29. 1955 p. 2 (M.L.A.D)
17. Mysore Legislative Council Debates (MLCD) 10 Oct. 1955 p. 774.
18. M.L.C.D 1955 p. 774 ಮತ್ತು ಗೊರೂರು ರಾಮಸ್ವಾಮಿ ಐಯ್ಯಂಗಾರರೊಡನೆ ಸಂದರ್ಶನ 3 ಮಾರ್ಚ್ 1983. ಗೊರೂರರು ಏಕೀಕರಣದ ಪರವಾಗಿದ್ದು ಆಗ ಶಾಸಕರಾಗಿದ್ದರು.
19. Hutchamasti Gowda in the Assembly M. L. A. D. Extracts of Debates as S. R. C. Report Part II. 1955. P. 333.
20. Deecan Herald 6 November 1955.
21. M.L.A.D. Extracts Part I. Pp. 3–4.
22. Deccan Herald 11 and 16 November 1955
23. For details see M. L. C. D 1955. p. 577 and 581. M.L.A.D 1955. Nov. 1955. p. 740 Also, Deccan Herald 5. Nov. 1955
24. The three Ministers were Kadidal Manjappa, T. Channaiah and A. G. Ramachandra Rao. The Minister who spoke in the Council was T. Channaiah see. M.L.C.D 1955. p. 161 Also. For the clash between Chief Minister and Ramachandra Rao, see. M.L.A.D. 17 Nov. also Deccan Herald 18 Nov. 1955.
25. M.L.C.D p. 740. The members of the Sub committee were, Nehru, G. B. Pant, Maulana Azad and Dhebar.
26. Deccan Herald 18 Nov. 1955.
27. M.L.C.D. p. 739. The member was B. K. Puttaramaiah, who in fact staged a walk out protesting against the central decision
28. M.L.C.D P. 784. The member was M.P.L Sastry.

29. M.L.A.D. 1 Dec. 1955 p. 451. While 57 members voted in favour, the others abstained from voting. Only 3 voted against the motion.

30. Deccan Herald 18 Nov. 1955. Also M.L.C.D. 1955. p. 664 and Extracts M.L.A.D. Part I. p. 8.

31. Reddy K. C. to S. Channaiah 10 Nov. 1955 (S. Channaiah papers in Karnataka State Archives). Also Deccan Herald 1. Nov. 1955.

32. ದಿವಾಕರ ರಂಗನಾಥ 'ಮೂರನೇ ಟಿಪ್ಪಣಿ ನೋಡಿ'. ಪು. 142.

33. Reddy K. C. to S. Channaiah 10 Nov. 1955.

34. Mirza Ismail to D. V. Gundappa 25 Aug. 1955. (D. V. Gundappa papers K. S. A)

35. D. V. Gundappa to R. R. Diwakar 25 Nov. 1955

36. Deccan Herald 1, 29, 30 Nov. 1955.

37. ಆಲೂರು ವೆಂಕಟರಾವ್ ಕರ್ನಾಟಕ ಕುಲಪುರೋಹಿತ 'ಕರ್ನಾಟಕತ್ವದ ಜಾಗೃತಿ'. (ಧಾರವಾಡ - 1956) ಪು. 23-24.

ಚಾಲುಕ್ಯ ಅಕ್ಕಾದೇವಿ

ಚೆನ್ನಕ್ಕ ಎಲಿಗಾರ

ಕರ್ನಾಟಕದಲ್ಲಿ ಶಾಸನೋಕ್ತ ಮಹಿಳೆಯರ ಇತಿಹಾಸ ಪ್ರಾರಂಭವಾಗುವುದು ಕದಂಬರ ಕಾಲದಿಂದ. ಅಲ್ಲಿಂದ ಮೊದಲಾಗಿ ಶಾಸನಗಳಲ್ಲಿ ಪ್ರಭುವರ್ಗದ ಮತ್ತು ಉನ್ನತವರ್ಗದ ಮಹಿಳೆಯರು ಒಡಮೂಡಿ ನಿಂತಿರುವರು. ಮಹಿಳೆ ಪ್ರಥಮವಾಗಿ ಸಮಾಜವನ್ನು ಪ್ರತಿನಿಧಿಸುವುದು ಗೃಹಿಣಿಯಾಗಿ. ಇದೊಂದು ಸೀಮಿತಕ್ಷೇತ್ರವೆಂದೇ ಹೇಳಬೇಕು. ಆದರೆ ಕೆಲವು ಮಹಿಳೆಯರು ಈ ಸೀಮಿತ ಪರಿಸರ ಮೀರಿ ಜೀವನದಲ್ಲಿ ಹೆಚ್ಚಿನದನ್ನು ಸಾಧಿಸಿದವರುಂಟು. ಇವರಲ್ಲಿ ಕೆಲವರು ಸ್ಥಾನಬಲದಿಂದ ಪ್ರಾಮುಖ್ಯತೆ ಪಡೆದರೆ ಇನ್ನು ಕೆಲವರು ಸ್ವಕಾರ್ಯಬಲದಿಂದ ಪ್ರಾಮುಖ್ಯತೆ ಪಡೆದವರು. ಪ್ರಭುವರ್ಗದ ಕೆಲವು ಮಹಿಳೆಯರು ಸ್ವತಂತ್ರ ಆಡಳಿತ ನಡೆಸುವಲ್ಲಿ, ಯುದ್ಧ, ವೀರಮರಣದಂತಹ ಸಾಹಸಕಾರ್ಯ ನಿರ್ವಹಿಸುವಲ್ಲಿ ತಮ್ಮ ಅಗ್ಗಳಿಕೆ ಮೆರೆದುದುಂಟು. ಇವರಲ್ಲಿ ಕಲ್ಯಾಣಿ ಚಾಲುಕ್ಯ ಮಹಿಳೆಯರಿಗೆ ದೊರೆತ ಅವಕಾಶ ಗಮನಾರ್ಹವೆಂದೇ ಹೇಳಬೇಕು. ರಾಣಿ ಅಕ್ಕಾದೇವಿ ಚಾಲುಕ್ಯ ಅರಸಿಯರ ಪಾಲಿಗೆ ರತ್ನಕಿರೀಟವೆನಿಸಿರುವಳು. ಸಾಹಿತ್ಯ, ಧರ್ಮ, ರಾಜ್ಯಾಡಳಿತ, ಯುದ್ಧ ಮೊದಲಾದ ಹಲವು ರಂಗಗಳಲ್ಲಿ ಅಕ್ಕಾದೇವಿಯ ವ್ಯಕ್ತಿತ್ವ ನೆಲೆನಿಂತಿದೆ.

ಕಲ್ಯಾಣದ ಚಾಲುಕ್ಯರಲ್ಲಿ ಸ್ವತಂತ್ರ ರಾಜ್ಯಭಾರ ನಡೆಸಿದ ಕೆಲವೇ ರಾಣಿಯರಲ್ಲಿ ಅಕ್ಕಾದೇವಿ ಅದ್ವಿತೀಯಳು. ಚಾಳುಕ್ಯ ದಶವರ್ಮ ಬಾಗಲದೇವಿಯರ ಮಗಳಾದ ಈಕೆಯು ಹೆಸರಿನಲ್ಲಿ ಸೂಡಿ (ಕ್ರಿ.ಶ. 1010)[1] ಬೇಲೂರು (ಕ್ರಿ.ಶ. 1022)[2] ಹೊಟ್ಟೂರು (ಕ್ರಿ.ಶ. 1037)[3] ಅರಸಿಬೀದಿ (ಕ್ರಿ.ಶ. 1047)[4] ಸೂಡಿ (ಕ್ರಿ.ಶ. 1050),[5] ಕೋರಲಹಳ್ಳಿ (ಕ್ರಿ.ಶ. 1050),[6] ಅರಸಿಬೀದಿ (ಕ್ರಿ.ಶ. 1053),[7]

---

1 ಎ. ಇ. XV 6 ಸೂಡಿ (ತಾ) ರೋಣ (ಕ್ರಿ.ಶ. 1010)

2 ಆಯ್. ಎ. XVIII ಪು. 270-75 ಬೇಲೂರು (ತಾ) ಬದಾಮಿ (ಕ್ರಿ.ಶ. 1022)

3 ಎ. ಇ. XVI 11 ಹೊಟ್ಟೂರು (ತಾ) ಬಂಕಾಪುರ (ಕ್ರಿ.ಶ. 1037)

4 ಎ. ಇ. XVII 10 ಅರಸಿಬೀದಿ (ತಾ) ಹುನಗುಂದ (ಕ್ರಿ.ಶ. 1047)

5 ಎ. ಇ. XV 6 ಸೂಡಿ (ತಾ) ರೋಣ (ಕ್ರಿ.ಶ. 1050)

6 ಬಿ. ಕೆ. ಆಯ್ I 1 86 ಕೋರಲಹಳ್ಳಿ (ತಾ) ಮುಂಡರಗಿ (ಕ್ರಿ.ಶ. 1050)

7 ಬಿ. ಕೆ. ಆಯ್ I 1 88 ಅರಸಿಬೀದಿ (ತಾ) ಹುನಗುಂದ (ಕ್ರಿ.ಶ. 1053)

ಸೂಡಿ (ಕ್ರಿ.ಶ. 1054)[8], ಸೂಡಿ (ಕ್ರಿ.ಶ. 1058)[9], ಹೊಟ್ಟೂರು (ಕ್ರಿ.ಶ. 1064)[10] ಹೀಗೆ ಹತ್ತು ಶಾಸನಗಳು ಲಭಿಸುತ್ತವೆ. ಇವು ಸಾಮಾನ್ಯವಾಗಿ ಇವಳನ್ನು "ಸ್ವಸ್ತ್ಯನವರತ ಪರಮ ಕಲ್ಯಾಣಾಭ್ಯುದಯ ಸಹಸ್ರಫಳಭೋಗಭಾಗಿನಿ ದ್ವಿತೀಯ ಲಕ್ಷ್ಮೀಸಮಾನೆಯುರಗಣಿತ ದಾನಚಿಂತಾಮಣಿ ವಿವೇಕಚೂಡಾಮಣಿಗಳೇಕವಾಕ್ಯೆಯುಂಗುಣದ ಬೆಡಂಗಿ"[11], ಎಂದು "ಸಕಲ ಜಗತ್ ಪ್ರಣುತೆಯುಂ ಸಮಸ್ತ ರಿಪುನೃಪ ಅರ್ಚಿತಚರಣಾರವಿಂದೆ ವಿವೇಕ ಚೂಡಾಮಣಿಯುಂ ದೀನಾನಾಥ ಚಿಂತಾಮಣಿಯುಂ ಸ್ವವಂಶವರ್ಧನೈಕಸಾಕ್ಷಲಕ್ಷ್ಮಿಯುಂ ಪರಿಜನಕ್ಷಾಪಿ(ಕ್ಷೆ) ಯುಂ ವಸುಧಾಜನ ಕಾಮಧೇನುವುಂ ಏಕವಾಕ್ಯೆಯುಂ ಗುಣದಬೆಡಂಗಿ"[12] ಎಂದು "ಸ್ವಸ್ತಿ ಅರಿನೃಪಮುಕುಟಘಟ್ಟಿತ ಚರಣಾರವಿಂದೆಯುರ್ ಗುಣದಬೆಡಂಗಿ"[13] ಎಂದು ಸ್ತುತಿಸಿವೆ. 'ರಣಭೈರವಿ', 'ಉಜ್ಜಂಡಭೈರವಿ' ಎಂಬ ವಿಶಿಷ್ಟ ಬಿರುದುಗಳು ಬೇಲೂರಿನ ಶಾಸನದಲ್ಲಿ ಕಂಡುಬರುತ್ತವೆ.[14]

ಸೂಡಿ (ಕ್ರಿ.ಶ. 1010)[15] ಶಾಸನದ ಪ್ರಾರಂಭದ ಕಲ್ಯಾಣಚಾಲುಕ್ಯ ತ್ರಿಭುವನಮಲ್ಲ 5ನೆಯ ವಿಕ್ರಮಾದಿತ್ಯನ ಉಲ್ಲೇಖ, ಬೇಲೂರು (ಕ್ರಿ.ಶ. 1022)[16] ಹೊಟ್ಟೂರು (ಕ್ರಿ.ಶ. 1037)[17], ಶಾಸನಗಳಲ್ಲಿ ಜಗದೇಕಮಲ್ಲ ಜಯಸಿಂಹರ ಉಲ್ಲೇಖಗಳೂ ಮುಂದೆ ಅರಸಿಬೀಡಿ (ಕ್ರಿ.ಶ. 1047),[18] ಸೂಡಿ (ಕ್ರಿ.ಶ. 1050)[19], ಕೊರಲಹಳ್ಳಿ (ಕ್ರಿ.ಶ. 1050)[20] ಅರಸಿಬೀಡಿ (ಕ್ರಿ.ಶ. 1053),[21] ಸೂಡಿ (ಕ್ರಿ.ಶ. 1054)[22], ಹೊಟ್ಟೂರು (ಕ್ರಿ.ಶ. 1064)[23] ಶಾಸನ

8 ಎ. ಇ. XV 6 ಸೂಡಿ (ತಾ) ರೋಣ (ಕ್ರಿ.ಶ. 1054)
9 ಎ. ಇ. XV 6 ಸೂಡಿ (ತಾ) ರೋಣ (ಕ್ರಿ.ಶ. 1058)
10 ಎ. ಇ. XVI 11 ಹೊಟ್ಟೂರು (ತಾ) ಬಂಕಾಪುರ (ಕ್ರಿ.ಶ. 1064)
11 ಎ. ಇ. XV 6 ಸೂಡಿ (ತಾ) ರೋಣ (ಕ್ರಿ.ಶ. 1010)
12 ಆಯ್ ಎ. XVIII ಪು. 270-75 ಬೇಲೂರು (ತಾ) ಬದಾಮಿ (ಕ್ರಿ.ಶ. 1022)
13 ಎ. ಇ. XVII 10 ಅರಸಿಬೀಡಿ (ತಾ) ಹುನಗುಂದ (ಕ್ರಿ.ಶ. 1048)
14 ಆಯ್ ಎ. XVIII ಪು. 270-75 ಬೇಲೂರು (ತಾ) ಬದಾಮಿ (ಕ್ರಿ.ಶ. 1022)
15 ಎ. ಇ. XV 6 ಸೂಡಿ (ತಾ) ರೋಣ (ಕ್ರಿ.ಶ. 1010)
16 ಆಯ್ ಎ. XVIII ಪು. 270-75 ಬೇಲೂರು (ತಾ) ಬಾದಾಮಿ (ಕ್ರಿ.ಶ. 1022)
17 ಎ. ಇ. XVI 11 ಹೊಟ್ಟೂರು (ತಾ) ಬಂಕಾಪುರ (ಕ್ರಿ.ಶ. 1037)
18 ಆಯ್. ಇ. XVII 10 ಅರಸಿಬೀಡಿ (ತಾ) ಹುನಗುಂದ (ಕ್ರಿ.ಶ. 1047)
19 ಎ. ಇ. XV 6 ಸೂಡಿ (ತಾ) ರೋಣ (ಕ್ರಿ.ಶ. 1010)
20 ಬಿ. ಕೆ. ಐ. I I 86 ಕೋರಲಹಳ್ಳಿ (ತಾ) ಮುಂಡರಗಿ (ಕ್ರಿ.ಶ. 1050)
21 ಬಿ. ಕೆ. ಆಯ್ I I 88 ಅರಸಿಬೀಡಿ (ತಾ) ಹುನಗುಂದ (ಕ್ರಿ.ಶ.1053)
22 ಎ. ಇ. XV 6 ಸೂಡಿ (ತಾ) ರೋಣ (ಕ್ರಿ.ಶ. 1054)
23 ಎ. ಇ. XVI 11 ಹೊಟ್ಟೂರು (ತಾ) ಬಂಕಾಪುರ (ಕ್ರಿಶ. 1064)

ಗಳಲ್ಲಿ ತ್ರೈಲೋಕ್ಯಮಲ್ಲನ ಉಲ್ಲೇಖ ಬರುವುದರಿಂದ ಇವಳು ಅಣ್ಣ ತ್ರಿಭುವನ ಮಲ್ಲ ತಮ್ಮ ಜಯಸಿಂಹ, ತಮ್ಮನ ಮಗ ಸೋಮೇಶ್ವರ ಹೀಗೆ ಮೂರು ಜನ ಅರಸರ ಆಳ್ವಿಕೆಯಲ್ಲಿ ಬಾಳಿದಳೆಂದು ಸ್ಪಷ್ಟವಾಗುತ್ತದೆ.

ಕ್ರಿ.ಶ. 1010[24] ಮತ್ತು ಕ್ರಿ.ಶ. 1022[25] ಶಾಸನಗಳು ಅಕ್ಕದೇವಿ "ಕಿಸುಕಾಡು ಎಳ್ಪತ್ತು" ಆಳುತ್ತಿದ್ದಳೆಂದೂ ಉಲ್ಲೇಖಿಸಿವೆ. ಕ್ರಿ.ಶ. 1037ರ ಹುಟ್ಟೂರು ಶಾಸನ "ಅಕ್ಕಾದೇವಿಯರ್ ವಾನವಾಸೆ ಪನ್ನಿರ್ಚ್ಛಾಸಿರಮುಮಂ ಸುಖಸಂಕಥಾವಿನೋದದಿಂ ಆಳುತ್ತಮಿರೆ" ಎಂದು ಹೇಳಿ ಮುಂದೆಯೆ ''ಬನವಾಸಿ ಪುರವರೇಶ್ವರಂ.......... ಹರಿಕಾಂತನಸಿಂಗ.........ಶ್ರೀಮನ್ ಮಯೂರವರ್ಮದೇವರು ಬನವಾಸಿ ಪನ್ನಿರ್ಚ್ಛಾಸಿರಮುಮಂ ಪಾನುಂಗಲ್ಲೈನೂರುಮನ್ ಏಕಾಯುತ ಪದಿನಾಳ್ದು ಸುಖಸಂಕಥಾವಿನೋದದೊಳಿರೆ' ಎಂದು ಹೇಳುತ್ತದೆ.[26] ಹೀಗಾಗಿ ಕ್ರಿ.ಶ. 1037ಕ್ಕೆ ಹಿಂದೆಯೆ ಅಕ್ಕಾದೇವಿ ಕದಂಬ ಮಯೂರವರ್ಮನನ್ನು ಮದುವೆಯಾಗಿದ್ದು ಕೆಲಕಾಲ ಅವನೊಂದಿಗೆ ಅದೇ ಪ್ರದೇಶದಲ್ಲಿ ಆಳಿದಳೆಂದು ಹೇಳಬೇಕಾಗುತ್ತದೆ. ರಾಜನಿಗಿಂತ ಮೊದಲು ಇಲ್ಲಿ ಅಕ್ಕಾದೇವಿಯ ಹೆಸರು ಬಂದುದಕ್ಕೆ ಇವಳು ಚಕ್ರವರ್ತಿ ಮನೆತನದವಳೆಂಬುದು ಇಲ್ಲವೇ ಆ ಪ್ರದೇಶದಲ್ಲಿ ಮಾತೃಪ್ರಧಾನ ಕುಟುಂಬ ಪದ್ಧತಿ ಪ್ರಚಲಿತವಿದ್ದುದು ಕಾರಣವಾಗಿರಬೇಕು. ಮುಂದೆ ಕ್ರಿ.ಶ. 1047ರ ಕಾಲಕ್ಕೆ ಅಕ್ಕಾದೇವಿ ಕಿಸುಕಾಡಿನ ವಿಕ್ರಮಪುರದ ಗುಣದಬೆಡಂಗಿ ಜಿನಾಲಯಕ್ಕೆ ದತ್ತಿ ಕೊಟ್ಟುದರಿಂದ[27] ಈ ಕಾಲಕ್ಕೆ ಇವಳು ಬನವಾಸಿಯ ಆಡಳಿತವನ್ನು ಬಿಟ್ಟು ಮತ್ತೆ ಕಿಸುಕಾಡು ಪ್ರದೇಶವನ್ನೇ ತನ್ನ ಕೇಂದ್ರವನ್ನಾಗಿಸಿಕೊಂಡಿರುವ ಸಾಧ್ಯತೆ ಇದೆ. ಈ ಊಹೆಯನ್ನು ''ಶ್ರೀಮದಕ್ಕಾದೇವಿಯರ್ ಕಿಸುಕಾಡೆಳ್ಪತ್ತುಮ-ತೊರೆಗರೆ ಅರುವತ್ತುಮಂ ಮಾಸವಾಡಿ ನೂರನಾಲ್ವತ್ತುಮಂ ದುಷ್ಟನಿಗ್ರಹ ವಿಶಿಷ್ಟ ಪ್ರತಿಪಾಳನದಿಂ ಸಲುತ್ತಮಿರೆ'' ಎಂಬ ಕ್ರಿ. ಶ. 1050ರ ಸೂಡಿ ಶಾಸನದ[28] ''ಶ್ರೀಮದಕ್ಕಾದೇವಿಯರ್ ಕಿಸುಕಾಡೆಳ್ಪತ್ತುಮಂ ಬಾಗಡಗೆಯುಳ್ಪತ್ತುಮಂ ತೊರಗಲೆ......ಮಂ ಮಾಸೆಯವಾಡಿ ನೂರನಾಲ್ವತ್ತುಮಂ ದುಷ್ಟನಿಗ್ರಹ ವಿಶಿಷ್ಟ ಪ್ರತಿಪಾಳನದಿಂ ರಾಜ್ಯಂಗೆಯುತ್ತಂ'' ಎಂಬ ಕ್ರಿ.ಶ. 1050ರ ಕೋರಲಹಳ್ಳಿ ಶಾಸನದ[29] ಉಲ್ಲೇಖಗಳು ದೃಢಪಡಿಸುತ್ತವೆ. ಈ ಅಂಶವನ್ನು ಅರಸಿಬೀದಿ (ಕ್ರಿ ಶ. 1053)[30], ಸೂಡಿ

---

24 ಎ. ಇ. XV 6 ಸೂಡಿ (ತಾ) ರೋಣ (ಕ್ರಿ.ಶ. 1010)

25 ಆಯ್ ಎ. XVIII ಪು. 270-75 ಬೇಲೂರು (ತಾ) ಬದಾಮಿ (ಕ್ರಿ.ಶ. 1022)

26 ಎ.ಇ. XVI 11 ಹೊಟ್ಟೂರು (ತಾ) ಬಂಕಾಪುರ (ಕ್ರಿ.ಶ. 1037)

27 ಎ.ಇ. XVII 10 ಅರಸಿಬೀದಿ (ತಾ) ಹುನಗುಂದ (ಕ್ರಿ.ಶ. 1047)

28 ಎ.ಇ. XV 6 ಸೂಡಿ (ತಾ) ರೋಣ (ಕ್ರಿ.ಶ. 1050)

29 ಬಿ.ಕೆ. ಆಯ್ I i 86 ಕೋರಲಹಳ್ಳಿ (ತಾ) ಮುಂಡರಗಿ (ಕ್ರಿ ಶ. 1050)

30 ಬಿ.ಕೆ.ಆಯ್. I i 88 ಅರಸಿಬೀದಿ (ತಾ) ಹುನಗುಂದ (ಕ್ರಿ.ಶ. 1053)

(ಕ್ರಿ.ಶ. 1054)[31] ಶಾಸನಗಳೂ ಬೆಂಬಲಿಸುತ್ತವೆ. ಹೀಗಾಗಿ ಇವಳು ಕೆಲವೇ ವರ್ಷ ಮಾತ್ರ ಬನವಾಸಿ ನಾಡಿನಲ್ಲಿದ್ದು ಆಮೇಲೆ ಅನೇಕ ವರ್ಷ ಬಿಜಾಪುರ ಜಿಲ್ಲೆಯ ದಕ್ಷಿಣ ಭಾಗದಲ್ಲಿಯೇ ಅರ್ಥಪೂರ್ಣ ಆಳ್ವಿಕೆ ನಡೆಸಿದಳೆಂದು ಹೇಳಬೇಕಾಗುತ್ತದೆ. ಈ ಸ್ಥಳಾಂತರಕ್ಕೆ ಬಹುಶಃ ಗಂಡ ಮಯೂರವರ್ಮನ ಮರಣ ಇಲ್ಲವೆ ಪತಿಯೊಂದಿಗಿನ ಮನಸ್ತಾಪ ಕಾರಣವಾಗಿರಬಹುದು.

ಮಹಾಮಂಡಳೇಶ್ವರನಾಗಿ 'ವನವಾಸಿ ಪನ್ನಿಚ್ಛಾಸಿರಮುಂ ಪಾನುಂಗಲ್ಲ ಐನೂರುಮಂ' ಆಳುತ್ತಿದ್ದ ತೋಯಿಮರಸ ಇವಳ ಮಗನೆಂಬುದನ್ನು 'ತೋಯಿಮದೇವರಬ್ಬೆಗಳ್ ಶ್ರೀಮದ್ ಅಕ್ಕಾದೇವಿಯರು'' ಎಂಬ ಹೊಟ್ಟೂರು (ಕ್ರಿ.ಶ. 1044) ಶಾಸನದ ಹೇಳಿಕೆ ಸ್ಪಷ್ಟಪಡಿಸಿದೆ[32]. ಈ ಶಾಸನದಲ್ಲಿ ತಂದೆಯಾದ ಮಯೂರವರ್ಮನ ಉಲ್ಲೇಖವಿಲ್ಲ. ಆದರೆ ಕ್ರಿ.ಶ. 1037ರ ಹೊಟ್ಟೂರು ಶಾಸನದಲ್ಲಿ ಮಯೂರವರ್ಮನನ್ನು 'ಪರಿಕಾಂತನ ಸಿಂಗ'ನೆಂದು[33] ಕ್ರಿ.ಶ. 1064ರ ಹೊಟ್ಟೂರು ಶಾಸನದಲ್ಲಿ ತೋಯಿಮದೇವರಸನನ್ನು ''ಪರಿಗನಸಿಂಗ''[34] ಎಂದು ಕರೆದಿರುವುದರಿಂದ ಈ ಬಿರುದು ಸಾಮ್ಯತೆ ಗಮನಿಸಿ ವಿದ್ವಾಂಸರು ಇವರು ತಂದೆ ಮಕ್ಕಳೆಂದು ಊಹಿಸಿದ್ದಾರೆ.

ಕಿಸುಕಾಡು ಪ್ರದೇಶವನ್ನಾಳುವಾಗಿನ ಇವಳ ರಾಜಧಾನಿ ವಿಕ್ರಮಪುರ. ತರುವಾಯ ಇದು ಅರಸಿ ಬೀದಿ ಎಂದು ಹೆಸರಾಗಿದೆ. ಇದನ್ನು ಇಂದಿಗೂ ಅರಸಿ ಬೀದಿ ಎಂದು ಕರೆಯುತ್ತಾರೆ. ಗಂಡ ಮತ್ತು ಮಗನ ಆಡಳಿತವನ್ನು ಉಲ್ಲೇಖಿಸುವ ಹೊಟ್ಟೂರಿನ ಎರಡು ಶಾಸನಗಳನ್ನು ಬಿಟ್ಟರೆ ಉಳಿದ ಎಂಟು ಶಾಸನಗಳಲ್ಲಿ ನಾಲ್ಕು ಸೂಡಿಗೆ ಸಂಬಂಧಿಸಿದುದರಿಂದ ಸೂಡಿ ಗ್ರಾಮ ಇವಳ ಚಟುವಟಿಕೆಯ ಇನ್ನೊಂದು ಕೇಂದ್ರವಾಗಿರಲು ಸಾಧ್ಯವಿದೆ.

ಕ್ರಿ.ಶ. 1010ರಲ್ಲಿ ಆಡಳಿತ ಕೈಗೆತ್ತಿಕೊಂಡ ಈಕೆ ಕ್ರಿ.ಶ. 1022ರ ಬೇಲೂರು ಶಾಸನದಲ್ಲಿ ''ಸ್ವಮಂತವರ್ಧನೈಕಸಾಕ್ಷಲಕ್ಷ್ಮಿ'' ಎಂದು ಕೀರ್ತಿತಳಾಗಿರುವುದರಿಂದ ಈ ಸುಮಾರಿಗೆ ಇನ್ನೂ ಇವಳ ಮದುವೆಯಾಗಿರಲಿಕ್ಕಿಲ್ಲ. ಈ ಸಮಯದಲ್ಲಿ ಇವಳು ಬನವಾಸಿಯಿಂದ ದೂರದ ಕಿಸುಕಾಡನ್ನು ಆಳುತ್ತಿದ್ದುದೂ ಈ ಹೇಳಿಕೆಯನ್ನು ಸಮರ್ಥಿಸುತ್ತದೆ.[36] ಹೀಗಾಗಿ ಇವಳು ಕ್ರಿ.ಶ. 1022[37] ಮತ್ತು ಕ್ರಿ.ಶ.

31 ಎ.ಇ. XV 6 ಸೂಡಿ (ತಾ) ರೋಣ (ಕ್ರಿ.ಶ. 1054)
32 ಎ.ಇ. XVI 11 ಹೊಟ್ಟೂರು (ತಾ) ಬಂಕಾಪುರ (ಕ್ರಿ.ಶ. 1064)
33 ಎ.ಇ. XVI 11 ಹೊಟ್ಟೂರು (ತಾ) ಬಂಕಾಪುರ (ಕ್ರಿ.ಶ. 1037)
34 ಎ.ಇ. XVI 11 ಹೊಟ್ಟೂರು (ತಾ) ಬಂಕಾಪುರ (ಕಿ.ಶ. 1064)
35 ಆಯ್.ಎ. XVIII 270-75 ಬೇಲೂರು (ತಾ) ಬದಾಮಿ (ಕ್ರಿ.ಶ. 1022)
36 ಆಯ್.ಎ. XVIII 270-75 ಬೇಲೂರು (ತಾ) ಬದಾಮಿ (ಕ್ರಿ.ಶ. 1022)
37 ಆಯ್.ಎ. XVIII 270-75 ಬೇಲೂರು (ತಾ) ಬದಾಮಿ (ಕ್ರಿ.ಶ. 1022)

1037[38] ರ ಮಧ್ಯೆ ಮದುವೆಯಾಗಿ ಬನವಾಸಿ ನಾಡಿನ ಶಾಸನದಲ್ಲಿ ಉಲ್ಲೇಖಿತ ಳಾದಂತಿದೆ.

ಕ್ರಿ.ಶ. 1010 ರ ಸೂಡಿಯ ಶಾಸನ[39] ಇವಳ ಸಾಮಾನ್ಯ ಬಿರುದುಗಳನ್ನು ಹೇಳಿದರೆ ಕ್ರಿ.ಶ. 1022 ರ ಶಾಸನ[40] ಇವಳನ್ನು ರಣಭೈರವಿ ಎಂದು ಮುಂತಾಗಿ ವೀರೋಚಿತ ಶಬ್ದಗಳಿಂದ ಪ್ರಥಮ ಬಾರಿ ಕರೆದುದರಿಂದ ಕ್ರಿ.ಶ. 1010 ಮತ್ತು ಕ್ರಿ.ಶ. 1022 ರ ಮಧ್ಯೆ ಅವಳು ರಣೋದ್ಯೋಗದಲ್ಲಿ ತೊಡಗಿರುವುದು ಸ್ಪಷ್ಟ ವಾಗುತ್ತದೆ. ಆದರೆ ಯಾವುದೇ ಶಾಸನದಲ್ಲಿ ಇವಳು ಕೈಕೊಂಡ ಯುದ್ಧಗಳ ನೇರ ವಾದ ಉಲ್ಲೇಖ ಬರುವುದಿಲ್ಲ. ಆದರೆ ಬೇಲೂರಿನ ಶಾಸನದ

ಶ್ರೀವನಿತೆಯೆನಿಸಿದ ಅಕ್ಕಾ
ದೇವಿಗೆ ವಾಗ್ದೇವಿಗಖಿಳಜನನುತ ಸೀತಾ
ದೇವಿಗೆ ಮಾಉದೇವಿಗೆ ಭೂ
ದೇವಿಗೆ ಸಮನೆಂಬ ನೃಪಸುತಸಮುದಯಮಂ ॥

ಗುಣದ ಬೆಡಂಗಿಯೆನಲ್ ಸ
ದ್ಗುಣಮಂ ನೆಗಳ್ದೇಕವಾಕ್ಯಯುನೆ ಸೂನೃತಮಂ
ರಣಭೈರವಿಯೆನೆ ಶೌರ್‍ಯದ
ಗುಣಮನದೇನೆಂದು ಬಣ್ಣಿಪೆಂ ನೃಪಸುತೆಯಾ ॥

ಜನಕಂ ಶ್ರೀದಸವರ್ಮದೇವನಭಯಂ ಚಲುಕ್ಯವಜ್ರಂ ದಿನೇ
ಶನಿಭಂ ಭಾಗಲದೇವಿ ಪುಣ್ಯವತಿ ಸತ್ಯಾಲಾಪೆ ತಾಯ ಚಕ್ರವ
ರ್ತಿನಿಜ ಪ್ರೋಜ್ವಲಕೀರ್ತಿ ಜಯಸಿಂಹ ತಮ್ಮನೆಂದೆಂಬೆ ಮೇ
ದಿನಿಯೊಳ್ ಶ್ರೀ ನೆಗಳ್ದೇಕವಾಕ್ಯೆಯ ಯಶಪ್ರಖ್ಯಾತಿ ಸಾಮಾನ್ಯಮೇ ॥

ಅವಿನಮ್ರಾರಿನೃಪಾಳಕಪ್ರಳಯ ಸಂಪಾದಕ್ಷಮೋಚ್ಚಂಡ ಭೈ
ರವಿ ತಾನಾಗಿಯುಮೆಯ್ದೆ ಶಾಂತತರರೂಪನ್ವೀತೆ ನಿರ್ಭತ್ಸನಾ
ರವ ಸಿಂಹಾಗ್ರಜೆಯಾಗಿಯುಂ ಮದಗಜೋದ್ಯದ್ಯಾನೆಯೇದೆಂದು ಧಾ
ತವಿಚಿತ್ರಂ ನೆಗಳ್ದೇಕವಾಕ್ಯೆಯ ಚರಿತ್ರಂ ಭೂರಿಭೂಚಕ್ರದೊಳ್"

ಜಿನಬುಧ ಅನಂತ ರುದ್ರಾಗಮ ನಿಗದಿತಧರ್ಮಂಗಳ ಮಾಡಿ ಕೈಯಾಂ
ತನ ..ವ್ರಜಕ್ಕಾಪ್ಪೆನಿತನಾನುದಿನಂ ಕೊಟ್ಟು ಸರ್ವೋರ್ವಿಯೊಳ
ದಾನನಯಾಲಂಕಾರೆ ರಾರಾಜಿಸಿದಲಖಿಳವಿದ್ಯಾರ್ಥಿ ದೀನಾವಲಿ ನಂ
ದಿನಿಯಕ್ಕಾದೇವಿ ಧರ್ಮಾಗ್ರಣಿ ವಿಮಲವಚಃಶ್ರೀ ಜಯಃಶ್ರೀ ಯಶಶ್ರೀ ॥

ಅಂತು ಸಕಲಜಗತ್‌ಪ್ರಾಣತೆಯುಂ ಸಮಸ್ತರಿಪುನ್ರಿಪ ಚರಣಾರವಿಂದೆಯುಂ ವಿವೇಕ ಚೂಡಾಮಣಿಯುಂ ದೀನಾನಾಥ ಚಿಂತಾಮಣಿಯುಂ ಸ್ವವಂಶವರ್ಧನೈಕ ಸಾಕ್ಷ

38 ಎ.ಇ. XVI 11 ಹೊಟ್ಟೂರು (ತಾ) ಬಂಕಾಪುರ (ಕ್ರಿ.ಶ. 1037)
39 ಎ.ಇ. XV 6 ಸೂಡಿ (ತಾ) ರೋಣ (ಕ್ರಿ.ಶ. 1010)
40 ಅಯ್.ಎ. XVIII 270-75 ಬೇಲೂರು (ತಾ) ಬದಾಮಿ (ಕ್ರಿ.ಶ. 1022)

ಲಕ್ಷ್ಮಿಯುಂ ಪರಿಜನಕಲ್ಪವೃಕ್ಷೆಯುಂ ವಸುಧಾಜನ ಕಾಮಧೇನುಂ ಏಕವಾಕ್ಯೆಯುಂ ಗೋಣದ ಬೆಡಂಗಿಯುಮೆನಿಸಿ ನೆಗಳ್ದ ಶ್ರೀಮದಕ್ಕಾದೇವಿಯರ್[41]" ಈ ವಿವರಗಳು ಅಕ್ಕಾದೇವಿಯ ಸತ್ವಸಾರವನ್ನೇ ಎತ್ತಿ ತೋರಿಸುತ್ತವೆ.

ಅಕ್ಕಾದೇವಿಯ ಆಡಳಿತಸ್ವರೂಪವನ್ನು ಸಮಗ್ರವಾಗಿ ಸವಿವರವಾಗಿ ಶಾಸನಗಳು ತಿಳಿಸಿಕೊಡದಿದ್ದರೂ ಅಲ್ಲಲ್ಲಿ ಸಿಗುವ ತುಂಡು ಹೇಳಿಕೆಗಳ ಆಧಾರದಿಂದ ಒಂದು ಸ್ಥೂಲಚಿತ್ರ ಕೊಡಬಹುದಾಗಿದೆ. ರಾಣಿಯರ ಆಡಳಿತಕ್ಷೇತ್ರ ವಿಸ್ತಾರವಾಗಿದ್ದರೆ ಅವರ ಕೈಕೆಳಗೆ ಸಾಮಂತ, ಮಂಡಳೇಶ್ವರ, ನಾಳ್ಗಾವುಂಡ, ಗಾವುಂಡ ಅನೇಕ ಪ್ರಮುಖ ಅಧಿಕಾರಿವರ್ಗದವರೂ ಇರುತ್ತಿದ್ದರು. ಅಕ್ಕಾದೇವಿಯ ಕೈಕೆಳಗೆ ಮಹಾ ಸಾಮಂತ ಅಜ್ಜರಭೂಪನಿದ್ದುದನ್ನು ಕೋರಲಹಳ್ಳಿಯ ಶಾಸನವೊಂದು ಉಲ್ಲೇಖಿಸಿದೆ.[42] ತನ್ನ ರಾಜ್ಯದ ಸುಭದ್ರತೆ ವ್ಯವಸ್ಥಿತ ಆಡಳಿತಗಳಿಗಾಗಿ ಇವರೊಡನೆ ರಾಣಿಯರು ಒಳ್ಳೆಯ ಸಂಬಂಧವನ್ನಿರಿಸಿಕೊಂಡಿರಬೇಕಿತ್ತು. ರಾಣಿಯರು ಅವರನ್ನು ಸಂಬೋಧಿಸುವ ರೀತಿ, ಆದರಿಸುವ ವಿಧಾನಗಳನ್ನು ಗಮನಿಸಿದರೆ ಈ ಅನ್ಯೋನ್ಯ ಸಂಬಂಧದ ಅರಿವಾಗುತ್ತದೆ. ಅಕ್ಕಾದೇವಿ ಒಂದು ಧರ್ಮಕಾರ್ಯದ ಸಂದರ್ಭದಲ್ಲಿ ತನ್ನ ಸಾಮಂತ ಅಜ್ಜರಸನೊಂದಿಗೆ ನಡೆದುಕೊಂಡ ರೀತಿಯನ್ನು ಕೋರಲಹಳ್ಳಿಯ ಶಾಸನ 'ಅರಸಿಯುರಾತನಕ್ಕರಿಂ ಬರಿಸಿ ಸುಖಾಸನದಲಿರಿಸಿ' ಎಂಬ ಮಾತಿನ ಮೂಲಕ ತಿಳಿಸುತ್ತ 'ಶಕವರ್ಷ 972ನೆಯ ಉತ್ತರಾಯಣ ಸಂಕ್ರಾನ್ತಿಯಂದು...... ದೇವಿಯರ್ ಮನ್ನೆಯಜ್ಜರಸನಂ ತನ್ನ ಸನ್ನಿಧಾನಕ್ಕೆ ಬರಿಸಿ' ಧರ್ಮಕಾರ್ಯವೊಂದಕ್ಕೆ ದತ್ತಿಬಿಟ್ಟುದನ್ನು ಹೇಳುತ್ತದೆ.[43]

ಇವರ ಕೈಕೆಳಗೆ ಸಾಮಂತ ಮಂಡಳೇಶ್ವರ ಮುಂತಾದ ಅಧಿಕಾರಿ ವರ್ಗವಿರುತ್ತಿದ್ದರಷ್ಟೆ. ಅಕ್ಕಾದೇವಿಗೆ ಸಂಬಂಧಿಸಿದ ಸೂಡಿಯ ಶಾಸನದಲ್ಲಿ 'ಶ್ರೀಮನ್ ಮನೆವರ್ಗಡೆ ಕಾಳಿದಾಸಯ್ಯ, ತಂತ್ರಪಾಳ ಮಿಳ್ಳಯ ತಂತ್ರಪಾಳ ಚಟ್ಟಿಮಯ್ಯ ಪ್ರಧಾನ ದೆಮ್ಮಣ್ಣ ಅಳಿಯಂ ಚಂದಿಮಯ್ಯ ಆದಪದ ಚಾವುಂಡರಾಯಂ ತಂತ್ರದ ಸೇನಬೋವಂ ದಾಸಿಮಯ್ಯನಿತು ಸಮಸ್ತ ಪ್ರಧಾನರುಂ ಶ್ರೀಮತ್ ನಾಡವರ್ಗಡೆ ನಾಗದೇವಯ್ಯ ಪ್ರಮುಖ ಕರಣಮುಮಿರ್ದು[44]" ಎಂಬ ಹೇಳಿಕೆ ಇದ್ದು ಇಲ್ಲಿ "ಸಮಸ್ತ ಪ್ರಧಾನರು", "ಪ್ರಮುಖ ಕರಣ" ಎಂಬ ಎರಡು ಶ್ರೇಣಿಗಳ ಸೂಚನೆಯಿದೆ. ಇವುಗಳ ನಿಜಸ್ವರೂಪ ಕಾರ್ಯಕಲಾಪಗಳು ಸ್ಪಷ್ಟವಾಗುವದಿಲ್ಲ. ಇದೇ ಸೂಡಿಯ ಇನ್ನೊಂದು ಶಾಸನ 'ಸಮಸ್ತ ಪ್ರಧಾನರುಂ' ನಾಡವೆರ್ಗಡೆ ನಾಗದೇವಯ್ಯ ಸೇನಬೋವ ರೇವದಾಸಯ್ಯ ಧರ್ಮಾಧ್ಯಕ್ಷಂ ಮಾಧವಯ್ಯನಿನ್ತೀ ಪ್ರಮುಖಕರಣಮುಂ[45]"

---

41 ಆಯ್. ಎ. XVIII 270–75 ಬೇಲೂರು (ತಾ) ಬದಾಮಿ (ಕ್ರಿ.ಶ. 1022)
42 ಬಿ. ಕೆ. ಆಯ್ I i : 270-75 ಬೇಲೂರು (ತಾ) ಬದಾಮಿ ಕ್ರಿ.ಶ. 1022)
43 ಬಿ. ಕೆ. ಆಯ್ I i : 86 ಕೋರಲಹಳ್ಳಿ (ತಾ) ಮುಂಡರಗಿ (ಕ್ರಿ.ಶ. 1050)
44 ಎ. ಇ. XV 6 ಸೂಡಿ (ತಾ) ರೋಣ (ಕ್ರಿ.ಶ. 1050)
45 ಎ. ಇ. XV 6 ಸೂಡಿ (ತಾ) ರೋಣ (ಕ್ರಿ.ಶ. 1054)

ಎಂಬ ವಾಕ್ಯವಿದ್ದು ನಾಡಪೆರ್ಗಡೆ ಸೇನಬೋವ, ಧರ್ಮಾಧ್ಯಕ್ಷರು ಕರಣವರ್ಗಕ್ಕೆ ಸಂಬಂಧಿಸಿದ ಅಧಿಕಾರಿಗಳೆಂದು ಸ್ಪಷ್ಟವಾಗುತ್ತದೆ. ರಾಜಕೀಯದಂತೆ ಧಾರ್ಮಿಕ ಕ್ಷೇತ್ರಗಳಿಗೆ ಸಂಬಂಧಿಸಿದ ಮಹತ್ವದ ಪ್ರಸಂಗಗಳಲ್ಲಿ ರಾಣಿ ಈ ಸಮಸ್ತರನ್ನು ಕೂಡಿಕೊಂಡು ಅನುಮತಿ ಪಡೆಯುತ್ತಿದ್ದಳು. ಚಾಲುಕ್ಯ ಅಕ್ಕಾದೇವಿ "ಕಿಸುಕಾಡೆಪ್ಪತ್ತುಮಂ ತೊರಗರೆಯರುವತ್ತುಮಂ ಮಾಸಿಯವಾಡಿ ನೂರನಾಲ್ವತ್ತುಮಂ ದುಷ್ಟನಿಗ್ರಹ ವಿಶಿಷ್ಟ ಪ್ರತಿಪಾಳನದಿಂ" ಆಳುತ್ತ "ವಿಕ್ರಮಪುರದ ನೆಲೆವೀಡಿನೊಳ್ ಸಮಸ್ತ ಪ್ರಧಾನರುಂ ನಾಡಪೆರ್ಗಡೆ ನಾಗದೇವಯ್ಯಂ ಸೇನಬೋವ ರೇವದಾಸಯ್ಯಂ ಧರ್ಮಾಧ್ಯಕ್ಷ ಮಾಧವಯ್ಯನಿನ್ತು ಪ್ರಮುಖಕರಣಮುಂ ಬೆರಸಿಳ್ದು" ಸೂಡಿಯ ಅಕ್ಕೇಶ್ವರ ದೇಗುಲದ ಸಂಚಾರಕವರ್ಗಕ್ಕೆ ದತ್ತಿ ಬಿಟ್ಟುದನ್ನು ಸೂಡಿಯ ಶಾಸನ ತಿಳಿಸಿದೆ.[46]

ಆಡಳಿತ ಸೂತ್ರ ಹಿಡಿದ ಈ ರಾಣಿ ನೇರವಾಗಿ ಯುದ್ಧೋದ್ಯೋಗವನ್ನು ಕೈಕೊಂಡಿದ್ದುಂಟು 'ಅರಿನೃಪಮಕುಟಘಟ್ಟಿತ ಚಾರು ಚರಣಾರವಿನ್ದೆ'[47]ಯೆಂದು ಪ್ರಸಿದ್ಧಿ ಪಡೆದ ಅಕ್ಕಾದೇವಿ ಕನ್ನಡನಾಡಿನ ವೀರಪರಂಪರೆಯಲ್ಲಿ ಅಪ್ರತಿಮ ಮಹಿಳೆ. ರಾಣಿಯರ ಪ್ರದೇಶದ ಮೇಲೆ ವೈರಿಗಳ ಕಳ್ಳಕಾಕರ ದಾಳಿ ಸಹಜವೆನಿಸಿತ್ತು. ಇಂಥ ಸಂದರ್ಭದಲ್ಲಿ ಇವರು ತಮ್ಮ ಪ್ರದೇಶದ ರಕ್ಷಣೆಗೆ ಸದಾ ಸಿದ್ಧರಾಗಿರಬೇಕಿತ್ತು. ಎಷ್ಟೋ ಸಲ ದುಷ್ಟ ಸಂಹಾರಕ್ಕಾಗಿ ಕೈಯಲ್ಲಿ ಖಡ್ಗ ಧರಿಸಬೇಕಾದ ಸಂದರ್ಭಗಳೂ ಬರುತ್ತಿದ್ದವು. ಕರ್ನಾಟಕದ ರಾಣಿಯರಲ್ಲಿ ಪ್ರತ್ಯಕ್ಷ ರಣಾಂಗಣ ದರ್ಶನ ಮಾಡಿದ ಕೆಲವೇ ರಾಣಿಯರಲ್ಲಿ ಅಕ್ಕಾದೇವಿ ಒಬ್ಬಳು. ಕ್ರಿ.ಶ. 1010 ರಿಂದ ಸುಮಾರು 1064ರವರೆಗೆ ಅಂದರೆ ತನ್ನ ಜೀವಿತಾವಧಿಯ 54 ವರ್ಷಗಳನ್ನು ರಾಜಕೀಯ ಕ್ಷೇತ್ರಕ್ಕೆ ಮುಡಿಪಿಟ್ಟವಳು. ಇವಳು ಹಾನಗಲ್ಲ ಕದಂಬ ಮನೆತನದ ರಾಣಿಯಾಗಿದ್ದು ಕ್ರಿ.ಶ. 1050ರ ಅವಧಿಯಲ್ಲಿ ಕಿಸುಕಾಡು 70 ತೊರಗಲೆ 60, ಮಾಸೆಯವಾಡಿ 140, ಬಾಗಡಗೆ 70ರ ವಿಸ್ತಾರವಾದ ರಾಜ್ಯವನ್ನಾಳುತ್ತಿದ್ದ ಈಕೆ ತನ್ನ ತವರುಮನೆತನವಾದ ಕಲ್ಯಾಣಿ ಚಾಲುಕ್ಯರ ಪಾದಪದ್ಮೋಪಜೀವಿಯಾಗಿ ತವರಿನ ದರ್ಪದಲ್ಲಿ ಮಾಂಡಲಿಕತ್ವವನ್ನು ನಿಭಾಯಿಸಿದ ಮಹಿಳೆ. ಕ್ರಿ.ಶ. 1022ರ ಬೇಲೂರಿನ ಶಾಸನ ಇವಳನ್ನು

ಗುಣದ ಬೆಡಂಗಿಯೆನಲ್ ಸ
ದ್ಗುಣಮುಂ ನೆಗಳ್ದೇಕವಾಕ್ಯೆಯೆನೆ ಸೂನೃತಮುಂ
ರಣಭೈರವಿಯೆನೆ ಶೌರ್ಯದ
ಗುಣಮುನದೇನೆಂದು ಬಣ್ಣಿಪೆಂನೃಪಸುತೆಯಾ ॥

46 ಎ. ಇ. XV 6 ಸೂಡಿ (ತಾ) ರೋಣ ಕ್ರಿ.ಶ. (1054)
47 ಎ. ಇ. XVII 10 ಅರಸಿಬೀದಿ (ತಾ) ಹುನಗುಂದ (ಕ್ರಿ.ಶ. 1047)

ಅವಿನಮ್ರಾರಿ ನೃಪಾಳಕ ಪ್ರಳಯ ಸಂಪಾದಕ್ಷಮೋಚ್ಚಂಡ ಭೈ
ರವಿ ತಾನಾಗಿಯುಮೆಯ್ದೆ ಶಾಂತತರ ರೂಪಾನ್ವಿತೆ ನಿರ್ಭತ್ಸನಾ
ರವ ಸಿಂಹಾಗ್ರಜೆಯಾಗಿಯುಂ ಮದಗಜೋದ್ಯದ್ಯಾನೆಯೆಂದೆಂದು ಧಾ
ತ ವಿಚಿತ್ರಂ ನೆಗಳ್ದೇಕವಾಕ್ಯೆಯ ಚರಿತ್ರಂ ಭೂರಿಭೂಚಕ್ರದೊಳ್ ॥

ಎಂದು ವರ್ಣಿಸಿದೆ.[48] ಇದನ್ನು ನೋಡಿದಾಗ ಅಕ್ಕಾದೇವಿ ಯಾವುದೋ ಒಂದು ಯುದ್ಧ ಪ್ರಸಂಗದಲ್ಲಿ ಭಾಗವಹಿಸಿ 'ರಣಭೈರವಿ', 'ಉಚ್ಚಂಡ ಭೈರವಿ' ಎಂಬ ಬಿರುದುಗಳನ್ನು ಪಡೆದಿರುವಂತೆ ಕಂಡುಬರುತ್ತದೆ. ಇದೇ ರೀತಿ ಅಕ್ಕಾದೇವಿಯ ರಾಜ್ಯಾಡಳಿತ, ಯುದ್ಧ ಸೂಚನೆ ವಿಶೇಷಣಗಳನ್ನು ಗಮನಿಸಿದರೆ ಅವಳು ಪ್ರತ್ಯಕ್ಷ ರಣಾಂಗಣ ದರ್ಶನ ಮಾಡಿದ ಮಹಿಳೆ ಎಂಬ ಭಾವನೆ ಬಂದರೂ ಯುದ್ಧ ನಿರ್ವಹಣೆಯ ಬಗೆಗೆ ಪ್ರತ್ಯಕ್ಷ ಉಲ್ಲೇಖ ಸಿಗುವದಿಲ್ಲ.

ಆಡಳಿತ ನಿರ್ವಹಣೆಯಲ್ಲಿ ರಾಣಿಯರು ಸ್ವತಂತ್ರವಾಗಿ ವಿಚಾರಿಸಿ ಯೋಗ್ಯ ನಿರ್ಣಯ ಕೈಗೊಳ್ಳುವುದು ಅವಶ್ಯವಿದ್ದಿತು. ಯುದ್ಧದಂತಹ ಪ್ರಸಂಗದಲ್ಲಿ ಆಯಾ ಗ್ರಾಮದ ಬಹುಭಾಗಗಳು ನಾಶವಾಗುತ್ತಿದ್ದವು. ಆಗ ರಾಣಿಯಾದವಳೇ ಅವುಗಳನ್ನು ಸರಿಪಡಿಸುತ್ತಿದ್ದಂತೆ ಕಂಡುಬರುತ್ತದೆ. "ಚೋಳಿಕರ ಪ್ರಘಟ್ಟಕದಿಂ ಕೆಟ್ಟ ಸಮ್ಮಂದಿ(ಂಬಂಧಿ)''ಯಿಂದ ಸೂಡಿಯ ಬಹುಭಾಗ ನಾಶವಾಗಲು ಅಕ್ಕಾದೇವಿ ಅಲ್ಲಿಯ ಎಂಟು ಜನ ವರ್ತಕರಿಗೂ ಎಂಬತ್ತು ಒಕ್ಕಲುಗಳಿಗೂ ಸಲ್ಲಬೇಕಾದ ಅಂಗಡಿ ಮನೆ ಹೊಲಗಳನ್ನು 'ಪುನರ್ಬರಣ' ಮಾಡಿಕೊಟ್ಟಳೆಂದೂ[49] 'ಇದೀ ಕಿಸಕಾಡು ಎಪತ್ತಕ್ಕೆ ಅನೇಕ ಸುಂಕಗಳನ್ನು ಬಿಟ್ಟುಕೊಡಬೇಕು. ಪಟ್ಟಣದಲ್ಲಿ ಏನಾದರೂ ಅನ್ಯಾಯ ನಡೆದರೆ ಅದಕ್ಕೆ ತಳವಾರನು ಹೊಣೆ, ಮತ್ತು ಅವನು ಆ ನಷ್ಟವನ್ನು ತುಂಬಿಕೊಡಬೇಕು. ತಂದೆಯ ದೋಷ 'ಮಗನನ್ನೂ, ಮಗನ ದೋಷ ತಂದೆಯನ್ನೂ ಹೊದ್ದುವದಿಲ್ಲ. ಕಳ್ಳ, ಬಂದಿಕಾರ. ಅಂಜಲ್‌ವಿಡಿವಂ, ಹಗೆ, ಕೆಟ್ಟ ಮನುಷ್ಯ–ಇವರನ್ನು ಅಂಗಡಿಯ ತಡಿಕೆಯ ಕೆಳಗೆ, ಎಂದರೆ ಅಪರಾಧದ ಸ್ಥಳದಲ್ಲಿಯೇ ಇರಿದರೆ ದಂಡವಾಗಲಿ, ದೋಷವಾಗಲಿ ಇಲ್ಲ. ಇವರನ್ನು ಬಿಟ್ಟು ಬೇರೆಯವರನ್ನು ಇರಿದರೆ ಅದಕ್ಕೆ ತಕ್ಕ ದಂಡವನ್ನು ತೆರಬೇಕು.[50] ಎಂದೂ ಆಜ್ಞೆ ಹೊರಡಿಸಿರುವಳು. ಬಹುಶಃ ಆಡಳಿತಕ್ಕೆ ಸಂಬಂಧಪಟ್ಟಂತೆ ಇಷ್ಟು ಸ್ಪಷ್ಟವಾಗಿ ಆಜ್ಞೆ ಬೇರೆಡೆ ಸಿಗುವದಿಲ್ಲ.

ರಾಜಕೀಯ ಕ್ಷೇತ್ರವನ್ನು ಕೈಬಿಟ್ಟರೆ ಈ ರಾಣಿಯರಿಗೆ ಅವಕಾಶ ನೀಡಿದ ಇನ್ನೊಂದು ಕ್ಷೇತ್ರವೆಂದರೆ ಧರ್ಮ. ಸಂಸ್ಕೃತಿಯ ವಿಕಾಸದಲ್ಲಿ ಮಹತ್ತರ ಪಾತ್ರ ವಹಿಸಿದುದು ಈ ಧರ್ಮ. ಕರ್ನಾಟಕದಲ್ಲಿ ನೆಲೆನಿಂತ ಬೌದ್ಧ, ಜೈನ, ಶೈವ, ವೈದಿಕ ಮತ್ತು ಇತರ ಮತ ಪಂಥಗಳ ಕ್ರಿಯಾ ಕಲಾಪಗಳಿಗೆ ರಾಣಿ ಅಕ್ಕಾದೇವಿ ಸಲ್ಲಿಸಿದ

---

48 ಆಯ್ ಎ. XVIII 273 ಬೇಲೂರು (ತಾ) ಬದಾಮಿ (ಕ್ರಿ.ಶ. 1022)
49 ಎ. ಇ. XV 6 ಸೂಡಿ (ತಾ) ರೋಣ (ಕ್ರಿ.ಶ. 1050)
50 ಕ.ಶಾ.ಸಾ.ಅ. ಪು. 344 ಡಾ॥ ಎಂ. ಚಿದಾನಂದಮೂರ್ತಿ

ಸೇವೆ ಮಹತ್ವಪೂರ್ಣ. 'ಜಿನಬುದ್ಧಾನಂತ ರುದ್ರಾಗಮ ನಿಗದಿತ ಧರ್ಮಂಗಳ ಮಾಡಿಸು'ವುದರ ಮೂಲಕ ಅಕ್ಕಾದೇವಿ ಬೌದ್ಧ ಧರ್ಮಕ್ಕೆ ನೆರವು ನೀಡಿದುದು ತಿಳಿಯುತ್ತದೆ[51] ಇಲ್ಲಿ ಕ್ರಿ.ಶ. 1022ರ ಕಾಲಕ್ಕೆ ಬೌದ್ಧ ಧರ್ಮ, ಜಿನ, ಅನಂತ, ರುದ್ರರಿಗೆ ಸಂಬಂಧಪಟ್ಟ ಧರ್ಮದ ಸಾಲಿನಲ್ಲಿ ಉಲ್ಲೇಖಗೊಂಡುದು ಮಹತ್ವದ ಸಂಗತಿಯಾಗಿದೆ. ದೀನಾನಾಥಚಿಂತಾಮಣಿ ಗುಣದ ಬೆಡಂಗಿ ಎನಿಸಿದ ಅಕ್ಕಾದೇವಿ ಸರ್ವಧರ್ಮಗಳಿಗೂ ಆಶ್ರಯ ಕಲ್ಪಿಸಿಕೊಟ್ಟ ಮಹಿಳೆ. ಕಿಸುಕಾಡು, ಬಾಗಡಗೆ, ತೊರಗಲೆ, ಮಾಸೆಯನಾಡಿ ವಿಭಾಗಗಳ ಆಳ್ವಿಕೆ ನಿರ್ವಹಿಸಿದ ಈಕೆ ಕೈಗೊಂಡ ದಾನಗಳು ಹಲವಾರು. ಕರ್ನಾಟಕದಲ್ಲಿ ಪ್ರಧಾನವಾಗಿ ಬಾಳಿದ ಜೈನಧರ್ಮಕ್ಕೆ ಅಕ್ಕಾದೇವಿ ಸಹಾಯ ಸಲ್ಲಿಸಿದ್ದುಂಟು. ಬಸದಿ ನಿರ್ಮಾಣ ಧರ್ಮ ಸಂಘಟನೆಯ ಬಹುದೊಡ್ಡ ಮಾಧ್ಯಮವೆನಿಸಿತು. ಈ ಹಿನ್ನೆಲೆಯಲ್ಲಿ ರಾಜಧಾನಿ ಆರಸಿಬೀದಿಯಲ್ಲಿ ತನ್ನ ಹೆಸರಿನದಾದ 'ಗುಣದ ಬೆಡಂಗಿ ಜಿನಾಲಯ'ವನ್ನು ನಿರ್ಮಿಸಿ ಅನೇಕ ದಾನ ನೀಡಿದ್ದಳು.

ಶೈವ ಧರ್ಮಕ್ಕೂ ಅವಳು ಸಲ್ಲಿಸಿದ ಸಹಾಯ ಗಮನಾರ್ಹ. ಕ್ರಿ.ಶ. 1054ರಲ್ಲಿ ಸೂಡಿಯಲ್ಲಿ 'ಅಕ್ಕೇಶ್ವರ' ಎಂಬ ದೇವಸ್ಥಾನ ನಿರ್ಮಾಣ ಮಾಡಿ ಅದರ ಅಂಗರಂಗಭೋಗ ಅಲ್ಲಿಯ ದೇವಸ್ಥಾನದ ಸೂಳೆಯರಿಗೆ ಹಲವಾರು ದತ್ತಿ ಬಿಟ್ಟ ಉಲ್ಲೇಖವಿದೆ[52] ಮುಂಡರಗಿ ತಾಲ್ಲೂಕಿನ ಕೋರಲಹಳ್ಳಿಯ ತ್ರುಟಿತ ಶಾಸನವೊಂದು ಈಕೆಯ ದತ್ತಿಯನ್ನು ಅಲ್ಪಸ್ವಲ್ಪ ಪರಿಚಯಿಸಿಕೊಟ್ಟಿದೆ.[53] ಮಠವೊಂದರಲ್ಲಿ ನಡೆಯುವ ವಿದ್ಯಾದಾನಕ್ಕೋಸುಗ 'ತಪೋನಿಯಮ ಜಪ ಸಮಾಧಿಶೀಲ ಸಂಪನ್ನೆಯಪ್ಪ ತಪಸ್ವಿ ಗಂಗಿಕಬ್ಬೆಗಳ ಕಾಲಂ ಕರ್ಚಿ' ತಮಗೆ ಸಲ್ಲುವ ಅಂದಿಗರ್ಜ ಕಾಣಿಕೆಯ ಎರಡು ಗದ್ಯಾಣದ ತೆರೆಯನ್ನು ಅಕ್ಕಾದೇವಿ ದಾನ ಬಿಟ್ಟುಕೊಟ್ಟಿರುವಳು[54] ಕಾಳಾಮುಖ ಸನ್ಯಾಸಿನಿಯಾದ ಈ ತಪಸ್ವಿ ಗಂಗಿಕಬ್ಬೆ ಆ ಮಠ (ವಿದ್ಯಾ ಕೇಂದ್ರ)ಕ್ಕೆ ಮುಖ್ಯಸ್ಥಳಾಗಿರಬೇಕು.

ಇವಳ ವೈದಿಕ ಧರ್ಮದ ದಾನವನ್ನು ಸೂಚಿಸುವ ಉಲ್ಲೇಖವೊಂದು ಅರಸಿಬೀದಿಯಲ್ಲಿ ದೊರಕುತ್ತದೆ. ಚಾಲುಕ್ಯ ಅಕ್ಕಾದೇವಿ ರಾಜಧಾನಿ ವಿಕ್ರಮಪುರದ ಬ್ರಹ್ಮಪುರಿಯ ನಂದಿಯಣ್ಣಪಡಂಗಿ ಭಟ್ಟೋಪಾಧ್ಯಾಯರು ಪ್ರಮುಖ 42 ಜನ ವಿದ್ವಾಂಸ, ಮಹಾಜನರಿಗೆ ಸರ್ವನಮಸ್ಯವಾಗಿ ಒಂದು ಕೆಯಿಮತ್ತರು, ಎಳತ್ತರ

51 ಆಯ್.ಎ.XVIII 270 ಬೇಲೂರು (ತಾ) ಬದಾಮಿ (ಕ್ರಿ.ಶ. 1022)

52 ಎ. ಇ. XV 6 ಸೂಡಿ (ತಾ) ರೋಣ (ಕ್ರಿ.ಶ. 1054)

53 ಬಿ. ಕೆ. ಆಯ್. I. i 86 ಕೋರಲಹಳ್ಳಿ (ತಾ) ಮುಂಡರಗಿ (ಕ್ರಿ.ಶ. 1050)

54 ಎ. ಇ. XVI II ಹೊಟ್ಟೂರು (ತಾ) ಬಂಕಾಪುರ (ಕ್ರಿ.ಶ. 1064)

ಕೋಲಿನಿಂದ 44 ಮತ್ತರು ತೋಟದ ಭೂಮಿ 64 ಮತ್ತರು ಕಿಸುವಿನ ಭೂಮಿಯನ್ನು ಬಿಟ್ಟಿರುವಳು.[55]

ಹೀಗೆ ತನ್ನ ಬದುಕಿನುದ್ದಕ್ಕೂ ಅಕ್ಕಾದೇವಿ ಮಗಳಾಗಿ, ಮಡದಿಯಾಗಿ, ಕೌಟುಂಬಿಕ, ರಾಜಕೀಯ, ಧಾರ್ಮಿಕ, ಸಾಮಾಜಿಕ ರಂಗಗಳಲ್ಲಿ ನಡೆದು ಬಂದ ವಿಷಯ ಶಾಸನಗಳಲ್ಲಿ ಒಡಮೂಡಿ ನಿಂತಿವೆ. ಕನ್ನಡ ನಾಡಿನ ಮಹಿಳಾ ಲೋಕದಲ್ಲಿ ಚಾ. ಅಕ್ಕಾದೇವಿಯ ಸ್ಥಾನ ಮಹತ್ವಪೂರ್ಣವೆಂಬುದನ್ನು ಬಿಂಬಿಸಿವೆ.

---

55 ಬಿ. ಕೆ. ಆರ್. I i 88 ಅರಸಿಬೀದಿ (ತಾ) ಹುನಗುಂದ ಕ್ರಿ.ಶ. 1053)

ಆಧುನಿಕ ಪಾಶ್ಚಾತ್ಯ ತತ್ತ್ವ ಶಾಸ್ತ್ರದಲ್ಲಿ ವಾಕ್ಯಾರ್ಥ ವಿಶ್ಲೇಷಣೆ: ಒಂದು ಪ್ರತಿಕ್ರಿಯೆ

ಶ್ರೀನಿವಾಸರಾವ್

ಶ್ರೀ ಮುರಳೀಧರ ಅವರ "ಆಧುನಿಕ ಪಾಶ್ಚಾತ್ಯ ತತ್ತ್ವಶಾಸ್ತ್ರದಲ್ಲಿ ವಾಕ್ಯಾರ್ಥ ವಿಶ್ಲೇಷಣೆ" (ಸಾಧನೆ, 12 : 2, ಏಪ್ರಿಲ್–ಜೂನ್ 1983, ಪುಟ 69–82) ಯನ್ನು ಓದುವುದರಿಂದ ಪಾಶ್ಚಾತ್ಯ ತತ್ತ್ವ ಶಾಸ್ತ್ರದ ನಿಕಟ ಪರಿಚಯ ವಿಲ್ಲದ ಓದುಗರಲ್ಲಿ ಉಂಟಾಗಬಹುದಾದ ಕೆಲವು ತಪ್ಪು ಕಲ್ಪನೆಗಳನ್ನು ನಿವಾರಿಸುವ ಪರಿಮಿತ ಉದ್ದೇಶ ಈ ಲೇಖನದ್ದಾಗಿದೆ.

1. ಬುದ್ಧಿ ಪ್ರಮಾಣವಾದ (Rationalism) ದ ತಾತ್ತ್ವಿಕ ನಿಲುವಿನ ನಿರೂಪಣೆ (ಪುಟ 70–71)ಯ ಸಂದರ್ಭದಲ್ಲಿನ 'ಶುದ್ಧ ಬುದ್ಧಿ (pure reason)' ಎಂಬ ಪದಪ್ರಯೋಗ ಗೊಂದಲಕ್ಕೆಡೆಗೊಡುವ ಸಂಭವವಿದೆ. ಪುಟ 71 ರಲ್ಲಿ ಡೇಕಾರ್ಟ್, ಸ್ಪಿನೋಜಾ ಮೊದಲಾದ ಬುದ್ಧಿಪ್ರಮಾಣವಾದಿಗಳ ಗುಂಪಿನಲ್ಲಿ ಕಾಂಟ್‌ನನ್ನೂ ಸೇರಿಸಿ ಅವರೆಲ್ಲರ ಪ್ರಕಾರ ಅತೀಂದ್ರಿಯ ತತ್ತ್ವಶಾಸ್ತ್ರ (metaphysics) ದ ನಿರ್ಣಯಗಳು "ಶುದ್ಧ ಬುದ್ಧಿಯ ಬೆಳಕಿನಲ್ಲಿ ಕಂಡುಹಿಡಿದಂಥವು (found in the light of pure reason)" ಎಂದು ಹೇಳಲಾಗಿದೆ. ಆದರೆ ಕಾಂಟ್‌ನ ಪ್ರಕಾರ ಇಂದ್ರಿಯಾನುಭವಕ್ಕೆ ನಿಲುಕಲಾಗದಂತಹ ವಿಷಯಗಳಲ್ಲಿ ಶುದ್ಧ ಬುದ್ಧಿಯನ್ನು ತೊಡಗಿಸುವುದರಿಂದ ಮಾತ್ರವೇ metaphysical ಎನ್ನಬಹುದಾದ ನಿರ್ಣಯಗಳಿಗೆ ತಲುಪುವುದು ಸಾಧ್ಯ. ಇಂದ್ರಿಯಾನುಭವದ ತಡೆ (check)ಇಲ್ಲದ ಇಂತಹ ನಿರ್ಣಯಗಳು ಪರಸ್ಪರ ವಿರುದ್ಧವಾಗಿರುವುದು ಸಹಜಸಾಧ್ಯ. ಉದಾಹರಣೆಗೆ ದೇವರು ಇಂದ್ರಿಯಾತೀತವಾದ ವಸ್ತುವಾದ್ದರಿಂದ ಶುದ್ಧ ಬುದ್ಧಿಯನ್ನು ಉಪಯೋಗಿಸಿ 'ದೇವರು ಇದ್ದಾನೆ' ಎಂಬ ಸಿದ್ಧಾಂತಕ್ಕೆ ಬರಲು ಸಾಧ್ಯವಿರುವಂತೆಯೇ ಅದೇ ಕ್ರಮದಿಂದ 'ದೇವರು ಇಲ್ಲ' ಎಂಬ ತಾತ್ತ್ವಿಕ ಸಿದ್ಧಾಂತಕ್ಕೆ ಬರಲೂ ಸಾಧ್ಯವಿದೆ. ಆದ್ದರಿಂದಲೇ ತಾತ್ತ್ವಿಕರು ಇವೆರಡು ಸಿದ್ಧಾಂತಗಳನ್ನೂ ಪ್ರತಿಪಾದಿಸಿದ್ದಾರೆ. ಅದೇ ರೀತಿ ಜಗತ್ತಿನ ಸೃಷ್ಟಿ, ಆತ್ಮದ ಅಮರತ್ವ ಮೊದಲಾದ ವಿಷಯಗಳಲ್ಲೂ ಪರಸ್ಪರ ವಿರುದ್ಧ ಸಿದ್ಧಾಂತಗಳನ್ನು ಶುದ್ಧ ಬುದ್ಧಿಯ ಸಹಾಯದಿಂದ ಮಂಡಿಸಬಹುದು. ಇಂತಹ ಸಿದ್ಧಾಂತಗಳನ್ನು ಕಾಂಟ್‌ನು 'ಆಂಟಿನೊಮಿ (antinomy)' ಎಂದು ಕರೆದು, ಶುದ್ಧ ಬುದ್ಧಿಯ ಯಾವುದೇ ಅತೀಂದ್ರಿಯ

ತಾತ್ತ್ವಿಕ ನಿರ್ಣಯಕ್ಕೆ ಬರಲು ಅಸಾಧ್ಯವೆಂದು ತೀರ್ಮಾನಿಸಿದ್ದಾನೆ. ಆದ್ದರಿಂದ ಕೇವಲ ಬುದ್ಧಿಯ ನೆರವಿನಿಂದಲೇ ಅತೀಂದ್ರಿಯ ತಾತ್ತ್ವಿಕ ನಿರ್ಣಯಗಳಿಗೆ ಬರಲು ಸಾಧ್ಯವೆಂದು ಪ್ರತಿಪಾದಿಸಿರುವ ಹಾಗೂ ಅಂತಹ ಅನೇಕ ನಿರ್ಣಯಗಳನ್ನು ಸ್ವತಃ ಮಾಡಿರುವ ಡೇಕಾರ್ಟ್, ಸ್ಪಿನೋಜಾ ಮೊದಲಾದವರ ಗುಂಪಿಗೇ ಕಾಂಟ್‌ನನ್ನೂ ಸೇರಿಸುವುದು ಸಮರ್ಪಕವಾಗುವುದಿಲ್ಲ.

2. ವಾಕ್ಯಗಳ ವರ್ಗೀಕರಣವನ್ನು ನಿರೂಪಿಸುವುದರಲ್ಲೂ ಗೊಂದಲಕ್ಕೆಡೆ ಮಾಡಬಹುದಾದ ಅಂಶಗಳಿವೆ. ವಾಕ್ಯಗಳು "ಅನುಭವಪೂರ್ವ ಅಥವಾ ವಿಶ್ಲೇಷಣಾತ್ಮಕ (a priori or analytic) ಮತ್ತು "ಅನುಭವೋತ್ತರ ಅಥವಾ ಸಂಯೋಜನಾತ್ಮಕ (a posteriori or Synthetic)" ಎಂದು ವರ್ಗೀಕರಿಸುವುದು ತೀರಾ ಸಮರ್ಪಕವಲ್ಲ. ಕಾಂಟ್‌ನು ಇದನು ಸಮರ್ಥನೀಯವಾಗಿ ನಿರಾಕರಿಸಿದ್ದಾನೆ. ಅಲ್ಲದೇ ಸಮಕಾಲೀನ ತತ್ತ್ವಶಾಸ್ತ್ರಜ್ಞರಾದ ಕ್ವೈನ್, ಕ್ರಿಪ್ಕೆ, ಪುಟ್ನಾಂ ಮುಂತಾದವರ ವಿಚಾರಲಹರಿಗೂ ಈ ವರ್ಗೀಕರಣ ಹೊಂದುವುದಿಲ್ಲ. ತರ್ಕ ದೃಷ್ಟಿಯಿಂದಲೂ ವಾಕ್ಯಗಳನ್ನು 'ಅನುಭವ ಪೂರ್ವ ಅನುಭವೋತ್ತರ (a priori or a posteriori)' ಹಾಗೂ 'ವಿಶ್ಲೇಷಣಾತ್ಮಕ ಅಥವಾ ಸಂಯೋಜನಾತ್ಮಕ (analytic or synthetic)' ಎಂದು ವರ್ಗೀಕರಿಸುವುದು ಹೆಚ್ಚು ಸಮಂಜಸ. ಒಂದು ವಾಕ್ಯದ ಆಖ್ಯಾತ ಪದವು (predicate) ಹೇಳುವ ಅಂಶವು ಅದೇ ವಾಕ್ಯದ ಆಖ್ಯೇಯ ಪದದ (Subject) ಅರ್ಥದಲ್ಲಿ ಅಂತರ್ಗತವಾಗಿದ್ದರೆ ಆವಾಕ್ಯ ವಿಶ್ಲೇಷಣಾತ್ಮಕ (analytic) ಎನ್ನಿಸಿಕೊಳ್ಳುತ್ತದೆ. ಹಾಗಿಲ್ಲದೇ ಆಖ್ಯಾತಪದವು ಆಖ್ಯೇಯಪದದ ಅರ್ಥದಲ್ಲಿ ಅಂತರ್ಗತವಾಗಿಲ್ಲದ ಅಂಶವನ್ನು ಸೂಚಿಸುತ್ತಿದ್ದರೆ ಅದು ಸಂಯೋಜನಾತ್ಮಕ (synthetic) ಎನ್ನಿಸಿಕೊಳ್ಳುತ್ತದೆ. ಉದಾ : 'ತ್ರಿಭುಜಗಳು ಮೂರು ಭುಜವುಳ್ಳ ಆಕೃತಿಗಳು.' ಇಲ್ಲಿ 'ತ್ರಿಭುಜ' ಎಂಬ ಶಬ್ದದಲ್ಲೇ 'ಮೂರು ಭುಜವುಳ್ಳ ಆಕೃತಿ' ಎಂಬ ಅರ್ಥ ಅಂತರ್ಗತವಾಗಿರುವುದರಿಂದ ಈ ವಾಕ್ಯ analytic ಆಗುತ್ತದೆ. ತ್ರಿಭುಜವೆಂದರೆ ಮೂರು ಭುಜವುಳ್ಳದ್ದಾದ್ದರಿಂದ ಈ ವಾಕ್ಯವನ್ನು ನಿರಾಕರಿಸಿದರೆ ಆಭಾಸವಾಗುತ್ತದೆ. ಅಲ್ಲದೇ ಈ ವಾಕ್ಯವನ್ನು ಯಾವುದೇ ಅನುಭವದ ಸಹಾಯವಿಲ್ಲದೇ ಕೇವಲ 'ತ್ರಿಭುಜ' ಎಂಬ ಶಬ್ದದ ಅರ್ಥಗ್ರಹಣದಿಂದಲೇ ನಾವು ಸತ್ಯವೆಂದು ಕಂಡುಕೊಳ್ಳಬಹುದು. ಆದ್ದರಿಂದ ಅದು a priori ವಾಕ್ಯವೂ ಆಗುತ್ತದೆ. ಆದರೆ 'ಭೂಮಿ ಗೋಳಾಕಾರವಾಗಿದೆ' ಎಂಬ ಇನ್ನೊಂದು ವಾಕ್ಯದಲ್ಲಿ 'ಭೂಮಿ' ಎಂಬ ಶಬ್ದದಲ್ಲೇ 'ಗೋಳಾಕಾರವಾಗಿರುವ ವಸ್ತು' ಎಂಬ ಅರ್ಥ ಅಂತರ್ಗತವಾಗಿಲ್ಲವಾದ್ದರಿಂದ ಆ ವಾಕ್ಯ Synthetic ಆಗುತ್ತದೆ. ಅಲ್ಲದೇ ಈ ವಾಕ್ಯದ ಸತ್ಯಾಸತ್ಯತೆಯನ್ನು 'ಭೂಮಿ' ಶಬ್ದದ ಅರ್ಥಗ್ರಹಣದಿಂದಲೇ ತೀರ್ಮಾನಿಸಲಾಗುವುದಿಲ್ಲ. ವಾಸ್ತವವಾಗಿ ಅದರ ಆಕಾರವೇನೆಂದು ಪರೀಕ್ಷಿಸಿಯೇ (ಅಂದರೆ ಅನುಭವದಿಂದಲೇ) ತೀರ್ಮಾನಿಸಬೇಕಾಗುತ್ತದೆ. ಆದ್ದರಿಂದ ಆ ವಾಕ್ಯ ಅನುಭವೋತ್ತರವೂ (a posterion) ಹೌದು. ಹೀಗಾಗಿ ಸಾಮಾನ್ಯವಾಗಿ a priori ವಾಕ್ಯಗಳೆಲ್ಲ analytic ಆಗಿರು

ತ್ತವೆ ; ಹಾಗೆಯೇ a posteriori ವಾಕ್ಯಗಳು ಸಾಮಾನ್ಯವಾಗಿ Synthetic ಆಗಿರುತ್ತವೆ. ಆದರೆ ಹಾಗೇ ಇರಬೇಕೆಂಬ ತಾರ್ಕಿಕ ಅವಶ್ಯಕತೆ ಇಲ್ಲ. ಈ ಅಂಶವನ್ನು ಸಮರ್ಥಿಸುವ ಸಾಹಿತ್ಯ ಪರಂಪರೆ 1951 ರಿಂದೀಚೆಗೆ ಪ್ರಾರಂಭವಾಗಿ ವಿಪುಲವಾಗಿ ಬೆಳೆದಿದೆ. ಹೀಗಾಗಿ ಲೇಖಕರು ಪುಟ 75ರಲ್ಲಿ ವಿಶ್ಲೇಷಣಾತ್ಮಕವೆಂದು ಉದಾಹರಿಸಿರುವ ವಾಕ್ಯಗಳನ್ನು ಕಾಂಟ್ ಹಾಗೂ ಇತರ ಆಧುನಿಕರನೇಕರು ಸಂಯೋಜನಾತ್ಮಕವೆಂದು (ಬಹುಶಃ 4ನ್ನು ಬಿಟ್ಟು) ಪರಿಗಣಿಸುತ್ತಾರೆ.

ಲೇಖಕರು ಪುಟ 76ರಲ್ಲಿ ಅನುಭವಪೂರ್ವವಾಕ್ಯದ ರಚನೆಯಲ್ಲಿ "ಯಾವ ಪದವನ್ನು ಹಾಕಿದರೂ" ಅದು ಸತ್ಯವಾಗಿಯೇ ಇರುತ್ತದೆ ಎಂದಿರುವುದು ಸರಿಯಲ್ಲ. "ಯಾವ ಸಮಾನಾರ್ಥಕ ಪದವನ್ನು ಹಾಕಿದರೂ" ಎಂದಿರಬೇಕು, ಇಲ್ಲದಿದ್ದರೆ ಆಭಾಸವಾಗುತ್ತದೆ.

3. ಅನುಭವಪೂರ್ವವಾಕ್ಯಗಳು ಮಾತ್ರ ನಿಶ್ಚಿತ ಸತ್ಯ (necessary truth) ಗಳೆಂಬುದೂ ಹಾಗು ಯಾವುದೇ ಅನುಭವೋತ್ತರ ವಾಕ್ಯವು ಆತ್ಯಂತಿಕವಾಗಿ ಖಚಿತ ಅಥವಾ ಸತ್ಯವೆಂದು ಹೇಳಲಾಗುವುದಿಲ್ಲವೆಂಬುದು ಪಾಶ್ಚಾತ್ಯ ತಾತ್ತ್ವಿಕರು ಹಲವು ದಶಕಗಳ ಹಿಂದೆ ಇಟ್ಟುಕೊಂಡಿದ್ದ ನಂಬಿಕೆಗಳು. ಆದರೆ ಇದು ಸರಿಯಲ್ಲ. 'ದೆಹಲಿ ಭಾರತದ ಈಗಿನ (ಅಂದರೆ 1984ರಲ್ಲಿ) ರಾಜಧಾನಿ' ಎಂಬ ವಾಕ್ಯ ನಿಶ್ಚಿತವಾಗಿ ಸತ್ಯವಲ್ಲವೆ ? ಈ ವಾಕ್ಯವು ಹೇಳುವ ವಿಷಯವು ಮುಂದೆ ಯಾವುದೇ ಕಾಲದಲ್ಲೇ ಆದರೂ, ಏನೇ ಘಟನೆಗಳು ಸಂಭವಿಸಿದರೂ, ಹೇಗೆ ಸುಳ್ಳಾಗಲು ಸಾಧ್ಯ ? ಭಾರತದ ರಾಜಧಾನಿ ಕಾಲಾಂತರದಲ್ಲಿ ಬೇರೆ ನಗರಕ್ಕೆ ಬದಲಾದರೂ ಅದು ದೆಹಲಿಯು 1984ರಲ್ಲಿ ರಾಜಧಾನಿ ಆಗಿದ್ದುದನ್ನು ಸುಳ್ಳಾಗಿಸುವುದಿಲ್ಲ. ಆದ್ದರಿಂದ ಅನುಭವಪೂರ್ವ ವಾಕ್ಯಗಳಿಗಿರುವಷ್ಟೇ ಖಾಚಿತ್ಯ ಹಾಗೂ ನಿಶ್ಚಿತ ಸತ್ಯತೆಗಳು ಕೆಲವು ಅನುಭವೋತ್ತರ ವಾಕ್ಯಗಳಿಗೂ ಇರಬಹುದು.

4. ಕಾಂಟ್‌ನ ಕೆಲವು ವಾಕ್ಯಗಳು ಅನುಭವಪೂರ್ವವಾಗಿದ್ದು ಸಂಯೋಜನಾತ್ಮಕವಾಗಿಯೂ ಇರಬಲ್ಲವೆಂದು (Synthetic a Priori) ವಾದಿಸಿದ್ದನ್ನು ಆಧುನಿಕ Logical Positivists ರು ಅಲ್ಲಗಳೆದಿರುವುದು ನಿಜ. ಅವರ ಪ್ರಕಾರ ವಾಕ್ಯಗಳ ಅರ್ಥವಂತಿಕೆ/ಸತ್ಯಾಸತ್ಯತೆಯನ್ನು ಆ ವಾಕ್ಯಗಳಲ್ಲಿನ ಶಬ್ದಗಳ ಅರ್ಥಗ್ರಹಣದಿಂದಲೇ ತೀರ್ಮಾನಿಸಬಹುದಾದಾಗ ಮಾತ್ರ ಅವು ವಿಶ್ಲೇಷಣಾತ್ಮಕ ವಾಕ್ಯಗಳಾಗುತ್ತವೆ. ಹಾಗಿಲ್ಲದೆ ಶಬ್ದಾರ್ಥಗಳನ್ನು ಗ್ರಹಿಸಿದ ಮೇಲೂ ಇತರ ವಿಷಯಗಳನ್ನರಿತ ಮೇಲೆಯೇ ವಾಕ್ಯದ ಸತ್ಯಾಸತ್ಯತೆಯು ಅರಿವಾಗುವಂತಿದ್ದರೆ ಅದು ಸಂಯೋಜನಾತ್ಮಕ. ಉದಾಹರಣೆಗೆ 'ಬ್ರಹ್ಮಚಾರಿಯು ಅವಿವಾಹಿತ' ಎಂಬ ವಾಕ್ಯದ ಸತ್ಯತೆಯ ಅರಿವು 'ಬ್ರಹ್ಮಚಾರಿ' 'ಅವಿವಾಹಿತ' ಎಂಬ ಪದಗಳ ಅರ್ಥವನ್ನು ಗ್ರಹಿಸಿದ ಕ್ಷಣವೇ ಉಂಟಾಗುತ್ತದೆ. ಆದ್ದರಿಂದ ಇದು anlytic

ವಾಕ್ಯ. ಆದರೆ ಯಾರಾದರೂ 'ಇವನೊಬ್ಬ ಬ್ರಹ್ಮಚಾರಿ' ಎಂದಾಗ ಆ ವಾಕ್ಯ ನಮಗೆ ಕೂಡಲೇ ಅರ್ಥವಾದರೂ ಅದರ ಸತ್ಯಾಸತ್ಯತೆಯ ಅರಿವೂ ಆ ಕೂಡಲೇ ಆಗುವುದಿಲ್ಲ; ಆ ವ್ಯಕ್ತಿಯು ಅವಿವಾಹಿತನೇ ಅಲ್ಲವೇ ಎಂಬುದು ಗೊತ್ತಾದ ನಂತರವೇ ಅದರ ಸತ್ಯಾಸತ್ಯತೆಯ ಅರಿವಾಗುವುದಾದ್ದರಿಂದ ಅದು Synthetic ವಾಕ್ಯ. ಈ ಕಾರಣದಿಂದಾಗಿ ಯಾವ ವಾಕ್ಯವೂ ಏಕಕಾಲದಲ್ಲಿ analytic ಹಾಗೂ Synthetic ಆಗಿರುವುದಿಲ್ಲವೆಂದೂ ಮತ್ತು ಈ ಎರಡೂ ಆಗಿಲ್ಲದ ವಾಕ್ಯಗಳಿಗೆ ವಾಸ್ತವಿಕ ಅರ್ಥ (literal meaning) ಇದೆಯೆಂದು ಭಾವಿಸುವುದು ತಪ್ಪಾಗುತ್ತದೆಂದು ಪಾಶ್ಚಾತ್ಯ ತತ್ತ್ವಶಾಸ್ತ್ರದಲ್ಲಿ logicai positi-vists ಎಂಬ ಗುಂಪಿನವರು ವಾದಿಸುತ್ತಾರೆ. ಆದರೆ 1951ರಷ್ಟು ಹಿಂದೆಯೇ ಕ್ವೈನ್ ಮಹಾಶಯನು ತನ್ನ "T o Dogmas of Empiricism" ಎಂಬ ಸುಪ್ರಸಿದ್ಧ ಲೇಖನದಲ್ಲಿ ಮೇಲ್ಕಂಡ analytic Synthetic ಭೇದವು ಸಾಧ್ಯವಲ್ಲವೆಂದು ಬಹು ಪ್ರಬಲವಾಗಿ ವಾದಿಸಿದ್ದು, ಅದು ಇಂದು ಅನೇಕರಿಗೆ ಒಪ್ಪಿಗೆಯಾದ ಸಿದ್ಧಾಂತವಾಗಿದೆ. ಅಲ್ಲದೆ 'ಪರಿಶೀಲನಾ ಸಾಧ್ಯತೆಯ ಮಾಪುಗೋಲು (criterion of verifiability)' ಸಿದ್ಧಾಂತವೂ ಸಹ ಒಪ್ಪಲು ಸಾಧ್ಯವಾಗದಂತಹದ್ದೆಂದು ಹೆಂಪೆಲ್ (1950), ಮಾರೆಂಕೆ (1950), ವೈಸ್‌ಮನ್ (1945) ಮೊದಲಾದವರು ನಿಸ್ಸಂದಿಗ್ಧವಾಗಿ ತೋರಿಸಿದ್ದಾರೆ. ಆದ್ದರಿಂದ ಲೇಖನವನ್ನು ಓದುಗರು 'logical positivists ರ ಪ್ರಕಾರ ವಾಕ್ಯಾರ್ಥ ವಿಶ್ಲೇಷಣೆಯ ಸ್ಥೂಲ ಪರಿಚಯ' ಎಂದು ಭಾವಿಸಿ ಓದಿಕೊಂಡರೆ ಅವರು ಚಾರಿತ್ರಿಕವಾಗಿ ಸತ್ಯಕ್ಕೆ ಹೆಚ್ಚು ಸಮೀಪವಿರುತ್ತಾರೆ. ಲೇಖನದಲ್ಲಿನ ವಿಷಯಗಳು ಈಗ ಪಾಶ್ಚಾತ್ಯ ತತ್ತ್ವಶಾಸ್ತ್ರಜ್ಞರಲ್ಲಿ ವಾಕ್ಯಾರ್ಥ ವಿಶ್ಲೇಷಣೆಯ ಸಂದರ್ಭದಲ್ಲಿ ಬಳಕೆಯಲ್ಲಿರುವ ಕಲ್ಪನೆಗಳ ಸಮಗ್ರ ಚಿತ್ರವಂತೂ ಖಂಡಿತ ಅಲ್ಲ. ಅದು ಐವತ್ತರ ದಶಕಕ್ಕಿಂತ ಹಿಂದೆ ಇದ್ದ ವಿಚಾರಧಾರೆಯ ಸ್ಥೂಲ ಚಿತ್ರವೆಂದು ಹೇಳಬಹುದು.


ಸಮುದ್ರಯಾನ ಚತುರ—ಆಮೆ

ಎನ್. ಎಸ್. ಲೀಲಾ

ಆಮೆಯು ಸಮುದ್ರಯಾನ ಮಾಡುವುದು ಅಥವಾ ವಲಸೆ ಹೋಗುವುದು ಪ್ರಾಣಿ ಪ್ರಪಂಚದ ಅಸಾಧಾರಣ ಕಾರ್ಯಗಳಲ್ಲಿ ಗಮನಾರ್ಹವಾದುದು. 'ವಲಸೆ' ಅಥವಾ 'ಸಮುದ್ರಯಾನ' ಎಂದರೆ ನಿಯಮಿತ ಕಾಲದಲ್ಲಿ ತಮ್ಮ ಸ್ವಸ್ಥಾನದಿಂದ ಬೇರೆಡೆ ಹೋಗಿ ಪುನಃ ತಮ್ಮ ಸ್ಥಾನವನ್ನು ತಲುಪುವುದು. ಈ ಬಗೆಯ 'ವಲಸೆ'ಯನ್ನು ಪಕ್ಷಿಗಳಲ್ಲಿ ಬಹು ಚೆನ್ನಾಗಿ ಗುರುತಿಸಬಹುದು. ಇಂದು ಪಕ್ಷಿಧಾಮಗಳು ಮನುಷ್ಯನನ್ನು ಬಹುವಾಗಿ ಆಕರ್ಷಿಸುತ್ತಿವೆ, ಏಕೆಂದರೆ ಈ ಪಕ್ಷಿಧಾಮಗಳು ವಿಹಾರ ಧಾಮಗಳಾಗಿ ಪರಿವರ್ತನೆ ಹೊಂದುತ್ತಿರುವುದು ಈಚೀಚೆಗೆ ಸರ್ವೇ ಸಾಮಾನ್ಯವಾಗಿದೆ. ಇದರಿಂದಾಗಿ ಪಕ್ಷಿಗಳಿಗೆ ಮಾನವನಿಂದ ತೊಂದರೆ ಉಂಟಾಗುತ್ತದೆಯೋ ಎಂಬ ಶಂಕೆ ಎಲ್ಲಾ ಜೀವ ವಿಜ್ಞಾನಿಗಳನ್ನು ಬಾಧಿಸುತ್ತಿದೆ. ಈ ಬಗೆಯ ವಲಸೆಯು ಮೀನುಗಳಿಂದ ಹಿಡಿದು ಸಸ್ತನಿಗಳವರೆಗೂ ಎಲ್ಲಾ ಕಶೇರುಕಗಳಲ್ಲಿ ನಿರಂತರವಾಗಿ ನಡೆಯುತ್ತಿರುವ ಕ್ರಿಯೆ. ಮೀನುಗಳಲ್ಲಿ ಈಲ್ ಮತ್ತು ಸಾಲಮನ್ (Eel, Salmon) ಗಳು, ಸಸ್ತನಿಗಳಲ್ಲಿ ಬಾವುಲಿ, ತಿಮಿಂಗಿಲ, ಮತ್ತು ಸಮುದ್ರ ಸಿಂಹ (Sea lion), ಇವೇ ಮೊದಲಾದವುಗಳು ವಲಸೆ ಹೋಗುತ್ತವೆ. ಇವೆಲ್ಲವುಗಳಿಗಿಂತ ಪ್ರಾಣಿ ಪ್ರಪಂಚದಲ್ಲಿ ವಲಸೆ ಹೋಗುವ ಆಮೆಯು ಅತಿ ಕಡಿಮೆ ಆಕರ್ಷಣೆಗೆ ಒಳಗಾಗಿದೆ. ಇತ್ತೀಚೆಗೆ ಈ ಪ್ರಾಣಿಯ ಬಗೆಗೆ ಆಳವಾದ ಸಂಶೋಧನೆ ನಡೆಯುತ್ತಿದ್ದು ಇದರ ಜೀವನದ ಬಗ್ಗೆ ಅನೇಕ ಕುತೂಹಲಕಾರಿ ವಿಷಯಗಳು ಬೆಳಕಿಗೆ ಬಂದಿವೆ.

ಆಮೆ ಕಿಲೋನಿಯ ಎಂಬ ಸರೀಸೃಪಗಳ ಗುಂಪಿಗೆ ಸೇರಿದೆ. ಈಗ ಬದುಕಿರುವ ಸರೀಸೃಪಗಳ ವರ್ಗಕ್ಕೆ ಮೊಸಳೆ, ಹಾವು ಮತ್ತು ಹಲ್ಲಿಗಳು ಸೇರಿವೆ. ಇವುಗಳ ಪೈಕಿ ಆಮೆಗೆ ಒಂದು ವಿಶಿಷ್ಟ ಸ್ಥಾನವಿದೆ. ಈಗ ಬದುಕುಳಿದಿರುವ ಆಮೆಗಳಲ್ಲಿ ಒಟ್ಟು 220 ಜಾತಿಗಳು. ಇವು 12 ಬೇರೆ ಬೇರೆ ಕುಟುಂಬಕ್ಕೆ ಸೇರಿವೆ. ಈ 12 ಕುಟುಂಬಗಳಲ್ಲಿ 2 ಕುಟುಂಬಕ್ಕೆ ಸೇರಿದ ಆಮೆಗಳು ಮಾತ್ರ ಸಮುದ್ರಯಾನ ಮಾಡುವುದರಲ್ಲಿ ಪ್ರವೀಣತೆಯನ್ನು ಸಾಧಿಸಿವೆ. ಅವೆಂದರೆ, ತೊಗಲೆ ಬೆನ್ನಿನ (leather back turtle) ಡರ್ಮೋಕೆಲಿಡೆ ಕುಟುಂಬಕ್ಕೆ ಸೇರಿದ ಆಮೆ, ಲೆಪಿಡೋಕೆಲಿಸ್ ಆಮೆ (Ridley), ದೊಡ್ಡ ತಲೆ ಆಮೆ (Logger head), ಹದ್ದು ತಲೆಯ ಆಮೆ (Hawksbill) ಮತ್ತು ಪಚ್ಚೆ ಆಮೆ (green turtle)ಗಳು ಕಿಲೋನಿಡೆ ಕುಟುಂಬಕ್ಕೂ ಸೇರಿವೆ.





ತನ್ನ ಗೂಡಿನಲ್ಲಿ ಮೊಟ್ಟೆ ಇಡುತ್ತಿರುವುದು

ಈ ಸಮುದ್ರಯಾನ ಈ ಮೇಲೆ ಹೇಳಿದ ಆಮೆಗಳಲ್ಲಿ ಒಂದು ನಿಯೋಜಿತ ಕ್ರಿಯೆ. ಇದರಿಂದ ಈ ಪ್ರಾಣಿಗಳಿಗೆ ಎರಡು ರೀತಿಯ ಪ್ರಯೋಜನವಿದೆ. ಮೊದಲನೆಯದಾಗಿ ತನ್ನ ಕ್ಷೇತ್ರದಲ್ಲಿ ಸಾಕಷ್ಟು ಆಹಾರವನ್ನು ಒದಗಿಸಿಕೊಳ್ಳುತ್ತದೆ, ಎರಡನೆಯದಾಗಿ ತನ್ನ ಸಂತಾನಾಭಿವೃದ್ಧಿಗೆ ಯೋಗ್ಯವಾದ ಪರಿಸರವನ್ನು ಕಲ್ಪಿಸಿಕೊಳ್ಳುತ್ತದೆ. ಒಟ್ಟಿನಲ್ಲಿ, ನಿಯಮಿತ ಕಾಲದ ಸಂತಾನಾಭಿವೃದ್ಧಿಯ ಕಾರ್ಯಕ್ರಮಕ್ಕೆ ಸಜ್ಜುಗೊಳಿಸುವುದೇ ಈ ವಲಸೆಯ ಮುಖ್ಯೋದ್ದೇಶವೆಂದು ಹೇಳಬಹುದು. ಆಕ್ರಮಣಕಾರರಿಂದ ತನ್ನ ಕುಟುಂಬವನ್ನು ರಕ್ಷಿಸುವ ಸಲುವಾಗಿ ಆಮೆಗಳು ಇಂತಹ ಗಡಿ ಪ್ರದೇಶವನ್ನು ಆಯ್ಕೆ ಮಾಡಿಕೊಳ್ಳುತ್ತವೆ. ವಲಸೆಹೋಗುವ ಆಮೆ ದಾರಿಯುದ್ದಕ್ಕೂ ಅತ್ಯಂತ ಲವಲವಿಕೆಯಿಂದ ಇರಬಹುದು ಅಥವಾ ತಾನು ಮರಿಹಾಕುವ ಆಯ್ಕೆಯ ಸ್ಥಳದಲ್ಲಿ ಮಾತ್ರ ಲವಲವಿಕೆಯನ್ನು ತೋರಿಸಬಹುದು. ಸ್ವಸ್ಥಾನದಲ್ಲಿ ಮಾತ್ರ ಆಮೆಯು ಆಹಾರಾನ್ವೇಷಣೆಗೂ, ಮತ್ತು ಸಂಗಾತಿಯನ್ವೇಷಣೆಗೂ ಸರಾಗವಾಗಿ ಓಡಾಡುತ್ತಿರುತ್ತದೆ. ಬೇರೆ ಬೇರೆ ಕಾಲಗಳಲ್ಲಿ ಆಮೆ ಸಂಘ ಜೀವನವನ್ನು ನಡೆಸಿದರೂ, ಸಂತಾನಾಭಿವೃದ್ಧಿಯ ಕಾಲದಲ್ಲಿ ಒಂಟಿಯಾಗಿರಲು ಬಯಸುತ್ತದೆ, ಮತ್ತು ಆ ಕಾಲದಲ್ಲಿ ಯಾವ ಪ್ರಾಣಿ ಹತ್ತಿರ ಬಂದರೂ ಸಹಿಸುವುದಿಲ್ಲ. ಆದರೆ, ಈ ಆಮೆ ಮೊಟ್ಟೆಯಿಡುವುದಕ್ಕಾಗಿಯೇ ಅನೇಕ ಮೈಲಿಗಳಾಚೆ ಏಕೆ ಪ್ರಯಾಣಿಸುತ್ತವೆ ಎಂಬುದು ವಿಜ್ಞಾನಿಗಳು ಈಗಲೂ ಆಶ್ಚರ್ಯಪಡುವ ಸಂಗತಿಯಾಗಿದೆ.

ಫ್ಲೋರಿಡಾ ವಿಶ್ವವಿದ್ಯಾಲಯದ ಅಮೇರಿಕನ್ ಜೀವ ವಿಜ್ಞಾನಿ, ಆರ್ಚಿಕಾರ್ ಮತ್ತು ಅಸ್ಟ್ರೇಲಿಯಾದ ಪಳೆಯುಳಿಕೆಯ ವಿಜ್ಞಾನಿ ಪ್ಯಾಟ್ರಿಕ್ ಕೋಲ್‌ಮನ್, ಇವರುಗಳ ಹೇಳಿಕೆಯ ಪ್ರಕಾರ, ಭೂಖಂಡವು ನೀರಿನ ಪ್ರವಾಹಗಳಿಂದ ದೂರ ಸರಿಸಲ್ಪಟ್ಟು, 80 ಲಕ್ಷ ವರ್ಷಗಳಿಂದೀಚೆಗೆ ದಕ್ಷಿಣ ಅಮೆರಿಕ ಮತ್ತು ಆಫ್ರಿಕಾ ಖಂಡಗಳ ನಡುವೆ ಕಂದರ (gulf) ಏರ್ಪಟ್ಟು ಬೇರೆ ಬೇರೆಯಾಯಿತು. ಇದಾದ ಮೇಲೆ ಶಿಲಾ ಪ್ರವಾಹ (lava) ಗಳಿಂದ ಮುಖ್ಯ ಭೂಖಂಡಗಳು ಬೇರ್ಪಡಿಸಲ್ಪಟ್ಟು, ಜ್ವಾಲಾಮುಖಿ ದ್ವೀಪಗಳು ಕಾಣಿಸಿಕೊಂಡವು. ಇದರಿಂದ ಆಮೆಗಳು ತಮ್ಮ ನಿವಾಸ ಸ್ಥಾನದಿಂದ ಹತ್ತಿರದಲ್ಲಿರುವ ದ್ವೀಪಗಳಿಗೆ ಹೋಗಿ ಮೊಟ್ಟೆಗಳನ್ನು ಅಲ್ಲಿ ಶತ್ರುಗಳ ಆಕ್ರಮಣದಿಂದ ರಕ್ಷಿಸಲು ಇಟ್ಟು ಬರಲಾರಂಭಿಸಿದವು. ಪ್ರವಾಹಗಳ ಸತತ ಹೊಡೆತಗಳಿಂದ ಈ ದ್ವೀಪಗಳೂ ಮುಚ್ಚಿಹೋಗಿ ಹೊಸ ಹೊಸ ದ್ವೀಪಗಳಾದಂತೆ ಅವು ದೂರ ಸರಿಸಲ್ಪಟ್ಟವು. ಈ ಕ್ರಿಯೆ ನಿರಂತರವಾಗಿ ಸಾಗಿ ಲಕ್ಷಾಂತರ ವರ್ಷಗಳಲ್ಲಿ ಭೂ ಭಾಗಗಳು ದೂರ ಸರಿಸಲ್ಪಟ್ಟಂತೆ, ಆಮೆಯ ಸಮುದ್ರಯಾನವೂ ಬೆಳೆಯುತ್ತಾ ಬಂದಿದೆ. ತಮ್ಮ ಈ ದೂರದ ಪ್ರಯಾಣಕ್ಕಾಗಿ ತಮ್ಮ ಭುಜದ ಮಾಂಸಖಂಡಗಳನ್ನು ಬಲವಾಗಿ ಬೆಳೆಸಿಕೊಂಡು ಹೆಚ್ಚಾದ ಕೊಬ್ಬನ್ನು ಶೇಖರಿಸುತ್ತದೆ. ಈ ಕೊಬ್ಬು ತಮ್ಮ ಈ ದೂರ ಪ್ರಯಾಣದಲ್ಲಿ ಶಕ್ತಿಯನ್ನು ಒದಗಿಸಲು ಉಪಯೋಗಿಸಲ್ಪಡುತ್ತದೆ.

ಸಮುದ್ರ ಆಮೆಗಳು ಸಮುದ್ರಯಾನ ಮಾಡುವುದರಲ್ಲಿ ಮನುಷ್ಯನಿಗಿಂತ ಮಿಗಿಲಾದ ನೈಪುಣ್ಯವನ್ನು ತೋರಿಸುತ್ತವೆ. ಇವುಗಳಲ್ಲಿ ತೊಗಲಬೆನ್ನಿನ ಆಮೆ (leather back) ಅತಿ ಹೆಚ್ಚು ಯಾನ ಮಾಡುತ್ತವೆ. ಪಚ್ಚೆಆಮೆ ತನ್ನ ದೂರ ಪ್ರಯಾಣಕ್ಕೆ ಹೆಸರುವಾಸಿಯಾದರೂ, ತೊಗಲಬೆನ್ನಿನ ಆಮೆ ಭೂಮಿಯ ಬಹು ಭಾಗವನ್ನು ಸುತ್ತುತ್ತದೆ. ಇದು ಪ್ರಪಂಚದ ಸಮಶೀತೋಷ್ಣದ ಬಹು ಭಾಗ ವನ್ನು ಸುತ್ತುತ್ತದೆ ಎಂಬುದು ಸಾಕ್ಷ್ಯಾಧಾರಗಳ ಸಹಿತ ತಿಳಿದು ಬಂದಿದೆ. ಉತ್ತರ ಕೆನಡಾ, ಸ್ಕಾಟ್‌ಲಂಡ್. ನಾರ್ವೆ, ಉತ್ತರ ಜಪಾನ್ ದ್ವೀಪಗಳು, ವಾಂಕೂವರ್ ಕರಾವಳಿ ಮತ್ತು ರಷ್ಯಾದ ಮಾರಿಟೈಂ ಕರಾವಳಿಗಳಲ್ಲಿ ಪ್ರಾಯಕ್ಕೆ ಬಂದ ತೊಗಲ ಬೆನ್ನಿನ ಆಮೆಗಳನ್ನು ಗುರುತಿಸಲಾಗಿದೆ.

ಸಣ್ಣ ಚಿಪ್ಪುಳ್ಳ ದೊಡ್ಡತಲೆಯ ಅಟ್ಲಾಂಟಿಕದ ಆಮೆ (Ridely) ತನ್ನ ಗುಂಪಿನೊಡನೆ ಬರುವಾಗ ಅತ್ಯಂತ ಆಕರ್ಷಣೀಯವಾಗಿ ಕಾಣುತ್ತದೆ. ಇದರ ಸಂತಾಭಿವೃದ್ಧಿಯ ಬಗೆಗೆ ಇತ್ತೀಚೆಗೆ ಸ್ವಾರಸ್ಯಕರ ಸಂಗತಿಗಳು ತಿಳಿದುಬಂದಿವೆ. ಇದರ ಗುಂಪುಗೂಡುವಿಕೆಯನ್ನು ಮೊದಲು ಮೆಕ್ಸಿಕೋದ ಗಡಿ (gulf) ಯಲ್ಲಿ ಗುರುತಿಸಲಾಯಿತು. 1948ರಲ್ಲಿ ಇದರ ಸಂತಾನ ಕ್ರೀಡಾಲೋಲತೆಯನ್ನು ಚಿತ್ರಿಸ ಲಾಯಿತು. ಈ ಚಿತ್ರವು ಪ್ರಾಣಿಪ್ರಪಂಚದಲ್ಲಿ ಒಂದು ಅತ್ಯಂತ ಸಂಭ್ರಮದ ದೃಶ್ಯವೆಂದು ಪರಿಗಣಿಸಲಾಗಿದೆ. ಇದು ರಾತ್ರಿಯಲ್ಲಿ ಗೂಡು ಕಟ್ಟುತ್ತದೆ. ಸುಮಾರು 10,000 ಆಮೆಯು 1.5 ಕಿ.ಮೀ. ಸಮುದ್ರದಡವನ್ನು ಆಕ್ರಮಿಸಿದ್ದು ದನ್ನು ಅಳೆಯಲಾಗಿದೆ. ಅತಿ ಕಡಿಮೆಯೆಂದರೆ, ಸುಮಾರು 40,000 ಆಮೆಗಳು ದಡ ಸೇರುವುದನ್ನು ಎಣಿಸಲಾಗಿದೆ. ಈ ಆಮೆಯು ಏಪ್ರಿಲ್‌ನಿಂದ ಜೂನ್ ತಿಂಗಳ ಅವಧಿಯಲ್ಲಿ ಮೊಟ್ಟೆಯಿಡುತ್ತದೆ. ಆದರೆ ಈ ಅವಧಿಯು ವರ್ಷದಿಂದ ವರ್ಷಕ್ಕೆ ಬೇರೆ ಬೇರೆಯಾಗಿರುವುದು ಗಮನಾರ್ಹವಾದ ಸಂಗತಿ. ಛಳಿಗಾಲದಲ್ಲಿ ಈ ಆಮೆಯು ಪಶ್ಚಿಮ ಬಂಗಾಳ, ಒರಿಸ್ಸಾ ಮತ್ತು ತಮಿಳುನಾಡಿನ ಸಮುದ್ರ ತೀರಗಳಲ್ಲಿ ಆರಾಮವಾಗಿ ಮೊಟ್ಟೆಯಿಟ್ಟು ಮರಿಮಾಡಿರುವ ಸಂಗತಿ ಇತ್ತೀಚಿನ ವರ್ಷಗಳಲ್ಲಿ ಕಂಡುಬಂದಿದೆ. ಈ ದಿಸೆಯಲ್ಲಿ 1972ನೇ ಇಸವಿಯಲ್ಲಿ ಸ್ಥಾಪಿತವಾದ Exclusive Economic Zone (EEZ) for Protection of Marine Species under Schedule I, of Wild Life Actದ ಕೆಲಸಗಾರರ ಕಾರ್ಯ ಪ್ರಶಂಸನೀಯವಾದದ್ದು ಎಂದರೆ ತಪ್ಪಾಗಲಾರದು.

ದೊಡ್ಡ ತಲೆ ಆಮೆ (Logger head) ಶೀತಪ್ರದೇಶವಾಸಿ. ಇದರ ಸಂತಾ ನಾಭಿವೃದ್ಧಿಯ ಕಾರ್ಯ ಪೂರ್ವ ಯುನೈಟೆಡ್ ಸ್ಟೇಟ್ಸ್, ದಕ್ಷಿಣ ಆಫ್ರಿಕ, ದಕ್ಷಿಣ ಮಡಗಾಸ್ಕರ್, ಟರ್ಕಿ, ಜಪಾನ್ ಮತ್ತು ಕ್ವೀನ್ಸ್‌ಲಾಂಡ್‌ಗಳಲ್ಲಿ. ಉಷ್ಣಪ್ರದೇಶ ವಾದ ಕ್ಯಾರೇಬಿಯನ್, ಕ್ಯೂಬ ಮತ್ತು ಕೊಲಂಬಿಯಾ ಸಮುದ್ರತೀರಕ್ಕೆ ಬರುವು



ಮೊಟ್ಟೆ ಇಟ್ಟನಂತರ ನೀರಿಗೆ ಮರಳಿ ತೆರಳುತ್ತಿರುವ ಪಚ್ಚೆ ಆಮೆ

ದನ್ನು ಗುರುತಿಸಲಾಗಿದೆ. ಆದರೆ ಪೂರ್ವ ಫೆಸಿಫಿಕ್ ಕಡೆ ಇವು ತಲೆ ಹಾಕುವುದಿಲ್ಲ. 1971ರಲ್ಲಿ ಹ್ಯೂಗ್ಸ್ (Hughes) ಎಂಬ ವಿಜ್ಞಾನಿ ಇವು ನೂರಾರು ಮೈಲಿ ಪ್ರಯಾಣ ಮಾಡಿರುವುದನ್ನು ದಾಖಲೆಪಡಿಸಿದ್ದಾನೆ. ಇವು ಛಳಿಗಾಲದಲ್ಲಿ ಉಷ್ಣ ವಲಯಗಳಲ್ಲಿ ಬೀಡುಬಿಡುತ್ತವೆ. 1959ರಲ್ಲಿ ಬಾಲ್ಡ್ವಿನ್ ಮತ್ತು ಲಾಫ್ಟನ್ (Baldwin and Lapton) ಎಂಬುವರು ಇವು ಎತ್ತರದ ಮತ್ತು ಅಗಾಧವಾದ ತೀರಗಳಲ್ಲಿನ ಮರಳದಿಬ್ಬಗಳ ಮೇಲೆ ನೀರಿನಿಂದ ಬಹುದೂರ ತಮ್ಮ ಗೂಡನ್ನು ಕಟ್ಟಲು ಆಯ್ಕೆಮಾಡುವುದಾಗಿ ತಿಳಿಸಿದ್ದಾರೆ. ಇದಲ್ಲದೇ, ಇದರ ಸಂತಾನ ಚಕ್ರ ಕ್ರಿಯೆ (nesting cycle) ಸಮುದ್ರದ ಉಬ್ಬರಪಿಳಿತ ಚಕ್ರ (tidal cycle)ಕ್ಕೂ ಮತ್ತು ದಿನದ ಕಾಲಚಕ್ರದಿಂದಲೂ ಉತ್ತೇಜಿಸಲ್ಪಡುತ್ತದೆ. ದಿನದ ಉಷ್ಣತೆಯನ್ನು ತಪ್ಪಿಸುವುದಕ್ಕೋಸ್ಕರ ಬಿಸಿಲು ತಂಪಿದ ಮೇಲೆ, ಸಮುದ್ರದ ಉಬ್ಬರ ಹೆಚ್ಚಾಗಿದ್ದಲ್ಲಿ, ಇಲ್ಲವೇ ಬೆಳಗಿನ ಜಾವ ಅಥವಾ ರಾತ್ರಿಯಲ್ಲಿ ಗೂಡುಕಟ್ಟಲು ಸಮುದ್ರದಿಂದ ಹೊರಬರುತ್ತದೆ.

ಹದ್ದು ತಲೆಯ ಆಮೆ (Hawk's bill turtle) ತನ್ನ ಸಂತಾನ ಕ್ರಿಯೆಯ ಕಾಲವನ್ನು ತನ್ನ ಅನುಕೂಲಕ್ಕಾಗಿಯೇ ವಿಭಾಗಿಸಿಕೊಂಡಿರುವುದನ್ನು, 1965ರಲ್ಲಿ ಫುಕುಡ (Fukuda) ಎಂಬ ವಿಜ್ಞಾನಿ ತೋರಿಸಿಕೊಟ್ಟರು. ಇವು ತಮ್ಮೊಳಗೇ ಸ್ಪರ್ಧೆಯನ್ನು ಕಡಿಮೆ ಮಾಡಲು ಈ ವ್ಯಾವಹಾರಿಕ ಜಾಣತನವನ್ನು ತೋರಿಸು



ಮೊಟ್ಟೆಯಿಂದ ಆಗತಾನೇ ಹೊರಬಂದ ಪಚ್ಚೆ ಆಮೆ ಮರಿಗಳು

ವುದಾಗಿ ಅಭಿಪ್ರಾಯಪಟ್ಟಿದ್ದಾರೆ. ಆರ್ಚಿ ಕಾರ್ (Archi Carr)ರ ವಿವರಣೆಯ ಪ್ರಕಾರ ಹದ್ದಿನ ತಲೆ ಆಮೆ ಮತ್ತು ತೊಗಲು ಬೆನ್ನಿನ ಆಮೆಗಳು, ಪಚ್ಚೆಆಮೆಯ ಜೊತೆ ಕೋಸ್ಟರೀಕ (Costa Rica)ಕ್ಕೆ ಮೊಟ್ಟೆಯಿಡಲು ಬಂದರೂ, ಅವುಗಳು ಅಲ್ಲಿಗೆ ಬರುವ ಕಾಲ ಬೇರೆ ಬೇರೆ. ಹದ್ದುತಲೆ ಆಮೆ ಇತರ ಆಮೆಗಳಂತೆ ಹಿಂಡು ಹಿಂಡಾಗಿ ಬರದೆ ಒಂದೊಂದಾಗಿ ಬಂದು ತನ್ನ ಕಾರ್ಯವನ್ನು ಸಮರ್ಥವಾಗಿ ನಡೆಸುತ್ತದೆ. ಇದಲ್ಲದೆ ಇವು ಬಹು ದೂರದ ಪ್ರಯಾಣವನ್ನು ನಡೆಸದೆ ತಮ್ಮ ಬಹು ಹತ್ತಿರದ ಪರಿಚಿತ ಜಾಗವನ್ನು ಮಾತ್ರ ಹುಡುಕಿಕೊಂಡು ಹೋಗುತ್ತವೆ.

ಪಚ್ಚೆ ಆಮೆಗಳು ಪ್ರತಿ ಎರಡು ಅಥವಾ ಮೂರು ವರ್ಷಗಳಿಗೊಮ್ಮೆ ಬ್ರೆಜಿಲ್‌ನಿಂದ ಅಸೆಂಷನ್ ದ್ವೀಪ (Ascension island) ಗಳವರೆಗೂ ವಲಸೆ ಹೋಗುತ್ತವೆ. ಇಲ್ಲಿ ಇಟ್ಟ ಮೊಟ್ಟೆಗಳು ಒಡೆದು ಮರಿಗಳು ಹೊರಬಂದಾಗ ಅವು ಸಮುದ್ರ ಅಲೆಗಳ ಹೊಡೆತಕ್ಕೆ ಸಿಕ್ಕಿ ತಮ್ಮ ತೌರನ್ನು (mother's place) ಸೇರುತ್ತವೆ. ಅವು ಪ್ರಾಯಕ್ಕೆ ಬಂದಾಗ ಪುನಃ ತಮ್ಮ ಹುಟ್ಟಿನ ಸ್ಥಳಕ್ಕೆ ಮೊಟ್ಟೆಯಿಡಲು ಪ್ರಯಾಣಿಸುತ್ತವೆ.

ಯಾವ ಅತೀಂದ್ರಿಯ ಜ್ಞಾನ ಇಂಥ ಸಮುದ್ರಯಾನಕ್ಕೆ ಆಮೆಗಳಿಗೆ ಪ್ರೇರಣೆ ಕೊಡುತ್ತದೆ ಎಂಬುದು ವಿಜ್ಞಾನಿಗಳಲ್ಲಿ ಕುತೂಹಲ ಹುಟ್ಟಿಸಿದೆ. ಪಚ್ಚೆ ಆಮೆ ತನ್ನ ಸಂತಾನಾಭಿವೃದ್ಧಿಯ ಕಾಲದಲ್ಲಿ ಎರಡು ಅಥವಾ ಮೂರು ತಂಡ (batch) ಗಳಲ್ಲಿ ಮೊಟ್ಟೆಗಳನ್ನು ಇಡುತ್ತದೆ. ಈ ಭೂಮಧ್ಯರೇಖೆಗನುಗುಣವಾಗಿ (ಅಕ್ಷಾಂಶ) ಬೇರೆ ಬೇರೆಯಾಗುತ್ತದೆ. ಪಶ್ಚಿಮ ಬೋರ್ನಿಯೋದಲ್ಲಿ ಮೇ ಯಿಂದ ಸೆಪ್ಟೆಂಬರ್‌ವರೆಗಾದರೆ ಪೂರ್ವ ಆಸ್ಟ್ರೇಲಿಯಾದಲ್ಲಿ ಅಕ್ಟೋಬರ್‌ನಿಂದ ಫೆಬ್ರವರಿಯಲ್ಲಾಗುತ್ತದೆ.

ಆಮೆಯ ಜೀವನದ ಬಹುಭಾಗ ಮೇವಿನ ಸಂಗ್ರಹಣೆಯಲ್ಲೇ ಕಳೆಯುತ್ತದೆ. ಸಸ್ಯಾಹಾರಿ ಆಮೆ ಒಂದಾಗಿ ಸೇರಿ ಆಹಾರ ಸೇವಿಸುವ, ಭೋಜನಕೂಟದ ಪ್ರಚೋದನೆಗೆ ಕಾರಣ ಸ್ಪಷ್ಟವಾಗಿಲ್ಲವಾದರೂ ಸಂತಾನಕಾರ್ಯಕ್ಕೆ ಇದೊಂದು ನಿಯೋಜಿತ ಯೋಜನೆ ಎಂದು ತಿಳಿದು ಬಂದಿದೆ. ಗಂಡಾಮೆ ಮೊಟ್ಟೆಯೊಡೆದು ಸಮುದ್ರ ಸೇರಿದ ಮೇಲೆ ಅದು ಪುನಃ ತೀರಪ್ರದೇಶಕ್ಕೆ ಬರುವ ಸಂಭವ ಬಹು ಕಡಿಮೆ. ಆದರೆ ನಿರ್ಜನ ತೀರಗಳಲ್ಲಿ ಬಿಸಿಲು ಕಾಯಿಸುವ ಸಲುವಾಗಿ (basking) ಗಂಡು ಮತ್ತು ಹೆಣ್ಣಾಮೆಗಳು ಸಮುದ್ರ ದಂಡೆ ಸೇರುವುದು ಅಪರೂಪವೇನಲ್ಲ.

ಆಮೆಯ ಜೀವನದ ಸೋಜಿಗವೆಂದರೆ ಇವು ಸಮುದ್ರದಲ್ಲಿ ವಾಸಿಸುತ್ತವೆ. ಮತ್ತು ನೆಲದ ಮೇಲೆ ಮರಿಮಾಡುತ್ತವೆ. ಇವು ತಮ್ಮ ಮೇವಿನ ಸ್ಥಳದಿಂದ ಮೊಟ್ಟೆಯಿಡುವ ಸ್ಥಳಕ್ಕೆ ವರ್ಗಾವಣೆ ಮಾಡಿಕೊಳ್ಳುತ್ತವೆ. ಇವು ತಿನ್ನುವ ಹುಲ್ಲು ಅಥವಾ ಮೇವು ಸಮುದ್ರದ ರಕ್ಷಿತ ವಿಶಾಲ ಕ್ಷೇತ್ರಗಳಲ್ಲಿ ಬೆಳೆಯುತ್ತದೆ. ಆದರೆ

ಇವು ಮೊಟ್ಟೆಯಿಡಲು ಆಯ್ದುಕೊಳ್ಳುವ ಪ್ರದೇಶ ಅಡಚಣೆಯಿಲ್ಲದೇ ಅಲೆ ಬರುವ ತೀರಪ್ರದೇಶಗಳು. ಇದರ ಮುಖ್ಯೋದ್ದೇಶ ತಮ್ಮ ಮೊಟ್ಟೆಗೆ ಯಾವ ಬಾಧಕವನ್ನೂ ಉಂಟುಮಾಡದೇ ಇರುವುದಾದರೂ, ಈ ಮೂಕಪ್ರಾಣಿಗೆ ಮಾನವ ಎಂಥ ಕ್ರೂರಪ್ರಾಣಿ ಎಂದು ತಿಳಿಯದೇ ಇರುವುದು. ಇವು ನಶಿಸಿಹೋಗುತ್ತಿರುವ ಈ ವೇಳೆಯಲ್ಲಾದರೂ ಮನುಷ್ಯ ಇದರ ಚಿಂತನೆಗೆ ಒಳಗಾಗಿರುವುದು ಆಮೆಗಳ ಅದೃಷ್ಟವೆಂದೇ ಹೇಳಬೇಕು.

ಆಮೆಗಳು ಪುನಃ ಸ್ವಸ್ಥಾನವನ್ನು ಹೇಗೆ ಸೇರುತ್ತವೆ ಎಂಬುದು ಇನ್ನೂ ನಿಖರವಾಗಿ ತಿಳಿದುಬಂದಿಲ್ಲ. ಪಚ್ಚೆ ಆಮೆಗಳ ಮೇಲೆ ನಡೆಸಿರುವ ಪ್ರಯೋಗಗಳಿಂದ ಇವು ಕೆಲವು ಮಾರ್ಗದರ್ಶಕ ಪ್ರಜ್ಞೆಯಿಂದ ಸ್ವಸ್ಥಾನ ತಲುಪುವುದು ಧೃಢಪಟ್ಟಿದೆ. ಈ ಪ್ರಜ್ಞೆಗೆ ಅವುಗಳ ವಾಸನಾಸಾಮರ್ಥ್ಯ ಸಹಾಯಮಾಡಬಹುದೆಂಬ ಊಹೆ ನಿಜವಿದ್ದರೂ ಇರಬಹುದು. ಇದಕ್ಕೆ ಆಧಾರ ಇವು ಸಮುದ್ರತಳಕ್ಕೆ ಹೋಗಿ ಅಥವಾ ಸಮುದ್ರದಂಚೆಗೆ ಬಂದಾಗ ತಮ್ಮ ಮೂತಿಯನ್ನು ಮುಂದೆ ಚಾಚಿ ಮೂಸುವಂತೆ ನೋಡುವುದೇ ಆಗಿದೆ. ಶಬ್ದಗ್ರಹಣ ಶಕ್ತಿಯ ಬಗ್ಗೆ ಹೆಚ್ಚು ತಿಳಿದಿಲ್ಲವಾದರೂ ಈ ದಿಸೆಯಲ್ಲಿ ಮಾಹಿತಿಯ ಅಗತ್ಯವಿದೆ.

ಈ ಜೀವಿಯ ಸಮುದ್ರಯಾನ ಕುಶಲತೆ ಸೂರ್ಯ ಮತ್ತು ನಕ್ಷತ್ರಗಳಿಂದ ಪ್ರೇರೇಪಿಸಲ್ಪಡಬಹುದೆಂಬ ಅಭಿಪ್ರಾಯವನ್ನೂ ತೆಗೆದುಹಾಕುವಂತಿಲ್ಲ. ದುಂಬಿ (Honey bee) ಮತ್ತು ಪಕ್ಷಿಗಳಂತೆ ಸೂರ್ಯನಿಂದ ಪ್ರೇರೇಪಣೆ ಪಡೆಯಬಹುದೆಂಬ ವಿಜ್ಞಾನಿಗಳ ಊಹೆ ನಿಜವಿದ್ದರೂ ಇವುಗಳ ಕಣ್ಣು ನಕ್ಷತ್ರಗಳನ್ನು ಗುರುತಿಸುವಷ್ಟು ಸೂಕ್ಷ್ಮವಾದ್ದಾಗಿಲ್ಲವಾದ್ದರಿಂದ ನಕ್ಷತ್ರಗಳಿಂದ ಉತ್ತೇಜಿತಗೊಳ್ಳುವುದಿಲ್ಲ. ಈ ಶಕ್ತಿ ದೈವದತ್ತವಾದದ್ದೆಂದು ಹೇಳಿದರೆ ವೈಜ್ಞಾನಿಕವಾಗಿ ಉತ್ತರಿಸಿದಂತಾಗುವುದಿಲ್ಲ.

ಎಲ್ಲಕ್ಕಿಂತ ಹೆಚ್ಚಾಗಿ ಅವಕ್ಕೆ ಅತೀಂದ್ರಿಯಜ್ಞಾನವೇ ಇರಬೇಕು. ಉದಾಹರಣೆಗೆ ಚಿಕ್ಕಮರಿ ಮೊಟ್ಟೆಯೊಡೆದು ಹೊರಬಂದ ಕೂಡಲೇ ನೀರನ್ನೇ ಹುಡುಕಿಕೊಂಡು ಹೋಗುತ್ತವೆ. ಆಗತಾನೇ ಮೊಟ್ಟೆಯೊಡೆದ ಮರಿಗಳನ್ನು ಸಮುದ್ರದಿಂದ ಬಹುದೂರ ನೀರು ಕಾಣದಂತೆ ಮಾಡಿದಾಗಲೂ ಅವು ಸಮುದ್ರದ ಕಡೆಗೆ ಮುಖಮಾಡಿ ಹೋಗುವುದು ನಂಬಲರ್ಹವಾದ ಸಂಗತಿಯೇ. ಆದ್ದರಿಂದ ಇವು ಬೆಳಕು ನೆಲದ ಮೇಲೆ ಬೀಳುವುದಕ್ಕೂ, ನೀರಿನ ಮೇಲೆ ಬೀಳುವುದಕ್ಕೂ ಇರುವ ವ್ಯತ್ಯಾಸವನ್ನು ಗುರುತಿಸುವ ಸಾಮರ್ಥ್ಯ ಪಡೆದಿರಬಹುದು. ಕೆಲವು ವಿಜ್ಞಾನಿಗಳು ಹೇಳುವಂತೆ ಇವಕ್ಕೆ ದಿಕ್‌ಸೂಚಿಯ (compass sense) ಮಾರ್ಗದರ್ಶನವಿದ್ದರೂ ಇರಬಹುದು.

ಆಫ್ರಿಕಾ ಮತ್ತು ದಕ್ಷಿಣ ಅಮೇರಿಕಾದ ನಡುವೆ ಇರುವ ಚಿಕ್ಕ ಅಸೆಂಷನ್ ದ್ವೀಪದಲ್ಲಿ ಫೆಬ್ರುವರಿಗೆ ಪಚ್ಚೆ ಆಮೆಗಳು ಬಂದು, ಅವು ಅಲ್ಲಿ ಜೂನ್‌ವರೆಗೂ ಇದ್ದು

ಹನ್ನೆರಡು ದಿನಕ್ಕೊಮ್ಮೆ ಮೊಟ್ಟೆಗಳನ್ನು ಇಡುತ್ತವೆ. ಜೀವ ವಿಜ್ಞಾನಿಗಳು ಇಂಥ ಕಾರ್ಯದಲ್ಲಿ ತೊಡಗಿರುವ ಆಮೆಗಳಿಗೆ ಲೋಹದ ವಿಳಾಸಪಟ್ಟಿಗಳನ್ನು ತೊಡಿಸುವುದರ ಮೂಲಕ (tagging) ಅವನ್ನು ಬ್ರೆಜಿಲ್ ತೀರಗಳಲ್ಲಿ ಪುನಃ ಗುರುತಿಸುವಂತಾಗಿದೆ. ಮತ್ತೆ ಮೂರು ವರ್ಷಗಳನಂತರ ಅವು ಅದೇ ದ್ವೀಪಕ್ಕೆ ಪುನಃ ಬಂದಿರುವ ದಾಖಲೆಯೂ ಸಿಕ್ಕಿದೆ.

ವೆಸ್ಟ್ ಇಂಡೀಸ್‌ನಲ್ಲಿ ಮೊಟ್ಟೆಯೊಡೆದು ಹೊರಬಂದ ಮರಿಗಳಿಗೆ ವಿಳಾಸ ಪಟ್ಟಿಗಳನ್ನು ತೊಡಿಸಿ ಸುಮಾರು 50 ಮೈಲಿಗಳ ದೂರ ಅವನ್ನು ಒಯ್ದು ಬಿಟ್ಟಾಗ ಅವು ಪುನಃ ತಮ್ಮ ಸ್ಥಳಕ್ಕೇ ಹೋಗುವುವು. ಆಸ್ಟ್ರೇಲಿಯಾದ ಪೂರ್ವ ಭಾಗದಲ್ಲಿರುವ ಹೆರ್‌ಸನ್ ದ್ವೀಪ (Herson Island) ದಲ್ಲಿ ಮೂರ್‌ಹೌಸ್ (Moorehouse)ನು ಅನುಕ್ರಮವಾಗಿ ರಾತ್ರಿಯಲ್ಲಿ ಅಲ್ಲಿ ಬಂದಂಥ ಆಮೆಗಳನ್ನು ದೂರ ಸಾಗಿಸಿ ಅವನ್ನು ಪುನಃ ನೀರಿನಲ್ಲಿ ಬಿಟ್ಟಾಗ ಅವು ತಮ್ಮ ಆಯ್ಕೆಯಾದ ಮೊದಲಿನ ದ್ವೀಪಕ್ಕೇ ಹೋಗುವುದನ್ನು ಕಂಡು ಸೋಜಿಗ ವ್ಯಕ್ತಪಡಿಸಿದ್ದಾನೆ.

ಹಿಂಡುಹಿಂಡಾಗಿ ತೀರಪ್ರದೇಶಕ್ಕೆ ಬರುವ ಆಮೆಗಳನ್ನು ಅವುಗಳಿಗೆ ಘಾಸಿಯಾಗದಂತೆ ಹಿಡಿದು, ವಿಳಾಸಪಟ್ಟಿಗಳನ್ನು ತೊಡಿಸುವುದರಿಂದ ಅವುಗಳು ಯಾವ ರೀತಿಯಲ್ಲಿ ಸಮುದ್ರಯಾನ ಮಾಡುತ್ತವೆ ಎಂಬುದನ್ನು ನಿಖರಪಡಿಸಲು, ಪಕ್ಷಿಗಳ ವಲಸೆಯಂತೆಯೇ ಸಹಾಯಕವಾಗಿದೆ.

ಈ ವಲಸೆ ಹೋಗುವಿಕೆ ಎಲ್ಲಾ ಜಾತಿಯ ಆಮೆಗಳಲ್ಲಿ ಕಂಡುಬರದೇ ಕೆಲವೇ ಜಾತಿಯ ಆಮೆಗಳಲ್ಲಿ ಕಾಣಬರುವುದರಿಂದ ಇದು ಒಂದು ವಂಶಾನುಗತ ಕಾರ್ಯವೇ ಆಗಿರಬೇಕು.

ಆಗತಾನೇ ಮೊಟ್ಟೆಯೊಡೆದ ಮರಿಗಳು ಬಹು ಚುರುಕಿನವು. ಇವು ವೇಗವಾಗಿ ಸಮುದ್ರವನ್ನು ಸೇರುವುದನ್ನು ನೋಡಿದರೆ ದೊಡ್ಡ ಆಮೆಗಳು ತಲೆ ತಗ್ಗಿಸುವಂತಾಗುತ್ತದೆ. ಬೆಕ್ಕು, ದೊಡ್ಡ ದೊಡ್ಡ ಏಡಿಗಳು, ಪಕ್ಷಿಗಳು ಈ ಮರಿಗಳು ಹೊರಬರುವುದನ್ನೇ ಹೊಂಚುಹಾಕುತ್ತಿದ್ದು ಕಬಳಿಸುತ್ತವೆ. ಇವು ಸಮುದ್ರ ತೀರದಲ್ಲಿನ ಶತ್ರುಗಳಾದರೆ ಮೀನುಗಳು ಸಮುದ್ರದಲ್ಲಿ ಇದಕ್ಕಾಗಿ ಕಾಯುತ್ತಿರುತ್ತವೆ. ಇವು ದೊಡ್ಡವಾಗುವವರೆಗೂ ಇವಕ್ಕೆ ಶತ್ರುಗಳ ಬಾಧೆ ತಪ್ಪಿದ್ದಲ್ಲ. ಷಾರ್ಕ್ ಮೀನು (Shark) ದೊಡ್ಡ ಆಮೆಗಳನ್ನು ಕೂಡ ಬೇಟೆಯಾಡುತ್ತದೆ. 13 ಅಡಿ ಉದ್ದದ ಷಾರ್ಕ್ ಹೊಟ್ಟೆಯಲ್ಲಿ ಸುಮಾರು 5 ಪೌಂಡ್ ತೂಕದ ಒಂದು ಆಮೆಯನ್ನು ಬೀಬ್ (Beebe) ಎಂಬ ವಿಜ್ಞಾನಿ ಕಂಡಿದ್ದಾನೆ. ಇದೆಲ್ಲಕ್ಕಿಂತಲೂ ಹೆಚ್ಚಾಗಿ ಮಾನವ ತನ್ನ ಹೊಟ್ಟೆಪಾಡಿಗೋಸ್ಕರ ಆಮೆಯ ಮಾಂಸ ಮತ್ತು ಮೊಟ್ಟೆಗಳಿಗಾಗಿ ಆಮೆಯ ಬೇಟೆ ನಡೆಸುತ್ತಲೇ ಬಂದಿದ್ದಾನೆ.

ಈ ರೀತಿಯ ಬೇಟೆಗಳಿಂದ ಆಮೆಯ ಭವಿಷ್ಯ ಬಹು ನಿರಾಶಾದಾಯಕವಾಗಿದೆ. ಈ ದುರಾಕ್ರಮಣವನ್ನು ತಪ್ಪಿಸಲು ಪ್ರಪಂಚದ ಎಲ್ಲಾ ಭಾಗಗಳಲ್ಲೂ ಆಮೆಗೆ ಸಂರಕ್ಷಣೆ ನೀಡುವ ಕಾರ್ಯ ನಡೆಯುತ್ತಿದೆ. ನಮ್ಮ ದೇಶದಲ್ಲಿ ಬಹು ಮುಖ್ಯವಾಗಿ ಕೇರಳ, ತಮಿಳುನಾಡು, ಒರಿಸ್ಸಾ, ಬಂಗಾಳ ಮತ್ತು ಗುಜರಾತ್ ರಾಜ್ಯಗಳು ಅನೇಕ ಯೋಜನೆಗಳನ್ನು ಹಾಕಿಕೊಂಡಿವೆ. ಇದರಿಂದಾಗಿ ಆಮೆಗೆ ಮತ್ತೆ ಸುವರ್ಣಯುಗವನ್ನು ಪ್ರಾಪ್ತವಾಗುವ ಸಾಧ್ಯತೆ ಇದೆಯೇನೋ ಎಂದು ಕಾದು ನೋಡಬೇಕಾಗಿದೆ.

ಜನಪ್ರಿಯ ವಿಜ್ಞಾನ ಲೇಖನಗಳ ಅನುವಾದ*

ಸೂ. ಸುಬ್ರಹ್ಮಣ್ಯಂ

ಕನ್ನಡ ಸಾಹಿತ್ಯದಲ್ಲಿ ಅನುವಾದ ಕೃತಿಗಳನ್ನು ಕುರಿತು ಹಲವಾರು ಚಿಂತನ ಮಂಥನಗಳು ನಡೆದಿದ್ದು ಅವುಗಳಲ್ಲಿ ಸಮಕಾಲೀನ ಅನುವಾದಿತ ನಾಟಕಗಳನ್ನು ಕುರಿತ ಒಂದು ಗಮನಾರ್ಹ ಕೃತಿ 'ಆಕಿಂಡ್‌ರೇನ್'. ದಿ॥ ಎ. ಶ್ರೀಕಂಠಯ್ಯನವರು ಎ ಬಿ ಏಯಾಟ್‌ನಾ ಕಿರ್‌ಸ ಎಂಬ ಕಾವ್ಯ ನಾಮದಿಂದ ಕ್ರಿ.ಶ. 1915ರಲ್ಲಿ ಪ್ರಕಟಿಸಿದ ಈ ಕೃತಿ ಕನ್ನಡದಲ್ಲಿ ಆಗತಾನೆ ಬರತೊಡಗಿದ್ದ ಇಂಗ್ಲಿಷ್ ನಾಟಕಗಳ ಅನುವಾದಗಳನ್ನು ಕುರಿತ ಒಂದು ವಿಡಂಬನಾತ್ಮಕ ಹಾಗೂ ವಿಚಾರಾತ್ಮಕ ಕಿರು ಹೊತ್ತಿಗೆ. ಇಂಗ್ಲಿಷ್ ಭಾಷೆಯಿಂದ ಕನ್ನಡಕ್ಕೆ ಅನುವಾದ ಮಾಡುವಲ್ಲಿ ಆದ ಮತ್ತು ಆಗಬಹುದಾದ ಲೋಪದೋಷಗಳನ್ನು ಎತ್ತಿ ಆಡಿ ನಮ್ಮ ಸಮಾಜಕ್ಕೂ ಸಂಸ್ಕಾರಕ್ಕೂ ಸೂಕ್ತವೆನಿಸಬಹುದಾದ ಶೈಲಿ ಹಾಗೂ ಸಹಜತೆಗಳನ್ನು ರೂಢಿಸಿ ಬರೆಯುವ ಬಗೆಗೆ ಅದರಲ್ಲಿ ಅವರು ತಮ್ಮ ನಿಲುವನ್ನು ನಿರೂಪಿಸಿದ್ದಾರೆ. ಅಂದು ಆಂಗ್ಲಭಾಷೆಯಿಂದ ಕನ್ನಡಕ್ಕೆ ನಾಟಕಗಳನ್ನು ಅನುವಾದಿಸುವಾಗ ಕಂಡು ಬಂದ ಕಷ್ಟಕೋಟಲೆಗಳು ಇಂದೂ ಅದೇ ಭಾಷೆಯಿಂದ ಜನಪ್ರಿಯ ವಿಜ್ಞಾನ ವಿಷಯಗಳನ್ನು ಅನುವಾದಿಸುವವರು ಎದುರಿಸಬೇಕಾಗಿರುವುದು ಸೋಜಿಗ, ಆದರೆ ಅಷ್ಟೇ ಸತ್ಯ.

ಇಂದಿನ ವಿಷಯ ಜನಪ್ರಿಯ ವಿಜ್ಞಾನ ಲೇಖನಗಳ ಅನುವಾದಕ್ಕೆ ಸಂಬಂಧಿಸಿದುದರಿಂದ ನಾನು ಬಳಸುವ ಶಬ್ದಗಳಿಗೆ ಖಚಿತವಾದ ಅರ್ಥವನ್ನು ತೊಡಿಸಿ ಅನಂತರ ಅವುಗಳನ್ನು ಮೆರವಣಿಗೆಗೆ ಕಳುಹಿಸುವುದು ಸೂಕ್ತವೆಂದು ಭಾವಿಸುತ್ತೇನೆ. ಏಕೆಂದರೆ ಸಂವಹನಕ್ಕೆ ಭಾಷೆಯು ಮಾಧ್ಯಮ ತೀರ ಅಗತ್ಯ ನಮಗೆ. "ಶಬ್ದಗಳನ್ನು ಭಾವನೆಗಳು ತೊಡುವ ಉಡುಪು"ಗಳೆಂದು ಹೇಳುವುದುಂಟು. ಭಾವನೆಗೆ ನಿರ್ದುಷ್ಟತೆ, ಸ್ಪಷ್ಟತೆ ಬರಲು ಬಳಸುವ ಭಾಷೆಯು ನಿಖರವಾಗಿರಬೇಕಾದುದು, ಅಸಂದಿಗ್ಧವಾಗಿರಬೇಕಾದುದು ಅನಿವಾರ್ಯ.

ಈಗ ವಿಜ್ಞಾನ ಎನ್ನುವ ಶಬ್ದವನ್ನೇ ತೆಗೆದುಕೊಳ್ಳೋಣ. ಈ ಮಾತಿನ ಅರ್ಥವ್ಯಾಪ್ತಿ ಅನೇಕ ಘಟ್ಟಗಳಲ್ಲಿ ಬೆಳೆದು ಬಂದಿದೆ. 'ಜ್ಞಾನ', 'ವಿಜ್ಞಾನ',

---

ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಏರ್ಪಡಿಸಿದ್ದ ಅನುವಾದ ಕಮ್ಮಟದಲ್ಲಿ ದಿನಾಂಕ 17–5–79 ರಂದು ಮಾಡಿದ ಉಪನ್ಯಾಸ.

'ಪ್ರಜ್ಞಾನ' ಈ ಮೊದಲಾದ ಮಾತುಗಳು ನಮ್ಮ ವೇದಾಂತ ಗ್ರಂಥಗಳಲ್ಲಿ, ಬರುತ್ತವೆ. 'ವಿಜ್ಞಾನಂ ಬ್ರಹ್ಮೇತಿ ವ್ಯಜಾನಾತ್' (ವಿಜ್ಞಾನವು ಬ್ರಹ್ಮವೆಂದು ನಿಶ್ಚಯಿಸಿದನು) ಎನ್ನುತ್ತದೆ ತೈತ್ತರೀಯ ಉಪನಿಷತ್ತು. 'ವೇದಾಂತ ವಿಜ್ಞಾನ ಸುನಿಶ್ಚಿತಾರ್ಥಃ' ಇತ್ಯಾದಿ ಮಾತುಗಳು ಕಂಡುಬರುತ್ತವೆ ಮುಂಡಕೋಪನಿಷತ್ತಿನಲ್ಲಿ. ಅಲ್ಲಿ ಅದಕ್ಕೆ ಬ್ರಹ್ಮಜ್ಞಾನ ಆತ್ಮಜ್ಞಾನ ಎಂಬರ್ಥ ಬರುತ್ತದೆ ಆದರಿಂದು 'ವಿಜ್ಞಾನ'ವನ್ನು ಬಾಹ್ಯ ಜಗತ್ತಿನ ಎಲ್ಲ ತಿಳಿವಳಿಕೆ ವ್ಯಾಪಾರಗಳಿಗೂ ಸಂಬಂಧಿಸಿದಂತೆ ನಾವು ಬಳಸುತ್ತಿದ್ದೇವೆ. ಅಂದರೆ ಒಂದು ಶಬ್ದದ ಅರ್ಥವೇ ತಿರುವುಮುರುವಾಗಿರುವುದನ್ನು ನಾವಿಲ್ಲಿ ಕಾಣಬಹುದು. ನಮ್ಮ ಇಂದಿನ 'ವಿಜ್ಞಾನ' ಶಬ್ದಕ್ಕೆ ಇಂಗ್ಲೀಷಿನಲ್ಲಿ ಸಂವಾದಿಯಾದ ಪದ 'Science' ಕೂಡ ಅರ್ಥದಲ್ಲಿ ರೂಪಾಂತರಗಳನ್ನು ಪಡೆದಿದೆ. ಮಿಲ್ಟನ್ ಮಹಾಕವಿ ಪ್ಯಾರಡೈಸ್ ಲಾಸ್ಟ್ ಮಹಾಕಾವ್ಯದಲ್ಲಿ ಜ್ಞಾನವನ್ನು 'Mother of Science' ಎಂದಿದ್ದಾನೆ ಇಲ್ಲಿ Science ಎಂಬ ಪದ ಸರ್ವವಿದ್ಯೆಗಳನ್ನು ನಿರ್ದೇಶಿಸುವ ವ್ಯಾಪಕ ಶಬ್ದವಾಗಿ ಪ್ರಯೋಗವಾಗಿದೆ. ಆದರೆ ಈಚೆಗೆ ಅದರ ಅರ್ಥ ಜ್ಞಾನದ ಒಂದು ಶಾಖೆಗೆ ಸೀಮಿತವಾಗಿರುವುದು ಸುಸ್ಪಷ್ಟವಾಗಿದೆ. ನಾವಿಂದು ಈ ಆಧುನಿಕ ಅರ್ಥದಲ್ಲಿ 'ವಿಜ್ಞಾನ'ವನ್ನು ಪರಿಗಣಿಸಬೇಕಾಗಿದೆ.

ವಿಜ್ಞಾನದ ಶೋಧನೆ ಬೋಧನೆಗಳು ಈಜಿಪ್ಟ್, ಬ್ಯಾಬಿಲೋನಿಯಾ ಮತ್ತು ಗ್ರೀಸ್ ದೇಶಗಳಲ್ಲಿಯೂ, ಪ್ರಾಚೀನ ಭಾರತ, ಚೀನಾ ಮತ್ತು ಅರಬ್ ದೇಶಗಳಲ್ಲಿಯೂ ಸಾಗಿಬಂದಿವೆಯೆಂಬುದನ್ನು ವಿಜ್ಞಾನ ಚರಿತ್ರಕಾರರು ಗುರುತಿಸಿದ್ದಾರೆ. ಯಾವಾಗ ವಿಜ್ಞಾನದ ಪರಿಶೋಧನೆಗಳು, ಆವಿಷ್ಕಾರಗಳು ಬೆಳಕಿಗೆ ಬಂದು, ಬಳಕೆಗೆ ಬಂದು ಬದುಕಿನಮೇಲೆ, ನಮ್ಮ ನಂಬಿಕೆ-ನಡೆವಳಿಕೆಗಳಮೇಲೆ ತನ್ನ ಪ್ರಭಾವವನ್ನು ಬೀರಿತೋ ಆಗಲೇ ಶ್ರೀಸಾಮಾನ್ಯನಿಗೆ ಅವುಗಳ ಪರಿಚಯ ಪಡೆಯುವ ಆಸೆ ಅಂಕುರಿಸಿರಬೇಕು. ನ್ಯೂಟನ್ನನ ಗುರುತ್ವಾಕರ್ಷಣ, ಡಾರ್ವಿನ್ನನ ವಿಕಾಸವಾದ, ಮೆಂಡೆಲ್‌ನ ಆನುವಂಶೀಯತೆ, ಐನ್‌ಸ್ಟೈನನ ಸಾಪೇಕ್ಷವಾದ—ಈ ಮೊದಲಾದವು ಯಂತ್ರಶಿಲ್ಪದಲ್ಲಿ, ಸಸ್ಯಗಳ ಬೆಳವಣಿಗೆಯಲ್ಲಿ ಪರಮಾಣುಶಕ್ತಿ ಬಳಕೆಯಲ್ಲಿ ಪ್ರಮುಖ ಪಾತ್ರ ವಹಿಸಿರುವುದೂ ಪ್ರಭಾವ ಬೀರಿರುವುದೂ ಇದಕ್ಕೆ ಸಾಕ್ಷಿಯಾಗಿದೆ. ಅತ್ತ ವಿಜ್ಞಾನಿಗೂ ತನ್ನ ಶೋಧವನ್ನು ಜನಸಾಮಾನ್ಯರಿಗೆ ತಿಳಿಸುವ ಬಯಕೆಯೂ ಬಂದಿರಬೇಕು. ಒಂದೆಡೆ ತಿಳಿಯುವ ಕುತೂಹಲ; ಮತ್ತೊಂದೆಡೆ ತಿಳಿಸಬೇಕೆಂಬ ತವಕ. ಹೀಗೆ ವಿಜ್ಞಾನ ಜನಪ್ರಿಯವಾಗಲು ಇದೊಂದು ಕಾರಣವಾಗಿರಬೇಕು.

ಡಾ॥ ಹೆಚ್ ತಿಪ್ಪೇರುದ್ರಸ್ವಾಮಿಯವರ ಲೇಖನ "ಸಾಹಿತ್ಯದ ಮೇಲೆ ವಿಜ್ಞಾನದ ಪ್ರಭಾವ" ಸುವರ್ಣ ಸಂಚಯ. ಪುಟ ೧೯೮ ಕನ್ನಡ ಅಧ್ಯಯನ ಸಂಸ್ಥೆ, ೧೯೬೭.

ವಿಜ್ಞಾನಿ ಎಲ್ಲವನ್ನೂ ಹೇಳದಾದಾಗ ಇತರರು ಅವನ ಈ ಕೆಲಸವನ್ನು ಕೈಗೆತ್ತಿಕೊಂಡು ಜನಸಾಮಾನ್ಯರಿಗೆ ಅದನ್ನು ಪರಿಚಯಿಸುವ ಪ್ರಯತ್ನ ಮಾಡಿದ್ದಾರೆ. ಜೊತೆಗೆ ವೈಜ್ಞಾನಿಕ ಅಂಶಗಳು ಇದ್ದೋ ಇಲ್ಲದೆಯೋ—ಅಂತೂ ಕಲ್ಪನೆಯ ರೆಕ್ಕೆ ಸಿಕ್ಕಿಸಿಕೊಂಡು ಕೃತಿ ರಚಿಸಿರುವುದೂ ಉಂಟು. ನಾವಿಂದು ಯಾವುದನ್ನು ವಿಜ್ಞಾನ ಕಲ್ಪನಾ ಸಾಹಿತ್ಯ (science fiction) ಎನ್ನುತ್ತೇವೆಯೋ ಅದು ಹೀಗೆ ಜನಪ್ರಿಯ ಸಾಹಿತ್ಯವಾಗಿ ಹುಟ್ಟಿಕೊಂಡಿರಲು ಸಾಧ್ಯ. ವಾಸ್ತವಿಕತೆಯ ಅಭಾವ. ರಮ್ಯತೆಯ ಅತಿರೇಕ—ಇವು ಈ ಪರಂಪರೆಯ ಪುಸ್ತಕಗಳ ವೈಶಿಷ್ಟ್ಯ. ಆದರೆ ಕ್ರಮೇಣ ಈ ಸಾಹಿತ್ಯರೂಪ ವಿಜ್ಞಾನಕ್ಕೆ ಹೆಚ್ಚು ಹೆಚ್ಚಾಗಿ ಒಲಿಯುತ್ತಾ ಬಂದಿರುವುದು ಚರಿತ್ರೆಯಿಂದ ನಮಗೆ ತಿಳಿದುಬಂದಿದೆ. ಕೆಪ್ಲರ್, ಜೂಲ್ಸ್‌ವರ್ನ್, ವೇಲ್ಸ್, ಗರ್ನ್ಸ್‌ಬ್ಯಾಕ್, ಆಲ್ಡಸ್ ಹಕ್ಸ್ಲೀ, ಕ್ಯಾಂಪ್‌ಬೆಲ್—ಈ ಮೊದಲಾದ ಲೇಖಕರು ಈ ಸಾಹಿತ್ಯ ಪ್ರಕಾರಕ್ಕೆ ವಿಜ್ಞಾನದ ಕಲ್ಪನೆಯನ್ನು ಬೆರೆಸಿ, ಕೊನರಿಸಿ, ಆ ಮೂಲಕ ವಿಜ್ಞಾನವನ್ನು ಜನಪ್ರಿಯಗೊಳಿಸಲೂ ಕಾರಣರಾದರೆನ್ನಬಹುದು. ಈ ಕೃತಿಗಳಲ್ಲಿ ಕಲ್ಪನೆಯ ಅಂಶವಿದ್ದೇ ತೀರುತ್ತಿತೆಂಬುದು ನಿರ್ವಿವಾದ ಸಂಗತಿಯಾಗಿದೆ.

ಕೆಲವೊಂದು ಲೇಖಕರು ವಿಜ್ಞಾನವನ್ನು ವಿಜ್ಞಾನವನ್ನಾಗಿಯೇ ಬರೆದರು. ಅನೇಕ ವಿಜ್ಞಾನಿಗಳೂ ತಮ್ಮ ಜ್ಞಾನವನ್ನು ಹಂಚಿಕೊಳ್ಳಲು ಜನಸಾಮಾನ್ಯರಿಗೆ ಅರ್ಥವಾಗುವಂತೆ ಸರಳ ಶೈಲಿಯಲ್ಲಿ ಪರಿಚಿತ ಉದಾಹರಣೆಗಳೊಂದಿಗೆ ಲೇಖನಗಳನ್ನು ಬರೆದದ್ದುಂಟು. ಫೇಬರ್, ಜೀವ್ಸ್, ಜೀನ್ಸ್, ವಾರೆನ್ ವೀವರ್, ಬರ್ನಾರ್ಡ್ ಕೊಹೆನ್, ಹಾಲ್ಡೇನ್, ಜಗಜಿತ್‌ಸಿಂಗ್ ಮೊದಲಾದ ತಜ್ಞರೂ ಜನಪ್ರಿಯ ಕೃತಿಗಳನ್ನು ರಚಿಸಿದ್ದಾರೆ. ಹೀಗೆ ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನು ಶ್ರೀಸಾಮಾನ್ಯನು ಅರ್ಥಮಾಡಿಕೊಳ್ಳುವಂತೆ ಸುಲಭಗ್ರಾಹ್ಯ ಹಾಗೂ ಸರಳಶೈಲಿಯಲ್ಲಿ ಬರೆದ ಲೇಖನಾದಿಗಳನ್ನು ಹಲವಾರು ಪತ್ರಿಕೆ ಪ್ರಕಟಮಾಡ ತೊಡಗಿವೆ. ಈ ಬಗೆಯ ಸಾಹಿತ್ಯಕ್ಕೆ ಮೀಸಲಾದ ಪತ್ರಿಕೆಗಳೂ ಬದುಕಿ ಬೆಳೆದು ಬರುತ್ತಿವೆ.

ಕನ್ನಡದಲ್ಲಿ ಬಂದಿರುವ ಜನಪ್ರಿಯ ವಿಜ್ಞಾನ ಕೃತಿಗಳು ಸ್ವಲ್ಪ ಕಡಿಮೆಯೆಂದೇ ಹೇಳಬಹುದಾದರೂ. "ಪಾಶ್ಚಿಮಾತ್ಯರಲ್ಲಿ ಕೂಡ, ಡಾರ್ವಿನ್ನನ ವಿಕಾಸವಾದದ ನಿಮಿತ್ತವಾಗಿ ಎಂದರೆ 1860ನೆಯ ದಶಕದಿಂದೀಚೆಗೆ, ಜನತೆಗಾಗಿ ವಿಜ್ಞಾನ ಸಾಹಿತ್ಯ ನಿರ್ಮಾಣವಾಗತೊಡಗಿತೆಂದು ಇಲ್ಲಿ ಪ್ರಾಸಂಗಿಕವಾಗಿ ನೆನೆಯಬಹುದು"[1] ಇದೇ ಸುಮಾರಿಗೆ ಕನ್ನಡದಲ್ಲಿಯೂ ಜನಪ್ರಿಯ ವಿಜ್ಞಾನ ಕೃತಿಗಳು ಬರತೊಡಗಿದವು. ಈ ಬಗೆಯ ಕೃತಿ ರಚನೆಗೆ ಪ್ರೇರಣೆಗಳು ಹಲವು–ಶಾಲಾ ವಿದ್ಯಾರ್ಥಿಗಳಿಗೆ ಪಠ್ಯ

---

1 ಡಾ॥ ಶ್ರೀನಿವಾಸ ಹಾವನೂರ, 'ಹೊಸಗನ್ನಡದ ಅರುಣೋದಯ' ಕನ್ನಡ ಅಧ್ಯಯನ ಸಂಸ್ಥೆ. ಪುಟ 467. 1974.

ಪುಸ್ತಕಗಳ ಪೂರೈಕೆ, ಶ್ರೀ ಸಾಮಾನ್ಯನಿಗೆ ವಿಜ್ಞಾನದ ತಿಳಿವಳಿಕೆ ; ಪ್ರಾಚೀನ ಕೃತಿಗಳ ಸಟೀಕ ಪ್ರಕಟಣೆ. "ಶಾಲೆಗಳು ಹುಟ್ಟಿದಾಗ ಮೊದಲ ಅಗತ್ಯ ಪಠ್ಯಪುಸ್ತಕಗಳು, ಕೈಪಿಡಿಗಳು, ಟಿಪ್ಪಣಿಗಳು ಧಾರಾಳವಾಗಿ ರಚಿತವಾದುವು. ಈ ಕೆಲಸದಲ್ಲಿ ಸರಕಾರವು ನೇಮಿಸಿದ ಟ್ರಾನ್ಸ್‌ಲೇಟರುಗಳ ಪಾತ್ರ ತುಂಬ ಮಹತ್ವದ್ದು, ಆರೋಗ್ಯಶಾಸ್ತ್ರ, ಚರಿತ್ರೆ ಭೂಗೋಳ, ವಿಜ್ಞಾನ ವಿಷಯಕಗಳಿಂದ ಪಠ್ಯ ಪುಸ್ತಕಗಳನ್ನು ಅನುವಾದ ಮಾಡಿದರು."[2] ಬಂಗಾಳಿ ಕಾದಂಬರಿಗಳನ್ನು ಅನುವಾದಿಸುವುದರ ಮೂಲಕ ಬಿ. ವೆಂಕಟಾಚಾರ್ಯರು, ಮರಾಠಿಯಿಂದ ಗಳಗನಾಥರು, ಸಂಸ್ಕೃತದಿಂದ ಬಸಪ್ಪ ಶಾಸ್ತ್ರಿಗಳು, ಇಂಗ್ಲೀಷ್‌ನಿಂದ ಶ್ರೀಕಂಠೇಶಗೌಡ ಮುಂತಾದವರು—ಹೀಗೆ ಕನ್ನಡ ಸಾಹಿತ್ಯ ಕ್ಷೇತ್ರದ ಮೊವಮೊದಲ ರಚನೆಗಳನ್ನು ಅನ್ಯಭಾಷೆಗಳಿಂದ ತಂದಿರುವುದು ಒಂದು ಚಾರಿತ್ರಿಕ ಅಂಶವೇ ಆಗಿದೆ.

ಕನ್ನಡವಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸುವಲ್ಲಿ ಹಲವಾರು ಪತ್ರಿಕೆಗಳು ಶ್ಲಾಘನೀಯ ಕಾರ್ಯವನ್ನೆಸಗಿರುವುದು ಇಲ್ಲಿ ಉಲ್ಲೇಖಾರ್ಹವೆನಿಸುತ್ತದೆ. ಮೊದ ಮೊದಲ ಕನ್ನಡ ವೈಜ್ಞಾನಿಕ ಲೇಖನಗಳನ್ನು ಸ್ವೋಪಜ್ಞವಾಗಿಸಲು ಪ್ರಯತ್ನ ನಡೆಸಿರುವುದು ಈ ಪ್ರಕಾರದ ಒಂದು ವೈಶಿಷ್ಟ್ಯವೆನ್ನಬಹುದು. ಪತ್ರಿಕಾ ಮಾಧ್ಯಮದ ಮೂಲಕ ವಿಜ್ಞಾನ ಲೇಖನಗಳನ್ನೇ ಸಾಮಾನ್ಯನಿಗೆ ಉಣಬಡಿಸುವ ಮಹತ್ತರ ಆಕಾಂಕ್ಷೆಯಿಂದ ಸ್ಥಾಪಿತವಾದ ಮೊತ್ತಮೊದಲ ಪತ್ರಿಕೆ–'ವಿಜ್ಞಾನ'. ಕರ್ನಾಟಕ ವಿಜ್ಞಾನ ಪ್ರಚಾರಿಣೀ ಸಮಿತಿಯ ಆಶ್ರಯದಲ್ಲಿ ಮಾಸಪತ್ರಿಕೆಯಾಗಿ ಇದು ಕ್ರಿ.ಶ. 1918ರಲ್ಲಿ ಆರಂಭವಾಯಿತು. ಎರಡು ವರ್ಷಗಳ ಕಾಲ ನಡೆದು ನಿಂತುಹೋದ ಈ ಪತ್ರಿಕೆಯ ಅನಂತರ ಸುಮಾರು 40 ವರ್ಷಗಳ ಬಳಿಕ ಆರಂಭವಾದ 'ವಿಜ್ಞಾನ ಯುಗ' ಒಂದು ವರ್ಷವೂ ನಡೆಯದಾಯಿತು ಜನಪ್ರಿಯ ವಿಜ್ಞಾನ ಪತ್ರಿಕೆಗಳಿಗೆ ಜನರಿಂದ ದೊರೆತ ಪ್ರೋತ್ಸಾಹಕ್ಕೆ ಇದು ಸಾಕ್ಷಿ. ಈಗ ಪ್ರಕಟವಾಗುತ್ತಿರುವ ಜನಪ್ರಿಯ ವಿಜ್ಞಾನ ಲೇಖನಗಳಿಗೆ ಆಕರ ಮತ್ತು ಆಧಾರ ಬಹುಮಟ್ಟಿಗೆ ಆಂಗ್ಲ ಲೇಖನಗಳು. ಆದರೆ ಹಲವು ಸ್ವತಂತ್ರವಾದವೆನಿಸಿಕೊಳ್ಳುವುದರಲ್ಲಿಯೂ ಆಂಗ್ಲ ಭಾಷೆಯ ಹಸಿ ಅನುವಾದದ ಛಾಯೆ ಕಾಣಬರುವುದು ಒಂದು ವಿಪರ್ಯಾಸ.

ಜನಪ್ರಿಯ ವಿಜ್ಞಾನ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಬೇಕಾದ ಸಂದರ್ಭದಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಯಾವ ಬೌದ್ಧಿಕ ಮಟ್ಟದ ಓದುಗರಿಗಾಗಿ ನಾವು ಸಾಹಿತ್ಯವನ್ನು ರಚಿಸುತ್ತಿದ್ದೇವೆ ಎನ್ನುವುದು. ಇಲ್ಲಿ ನಮಗೆ ಥಿಯೋಡರ್ ಸವೋರಿ ಮಾತುಗಳು ಮನನೀಯವೆನಿಸುತ್ತವೆ. ಅವನ ಪ್ರಕಾರ ಓದುಗರನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು.

2 ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥ ಸೂಚಿ, ಸಂಪುಟ 1, ಮುನ್ನುಡಿ ಪುಟ X, 1971.

1) ಮೂಲಭಾಷೆಯ ಪರಿಚಯವಿಲ್ಲದೆ ಮತ್ತು ಅದರ ಬಗೆಗೆ ಹೆಚ್ಚಿನ ಆಸಕ್ತಿಯೂ ಇಲ್ಲದೆ ಕೇವಲ ಕುತೂಹಲದಿಂದಷ್ಟೇ ಓದುವವರು.

2) ಮೂಲಭಾಷೆಯನ್ನು ಕಲಿಯುತ್ತಿರುವ ಕಾರಣದಿಂದಾಗಿ ಓದುವವರದು ಮತ್ತೊಂದು ಗುಂಪು.

3) ಒಮ್ಮೆ ಮೂಲ ಭಾಷೆಯನ್ನು ತಿಳಿದಿದ್ದು ಅದರ ಪರಿಚಯವನ್ನು ಉಳಿಸಿಕೊಳ್ಳದವರ ಗುಂಪು ಮತ್ತು

4) ಅನುವಾದ ಹೇಗೆ ಮಾಡಲಾಗಿದೆಯೆಂದು ಮತ್ತು ಅದನ್ನು ಮೂಲದೊಂದಿಗೆ ಹೋಲಿಸುವ ದೃಷ್ಟಿಯಿಂದ ಓದುವವರದು ಮತ್ತೊಂದು ಗುಂಪು.

ಈ ವರ್ಗೀಕರಣ ನಮಗೊಂದು ಸ್ಪಷ್ಟ ಚಿತ್ರಣವನ್ನೊದಗಿಸುತ್ತದೆ. ಅದೆಂದರೆ, ಯಾವುದೇ ಒಂದು ಅನುವಾದವೂ ಈ ನಾಲ್ಕೂ ಪಂಗಡಗಳ ಓದುಗರನ್ನು ತೃಪ್ತಿಪಡಿಸದು ಎಂಬುದು. ಅಲ್ಲದೆ, ಭಾಷೆಯನ್ನು ಕಲಿಸಬೇಕಾದ, ವಿಜ್ಞಾನವನ್ನು ತಿಳಿಸಬೇಕಾದ ಒಂದು ವರ್ಗದ ಜನರೂ ನಮ್ಮಲ್ಲಿ ಅಧಿಕ ಸಂಖ್ಯೆಯಲ್ಲಿರುವುದನ್ನು ನಾವು ಗಮನಿಸದೇ ಇರಲು ಸಾಧ್ಯವಿಲ್ಲ. ಈ ಎಲ್ಲ ದೃಷ್ಟಿಗಳಿಂದ, 'ಮೂಲವನ್ನು ಸಮೀಪಿಸುವಲ್ಲಿ, ಎರಡು ಅನುವಾದಗಳು ಒಂದೇ ಅನುವಾದಕ್ಕಿಂತ ನಾಲ್ಕು ಪಟ್ಟು ಹೆಚ್ಚು ನಿಖರವಾಗಿರುತ್ತದೆ' ಎಂಬ ಅವನ ಮಾತು ಅರ್ಥಪೂರ್ಣವಾದುದು.

ಥಿಯೋಡರ್ ಸೆವೊರಿ ಭಾಷಾಂತರವನ್ನು ನಾಲ್ಕು ರೀತಿಯಲ್ಲಿ ವಿಭಜಿಸಿದ್ದಾನೆ—

1. ಶುದ್ಧ ಮಾಹಿತಿ ಸೂಚಕ ಹೇಳಿಕೆಗಳು (Purely informative statements)
2. ಪರ್ಯಾಪ್ತ ಭಾಷಾಂತರ (adequate translation)
3. ಸಂಯುಕ್ತ ಅಥವಾ ಮಿಶ್ರ ಭಾಷಾಂತರ (composite translation)
4. ಶಾಸ್ತ್ರೀಯ, ವೈಜ್ಞಾನಿಕ ಮತ್ತು ತಾಂತ್ರಿಕ ಭಾಷಾಂತರ. (Translation of learned scientific and technical matter)

ಇವುಗಳಲ್ಲಿ ಜನಪ್ರಿಯ ವಿಜ್ಞಾನ ಲೇಖನಗಳನ್ನು ಅನುವಾದ ಮಾಡಲು ನಮಗೆ ಸೂಕ್ತವೆನಿಸಿರುವುದು ಪರ್ಯಾಪ್ತ ಭಾಷಾಂತರ. ಈ ಭಾಷಾಂತರದ ಗುಣಲಕ್ಷಣಗಳನ್ನು ವೈಶಿಷ್ಟ್ಯಗಳನ್ನೂ ಅವನು ಹೀಗೆ ವಿವರಿಸಿದ್ದಾನೆ :

"ಸಾಮಾನ್ಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಲಾಗುವ ಭಾಷಾಂತರಗಳೇ ಪರ್ಯಾಪ್ತ ಭಾಷಾಂತರಗಳು. ಇದಕ್ಕೆ ತುಂಬಾ ಕಟುವಾದ ನೀತಿ ನಿಯಮಗಳ, ತಂತ್ರ ವಿಧಾನಗಳ ಚೌಕಟ್ಟನ್ನು ಹಾಕಿಕೊಂಡಿರುವುದಿಲ್ಲ. ಮೂಲದ ಒಟ್ಟು ಆಶಯಕ್ಕೆ ಧಕ್ಕೆ ಬರದಂತೆ ಹೋಗುತ್ತಿರಬೇಕಷ್ಟೆ. ಇಂಥ ಭಾಷಾಂತರಗಳ ನಿಷ್ಕೃಷ್ಟತೆಯ ಬಗ್ಗೆ ನಾವು ದೂರು ವಂತೆಯೂ ಇಲ್ಲ. "...... to translations that are so satisfactory in practice that a grumble at words or phrases here and there may be dismissed as a quibble " ಎಂಬ ಸೆವೊರಿ ಹೇಳಿಕೆಯನ್ನು ಈ ದಿಶೆಯಲ್ಲಿ ಗಮನಿಸಬಹುದು.

"ಇಂಥ ಭಾಷಾಂತರಗಳಲ್ಲಿ ಸಾಮಾನ್ಯವಾಗಿ ಓದುಗ ಮೂಲ ಭಾಷೆಯ ಬಗ್ಗೆ, ಅದರಲ್ಲಿರುವ ಭಾಷಿಕ ಸಮಸ್ಯೆಗಳ ಬಗ್ಗೆ ತಲೆ ಕೆಡೆಸಿಕೊಳ್ಳಲು ಹೋಗುವುದಿಲ್ಲ. ಹಾಗೂ ಭಾಷಾಂತರಕಾರ ಸಹ ಮೂಲದಲ್ಲಿರುವ ಅಸ್ಪಷ್ಟವಾದ ಕೆಲವು ಪದ ಗಳನ್ನು ಕೈಬಿಟ್ಟು ಮುಂದೆ ಹೋಗಬಹುದು. ಶೈಲಿಗಿಂತ ವಿಷಯ ನಿರೂಪಣೆಗೆ ಇಲ್ಲಿ ಹೆಚ್ಚು ಗಮನ ಕೊಡಬೇಕು. ಯಾವುದೇ ಒಂದು ವಿದೇಶಿ ಭಾಷೆಯನ್ನು ಅದರ ಕೃತಿಯನ್ನು ಕೂಲಂಕಷವಾಗಿ ಅಧ್ಯಯನ ಮಾಡುವ ಸಂಶೋಧನ ವಿದ್ಯಾರ್ಥಿ ಗಿಂತ ಸಾಮಾನ್ಯ ಓದುಗನಿಗೆ ಪರ್ಯಾಪ್ತ ಭಾಷಾಂತರಗಳು ಮನರಂಜನೆ ಒದಗಿಸು ತ್ತವೆ."*

ವಿಜ್ಞಾನ ಕೃತಿಗಳನ್ನು ಅನುವಾದಿಸುವಾಗ ಸ್ಪಷ್ಟತೆ, ನಿಖರತೆ, ನಿರ್ದಿಷ್ಟತೆ ಗಳಿಗೆ ಅಗ್ರಪೂಜೆ ಸಲ್ಲಿಸಬೇಕಾದುದು ಸಹಜವೇ ಆದರೂ ಜನಪ್ರಿಯ ವಿಜ್ಞಾನವನ್ನು ಭಾಷಾಂತರಿಸ ಹೊರಟಾಗ ಈ ಕಟ್ಟುನಿಟ್ಟಿನ ನಿಯಮದಿಂದ ಮುಕ್ತರಾಗಬೇಕಾದುದು ತೀರ ಆವಶ್ಯಕ. ಹೇಳಬೇಕಾದಷ್ಟನ್ನು ಹಾಗೂ ಹೇಳುವಷ್ಟನ್ನು ಓದುಗರಲ್ಲಿ ಆಸಕ್ತಿ ಕುಂಠಿತವಾಗದಂತೆ ತಿಳಿಸುವುದು ಇಲ್ಲಿ ಅನಿವಾರ್ಯ ಧರ್ಮವೆನಿಸುತ್ತದೆ. ಸ್ಪಷ್ಟತೆ ಯೊಂದಿಗೆ ಸಹಜತೆಯನ್ನು ಸರಿದೂಗಿಸಿಕೊಂಡು ಹೋಗುವ ಸಮನ್ವಯ ಸಾಹಿತ್ಯ ಶೈಲಿ ಈ ಬಗೆಯ ಅನುವಾದಗಳಿಗೆ ಅತ್ಯಂತ ಸೂಕ್ತವಾದುದು.

ಜನಪ್ರಿಯ ವಿಜ್ಞಾನ ಸಾಹಿತ್ಯದ ಅನುವಾದಗಳಲ್ಲಿ ಬಳಸುವ ಶಬ್ದಗಳು ಸ್ಪಷ್ಟತೆ ನಿಖರತೆಗಳಿಂದ ಕೂಡಿರಬೇಕೆಂಬ ಒಂದು ಭಾವನೆಯಿದೆ. ವಿಜ್ಞಾನ ಶಬ್ದಾ ವಳಿಗಳ ಬೆಳವಣಿಗೆಯ ದೃಷ್ಟಿಯಿಂದ ಈ ಅಭಿಪ್ರಾಯವು ಸ್ವೀಕಾರಾರ್ಹವೆನಿಸುವು ದಾದರೂ ಜನಪ್ರಿಯ ವಿಜ್ಞಾನ ಲೇಖನಗಳಲ್ಲಿ ಶಿಷ್ಟ ಶಬ್ದಗಳ ಬಳಕೆ ಎಷ್ಟರ ಮಟ್ಟಿಗೆ ಸಂವಹನ ಕ್ರಿಯೆಯಲ್ಲಿ ಪಾಲ್ಗೊಂಡು ತನ್ನ 'ಜನಪ್ರಿಯತೆ'ಯನ್ನು ಕಾಪಾಡಿಕೊಳ್ಳ ಬಲ್ಲದೆಂಬುದು ವಿವಾದಾತ್ಮಕವೂ ಹೌದು, ವಿಚಾರಾತ್ಮಕವೂ ಹೌದು. ಒಂದು

* ಶ್ರೀ ಲಕ್ಷ್ಮೀನಾರಾಯಣ ಆರೋರ ಅವರ ಲೇಖನ. 'ಭಾಷಾಂತರ-ಸಿದ್ಧಾಂತ, ತಂತ್ರಗಳು ಮತ್ತು ವಿಧಾನಗಳು'. 'ನಾಗವಲ್ಲಿ '(ಶ್ರೀ ನಾಗೇಗೌಡರ ಗೌರವ ಗ್ರಂಥ) 'ಭಾಷಾಂತರ ಕಲೆ' ವಿಭಾಗದಲ್ಲಿ ಪುಟ 56, 1979.

ದೃಷ್ಟಿಯಲ್ಲಿ ಇದನ್ನು "ಕಾಲಾಯ ತಸ್ಮೈ ನಮಃ" ಎಂದು ಹೇಳಿ ಕೈಬಿಡಬಹುದಾದರೂ ವಿಜ್ಞಾನವನ್ನು ಜನಪ್ರಿಯಗೊಳಿಸುವಲ್ಲಿ ಹಾಗೆ ಬಳಸುವ ಶಿಷ್ಟ ಶಬ್ದವನ್ನು ವಿವರಣಾತ್ಮಕವಾಗಿ ನಿರೂಪಿಸುವುದು ಹೆಚ್ಚು ಸೂಕ್ತವೆನಿಸುತ್ತದೆ. ಆಗ ಅರ್ಥವಂತಿಕೆ ಹೆಚ್ಚುವುದರೊಂದಿಗೆ ಹೊಸ ಶಬ್ದದ ಪರಿಚಯವೂ ಆಗುತ್ತದೆ.

ಹೀಗೆ ಹೊಸ ಶಬ್ದಗಳನ್ನು ಸೃಜಿಸಿ ಪರಿಚಯಿಸುವಾಗ ನಾವು ಸಂಸ್ಕೃತವನ್ನು ಮರೆತುಹೋಗಬೇಕೇ? ಅಥವಾ ಇಂಗ್ಲೀಷನ್ನು ಅವಲಂಬಿಸಬೇಕೇ? ಇದೂ ಇನ್ನೂ ಚರ್ಚಾಸ್ಪದವಾಗಿಯೇ ಉಳಿದಿವೆ. ಸದ್ಯದಲ್ಲಿ ಬಳಕೆಯಲ್ಲಿರುವ ಹಾಗೂ ಹುಟ್ಟಿ ಬರುತ್ತಿರುವ ಶಬ್ದಗಳನ್ನು ಗಮನಿಸಿದರೆ ಈ ಎರಡೂ ಪರಂಪರೆಗಳ ಸಂತಾನಗಳು ಪೈಪೋಟಿ ನಡೆಸಿವೆಯೋ ಎಂಬಂತೆ ಕಾಣುತ್ತಿದೆ. 'ಕುದುರೆ ಬಲ' ಎನ್ನುವುದಕ್ಕಿಂತ 'ಅಶ್ವಸಾಮರ್ಥ್ಯ' ನಮಗೆ ಪ್ರಿಯವಾಗಿದೆ; 'ಕರೆಯಾಗದ ಉಕ್ಕು' ಎನ್ನುವುದಕ್ಕಿಂತ 'ಸ್ಟೇನ್‌ಲೆಸ್ ಸ್ಟೀಲ್' ನಮ್ಮ ನಾಲಿಗೆಗೆ ಹೊಂದಿಕೊಂಡಿದೆ. ಪ್ರತಿ ಶಾಸ್ತ್ರಕ್ಕೂ ಅಧಿಕಾರಯುತವಾದ ಒಂದು ಪಾರಿಭಾಷಿಕ ಪದಗಳ ಪಟ್ಟಿಯನ್ನು ರಚಿಸುವುದರಿಂದ ಈ ಸಮಸ್ಯೆಯನ್ನು ಪರಿಹರಿಸಬಹುದಾಗಿದೆ. ಪಾರಿಭಾಷಿಕ ಶಬ್ದಗಳನ್ನು ಕನ್ನಡಕ್ಕೆ ಅನುವಾದಿಸುವಾಗ ಅವುಗಳಿಗೆ ಒಂದು ಸ್ಥಿರ ಅರ್ಥವನ್ನು ಕೊಟ್ಟು ಬಳಸಬೇಕಾದುದು ಆವಶ್ಯಕವಾದುದು. ಹೀಗೆಂದು ಕೇವಲ ನಿಘಂಟನ್ನೇ ಆಧರಿಸಿ ಅನುವಾದಿಸಿದರೆ ತಪ್ಪಾಗುತ್ತದೆ. ಜನಪ್ರಿಯ ವಿಜ್ಞಾನ ಲೇಖನಗಳ ಅನುವಾದದಲ್ಲಿ ಸಮಾನಾರ್ಥ ಸೂಚಿಸುವ ಶಬ್ದಗಳನ್ನು ಸೃಜಿಸುವ ಅಥವಾ ಅಂಥ ಶಬ್ದಗಳಿಂದ ನಿರೂಪಿಸುವ ಪ್ರಯತ್ನ — ಎಲ್ಲಿಯವರೆಗೆ ಅದು ಅರ್ಥಕ್ಕೆ ಹೊಂದಿಕೊಂಡು ಹೋಗುತ್ತದೆಯೋ, ಎಲ್ಲಿಯವರೆಗೆ ಅದು ಓದುಗನಿಗೆ ಅರ್ಥವಾಗುತ್ತದೆಯೋ ಅಲ್ಲಿಯವರೆಗೆ —ಸಹಜವಾದುದಾಗಿರುತ್ತದೆ. ಈಚೀಚೆಗಿನ ಜನಪ್ರಿಯ ವಿಜ್ಞಾನ ಪುಸ್ತಕಗಳಲ್ಲಿ ಕಂಡು ಬರುತ್ತಿರುವ ಭಾಷಾ ಗೊಂದಲ ಈ ಪ್ರಕಾರದ ಸಾಹಿತ್ಯಕ್ಕೆ ಪ್ರೋತ್ಸಾಹದಾಯಕವಾಗಿಲ್ಲವೆಂದೇ ಹೇಳಬಹುದು. ಡಾ॥ ಶಿವರಾಮ ಕಾರಂತರು ವೈಜ್ಞಾನಿಕ ಬರವಣಿಗೆಯನ್ನು ಕುರಿತು, "ಹೇಳುವುದನ್ನು ಸರಳವಾಗಿ ಹೇಳಬೇಕು. ತಿಳಿಯಾದ ಭಾಷೆಯಲ್ಲಿ—ಇನ್ನೊಬ್ಬನಿಗೆ ತಿಳಿಯುವಂತೆ ಹೇಳುವ ಭಾಷೆಯೇ ತಿಳಿಯಾದ ಭಾಷೆ—ಬರೆಯಬೇಕು. ಇಷ್ಟೆಲ್ಲ ಮಾಡಿಕೊಂಡ ಮೇಲೆ ಮುಂದೆ ವೈಜ್ಞಾನಿಕ ಪದಗಳ ಗೊಂದಲ ಹೇಗೂ ಇದ್ದೇ ಇದೆ." ಎಂದಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಜನಪ್ರಿಯ ವಿಜ್ಞಾನ ಲೇಖನಗಳನ್ನು ಅನುವಾದಿಸುವಲ್ಲಿ ಅರ್ಥಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟು ವ್ಯಾಕರಣವನ್ನು ಸಹಾನುಭೂತಿಯಿಂದ ಕಾಣುವುದು ಉಚಿತ. ಕನ್ನಡದಲ್ಲಿ ಯಾವುದನ್ನು ಪಂಡಿತರು ಅಷ್ಟಾಗಿ ಒಪ್ಪುವುದಿಲ್ಲವೋ ಅಂಥ ಕರ್ಮಣಿ ಪ್ರಯೋಗ ಮತ್ತು ಅರಿಸಮಾಸಗಳ ಬಳಕೆಯಿಂದ ಅರ್ಥ ಸೌಲಭ್ಯವನ್ನೂ ಭಾಷಾ ಮಾರ್ದವತೆಯನ್ನೂ ಪಡೆಯಲು ಸಾಧ್ಯವಾಗುತ್ತದೆ.

ಇನ್ನು ಬಳಸುವ ಶೈಲಿ ಶುದ್ಧವಾಗಿರಬೇಕೆ? ಸಂಕರವಾಗಿರಬೇಕೆ? — ಕಾಲು ಶತಮಾನದಿಂದಲೂ ನಮ್ಮನ್ನು ಕಾಡುತ್ತಿರುವ ಪ್ರಶ್ನೆ. ಶುದ್ಧ-ಸಂಕರ ಶೈಲಿಯ ಈ ಜಿಜ್ಞಾಸೆಗೆ ಕೊನೆಯೇ ಇಲ್ಲವೇನೋ ಎಂದೆನಿಸುವಷ್ಟು ಚರ್ಚಿತ ವಿಷಯವಾಗಿದೆ. ಎಲ್ಲಿಯವರೆಗೆ ಪಾರಿಭಾಷಿಕ ಶಬ್ದಗಳ ಬಳಕೆಯಲ್ಲಿ ಗಡಿಬಿಡಿ ಗೊಂದಲಗಳಿರುವುದೋ—ಅಲ್ಲಿಯವರೆಗೆ ಈ ಪೇಚಾಟವೂ ನಮ್ಮನ್ನು ಎದುರಿಸುತ್ತಲೇ ಇರುತ್ತದೆ. ಸಹಜತೆಯನ್ನು ತರಲಾಗದ, ಭಾಷೆಗಳ ಮೇಲೆ ಪ್ರಾವೀಣ್ಯವನ್ನು ಹೊಂದದ, ವಿಷಯದ ಮೇಲೆ ಪ್ರಭುತ್ವವನ್ನು ಸಾಧಿಸಿದ ಅನುವಾದಕನಿಗೆ ಈ ಸಮಸ್ಯೆ ಪೆಡಂಭೂತವಾಗಿ ಪರಿಣಮಿಸುವುದು ಸರ್ವ ವಿದಿತ.

ವಿದ್ಯಾರ್ಥಿ ವೃಂದದಲ್ಲಿ ಜನಪ್ರಿಯವಾದ ಆಂಗ್ಲ ಕೃತಿಯೊಂದರ ಮೊದಲನೆಯ ಪುಟದ ಅನುವಾದವಿದು :

> "ವ್ಯಷ್ಟಿ ಚಾಲನೆ : ಇದನ್ನು ಸ್ವಯಂ ಅಂತರ್ವಿಷ್ಟ ಚಾಲನೆ ಎಂದೂ ಕರೆಯುತ್ತಾರೆ. ಈ ಪದ್ಧತಿಯಲ್ಲಿ ಪ್ರತಿಯೊಂದು ಯಂತ್ರಕ್ಕೂ ತನ್ನದೇ ಆದ ವಿದ್ಯುತ್ ಮೋಟಾರು ಮತ್ತು ಪ್ರವರ್ತಕ ಇರುತ್ತದೆ. ಮೋಟಾರು ಯಂತ್ರದ ಶ್ಯಾಫ್ಟನ್ನು ನೇರ ಯುಗ್ಮನದಿಂದಾಗಲೀ, ಪಟ್ಟಾದ ಮೂಲಕವಾಗಲೀ, ಶೃಂಖಲೆ, ಗಿಯರುಗಳು ಅಥವಾ ಯಾವುದಾದರೂ ರೀತಿಯ ಬಹುಳ ಅಥವ ವ್ಯತ್ಯಾಸಶೀಲ ವೇಗ-ಸಂಚರಣದಿಂದಾಗಲೀ ಚಾಲನೆಗೊಳಿಸಬಹುದು".

ಇದು ಮೂಲಕ್ಕೆ ಮೋಸವಾಗದಿರಬಹುದು ; ಶುದ್ಧ ಶೈಲಿಯದಾಗಿರಬಹುದು. ಆದರೆ ಓದುಗರಿಗೆ ಇದು ಅರ್ಥವನ್ನೂ ನೆಮ್ಮದಿಯನ್ನೂ ತರುವುದು ತೀರ ಸಂದೇಹಾಸ್ಪದವಾಗಿರುವ ಅಂಶ.

ಇಂಗ್ಲೀಷ್ ಜನಪ್ರಿಯ ಪತ್ರಿಕೆಯೊಂದರ ಕನ್ನಡಾನುವಾದವಿದು.

> "ಅಮೀಬವು ಮಾನವನ ಕಣ್ಣಿಗೆ ಕಷ್ಟದಿಂದ ಗೋಚರಿಸುವ ಸಣ್ಣ ಪ್ರಾಣಿ. ಕೋಳಿ ಮೊಟ್ಟೆಯ ಬಿಳಿ ಲೋಳೆಯಂತೆ ಕಾಣುವ, ಖಚಿತ ಆಕಾರವಿಲ್ಲದ 'ಜೆಲಿ' ರಾಶಿಯ ಮುದ್ದೆ ಇದು. ಸಿಹಿ ನೀರಿನಲ್ಲಿ ವಾಸಿಸುತ್ತದೆ. ಡೈ ಆಟಮುಗಳು ಮತ್ತು ಇತರ ಸೂಕ್ಷ್ಮ ಗಾತ್ರದ ಸಸ್ಯಗಳು ಇದರ ಆಹಾರ. ಉಣಸಿನ ಸುತ್ತ ಸಣ್ಣ ಬೆರಳುಗಳಂಥ ರಚನೆಗಳನ್ನು (ಸೊಡೋಪೋಡಿಯ—ಮಿಥ್ಯಾಪಾದಗಳು) ಚಾಚಿ ದೇಹದ ಹಿಂಭಾಗವನ್ನು ಮುಂದಕ್ಕೆ ಎಳೆದುಕೊಂಡು ನೀರಿನೊಡನೆ 'ಹರಿದು' ಹೋಗುತ್ತದೆ. ಇದರೊಳಗಿರುವ ದೊಡ್ಡ ಗಾತ್ರದ ಮತ್ತು ಸ್ವಚ್ಛವಾದ ಗುಳ್ಳೆಗೆ ಸಂಕೋಚನ ರಸದಾನಿ ಎಂದು ಹೆಸರು. ಇದು ತನ್ನ ಸುತ್ತಣ ಜೆಲಿಯಿಂದ ನೀರನ್ನು ತೆಗೆದುಕೊಳ್ಳುವುದರ ಮೂಲಕ ಆಗಿಂದಾಗ್ಗೆ ದೊಡ್ಡದಾಗುತ್ತಿದ್ದು ಅನಂತರ ಒಡೆದು ನೀರನ್ನು ಹೊರ ಚೆಲ್ಲುತ್ತದೆ".

ಈ ಅನುವಾದದಲ್ಲಿ ಅರ್ಥವಾಗುವ ಭಾಷೆ ಮತ್ತು ಸರಳವಾದ ವಾಕ್ಸರಣಿಯಿಂದಾಗಿ ಬರಹ ನಮಗೆ ಸುಲಭ ಗ್ರಾಹ್ಯವೆನಿಸುತ್ತದೆ. ಆದರೆ ಆ ಪತ್ರಿಕೆಯ ಎಲ್ಲ ಬರಹಗಳೂ ಇದೇ ರೀತಿಯದೆಂದು ಹೇಳಬರುವಂತಿಲ್ಲ.

ಯಾವುದೇ ವಿಜ್ಞಾನ ಲೇಖನವನ್ನು ನಾವು ಅನುವಾದಿಸುವಾಗ ಯಾವ ಮಟ್ಟದ ಕನ್ನಡ ಓದುಗನಿಗೆ ನಾವು ಅದನ್ನು ನೀಡುತ್ತಿದ್ದೇವೆ ಎಂಬುದನ್ನು ಗಮನದಲ್ಲಿರಿಸಿಕೊಂಡು ಕಾರ್ಯತತ್ಪರರಾಗಬೇಕಾಗುತ್ತದೆ. ಒಂದೇ ಇಂಗ್ಲೀಷ್ ಮೂಲವನ್ನು ಅದೇ ಪ್ರೌಢಮಟ್ಟದಲ್ಲಿಯೂ ಹೇಳಬಹುದು, ಅದನ್ನೇ ಜನಪ್ರಿಯ ಶೈಲಿಯಲ್ಲಿಯೂ ಭಾಷಾಂತರಿಸಬಹುದು. ಉದಾಹರಣೆಗೆ,

> ನಿಗಮನ ಹೇಗೆ ಅಂತರ್ಬೋಧೆಯಿಂದ ಪರಿಪುಷ್ಟಗೊಂಡಿರಬೇಕೋ ಹಾಗೆ ಕ್ರಮಾಗತ ಸಾರ್ವತ್ರೀಕರಣ ಮಾಡಬೇಕೆಂಬ ತೀವ್ರಾಕಾಂಕ್ಷೆ ವರ್ಣ ವೈವಿಧ್ಯಯುತ ವಿವರವನ್ನು ಕುರಿತ ಗೌರವ ಮತ್ತು ಪ್ರೀತಿಯಿಂದ ಹದಗೊಂಡಿರಬೇಕು. ಬಿಡಿ ಸಮಸ್ಯೆಯೊಂದನ್ನು ಉನ್ನತ ಸಾರ್ವತ್ರಿಕ ಸಿದ್ಧಾಂತಗಳ ವಿಶೇಷ ನಿದರ್ಶನವೆಂಬ ಕೀಳು ದರ್ಜೆಗೆ ತಳ್ಳುವುದು ಸಲ್ಲ.*

ಎನ್ನುವುದು ಪ್ರೌಢವೂ ಶುದ್ಧವೂ ಆದ ಭಾಷಾಂತರವೇ ಆಗಿದ್ದರೂ ಅದನ್ನೇ ಜನಪ್ರಿಯ ಲೇಖನವನ್ನಾಗಿ ಅನುವಾದಿಸುವಾಗ ನಾವು ಥಿಯೊಡರ ಸೆವೊರಿ ಹೇಳಿರುವ ಸ್ವಾತಂತ್ರ್ಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಹೀಗೆ ಭಾಷಾಂತರಿಸಬಹುದು :

> "ಒಳ ಅರಿವಿನಿಂದ ಕಾರಣಪೂರ್ವ ಊಹನೆ ಪರಿಪುಷ್ಟವಾಗಿರಬೇಕು. ಹಾಗೆಯೇ ಕ್ರಮಕ್ರಮವಾಗಿ ಸಾರ್ವತ್ರೀಕರಣ ಮಾಡಬೇಕೆಂಬ ಆಕಾಂಕ್ಷೆಯು ವರ್ಣಮಯ ಹಾಗೂ ವೈವಿಧ್ಯಮಯ ವಿವರಗಳ ಬಗೆಗೆ ಪ್ರೀತಿ ಗೌರವಗಳಿಂದ ಹದಗೊಂಡಿರಬೇಕು. ಮತ್ತು ಸಮತೂಲನಗೊಂಡಿರಬೇಕು. ಉನ್ನತ ಸಾರ್ವತ್ರಿಕ ಸಿದ್ಧಾಂತಗಳ ಒಂದು ವಿಶೇಷ ಉದಾಹರಣೆಯೆಂದು ಬಿಡಿ ಸಮಸ್ಯೆಯನ್ನು ಕೀಳುಮಟ್ಟಕ್ಕೆ ತಳ್ಳಬಾರದು."

ಈಗ ಅನುವಾದದ ಮತ್ತೊಂದು ಉದಾಹರಣೆಯನ್ನು ನೋಡೋಣ. ಜೋಸೆಫ್ ಕೋನ್ರಾಡ್ ಎಂಬಾತ ಚಳಿಗಾಲದ ಕಡಲಿನ ಸ್ವಭಾವವನ್ನು ಕುರಿತು ಹೀಗೆ ಬಣ್ಣಿಸಿದ್ದಾನೆ.

"ಕಡಲಿನ ವಿಶಾಲ ವಿಸ್ತಾರವೆಲ್ಲ, ಬೂದುಬಣ್ಣ ತಾಳುತ್ತದೆ. ಗಾಳಿಯು ನೀರನ್ನು ಉತ್ತುತ್ತು, ತೆರೆ ತೆರೆಯಾಗಿ ಎಬ್ಬಿಸಿ ನೊರೆಯನ್ನು ರಾಶಿಗೆಡೆಯುವಾಗ, ನಾವು ಆಚೀಚೆಗೆ ನರೆತ ಜಟೆಗಳಂತೆ ತೂರಾಡುವಾಗ, ಸಮುದ್ರಕ್ಕೆ ಅತ್ಯಂತ ಪುರಾ

ರಿಚರ್ಡ್ ಕೂರಾಂಟನ ಇಂಗ್ಲೀಷ್ ಮೂಲ :

"Just as deduction should be supplemented by intuition so the impulse to progressive generalization must be tempered and balanced by respect and love for colourful detail. The individual problem should not be degraded to the rank of special illustration of lofty general theories."

ತನವಾದ ಮುಪ್ಪು ಕವಿದಂತೆ ಕಾಣುತ್ತದೆ. ಆಗ ಇಲ್ಲಿನ ನೀರಿಗೆ ಕಾಂತಿಯಿಲ್ಲ: ಚುರುಕಿಲ್ಲ; ಹೊಳಪಿಲ್ಲ. ಇದೆಲ್ಲ ಬೆಳಕು ಎಂಬೊಂದು ವಸ್ತು ಹುಟ್ಟುವ ಮುಂಚೆಯೇ ಉಂಟಾದ ಸೃಷ್ಟಿಯೋ ಎಂದು ತೋರುತ್ತದೆ.''*

ಈ ಅನುವಾದದಿಂದ ನಮಗೆ ವೇದ್ಯವಾಗುವ ಸಂಗತಿಯೆಂದರೆ — ಇಂಗ್ಲೀಷ್ ತಿಳಿದಿದ್ದರೆ ಸಾಲದು ; ಕನ್ನಡ ಮಾತ್ರ ತಿಳಿದಿದ್ದರೆ ಸಾಲದು. ಇವೆರಡನ್ನೂ ತಿಳಿದು ಅವುಗಳನ್ನು ಯಾವ ಪ್ರಮಾಣದಲ್ಲಿ ಎಲ್ಲಿ ಹೇಗೆ ಬೆರಸಿ ಬಡಿಸಿದರೆ 'ಸಾಹಿತ್ಯ', ರುಚಿಕರವಾಗುತ್ತದೆ ಎನ್ನುವ 'ಪಾಕವಿದ್ಯಾಪ್ರಾವೀಣ್ಯ'ವೂ ಬೇಕು—ಎನ್ನುವ ಅಂಶ.

ಕಂಪ್ಯೂಟರುಗಳಿಂದಲೂ ಅನುವಾದಗಳನ್ನು ಮಾಡಿಸತೊಡಗಿರುವುದು ಈಚೀಚೆಗಿನ ಒಂದು ವೈಜ್ಞಾನಿಕ ವಿಶೇಷಾಂಶವೇ. ಆದರೂ ಕನ್ನಡದ ಕಣಕ್ಕೆ ಅದರ ಪದಾರ್ಪಣೆ ಇನ್ನೂ ದೂರದ ಆಸೆಯಾಗಿಯೇ ಉಳಿದಿದೆ.

ಅನುವಾದಗಳನ್ನು 'ಎರಡು ಹಳಿಗಳ ಮೇಲೆ ಸಾಗುವ ರೈಲು' ಎಂದು ಹೇಳುವುದು ಹೆಚ್ಚು ಅರ್ಥಗರ್ಭಿತವಾದುದು. ಮೂಲಭಾಷೆ ಮತ್ತು ಉದ್ದಿಷ್ಟ ಭಾಷೆಗಳೇ ಆ ಎರಡು ಹಳಿಗಳು. ಅನುವಾದಕ ಈ ಎರಡೂ ಹಳಿಗಳ ಮೇಲೆ ಸಾಗಿ ಸಾಹಿತ್ಯವನ್ನು ರಚಿಸಬೇಕು. ಇಲ್ಲಿ ಯಾವುದರ ಮೇಲೆ ಸಾಗಲು ಅವನಿಗೆ ಅಶಕ್ಯವಾಗುವುದೋ ಆಗ ಅವನು ಹಳಿ ತಪ್ಪಿ ಅಪಘಾತಕ್ಕೊಳಗಾಗುವುದು ತೀರ ಸಹಜ ಕ್ರಿಯೆ. ಅಂದಮೇಲೆ ಈ ಭಾಷೆಗಳ ಮೇಲಿನ ಪ್ರಭುತ್ವ ಅವನಿಗೆ ಅನಿವಾರ್ಯ.

ಅನುವಾದಗಳು 'ಸುಲಿದ ಬಾಳೆಯು ಹಣ್ಣಿನಂದದಿ' ಬರುವ ಸಾಹಿತ್ಯ ಸಾಮಗ್ರಿಗಳಲ್ಲ. ಅವನ್ನು ಜೇನು ತೆಗೆದು ತಿನ್ನುವ ಅನುಭವಕ್ಕೆ ಹೋಲಿಸಬಹುದು. ಅಂಥಲ್ಲಿ ಜನಪ್ರಿಯ ವಿಜ್ಞಾನ ಲೇಖನಗಳ ವೈಶಿಷ್ಟ್ಯವೆಂದರೆ, ಸಾಹಿತ್ಯದ ಸಂತರ್ಪಣೆಯಲ್ಲಿ ವೈಜ್ಞಾನಿಕ ವಿಷಯಗಳನ್ನು ಉಣಬಡಿಸುವುದು. ಆದುದರಿಂದ ಇದು ಎಂಥ ಪಂಗಡದ ಓದುಗರಿಗೆ ಮೆಚ್ಚಿಗೆಯಾಗುವುದೆಂದು ಹೇಳು

---

*ಡಾ॥ ಶಿವರಾಮ ಕಾರಂತರು ಅನುವಾದಿಸಿರುವ ಈ ವಾಕ್ಯಗಳ ಮೂಲ ಇಂಗ್ಲೀಷಿನಲ್ಲಿ ಹೀಗಿದೆ ;

"The greyness of five whole immense surface, the wind furrows upon the faces of the waves, the great masses of foam. passed about and waring, like matted white locks, give to the sea in a gale an appearance of hoary age, lustreless dull, without gleams as though it had been created before light itself,"

ವುದು ಕಷ್ಟಸಾಧ್ಯ. ಅನುವಾದಕನಿಗೆ ಭಾಷೆಗಳ ಮೇಲೆ ಪ್ರಭುತ್ವ ಹೇಗೆ ಅಗತ್ಯವೋ ಹಾಗೆಯೇ ವಸ್ತುವಿನ ಮೇಲೆ ಪ್ರಾವೀಣ್ಯ ಅಥವಾ ಅದನ್ನು ಕುರಿತ ಆಳವಾದ ಅಧ್ಯಯನ ಅಗತ್ಯವಾಗಿರುತ್ತದೆ. ಜೊತೆಗೆ ಸಾಹಿತ್ಯಕ ಸೌಂದರ್ಯದ ಸೊಬಗು ಸೊಗಡುಗಳು ಅನುವಾದಿತ ಕೃತಿಯನ್ನು ಜನಪ್ರಿಯಗೊಳಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತವೆ.

ಪ್ರತಿಯೊಂದು ನಾಡಿಗೂ ತನ್ನದೇ ಆದ ಸಾಂಸ್ಕೃತಿಕ ಹಿನ್ನೆಲೆಯಿರುವುದರಿಂದ ಅನುವಾದಗಳು ಹೃದ್ಗತವಾಗಬೇಕಾಗಿದ್ದಲ್ಲಿ ಆ ನಾಡಿನ ಜನ ಒಪ್ಪುವ ಭಾಷೆಯಲ್ಲಿ ಅವರದೇ ಧಾಟಿಯಲ್ಲಿ ಹೇಳಬೇಕಾಗುತ್ತದೆ. ಆಗಲೇ ಅನುವಾದದಲ್ಲಿ 'ಸಹಜತೆ' ಬರುವುದು. 'ಕೋಮಳವಾಕ್ಯಮೆ ಸಹಜವಿಲ್ಲದಾತನ ಕಬ್ಬಂ ?' ಎಂದು ಸವಾಲು ಹಾಕಿದವ ಕನ್ನಡ ಕವಿ ನಯಸೇನ. ಸಹಜವಲ್ಲದ ಅನುವಾದವೂ 'ಕೋಮಳ ವಾಕ್ಯಮೇ ?' ಎಂದು ಕೇಳುವುದು ಅಷ್ಟೇ ಸಹಜವಾದುದು, ಸಾಧುವಾದುದು.

ವಿಜ್ಞಾನವು "ವಿಶ್ವ ಹಾಗೂ ಮಾನವನೆಡೆಗೆ ನಂಬಿಕೆಗಳನ್ನೂ ನಿಲವುಗಳನ್ನೂ ರೂಪಿಸುವ ಅತ್ಯಂತ ಸಾಮರ್ಥ್ಯವಂತ ಪ್ರಭಾವಗಳ ಪೈಕಿ ಒಂದು" ಎನ್ನುತ್ತಾನೆ ಜೆ. ಡಿ. ಬರ್ನಾಲ್ ಬರ್ನಾಡ್ ಕೋಹೆನ್. 'ವಿಜ್ಞಾನವಿಂದು ಪ್ರತಿಯೊಬ್ಬರ ದಂಧೆ' ಎನ್ನುವಾಗ ಅದರ ಸರ್ವಾಂತರ್ಯಾಮಿತನವನ್ನು ಸೂಚಿಸಿರುತ್ತಾನೆ. ಇದೇ ಅದರ ಜನಪ್ರಿಯತೆಗೂ ಕಾರಣವಾಗಿದೆ. ಯಾವ ಭಾಷೆಯ ಮುಖಾಂತರವೇ ಆಗಲಿ, ಅಂಥ ವಿಷಯವನ್ನು ಕುರಿತ ಮಾಹಿತಿ ಕನ್ನಡದಲ್ಲಿ ಎಷ್ಟು ಬಂದರೂ ಅದು ಸ್ವೀಕಾರಾರ್ಹವಾದುದು, ಸ್ವಾಗತಾರ್ಹವಾದುದು.

'ಲೀಲಾವತಿ' ಯ ಒಂದು ಪದ್ಯದ ಪಾಠ ವಿಚಾರ

ನೇಮಿಚಂದ್ರನ 'ಲೀಲಾವತಿ' ಯ ತ್ರಿಪದಿಯೊಂದರ ಪಾಠ ಹೀಗಿದೆ :

> **ಸೋವಾಗಕೆಱೆಯಳಿಂದೀವರಲೋಚನೆ**
> **ದೇವಸ್ತ್ರೀ ಚತುರ ಪರಿವೃತಪಾದೆ ಪ**
> **ದ್ಮಾವತಿ ವರದೆಯೆಮಗಕ್ಕೆ ॥** (೧೦-೩)

ಇದನ್ನು ಡಿ. ಎಲ್. ನರಸಿಂಹಾಚಾರ್ಯರು ಹೀಗೆ ಪರಿಷ್ಕರಿಸಿದ್ದಾರೆ[1] :

> **ಸೇವಾಗ್ಯ ಕೆಱೆಯಳಿಂದೀವರ ಲಾಂಛನೆ**
> **ದೇವಸ್ತ್ರೀ ಚಿಕುರ ಪರಿವೃತಪಾದೆ ಪ**
> **ದ್ಮಾವತಿ ವರದೆಯೆಮಗಕ್ಕೆ ॥**

ಇಲ್ಲಿ 'ಲೋಚನೆ', 'ಲಾಂಛನೆ' ಎಂಬ ಎರಡು ಪಾಠಗಳಲ್ಲಿ ಯಾವುದು ಕವಿಪಾಠವೆಂದು ಹೇಳುವುದು ಕಷ್ಟ. 'ಚತುರ' ಎಂಬುದರ ಬದಲು 'ಚಿಕುರ'ದ ಸ್ವೀಕಾರ ಸರಿ. ಆದರೆ 'ಸೋವಾಗ' ವನ್ನು 'ಸೇವಾಗ್ಯ' ಎಂದು ತಿದ್ದಿರುವುದು ಸಮರ್ಪಕವೆ?

'ಸೋವಾಗಕೆ' ಎಂಬಲ್ಲಿ ಪಾಠ ಕೆಟ್ಟಿದೆಯೆಂದು ಹೇಳಿ, 'ಸೇವಾಗ್ಯ' ಎಂಬುದು 'ಸೌಭಾಗ್ಯ'ದ ತದ್ಭವವೆಂದು ತಿಳಿಸಿ, ಪಂಪನಲ್ಲಿ 'ಸೇವಾಗ್ಯ' ಪ್ರಯುಕ್ತವಾಗಿರುವುದನ್ನು ಉದ್ಧರಿಸಿ, ನೇಮಿಚಂದ್ರನ ಪದ್ಯದಲ್ಲಿ 'ಸೇವಾಗ್ಯ' ಶಬ್ದವಿರಬೇಕೆಂದೂ ಅದು ಲಿಪಿಕಾರ ಸ್ಖಾಲಿತ್ಯದಿಂದ 'ಸೋವಾಗ' ವಾಗಿದೆಯೆಂದೂ ನಿರ್ಧರಿಸುತ್ತಾರೆ ಡಿ.ಎಲ್.ಎನ್.[2]

ಕನ್ನಡದಲ್ಲಿ 'ಸೌಭಾಗ್ಯ' ದ ತದ್ಭವ 'ಸೇವಾಗ್ಯ' ವಾಗುತ್ತದೆ, ದಿಟ. ಆದರೆ 'ಸೋವಾಗ' ಎಂಬುದು 'ಸೌಭಾಗ್ಯ' ದ ಅರ್ಧಮಾಗಧಿ-ಪ್ರಾಕೃತ-ರೂಪವೆಂಬುದನ್ನು ಇಲ್ಲಿ ಗಮನಿಸಬೇಕು.[3] ಅದನ್ನು ನೇಮಿಚಂದ್ರ ನನ್ನ ಪದ್ಯದಲ್ಲಿ ಪ್ರಯೋಗಿಸಿದ್ದಾನೆ. ಅವನು ಪ್ರಾಕೃತದಲ್ಲಿ ಬಲ್ಲಿದನೆಂಬುದು ಪ್ರಸಿದ್ಧವಾದ ಸಂಗತಿ.

---

1. 'ಕನ್ನಡ ಗ್ರಂಥಸಂಪಾದನೆ', ಪು. ೧೯೩.
2. ಅದೇ, ಪು. ೧೯೪-೯೫.
3. 'ಯೌವನ', ಅರ್ಧಮಾಗಧಿಯಲ್ಲಿ 'ಜೋವ್ವನ' ವಾಗುತ್ತದೆ. ನೋಡಿ : ಬಿ. ಪಿ. ಬಡಿಗೇರ, 'ಪ್ರಾಕೃತ ಭಾಷೆಗಳು', ಪು. ೬೬.

ಪ್ರಕೃತ ಪದ್ಯದಲ್ಲಿ 'ಸೋವಾಗ'ಕ್ಕೆ ಪಾಠಾಂತರಗಳೇ ಇಲ್ಲವೆಂಬುದನ್ನೂ ಅದೊಂದು ಕಠಿನಪಾಠವೆಂಬುದನ್ನೂ ಲಕ್ಷಿಸಬೇಕು. ಆದ್ದರಿಂದ, ಇಲ್ಲಿ ಪಾಠ ಕೆಟ್ಟಿರಲಾರದು ; ಬಹುಶಃ 'ಸೋವಾಗ' ವೇ ಕವಿಪಾಠ.

ಸಿ. ಪಿ. ಕೆ.

ವಿಮಲಾನಂದನ ಕೀರ್ತನೆಗಳು

'ಕರ್ನಾಟಕ ಕವಿ ಚರಿತೆ'ಯ ಮೂರನೆಯ ಸಂಪುಟದಲ್ಲಿ (1929ರ ಮುದ್ರಣದಲ್ಲಿ) ಹದಿನೆಂಟನೆಯ ಶತಮಾನದ ಕವಿಗಳು ಎಂಬ ಮೊದಲ ಪುಟದಲ್ಲಿ—ಅಪ್ಪಯ್ಯ ಸು. 1705 (ಇಸವಿ) ಎಂದು ಕವಿಯೊಬ್ಬನ ಪರಿಚಯದೊಂದಿಗೆ ಒಂದು ಹಾಡನ್ನು ಕಾಣುತ್ತೇವೆ.

"ಹೂವ ಕೊಟ್ಟಳು ಮಹಾದೇವಿ ಮಾತಾಂಬಾ ।
ಭೂವರ ಬಸವನೃಪನ ಭಾವ ಭಕ್ತಿಗೆ ಒಲಿದು—॥

ಈ ಪದ್ಯದಲ್ಲಿ 'ವಿಮಲಾನಂದ' ವೆಂಬ ಮುದ್ರಿಕೆಯಿದೆ ! ಈ ಅಪ್ಪಯ್ಯನ ಗುರು ವಿಮಲಾನಂದನೆಂದು ಅಲ್ಲಿ ಹೇಳಿದೆ. ಹಾಗಾದರೆ, ಈ ಪದ್ಯ ಯಾರದು ? ವಿಮಲಾನಂದನದೊ, ಅಪ್ಪಯ್ಯನದೊ ? ಎಂಬ ಸಂದೇಹವೇಳುತ್ತದೆ !

ನನ್ನ ಗೆಳೆಯರಾದ ಶ್ರೀ ಪುರುಷೋತ್ತಮ ಭಟ್ಟರು ತನ್ನ ಅಜ್ಜ 'ಸದಾನಂದ ಗುರು'ಗಳ ಸಂಗ್ರಹದ ಮುದ್ರಿತ ಚಿಕ್ಕ ಪುಸ್ತಿಕೆಯೊಂದನ್ನು ತೋರಿಸಿದರು. ಅದರಲ್ಲಿ ಬೇರೆ ಕೆಲವು ಹರಿದಾಸರ ಕೃತಿಗಳು ಇವೆಯಾದರೂ ಮೂವತ್ತಕ್ಕೂ ಹೆಚ್ಚು ಕೃತಿಗಳು ವಿಮಲಾನಂದ ಮುದ್ರಿಕೆಯವುಗಳಾಗಿವೆ. ಅಂತೆ ಈ ಮೇಲಿಂದ ಪದ್ಯವೂ ಅಲ್ಲಿದೆ ! ಒಂದೆರಡು ಕಡೆ ಕೆಲವು ನುಡಿಗಳು ಕೂಡಿವೆ. ಹಾಗಾದರೆ ಈ ಮೇಲಿಂದ ಪದ್ಯ ಯಾರದೆಂಬ ಸಂದೇಹ ತುಸ ದೂರವಾಯಿತು ; ಇದೂ 'ವಿಮಲಾನಂದ'ನದೇ ಇರಬೇಕೆಂದು ತಿಳಿದೆನು.

ವಿಮಲಾನಂದ ಕವಿಯು ಇ. 1685 ರಲ್ಲಿ ಕೃಷ್ಣಾರ್ಜುನ ಕಾಳಗ ಕಾವ್ಯವನ್ನು ಬರೆದನೆಂದೂ ಅದೇ ಕವಿ ಚರಿತೆಯಲ್ಲಿದೆ (3-24). ಅವನೇ ಈ ಪದ್ಯವನ್ನು ಬರೆದಿರಬೇಕು, ಕವಿ ಚರಿತೆಕಾರರು ತಪ್ಪಾಗಿ ಅಪ್ಪಯ್ಯನದೆಂದು ಹೇಳಿದರೆಂದು ಕಾಣುತ್ತದೆ.

ವಿದ್ವಾನ್ ಕೆ. ವೆಂಕಟರಾಯಾಚಾರ್ಯ

ಚನ್ನಯ್ಯರು ಇಬ್ಬರಲ್ಲ ಒಬ್ಬರೆ ?

ಬಸವಣ್ಣ ತನ್ನ ವಚನಗಳಲ್ಲಿ ಸ್ಮರಿಸಿರುವ ಚನ್ನಯ್ಯನೇ ಬೇರೆ ಮತ್ತು ಹರಿಹರ ಹೇಳುವಂತೆ ಕರಿಕಾಲ ಚೋಳನಲ್ಲಿ ಹುಲ್ಲು ತರುವ ಕಾಯಕ ಮಾಡುತ್ತಿದ್ದ ಚನ್ನಯ್ಯನೇ ಬೇರೆ—ಎಂಬ ಅಭಿಪ್ರಾಯವನ್ನು ಇದುವರೆಗೆ ವಿದ್ವಾಂಸರು ವ್ಯಕ್ತ ಮಾಡಿದ್ದಾರೆ. ಬಸವಣ್ಣನವರು ತಮ್ಮ ವಚನಗಳಲ್ಲಿ ಕಕ್ಕಯ್ಯ, ಚಿಕ್ಕಯ್ಯ, ದಾಸಯ್ಯ ಇವರ ಸಾಲಿನಲ್ಲಿ ಚನ್ನಯ್ಯನನ್ನು ಸ್ಮರಿಸುತ್ತಾರೆ. ಆ ಸಾಲುಗಳು ಇಂತಿವೆ.

1) ಮಾದಾರನೆಂಬೆನೆ ಚನ್ನಯ್ಯನ (೩೪೪)*
2) ಚನ್ನಯ್ಯನೆಮ್ಮಯ್ಯನು : ಚನ್ನಯ್ಯನ ಮಗ ನಾನು (೩೪೬)
3) ಅಪ್ಪನು ನಮ್ಮ ಮಾದಾರ ಚನ್ನಯ್ಯ (೩೪೮)
4) ಚನ್ನಯ್ಯನ ಮನೆಯಲು ಬೇಡಿದೆ (೩೪೯)
5) ಅಯ್ಯಗಳಯ್ಯನು ನಮ್ಮ ಮಾದಾರ ಚನ್ನಯ (೩೫೦)
6) ಎಮ್ಮಯ್ಯ ಚನ್ನಯ್ಯ ರಾಯ ಕಂಪಣವ ಹೊರುವ (೩೫೧)
7) ಅಪ್ಪನು ಡೋಹರ ಕಕ್ಕಯ್ಯನಾಗಿ ಮುತ್ತಯ್ಯ ಚನ್ನಯ್ಯನಾದಡೆ ಅನು ಬದುಕೆನೆ (೩೪೭)
8) ಮನ್ನಣೆಯ ಚನ್ನಯ ನೆನ್ನುವ ಮನ್ನಿಪ (೩೪೩)

ಈ ಮುಂತಾಗಿ ಮೇಲಿನ ವಚನ ಸಂಖ್ಯೆಯ ವಚನಗಳಲ್ಲಿ ಬಸವಣ್ಣನವರು ಚನ್ನಯ್ಯನನ್ನು ಸ್ಮರಿಸಿದ್ದಾರೆ. ಆತ ಮಾದಾರ ಚನ್ನಯ್ಯ. ಆದರೆ ಆತನ ವಸ್ತು ಆದಾದರೂ ಮಾದಾರನೆಂಬೆನೆ ಚನ್ನಯ್ಯನ—ಎಂದು ಪ್ರಶ್ನಿಸಿದ್ದಾರೆ. ಅಷ್ಟೇ ಅಲ್ಲದೆ ಎಮ್ಮಯ್ಯ ಚನ್ನಯ್ಯ ರಾಯ ಕಂಪಣವ ಹೊರುವ (೩೫೧) ಎಂದೂ ಹೇಳಿದ್ದಾರೆ. ಹೊರುವ ಪ್ರಯೋಗ ಗಮನಿಸಬೇಕು. ಸಮಕಾಲೀನಾರ್ಥದಲ್ಲಿ ಬಳಸಿದ್ದಾರೆ. ರಾಯ ಕಂಪಣ ಹೊರುತ್ತಿದ್ದ ಎಂದು ಅವರು ಬಳಸಿಲ್ಲ. ರಾಜನ ಬಳಿ ಚನ್ನಯ್ಯ ಕಂಪಣ (ಹುಲ್ಲು) ತರುವ ಕೆಲಸ ಮಾಡುತ್ತಿದ್ದಾನೆ, ಎಂದು ವರ್ತಮಾನ ಕಾಲದಲ್ಲಿ ಬಳಸಿದ್ದಾರೆ. ರಾಜನ ಬಳಿ ಹುಲ್ಲು ತರುವ ಕಾಯಕದ ಚನ್ನಯ್ಯನೇ ಮಾದಾರ ವೃತ್ತಿಯವನು. ಮಾದಾರ ವೃತ್ತಿಯ ಚನ್ನಯ ಹುಲ್ಲು ತರುವ ವೃತ್ತಿಯ ಚನ್ನಯ್ಯರು ಬೇರೆ ಬೇರೆ ಅಲ್ಲ. ರಾಜನ ಬಳಿಯಿಂದ ಬಸವಣ್ಣನ ಬಳಿಗೆ ಬಂದ ಚನ್ನಯ್ಯ ತನ್ನ ಮನೆತನದ ವೃತ್ತಿಯಾದ ಮಾದಾರ ವೃತ್ತಿ

* ಈ ವಚನ ಸಂಖ್ಯೆಗಳು ಡಾ. ಆರ್. ಸಿ. ಹಿರೇಮಠ ಅವರು ಸಂಪಾದಿಸಿದ ಬಸವಣ್ಣನವರ ವಚನಗಳು ಕೃತಿಯ ವಚನಸಂಖ್ಯೆಗಳಾಗಿವೆ.

ಯನ್ನು ಕಲ್ಯಾಣದಲ್ಲಿ ಮುಂದುವರೆಸಿದ್ದಾನೆ. ಈ ಚನ್ನಯ್ಯನೇ ಬಸವಣ್ಣನ ಹಿರಿಯ ಸಮಕಾಲೀನ. ಕಕ್ಕಯ್ಯ ಮತ್ತು ದಾಸಯ್ಯರಂತೆ ಈತನೂ ವಚನಗಳನ್ನು ಬರೆದವನೇ ಆಗಿದ್ದಾನೆ. ವಚನಕಾರ ಚನ್ನಯ್ಯ ಬೇರೆ, ರಾಜನ ಬಳಿ ಇದ್ದ ಚನ್ನಯ್ಯ ಬೇರೆ ಎಂಬುದು ಸರಿಯಲ್ಲ. ಇಬ್ಬರೂ ಒಬ್ಬರೆ. ಅಪ್ಪನು ನಮ್ಮ ಮಾದಾರ ಚನ್ನಯ್ಯ, ಅಯ್ಯಗಳಯ್ಯನು ನಮ್ಮ ಮಾದಾರ ಚನ್ನಯ್ಯ ಎಂಬಲ್ಲಿ ವರ್ತಮಾನದ ಸಂಶೋಧನಾ ರೂಪವೇ ಬಳಕೆ ಆಗಿದೆ. ಅದು ಭೂತಕಾಲದ ಪ್ರಯೋಗ ಅಲ್ಲ.

'ಮನ್ನಣೆಯ ಚನ್ನಯ್ಯನೆನ್ನುವ ಮನ್ನಿಪ' ಎಂಬ ಪ್ರಯೋಗ ಆಗಿಹೋಗಿರುವ ಚನ್ನಯ್ಯ ಮನ್ನಿಸುತ್ತಾನೆ. ಎಂಬುದಲ್ಲ. ಈಗ ನನ್ನ ಸಮಕಾಲೀನವಲ್ಲಿರುವ ಚನ್ನಯ್ಯ ಮನ್ನಿಸುತ್ತಾನೆ ಎಂಬುದೇ ಆಗಿದೆ.

ಸೂಳೆಗೆ ಹುಟ್ಟಿದ ಕೂಸಿನಂತೆ
ಆರನಾದಡೆಯೂ ಅಯ್ಯ ಅಯ್ಯ ಎನಲಾರೆ
ಚನ್ನಯ್ಯನೆಮ್ಮಯ್ಯನು ಚನ್ನಯ್ಯನ ಮಗನಾನು
ಕೂಡಲ ಸಂಗನ ಮಹಾಮನೆಯಲ್ಲಿ
ಧರ್ಮ ಸಂತಾನ ಭಂಡಾರಿ ಬಸವಣ್ಣನು ೩೪೬

ಈ ವಚನದಲ್ಲಿ ಬಸವಣ್ಣನವರು ನಮ್ಮನ್ನು ಚನ್ನಯ್ಯನ ಧರ್ಮ ಸಂತಾನ ಎಂದು ಕರೆದುಕೊಂಡಿದ್ದಾರೆ. ಮಹಾಮನೆಯ ಶರಣರ ಧರ್ಮದ ಮಗ ನಾನು ಎಂದು ಕರೆದುಕೊಂಡಿದ್ದಾರೆ. ಮಹಾಮನೆ ಬಸವಣ್ಣನವರ ಮನೆ. ಈ ಮನೆಯಲ್ಲಿ ಅನೇಕ ಶರಣರ ಸಮಾಗಮವಾಗಿದ್ದಿತು. ಆ ಅನೇಕರಲ್ಲಿ ಚನ್ನಯನು ಒಬ್ಬ. ಆ ಚನ್ನಯ್ಯ ವಚನಕಾರನೂ ಹೌದು, ವೃತ್ತಿಯಲ್ಲಿ ಮಾದಾರನೂ ಹೌದು ಮತ್ತು ಆ ಮುಂಚೆ ರಾಜನ ಬಳಿ ಕಂಪಣ ಹೊರುವ ಕಾಯಕದವನೂ ಹೌದು. ಚನ್ನಯ್ಯ ಮಹಾಮನೆ ಯಲ್ಲಿ ಇದ್ದ ಎಂಬುವಕ್ಕೆ ಮೇಲಿನ ವಚನ ಪುರಾವೆಯಾಗಿದೆ. ಮಹಾಮನೆಯಲ್ಲಿ ಇಲ್ಲದವನ ಹೆಸರು ಹೇಳಿ ನಾನು ಆತನ (ಶರಣರ) ಧರ್ಮ ಸಂತಾನ ಎಂದು ಹೇಳಲು ಬರುವುದಿಲ್ಲ.

ನಮಗೆ ಚನ್ನಯ್ಯನ ಬಗ್ಗೆ ಮುಖ್ಯ ಗೊಂದಲ ಉಂಟಾಗುವುದು ಹರಿಹರನ ರಗಳೆಯಿಂದ. ಆತ ಕರಿಕಾಲನ ಬಳಿ ಹುಲ್ಲು ತರುವ ಕಾಯಕವನ್ನು ಮಾಡು ತ್ತಿದ್ದನೆಂದು ಬರೆಯುತ್ತಾನೆ. ಆ ರಾಜ ಯಾರು? ಎಂದು ಗುರುತಿಸುವಲ್ಲಿ ಸಂಶೋಧಕರು ಎಡವಿದ್ದಾರೆ. ಆತ ಎಂಟನೇ ಶತಮಾನದವನೆಂದು ಹೇಳಿಬಿಡು ತ್ತಾರೆ. ಬಸವಣ್ಣನ ವಚನಗಳಲ್ಲಿ ಸ್ಪಷ್ಟವಿದೆ ; ಬಸವಣ್ಣನಿಗೆ ಸಮಕಾಲೀನವಿದ್ದಿರ ಬಹುದಾದ ತಮಿಳು ನಾಡಿನ(?) ರಾಜನ ಬಳಿ ಚನ್ನಯ್ಯ ಕಂಪಣ ಹೊರುವ ಕೆಲಸ ಮಾಡುತ್ತಿದ್ದು ನಂತರ ಬಸವಣ್ಣನಿಂದ ಆಕರ್ಷಿತವಾಗಿ ಕಲ್ಯಾಣದ ಮಹಾಮನೆಗೆ ಬಂದಿದ್ದಾನೆ. ಅಷ್ಟೇ ಅಲ್ಲ ಚಮ್ಮಾವುಗೆಗಳನ್ನು ಮಾಡುವ ಕಾರ್ಯವೃತ್ತಿಯನ್ನು

ಆತ ಅವಲಂಬಿಸಿದ್ದಾನೆ. ಬಸವಣ್ಣನ ಮಹಾಮನೆಯಲ್ಲಿ ಕಾಯಕ ಪ್ರತಿಯೊಬ್ಬರಿಗೂ ಅನಿವಾರ್ಯ ಎಂಬುದನ್ನನುಸರಿಸಿ ಆತ ಈ ವೃತ್ತಿಯನ್ನು ಅವಲಂಬಿಸಿರಬೇಕು.

ಒಟ್ಟಾರೆ ಹೀಗೆ ಹೇಳಬಹುದು. ಚನ್ನಯ್ಯನೆಂಬುವವನು ರಾಜನ ಬಳಿ ರಾಯ ಕಂಪಣವ ಹೊರುವ ಕಾಯಕದಲ್ಲಿದ್ದ. ಬಸವಣ್ಣನ ಹೆಸರು ಕೇಳಿ ಕಲ್ಯಾಣಕ್ಕೆ ಶಿವಧರ್ಮ ಸಮಾನತೆಯ ಕಾರಣವಾಗಿ ಬಂದ. ಅಲ್ಲಿ ಕಾಯಕ ವೃತ್ತಿಯಾಗಿ ಚಮ್ಮಾವಿಗೆ ಮಾಡುವ ವೃತ್ತಿ ಅವಲಂಬಿಸಿದ. ಮತ್ತು ಆತ ವಚನಗಳನ್ನೂ ಬರೆದ. ಅವನ ಮನೆತನ ಮಾದಾರ ಮನೆತನವೂ ಆಗಿತ್ತು. ಈ ವಚನಕಾರನನ್ನೇ ಬಸವಣ್ಣನವರು ಮತ್ತೆ ಮತ್ತೆ ತಮ್ಮ ವಚನಗಳಲ್ಲಿ ಸ್ಮರಿಸಿದ್ದಾರೆ.

ಹ. ನಂ. ವಿಜಯಕುಮಾರ್

ಈ ಸಂಚಿಕೆಯ ಲೇಖಕರು

ಹೆಚ್. ಹೆಚ್. ಗಂಗಾಧರಾಚಾರ್,
ಇಂಟರ್ನಲ್ ಟ್ರಾಫಿಕ್ ಇಲಾಖೆ,
ಪಿ. ಐ. ಎಸ್. ಎಲ್.
ಭದ್ರಾವತಿ – 577 301.

ಡಾ|| ಎಂ. ಚಿದಾನಂದಮೂರ್ತಿ,
ನಿರ್ದೇಶಕರು, ಕನ್ನಡ ಅಧ್ಯಯನ ಕೇಂದ್ರ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು – 560 056.

ಬಿ. ಜಿ. ಶ್ರೀಲಕ್ಷ್ಮಿ,
ಅಧ್ಯಾಪಕರು, ಸಂಸ್ಕೃತ ವಿಭಾಗ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು – 560 056.

ರಘು ಕುಲಕರ್ಣಿ,
ಭಾಷಾ ವಿಜ್ಞಾನ ವಿಭಾಗ,
ಉಸ್ಮಾನಿಯಾ ವಿಶ್ವವಿದ್ಯಾಲಯ,
ಹೈದರಾಬಾದ್ – 500 007.

ವೀರಣ್ಣ ಎಸ್. ದಂಡೆ,
ಚೌಡೇಶ್ವರ ಕಾಲೋನಿ,
ಬ್ರಹ್ಮಪೂರ,
ಗುಲಬರ್ಗಾ – 585 105.

ಎಸ್. ಚಂದ್ರಶೇಖರ್,
ಅಧ್ಯಾಪಕರು, ಇತಿಹಾಸ ವಿಭಾಗ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು – 560 056.

ಚೆನ್ನಕ್ಕ ಎಲಿಗಾರ,
ಶ್ರೀ ಮೃತ್ಯುಂಜಯ ಕಲಾ ಮತ್ತು ವಾಣಿಜ್ಯ ವಿದ್ಯಾಲಯ,
ಧಾರವಾಡ.

ಶ್ರೀನಿವಾಸ ರಾವ್,
ಮುಖ್ಯಸ್ಥರು, ತತ್ತ್ವಶಾಸ್ತ್ರ ವಿಭಾಗ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು – 560 056.

ಎಸ್. ಎನ್. ಲೀಲಾ,
'ಸಿಂಹಾಲಯ',
33, 7ನೇ ಮುಖ್ಯ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003.

ಸೂ. ಸುಬ್ರಮಣ್ಯ,
'ವನಸುಮ',
711, 4ನೇ ಬ್ಲಾಕ್, ಜಯನಗರ,
ಬೆಂಗಳೂರು – 560 011.

ಡಾ. ಸಿ. ಪಿ. ಕೃಷ್ಣಕುಮಾರ್,
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ,
ಮಾನಸ ಗಂಗೋತ್ರಿ,
ಮೈಸೂರು – 570 006.

ಕೆ. ವೆಂಕಟರಾಯರಾಚಾರ್ಯ,
ವಿದ್ವಾನ್,
ಸುರತ್ಕಲ್ – 574 158.

ಹ. ನಂ. ವಿಜಯಕುಮಾರ್,
108/2, 4ನೇ ಮುಖ್ಯ ರಸ್ತೆ,
ಚಾಮರಾಜಪೇಟೆ,
ಬೆಂಗಳೂರು – 560 018.

FORM IV

(See Rule 8)

SADHANE

Quarterly

1.	Place of publication	Jnana Bharathi, Bangalore University, Bangalore-560056
2.	Periodicity of its publication	Quarterly
3.	Printer's name Whether citizen of India? If foreigner, state the country of origin	K. C. Shivappa Indian
	Address	Director, I/c. Prasaranga, Bangalore University, Bangalore-560056
4.	Publisher's name Whether citizen of India? If foreigner, state the country of origin	K. C. Shivappa, Indian
	Address	Director, I/c. Prasaranga, Bangalore University, Bangalore-560056
5.	Editor's name Whether citizen of India? If foreigner, state the country of origin	G. S. Shivarudrappa Indian
	Address	Director, Kannada Adyana Kendra Bangalore University, Bangalore-560056
6.	Names and addresses of individuals who own the newspapers and partners or shareholders holding more than one per cent of the total capital.	Bangalore University, Bangalore-560056

I, K. C. Shivappa, hereby declare that the particulars given above are true to the best of my knowledge and belief.

(Sd.)—K. C. SHIVAPPA

Signature of Publisher